ಗುರುವಾರ, ಜುಲೈ 28, 2022 | ₹ 6.00

• www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



**‘ದೋ ಬಾರಾ’**


ಮುಂಬೈನಲ್ಲಿ ಬುಧವಾರ ಬಾಲಿವುಡ್ ನಿರ್ಮಾಪಕಿ ಏಕ್ತಾ ಕಪೂರ್ ತಮ್ಮ ಮುಂಬರುವ ಚಿತ್ರ ‘ದೋ ಬಾರಾ’ ಟ್ರೈಲರ್ ಬಿಡುಗಡೆ ವೇಳೆ ವಿಜಯದ ಸಂಕೇತ ತೋರಿದರು – ಪಿಟಿಐ ಚಿತ್ರ




ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

75 ಸ್ವಾತಂತ್ರ್ಯದ ಅಮೃತಮಹೋತ್ಸವ

ನವ ಭಾರತಕ್ಕಾಗಿ ನವ ಕರ್ನಾಟಕ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

## ಸರ್ವರ ವಿಕಾಸಕ್ಕೆ ಸಮೃದ್ಧ ಕರ್ನಾಟಕ

## ಇದು ನಮ್ಮ ಸಂಕಲ್ಪ



- ಕೃಷಿಕರು, ಕಾರ್ಮಿಕರು ಹಾಗೂ ದುರ್ಬಲರ ಬದುಕಿನಲ್ಲಿ ಆಶಾಕಿರಣ
- ಮಹಿಳೆಯರ ಸಬಲೀಕರಣಕ್ಕೆ ಆದ್ಯತೆ
- ಕೈಗಾರಿಕೆ, ಶಿಕ್ಷಣ, ಮೂಲಭೂತ ಸೌಕರ್ಯ ಸೃಷ್ಟಿಯಲ್ಲಿ ಗುರುತರ ಪ್ರಗತಿ
- ನಾಗರಿಕ ಸೇವೆಗಳಲ್ಲಿ ಕ್ರಾಂತಿಕಾರಕ ಸುಧಾರಣೆ

ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿಯವರ ನೇತೃತ್ವದ ಡಬಲ್ ಎಂಜಿನ್ ಸರ್ಕಾರ ಮಾನವೀಯತೆ – ಅಂತಃಕರಣಗಳನ್ನೆ ಜೀವಾಳವಾಗಿಸಿಕೊಂಡು ಕಾರ್ಯ ನಿರ್ವಹಿಸುತ್ತಿದೆ. ಕಳೆದ ಒಂದು ವರ್ಷದಲ್ಲಿ ಜನರ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವ ಜೊತೆಗೆ ಜನ ಕಲ್ಯಾಣ, ಅಭಿವೃದ್ಧಿ ಹಾಗೂ ವಿತ್ತೀಯ ಶಿಸ್ತನ್ನು ಸರಿದೂಗಿಸಿಕೊಂಡು ಕಾರ್ಯ ನಿರ್ವಹಿಸುತ್ತಿದೆ.




### ಎಸ್‌ಸಿ/ಎಸ್‌ಟಿ ಸಮುದಾಯಗಳ ಕಲ್ಯಾಣ

- ಎಸ್‌ಸಿ/ಎಸ್‌ಟಿ ನಿಗಮಗಳಿಗೆ ಮೂಲ ಅನುದಾನ **ರೂ.580.19 ಕೋಟಿ.** ಹೆಚ್ಚುವರಿ ಅನುದಾನ **ರೂ.410 ಕೋಟಿ. ಒಟ್ಟು ರೂ.990.19 ಕೋಟಿ**
- ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ **ರೂ.572.18 ಕೋಟಿ** ವಿದ್ಯಾರ್ಥಿವೇತನ ವಿತರಣೆ
- **ಕುಟೀರ ಜ್ಯೋತಿ** – ಉಚಿತ ವಿದ್ಯುತ್ ಸರಬರಾಜು **75 ಯೂನಿಟ್‌ಗಳಿಗೆ ಏರಿಕೆ.**
- ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕೆ ಪ್ರತ್ಯೇಕ ಸಚಿವಾಲಯ
- **1,717 ಫಲಾನುಭವಿಗಳಿಗೆ 227.86 ಕೋಟಿ** ವೆಚ್ಚದಲ್ಲಿ **2,241.62 ಎಕರೆ** ಜಮೀನು ವಿತರಣೆ
- "ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿ ನಿಲಯ" ಯೋಜನೆಯಡಿ **ರೂ.250 ಕೋಟಿ** ವೆಚ್ಚದಲ್ಲಿ 5 ಜಿಲ್ಲೆಗಳಲ್ಲಿ ತಲಾ **1,000 ಸಾಮರ್ಥ್ಯದ** ವಿದ್ಯಾರ್ಥಿನಿಲಯ ಸಮುಚ್ಚಯಗಳ ನಿರ್ಮಾಣಕ್ಕೆ ಕ್ರಮ.
- ಭೂ ಒಡೆತನ ಯೋಜನೆಯಡಿ ಘಟಕ ವೆಚ್ಚ 15 ಲಕ್ಷ ರೂ.ಗಳಿಂದ **20 ಲಕ್ಷ ರೂ.ಗಳಿಗೆ ಹೆಚ್ಚಳ**

### ರೈತ, ಕೃಷಿ, ತೋಟಗಾರಿಕೆ

- ಮುಖ್ಯಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮ–**9.98 ಲಕ್ಷ ವಿದ್ಯಾರ್ಥಿಗಳಿಗೆ ರೂ.438.69 ಕೋಟಿ** ವಿದ್ಯಾರ್ಥಿವೇತನ ವಿತರಣೆ
- ಪ್ರಧಾನಮಂತ್ರಿ **ಕಿಸಾನ್ ಸಮ್ಮಾನ್** ನಿಧಿ ಯೋಜನೆಯಡಿ 2021–22ನೇ ಸಾಲಿನಲ್ಲಿ **50.35 ಲಕ್ಷ ರೈತರಿಗೆ** ಹಾಗೂ 2022–23ನೇ ಸಾಲಿನಲ್ಲಿ ಇಲ್ಲಿಯವರೆಗೆ **47.83 ಲಕ್ಷ ರೈತರಿಗೆ ನೆರವು**
- ಪ್ರವಾಹದಿಂದಾದ ಬೆಳೆ ನಷ್ಟಕ್ಕೆ 48 ಗಂಟೆಗಳಲ್ಲೇ ಪರಿಹಾರ ವಿತರಣೆ. **18.56 ಲಕ್ಷ ರೈತರಿಗೆ ಅನುಕೂಲ**
- ಕೃಷಿ ಯಾಂತ್ರೀಕರಣ ಪ್ರೋತ್ಸಾಹಿಸಲು ಪ್ರತಿ ಎಕರೆಗೆ **ರೂ.250 ಡೀಸೆಲ್ ಸಹಾಯಧನ.** ಗರಿಷ್ಠ 5 ಎಕರೆ.
- ರೈತರ ಆದಾಯ ಹೆಚ್ಚಿಸಲು **ಸೆಕೆಂಡರಿ ಕೃಷಿ ನಿರ್ದೇಶನಾಲಯದ ಸ್ಥಾಪನೆ**
- **ದ್ರಾಕ್ಷಿ ಅಭಿವೃದ್ಧಿ ಮತ್ತು ದ್ರಾಕ್ಷಾರಸ ಮಂಡಳಿ ಸ್ಥಾಪನೆ**

### ನೇಕಾರರ ಕಲ್ಯಾಣ

- **ನೇಕಾರ ಸಮ್ಮಾನ್** ನೆರವಿನ ಮೊತ್ತ ರೂ.2,000/– ದಿಂದ **ರೂ.5,000/–ಕ್ಕೆ ಹೆಚ್ಚಳ.**
- 2021–22ನೇ ಸಾಲಿನಲ್ಲಿ **49,544 ನೇಕಾರರಿಗೆ** ನೇರ ನಗದು ವರ್ಗಾವಣೆ
- ನೇಕಾರರ ಮಕ್ಕಳಿಗೂ ವಿದ್ಯಾರ್ಥಿವೇತನ ಯೋಜನೆ

### ಮೀನುಗಾರಿಕೆ ಇಲಾಖೆ

- ಮೀನುಗಾರರ ಆದಾಯ ಹೆಚ್ಚಿಸಲು **100 ಆಳ ಸಮುದ್ರ ಮೀನುಗಾರಿಕಾ ದೋಣಿಗಳಿಗೆ** ನೆರವು ನೀಡುವ **“ಮತ್ಸ್ಯ ಸಿರಿ”** ಯೋಜನೆ

### ಕಾರ್ಮಿಕ ಕಲ್ಯಾಣ


- **ಕಟ್ಟಡ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ ಯೋಜನೆ** ಜಾರಿ. **2.97 ಲಕ್ಷ ವಿದ್ಯಾರ್ಥಿಗಳಿಗೆ ರೂ.462.12 ಕೋಟಿ**

### ಸಾಮಾಜಿಕ ಭದ್ರತೆ

- ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ವಿಧವಾ ವೇತನ, ಮೈತ್ರಿ, ಮನಸ್ವಿನಿ, ವಿಕಲಚೇತನರ ಮಾಸಾಶನ ಹಾಗೂ ಆಸಿಡ್ ದಾಳಿ ಸಂತ್ರಸ್ತರ ಯೋಜನೆಗಳ ಪಿಂಚಣಿ ಮೊತ್ತ ಹೆಚ್ಚಳ. **75 ಲಕ್ಷ ಫಲಾನುಭವಿಗಳಿಗೆ** ಅನುಕೂಲ.


















### ಅಮೃತ ಯೋಜನೆಗಳು

- ಭಾರತದ 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ವಿವಿಧ ಅಭಿವೃದ್ಧಿ, ಕಲ್ಯಾಣ ಕಾರ್ಯಕ್ರಮಗಳಿಗಾಗಿ ಅಮೃತ ಯೋಜನೆಗಳ ಜಾರಿ

### ಹೂಡಿಕೆ ಆಕರ್ಷಣೆ

- 551 ಯೋಜನೆಗಳಿಗೆ ಅನುಮೋದನೆ. **ರೂ.40,577 ಕೋಟಿ** ಹೂಡಿಕೆ, **1.64 ಲಕ್ಷ ಜನರಿಗೆ** ಉದ್ಯೋಗವಕಾಶ
- ವಿಶ್ವ ಆರ್ಥಿಕ ವೇದಿಕೆ, ದಾವೋಸ್ 2022ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಉನ್ನತ ಮಟ್ಟದ ಸಚಿವರ ನಿಯೋಗ. ರಾಜ್ಯದಲ್ಲಿ **ರೂ.59,350 ಕೋಟಿ** ಬಂಡವಾಳ ಹೂಡಿಕೆ ಒಪ್ಪಂದ
- ಹೆಚ್ಚುವರಿಯಾಗಿ 5 ಒಡಂಬಡಿಕೆಗಳಿಗೆ ಸಹಿ. ಇವುಗಳಿಂದ **ರೂ.1,11,765 ಕೋಟಿ** ಬಂಡವಾಳ ಹೂಡಿಕೆಯಾಗಲಿದೆ.

### ವಿದೇಶಿ ನೇರ ಹೂಡಿಕೆಯಲ್ಲಿ ಕರ್ನಾಟಕ ದೇಶದಲ್ಲೇ ಮೊದಲು

- ಏಪ್ರಿಲ್ 2021–ಮಾರ್ಚ್ 2022ರ ಅವಧಿಯಲ್ಲಿ ಭಾರತದ ಒಟ್ಟು ವಿದೇಶಿ ನೇರ ಹೂಡಿಕೆಯ ಪ್ರಮಾಣದಲ್ಲಿ **1.63 ಲಕ್ಷ ಕೋಟಿ ರೂ. (ಶೇ.37.5 ರಷ್ಟು)** ಹೂಡಿಕೆ ಕರ್ನಾಟಕಕ್ಕೆ ಅಗ್ರಸ್ಥಾನ

### ಆವಿಷ್ಕಾರದಲ್ಲಿ (ಇನ್ನೋವೇಷನ್) ಕರ್ನಾಟಕಕ್ಕೆ ಮೊದಲ ಸ್ಥಾನ

- ನೀತಿ ಆಯೋಗದ ಇಂಡಿಯಾ ಇನ್ನೋವೇಷನ್ ಇಂಡೆಕ್ಸ್, 2022 ರಲ್ಲಿ ಕರ್ನಾಟಕ ಮೊದಲ ಸ್ಥಾನ ಗಳಿಸಿದೆ.

### ಸಹಕಾರ ಸಮೃದ್ಧಿ

- 28.42 ಲಕ್ಷ ರೈತರಿಗೆ **ರೂ.20,971.79 ಕೋಟಿ** ಕೃಷಿ ಸಾಲ ವಿತರಣೆ.
- ಯಶಸ್ವಿನಿ ಯೋಜನೆ ಮರುಜಾರಿಗೆ ಆದೇಶ ಹೊರಡಿಸಲಾಗಿದೆ
- ಹಾಲು ಉತ್ಪಾದಕರ ಅನುಕೂಲಕ್ಕೆ **ಕ್ಷೀರಸಮೃದ್ಧಿ** ಸಹಕಾರ ಬ್ಯಾಂಕ್ ಸ್ಥಾಪಿಸುವ ಯೋಜನೆ
- **36,601 ಸ್ವಸಹಾಯ ಗುಂಪುಗಳಿಗೆ** ಸಹಕಾರ ಬ್ಯಾಂಕುಗಳಿಂದ **ರೂ.1,385.17 ಕೋಟಿ** ಸಾಲ ವಿತರಣೆ

### ನೀರಾವರಿ

- ಜುಲೈ 2021 ರಿಂದ ಜೂನ್ 2022ರ ಅಂತ್ಯದವರೆಗೆ **ರೂ.17,270.13 ಕೋಟಿ** ವೆಚ್ಚದಲ್ಲಿ **79,731 ಎಕರೆ** ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ.

### ನಗರಾಭಿವೃದ್ಧಿ

- ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ: ಬೆಂಗಳೂರು ನಗರದ ಮೂಲಭೂತ ಸೌಕರ್ಯದ ಅಭಿವೃದ್ಧಿಗೆ **ರೂ.6,000 ಕೋಟಿ**
- ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಸ್ಥಳೀಯ ಸಂಸ್ಥೆಗಳ ವ್ಯಾಪ್ತಿ) ಯೋಜನೆ: **ರೂ.3,885 ಕೋಟಿ**

### ಆಹಾರ ಭದ್ರತೆ

- ಆದ್ಯತಾ ಪಡಿತರ ಚೀಟಿದಾರರಿಗೆ ಪ್ರತಿ ಫಲಾನುಭವಿಗೆ **5 ಕೆ.ಜಿ. ಅಕ್ಕಿ, ಜೊತೆಗೆ 1 ಕೆ.ಜಿ. ರಾಗಿ/ಜೋಳ ವಿತರಣೆ.**

### ಗ್ರಾಮೀಣ ನೀರು ಸರಬರಾಜು

- "ಮನೆ ಮನೆಗೆ ಗಂಗೆ" – ಜಲಜೀವನ್ ಮಿಷನ್ ಯೋಜನೆಯಡಿ **22.85 ಲಕ್ಷ ಮನೆಗಳಿಗೆ** ಹೊಸದಾಗಿ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ.
- ಜಲಜೀವನ್ ಮಿಷನ್: **ಶೇ. 100 ರಷ್ಟು** ಗುರಿ ಮುಟ್ಟಲಾಗಿದೆ.

### ವಸತಿ

- 2021–22ನೇ ಸಾಲಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ **53,636 ಮನೆಗಳಿಗೆ** ಒಟ್ಟು **ರೂ.341.56 ಕೋಟಿ** ಪರಿಹಾರಧನ ಬಿಡುಗಡೆ.
- ವಿವಿಧ ಯೋಜನೆಗಳಡಿ ವಸತಿರಹಿತ ಕುಟುಂಬಗಳಿಗೆ **5 ಲಕ್ಷ ಮನೆಗಳ** ಗುರಿ. **1.4 ಲಕ್ಷ** ಮನೆಗಳಿಗೆ ಕಾರ್ಯಾದೇಶ

**ಸ್ಥಳೀಯರಿಗೆ ಉದ್ಯೋಗವಕಾಶ ಕಲ್ಪಿಸಲು ದೇಶದಲ್ಲೇ ಮೊದಲ ಬಾರಿಗೆ ಹೊಸ ಉದ್ಯೋಗ ನೀತಿ 2022–25ಕ್ಕೆ ಅನುಮೋದನೆ**

### ನಾಗರಿಕ ಸೇವೆಗಳಲ್ಲಿ ಕ್ರಾಂತಿ

- ನಾಗರಿಕ ಸೇವೆಗಳನ್ನು ಗ್ರಾಮಸ್ಥರಿಗೆ ಅವರಿರುವ ಸ್ಥಳದಲ್ಲಿಯೇ, ಒಂದೇ ಸೂರಿನಡಿ ಒದಗಿಸುವ **‘ಗ್ರಾಮ ಒನ್’** ಯೋಜನೆಯನ್ನು ಎಲ್ಲಾ ಜಿಲ್ಲೆಗಳಲ್ಲಿ ಆರಂಭಿಸಲಾಗಿದೆ. ಈ ಯೋಜನೆಯಡಿ **44 ಲಕ್ಷ ಅರ್ಜಿಗಳಿಗೆ** ಸೇವೆ ಪೂರೈಕೆ
- **ಜನಸೇವಕ ಯೋಜನೆ:** ಬೃಹತ್ ಬೆಂಗಳೂರು ವ್ಯಾಪ್ತಿಯ 198 ವಾರ್ಡ್‌ಗಳಲ್ಲಿ ನಾಗರಿಕರ ಮನೆ ಬಾಗಿಲಲ್ಲೇ ಸರ್ಕಾರದ ಸೇವೆಗಳನ್ನು ಒದಗಿಸುವ ವ್ಯವಸ್ಥೆಯ ಆರಂಭ

### ಶಿಕ್ಷಣ

- **ರಾಷ್ಟ್ರೀಯ ಶಿಕ್ಷಣ ನೀತಿ** ಅನುಷ್ಠಾನಗೊಳಿಸಿದ ಮೊದಲ ರಾಜ್ಯ
- 7 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು Karnataka Institute of Technology ಗಳಾಗಿ ಉನ್ನತೀಕರಣ
- **ರೂ.4,736 ಕೋಟಿ** ವೆಚ್ಚದಲ್ಲಿ ರಾಜ್ಯದ 150 ಐಟಿಐಗಳನ್ನು ತಂತ್ರಜ್ಞಾನ ಕೇಂದ್ರಗಳನ್ನಾಗಿ ಉನ್ನತೀಕರಣ.
- **1,240 ಉಪನ್ಯಾಸಕರು, 15,000 ಶಾಲಾ ಶಿಕ್ಷಕರ** ನೇಮಕಾತಿ
- ಅತಿಥಿ ಉಪನ್ಯಾಸಕರ ಗೌರವಧನ: ಸೇವಾನುಭವ ಆಧರಿಸಿ **ರೂ.26,000 – ರೂ.32,000** ಗಳಿಗೆ ಹೆಚ್ಚಳ
- **ರೂ.1,412 ಕೋಟಿ** ವೆಚ್ಚದಲ್ಲಿ **8,101** ಪ್ರಾಥಮಿಕ ಮತ್ತು ಪ್ರೌಢ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಕ್ರಮ. 3 ಲಕ್ಷಕ್ಕಿಂತ ಹೆಚ್ಚು ಮಕ್ಕಳಿಗೆ ಅನುಕೂಲ.

### ಆರೋಗ್ಯ ಮತ್ತು ಕುಟುಂಬ ಕಲ್ಯಾಣ

- ಕೋವಿಡ್–19 3ನೇ ಅಲೆಯ ಪರಿಣಾಮಕಾರಿ ನಿರ್ವಹಣೆ. ಲಸಿಕೆಗಳ **11.4 ಕೋಟಿ ಡೋಸ್‌ಗಳನ್ನು** ನೀಡಲಾಗಿದೆ.
- 100 ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಲ್ಲಿ ಶಿಕ್ಷಣ ಗುಣಮಟ್ಟ ವೃದ್ಧಿ, ಆರೋಗ್ಯಸೇವೆಗಳ ವರ್ಧನೆ ಮತ್ತು ಅಪೌಷ್ಠಿಕತೆ ನಿವಾರಣೆಗೆ ಕ್ರಮ. ಒಟ್ಟು **ರೂ.3,000 ಕೋಟಿ** ಅನುದಾನ.
- ಕ್ಯಾನ್ಸರ್ ರೋಗಿಗಳಿಗೆ **ಕಿಮೋಥೆರೆಪಿ** ಸೌಕರ್ಯ ಒದಗಿಸಲು ಆಯ್ದ 10 ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ **Infusion Centre** ಗಳನ್ನು ಸ್ಥಾಪಿಸಲು ತಾತ್ವಿಕ ಅನುಮೋದನೆ
- 100 ಅಪೇಕ್ಷಿತ ತಾಲ್ಲೂಕುಗಳಲ್ಲಿ ತಲಾ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಗುರುತಿಸಿ ಅವುಗಳನ್ನು 25 ಹಾಸಿಗೆಯ ಮಾದರಿ ಸಮುದಾಯ ಆಸ್ಪತ್ರೆಗಳನ್ನಾಗಿ ಮುಂದಿನ 2 ವರ್ಷಗಳಲ್ಲಿ **ರೂ.1,000 ಕೋಟಿ** ವೆಚ್ಚದಲ್ಲಿ ಉನ್ನತೀಕರಿಸಲು ಕ್ರಮ
- ಮುಖ್ಯ ನಗರಗಳಲ್ಲಿ 438 ನಮ್ಮ ಕ್ಲಿನಿಕ್‌ಗಳ ಸ್ಥಾಪನೆಗೆ ಕ್ರಮ
- ಉಚಿತ **ಡಯಾಲಿಸಿಸ್** ಸೇವೆಗಳನ್ನು ಪ್ರತಿ ತಿಂಗಳಿಗೆ ಈಗಿರುವ 30,000 ಸೈಕಲ್‌ಗಳಿಂದ **60,000 ಸೈಕಲ್‌ಗಳಿಗೆ** ಹೆಚ್ಚಿಸಲು **ರೂ.20 ಕೋಟಿ** ಹೆಚ್ಚುವರಿ ಅನುದಾನ
- ಉತ್ತರ ಕರ್ನಾಟಕದಲ್ಲಿ ಹೈಟೆಕ್ ಚಿಕಿತ್ಸೆ ಕಲ್ಪಿಸಲು ಹುಬ್ಬಳ್ಳಿಯಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯ ಪ್ರಾದೇಶಿಕ ಹೃದ್ರೋಗ ಕೇಂದ್ರವನ್ನು **ರೂ.250 ಕೋಟಿ** ವೆಚ್ಚದಲ್ಲಿ ಸ್ಥಾಪಿಸಲಾಗುವುದು. ಬೆಳಗಾವಿಯಲ್ಲಿ **ರೂ.50 ಕೋಟಿ** ವೆಚ್ಚದಲ್ಲಿ ಕಿದ್ವಾಯಿ ಪ್ರಾದೇಶಿಕ ಕ್ಯಾನ್ಸರ್ ಕೇಂದ್ರ ಸ್ಥಾಪನೆ
- **500 ಜನ್ಮಜಾತ ಕಿವುಡು ಮಕ್ಕಳಿಗೆ** ಕಾಕ್ಲಿಯರ್ ಇಂಪ್ಲಾಂಟ್ಸ್ ಅಳವಡಿಸಿ ಅವರ ವಾಕ್–ಶ್ರವಣ ಸಾಮರ್ಥ್ಯ ಸುಧಾರಿಸಲು **ರೂ. 32 ಕೋಟಿ**

### ರೈಲು/ರಸ್ತೆಗಳ ಅಭಿವೃದ್ಧಿ

- ಧಾರವಾಡ–ಕಿತ್ತೂರು–ಬೆಳಗಾವಿ ರೈಲು ಯೋಜನೆಗೆ ಅನುಮೋದನೆ
- **2,275 ಕಿ.ಮೀ.** ರಾಜ್ಯ ಹೆದ್ದಾರಿಗಳ ಅಭಿವೃದ್ಧಿಗೆ ಕ್ರಮ

### ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಅನುದಾನ ದ್ವಿಗುಣ: ರೂ.3,000 ಕೋಟಿ ಹಂಚಿಕೆ

- ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೃಷ್ಣಾ ಭಾಗ್ಯ ಜಲನಿಗಮ ಹಾಗೂ ಕರ್ನಾಟಕ ನೀರಾವರಿ ನಿಗಮಗಳ ವತಿಯಿಂದ ಅಭಿವೃದ್ಧಿ ಕಾರ್ಯಗಳಿಗಾಗಿ **ರೂ.2,637.33 ಕೋಟಿ** ವೆಚ್ಚ
- ಕಲ್ಯಾಣ ಕರ್ನಾಟಕದಲ್ಲಿ ಖಾಲಿ ಇರುವ **25,000** ಸರ್ಕಾರಿ ಹುದ್ದೆಗಳನ್ನು ತುಂಬಲು ಆಡಳಿತಾತ್ಮಕ ಮಂಜೂರಾತಿ

“ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು.” -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಗುರುವಾರ, ಜುಲೈ 28, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 208 | ಪುಟ 20

www.prajavani.net


/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸ್ಪರ್ಧಾ ವಾಣಿ**

ಈಚೆಗಷ್ಟೆ ನೂತನ ರಾಷ್ಟ್ರಪತಿ ಪ್ರಮಾಣ ವಚನ ಸ್ವೀಕರಿಸಿದ್ದು, ರಾಷ್ಟ್ರಪತಿ ಚುನಾವಣೆ ಪ್ರಕ್ರಿಯೆ, ಕಾಯ್ದೆ, ನಿಯಮಗಳ ಕುರಿತ ಪೂರ್ಣ ಮಾಹಿತಿ ಇಲ್ಲಿದೆ.





| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 55,816 ▲ | 16,641 ▲ | ₹52,350 (ಬೆಂಗಳೂರು) ▼ | ₹55,800 (ಬೆಂಗಳೂರು) ▲ | 79.91 ▼ |

### ಪ್ರವೀಣ್ ಹತ್ಯೆ: ಮೂರು ತಾಲ್ಲೂಕುಗಳು ಬಂದ್ • ಬಿಜೆಪಿ ಮುಖಂಡರಿಗೆ ತಟ್ಟಿದ ಪ್ರತಿಭಟನೆ ಬಿಸಿ

# ಸರ್ಕಾರದ ವಿರುದ್ಧ ಕೇಸರಿ ಪಡೆ ಕಿಡಿ

ಪ್ರಜಾವಾಣಿ ವಾರ್ತೆ

**ಸುಳ್ಯ/ಮಂಗಳೂರು:** ಸಮೀಪದ ಬೆಳ್ಳಾರೆಯಲ್ಲಿ ಮಂಗಳವಾರ ರಾತ್ರಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಯುವಮೋರ್ಚಾದ ಕಾರ್ಯಕಾರಿ ಸಮಿತಿ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆಯಿಂದಾಗಿ ಸಂಘ ಪರಿವಾರದ ಸಂಘಟನೆಗಳ ಹಾಗೂ ಬಿಜೆಪಿ ಕಾರ್ಯಕರ್ತರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಪ್ರವೀಣ್ ನೆಟ್ಟಾರು

'ರಾಜ್ಯ ಮತ್ತು ಕೇಂದ್ರದಲ್ಲಿ ನಮ್ಮದೇ ಪಕ್ಷ ಅಧಿಕಾರದಲ್ಲಿ ಇದ್ದರೂ ನಮಗೆ ರಕ್ಷಣೆ ಸಿಗುತ್ತಿಲ್ಲ. ಅಮಾಯಕ ಹಿಂದೂ ಯುವಕರ ಕೊಲೆ ನಿಲ್ಲುತ್ತಿಲ್ಲ' ಎಂಬುದು ಅವರ ಸಿಟ್ಟಿಗೆ ಕಾರಣ. ಇದರ ಬೆನ್ನಿಗೇ ಬಿಜೆಪಿಯಲ್ಲಿ ರಾಜೀನಾಮೆ ಪರ್ವವೂ ಆರಂಭಗೊಂಡಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಯುವಕರು ಪಕ್ಷದ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ.

'ಇಂಥ ದುಷ್ಕೃತ್ಯಗಳಿಂದಾಗಿ ಜನಾಕ್ರೋಶ ಹೆಚ್ಚಾಗಿದ್ದು, ಸರ್ಕಾರದ ಮೇಲೆ ವಿಶ್ವಾಸ ಕಳೆದುಕೊಳ್ಳುವ ಸ್ಥಿತಿ ತಲುಪುತ್ತಿರುವಂತೆ ಕಾಣುತ್ತಿದೆ' ಎಂದು ಉಡುಪಿ ಪೇಜಾವರಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದ್ದಾರೆ.

ಬೆಳ್ಳಾರೆಯ ತಮ್ಮ ಕೋಳಿಮಾಂಸದ ಅಂಗಡಿಗೆ ಬಾಗಿಲು ಹಾಕುತ್ತಿದ್ದ ವೇಳೆ ಮಂಗಳವಾರ ರಾತ್ರಿ ಪ್ರವೀಣ್ (32) ಅವರನ್ನು ಹತ್ಯೆ ಮಾಡಲಾಗಿತ್ತು. ಪುತ್ತೂರು ಸರ್ಕಾರಿ ಆಸ್ಪತ್ರೆಯಲ್ಲಿ ಬುಧವಾರ ಬೆಳಿಗ್ಗೆ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ನಿಷೇಧಾಜ್ಞೆಯ ನಡುವೆಯೂ ಪ್ರವೀಣ್ ಅವರ ಪಾರ್ಥಿವ ಶರೀರವನ್ನು ಪುತ್ತೂರಿನ ಆಸ್ಪತ್ರೆಯಿಂದ ಬೆಳ್ಳಾರೆಯ ನೆಟ್ಟಾರುವಿನವರೆಗೆ ಸುಮಾರು 25 ಕಿ.ಮೀ. ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಈ ವೇಳೆ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ದಕ್ಷಿಣ ಕನ್ನಡದ ಸಂಸದರೂ ಆಗಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಜಿಲ್ಲಾ ಉಸ್ತುವಾರಿ ಸಚಿವ ಸುನೀಲ್ ಕುಮಾರ್, ಸಚಿವ ಎಸ್.ಅಂಗಾರ ಹಾಗೂ ಪುತ್ತೂರು ಶಾಸಕ ಸಂಜೀವ ಮಠಂದೂರು ಅವರು ಪ್ರವೀಣ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆಯಲು ಕಾರಿನಲ್ಲಿ ಬಂದು, ಇಳಿಯಲು ಮುಂದಾದಾಗ ಪಕ್ಷದ ಕಾರ್ಯಕರ್ತರ ತಾಳ್ಮೆಯ ಕಟ್ಟೆ ಒಡೆಯಿತು.


7ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 07



ದಕ್ಷಿಣ ಕನ್ನಡ ಜಿಲ್ಲೆ ಬೆಳ್ಳಾರೆಯ ನೆಟ್ಟಾರು ಗ್ರಾಮದಲ್ಲಿ ಹತ್ಯೆಯಾದ ಬಿಜೆಪಿ ಯುವ ಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಅವರ ಮೃತ ದೇಹದ ಅಂತಿಮಯಾತ್ರೆಯಲ್ಲಿ ಸೇರಿದ್ದ ಕಾರ್ಯಕರ್ತರು

## 'ಹಂತಕರನ್ನು ಸದೆ ಬಡಿಯುತ್ತೇವೆ'



**ಬೆಂಗಳೂರು:** 'ನಮ್ಮ ಪಕ್ಷದ ಕಾರ್ಯಕರ್ತ ಪ್ರವೀಣ್ ಅವರನ್ನು ಕೊಲೆ ಮಾಡಿದ ಹಂತಕರು ಎಲ್ಲೇ ಇದ್ದರೂ ಹಿಡಿದು ತಂದು ಸದೆ ಬಡಿಯುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

7ನೇ ಪುಟ ನೋಡಿ

## ತಂದೆಯಿಂದ ಅಗ್ನಿಸ್ಪರ್ಶ

ಪ್ರವೀಣ್ ಅವರ ಅಂತ್ಯಕ್ರಿಯೆ ನೆಟ್ಟಾರುವಿನಲ್ಲಿರುವ ಅವರ ಮನೆಯ ಸಮೀಪದ ಖಾಲಿ ಜಾಗದಲ್ಲಿ ನೆರವೇರಿತು. ಬಿಲ್ಲವ ಸಂಪ್ರದಾಯಗಳ ಪ್ರಕಾರ ಅಂತಿಮ ವಿಧಿಗಳನ್ನು ನೆರವೇರಿಸಲಾಯಿತು. ಪ್ರವೀಣ್ ಅವರ ತಂದೆ ಶೇಖರ ಪೂಜಾರಿ ಅವರು ಅಗ್ನಿಸ್ಪರ್ಶ ಮಾಡಿದರು. ಪ್ರವೀಣ್ ಅವರು ಮನೆ ನಿರ್ಮಿಸಲೆಂದು ಸಮತಟ್ಟು ಮಾಡಿದ್ದ ಜಾಗದಲ್ಲೇ ಅವರ ಅಂತ್ಯಕ್ರಿಯೆ ನಡೆಯಿತು

## ಕೋಮುಗಲಭೆ: 5 ಪ್ರಕರಣಗಳಲ್ಲಷ್ಟೇ ಶಿಕ್ಷೆ

**ನವದೆಹಲಿ:** ಕರ್ನಾಟಕದಲ್ಲಿ ಮೂರು ವರ್ಷಗಳಲ್ಲಿ ನಡೆದ ಕೋಮು ಗಲಭೆಗಳಿಗೆ ಸಂಬಂಧಿಸಿದಂತೆ 100 ಆರೋಪಪಟ್ಟಿಗಳನ್ನು ಸಲ್ಲಿಸಲಾಗಿದ್ದು, ಐದು ಪ್ರಕರಣಗಳಲ್ಲಷ್ಟೇ ಅಪರಾಧಿಗಳಿಗೆ ಶಿಕ್ಷೆ ವಿಧಿಸಲಾಗಿದೆ.

ಲೋಕಸಭೆಯಲ್ಲಿ ಸದಸ್ಯ ಡ್ಯಾನಿಷ್ ಅಲಿ ಕೇಳಿರುವ ಪ್ರಶ್ನೆಗೆ ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ನಿತ್ಯಾನಂದ ರೈ ಲಿಖಿತ ಉತ್ತರ ನೀಡಿದ್ದಾರೆ. ದೇಶದಲ್ಲಿನ ಅಪರಾಧ ಪ್ರಕರಣಗಳ ಬಗ್ಗೆ 2020ರ ವರೆಗೆ ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯುರೊ (ಎನ್‌ಸಿಆರ್‌ಬಿ) ಸಿದ್ಧಪಡಿಸಿದ್ದು, ಅದರ ಆಧಾರದಲ್ಲಿ ಈ ವಿವರ ನೀಡಲಾಗಿದೆ ಎಂದು ಅವರು ಉತ್ತರಿಸಿದ್ದಾರೆ.

2018ರಲ್ಲಿ 29 ಪ್ರಕರಣಗಳು ದಾಖಲಾಗಿ 224 ಮಂದಿಯನ್ನು ಬಂಧಿಸಲಾಗಿತ್ತು. 62 ಆರೋಪ ಪಟ್ಟಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ಎರಡು ಪ್ರಕರಣಗಳಲ್ಲಿ 9 ಅಪರಾಧಿಗಳಿಗೆ ಶಿಕ್ಷೆ ಆಗಿದೆ.

2019ರಲ್ಲಿ 11 ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಾಗಿ, 77 ಮಂದಿಯನ್ನು ಬಂಧಿಸಲಾಗಿತ್ತು. 22 ಆರೋಪ ಪಟ್ಟಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ಒಂದು ಪ್ರಕರಣದಲ್ಲಿ ಆರೋಪಿಯೊಬ್ಬರಿಗೆ ಶಿಕ್ಷೆ ನೀಡಲಾಗಿದೆ ಎಂದು ಅವರು ಉತ್ತರದಲ್ಲಿ ತಿಳಿಸಿದ್ದಾರೆ.

2020ರಲ್ಲಿ 10 ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಾಗಿ, 16 ಆರೋಪ ಪಟ್ಟಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. 63 ಮಂದಿಯನ್ನು ಬಂಧಿಸಲಾಗಿದ್ದು, 151 ಆರೋಪಿಗಳ ವಿರುದ್ಧ ಆರೋಪ ಪಟ್ಟಿ ಸಿದ್ಧಪಡಿಸಲಾಗಿತ್ತು. ಎರಡು ಪ್ರಕರಣಗಳಲ್ಲಿ 54 ಮಂದಿಗೆ ಶಿಕ್ಷೆ ಆಗಿದೆ ಎಂದು ಅವರು ವಿವರ ನೀಡಿದ್ದಾರೆ.

## 'ಮಹಾರಾಷ್ಟ್ರದ ತಂತ್ರ ಗಂಭೀರವಾಗಿ ಪರಿಗಣಿಸಿ'

ಪ್ರಜಾವಾಣಿ ವಾರ್ತೆ

**ಬೆಳಗಾವಿ:** 'ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದಕ್ಕೆ ಒಳಪಟ್ಟ 865 ಹಳ್ಳಿಗಳ ಮರಾಠಿಗರನ್ನು ಸೆಳೆಯಲು ಮಹಾರಾಷ್ಟ್ರ ಸರ್ಕಾರ ಹೊಸ ತಂತ್ರ ರೂಪಿಸಿದೆ. ಕರ್ನಾಟಕ ಸರ್ಕಾರ ಈ ವಿಷಯ ಗಂಭೀರವಾಗಿ ಪರಿಗಣಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬುಧವಾರ ಪತ್ರ ಬರೆದಿದ್ದಾರೆ.

ಗಡಿ ವಿವಾದಕ್ಕೆ ಮಹಾರಾಷ್ಟ್ರ ಶೈಕ್ಷಣಿಕ ಅಸ್ತ್ರ ಬಳಸಿಕೊಳ್ಳಲು ಮುಂದಾಗಿರುವ ಕುರಿತು 'ಪ್ರಜಾವಾಣಿ'ಯಲ್ಲಿ ಬುಧವಾರ ವಿಶೇಷ ವರದಿ ಪ್ರಕಟವಾಗಿತ್ತು.

'ಬೆಳಗಾವಿ, ಬೀದರ್, ಕಲಬುರಗಿ, ಉತ್ತರ ಕನ್ನಡ ಜಿಲ್ಲೆಗಳ ಒಟ್ಟು 865 ಜನವಸತಿಗಳು ತಮಗೆ ಸೇರಬೇಕು ಎಂಬುದು ಮಹಾರಾಷ್ಟ್ರದ ವಾದ. ಇದನ್ನು ಪ್ರತಿಪಾದಿಸಲು ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಿದೆ. ಈಗ ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯ ಆ ಹಳ್ಳಿಗಳ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ಮುಂದಾಗಿದೆ. ಇದನ್ನೇ ಸಾಕ್ಷ್ಯಾಧಾರವಾಗಿ ರೂಪಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಲು ಹುನ್ನಾರ ನಡೆಸಿದೆ. ಮಹಾರಾಷ್ಟ್ರದ ಕ್ರಮಕ್ಕೆ ಪ್ರತ್ಯುತ್ತರ ನೀಡಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು. ಗಡಿ ಕನ್ನಡ ಸಂಘಟನೆಗಳ ಸಲಹೆ ಪಡೆಯಬೇಕು' ಎಂದು ಆಗ್ರಹಿಸಿದ್ದಾರೆ.

PRINCE JEWELLERY

Flat 3.5% value addition for all plain Gold Jewellery*

NEW COLLECTIONS ADDED

Flat ₹10,000 less per carat on certified natural diamond jewellery*

0% Making Charges*

OFFER EXTENDED

DON'T MISS



Exchange your old 916 gold jewellery for new 916 gold jewellery or certified natural diamond jewellery without any loss in weight and rate

Avail the lowest gold price in the market on the day of purchase!

BENGALURU: 11th Main Road, Near Cosmopolitan Club, 3rd Block, Jayanagar. Ph: 080-4264 9999.

CHENNAI | COIMBATORE | THIRUVANANTHAPURAM

www.princejewellery.com. Open on Sundays. Valet parking available.

*Terms and conditions apply. Offers not valid for coins, bullions, solitaires and exchange of diamond jewellery. Offer cannot be clubbed with other offers and closure of purchase plan. Offer applicable only for cash transactions, exchange of old gold and bank transactions (RTGS)

Certified diamonds BIS 100% Hallmarked Jewellery

## ರಾಜ್ಯ ಸರ್ಕಾರದ 'ಜನೋತ್ಸವ' ರದ್ದು: ಸಿ.ಎಂ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಒಂದು ವರ್ಷ ತುಂಬಿದ ಹಿನ್ನೆಲೆಯಲ್ಲಿ ದೊಡ್ಡಬಳ್ಳಾಪುರದಲ್ಲಿ ಗುರುವಾರ (ಜುಲೈ 28) ಬಿಜೆಪಿ ಹಮ್ಮಿಕೊಂಡಿದ್ದ ಸಾಧನಾ ಸಮಾವೇಶ– 'ಜನೋತ್ಸವ'ವನ್ನು ರದ್ದುಪಡಿಸಲಾಗಿದೆ.

ಆರ್.ಟಿ. ನಗರದಲ್ಲಿರುವ ತಮ್ಮ ನಿವಾಸದಲ್ಲಿ ಬುಧವಾರ ರಾತ್ರಿ 12.30ಕ್ಕೆ ತುರ್ತು ಸುದ್ದಿಗೋಷ್ಠಿ ನಡೆಸಿದ ಮುಖ್ಯಮಂತ್ರಿ, 'ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಳಾರೆಯಲ್ಲಿ ನಮ್ಮ ಪಕ್ಷದ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆಯ ಹಿನ್ನೆಲೆಯಲ್ಲಿ ಜನೋತ್ಸವವನ್ನು ರದ್ದುಪಡಿಸಲಾಗಿದೆ' ಎಂದು ತಿಳಿಸಿದರು.

ಬೆಳಿಗ್ಗೆಯಿಂದ ಅನೇಕ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೆ. ಪ್ರವೀಣ ಹತ್ಯೆ ಹಾಗೂ ನಮ್ಮ ಪಕ್ಷದ ಯುವಕರ ಆಕ್ರೋಶವನ್ನೂ ಗಮನಿಸಿದೆ. ನನ್ನ ಮನಸ್ಸಿಗೂ ತುಂಬಾ ನೋವಾಗಿದೆ. ಬಹಳ ತೊಳಲಾಟದಲ್ಲಿದ್ದೆ. ಹತ್ಯೆಯಾದ ಪ್ರವೀಣ್ ಅವರ ತಾಯಿಯ ಆಕ್ರಂದನ ನೋಡಿದ ಬಳಿಕ ಕಾರ್ಯಕ್ರಮ ರದ್ದುಪಡಿಸಲು ತೀರ್ಮಾನಿಸಿದೆ ಎಂದರು.

10ನೇ ಪುಟ ನೋಡಿ

### ಪಿಎಂಎಲ್‌ಎ ಸೆಕ್ಷನ್‌ಗಳನ್ನು ಎತ್ತಿಹಿಡಿದ ಸುಪ್ರೀಂ ಕೋರ್ಟ್

# ಇ.ಡಿ ಅಧಿಕಾರ ಅಬಾಧಿತ

**ನವದೆಹಲಿ (ಪಿಟಿಐ):** ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ವಿವಿಧ ಸೆಕ್ಷನ್‌ಗಳ ಅಡಿ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ನೀಡಲಾಗಿರುವ ಅಧಿಕಾರಗಳನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ 200ಕ್ಕೂ ಹೆಚ್ಚು ಅರ್ಜಿಗಳನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ. ಇ.ಡಿಯ ಅಧಿಕಾರಗಳನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಸುಪ್ರೀಂ ಕೋರ್ಟ್‌ನ ಈ ತೀರ್ಪಿನಿಂದ ವಿರೋಧ ಪಕ್ಷಗಳಿಗೆ ತೀವ್ರ ಹಿನ್ನಡೆಯಾದಂತಾಗಿದೆ.

ಪಿಎಂಎಲ್‌ಎಯ ವಿವಿಧ ಸೆಕ್ಷನ್‌ಗಳ ಅಡಿ ಜಾರಿ ನಿರ್ದೇಶನಾಲಯವು ಬಳಸುತ್ತಿರುವ ಅಧಿಕಾರವನ್ನು ಪ್ರಶ್ನಿಸಿ ವಿರೋಧ ಪಕ್ಷಗಳ ನಾಯಕರು, ರಾಜ್ಯಗಳ ಸಚಿವರು, ಸಾಮಾಜಿಕ ಕಾರ್ಯಕರ್ತರು ಮತ್ತು ವಕೀಲರು ಸಲ್ಲಿಸಿದ್ದ 241 ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಎ.ಎಂ.ಖಾನ್‌ವಿಲ್ಕರ್, ದಿನೇಶ್ ಮಾಹೇಶ್ವರಿ ಮತ್ತು ಸಿ.ಟಿ.ರವಿಕುಮಾರ್ ಅವರಿದ್ದ ಪೀಠವು ನಡೆಸಿತ್ತು. ಅರ್ಜಿಗಳಿಗೆ ಸಂಬಂಧಿಸಿದ 545 ಪುಟಗಳಷ್ಟು ದೀರ್ಘವಾದ ತೀರ್ಪನ್ನು ಪೀಠವು ಬುಧವಾರ ನೀಡಿತು.

ಕೇಂದ್ರ ಸರ್ಕಾರವು ಜಾರಿ ನಿರ್ದೇಶನಾಲಯವನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ ಮತ್ತು ಆ ಮೂಲಕ ವಿರೋಧ ಪಕ್ಷಗಳ ನಾಯಕರ ಮೇಲೆ ದಬ್ಬಾಳಿಕೆ ನಡೆಸುತ್ತಿದೆ. ಜಾರಿ ನಿರ್ದೇಶನಾಲಯಕ್ಕೆ ನೀಡಿರುವ ಅಧಿಕಾರಗಳು ನಿರಂಕುಶವಾದುವು ಎಂದು ಅರ್ಜಿದಾರರು ಪ್ರತಿಪಾದಿಸಿದ್ದರು. ಈ ಪ್ರತಿಪಾದನೆಯನ್ನು ಅಲ್ಲಗಳೆದಿರುವ ಸುಪ್ರೀಂ ಕೋರ್ಟ್ ಪೀಠವು, 'ಈ ಅಧಿಕಾರಗಳು ನಿರಂಕುಶವಾದುದಲ್ಲ. ಆರೋಪಿಗಳ ಹಕ್ಕುಗಳ ರಕ್ಷಣೆಗೆ ಕಾಯ್ದೆಯ ವಿವಿಧ ಸೆಕ್ಷನ್‌ಗಳಲ್ಲಿ ಅವಕಾಶ ನೀಡಲಾಗಿದೆ' ಎಂದು ಹೇಳಿದೆ.

'ಯಾವುದೇ ಸ್ವರೂಪದ ಅಪರಾಧಗಳನ್ನು ಈ ಕಾಯ್ದೆಯ ಅಡಿ ತರುವುದು ಅಥವಾ ಕಾಯ್ದೆಯಿಂದ ತೆಗೆದುಹಾಕುವುದು ಸಂಪೂರ್ಣವಾಗಿ ಶಾಸಕಾಂಗಕ್ಕೆ ಸಂಬಂಧಿಸಿದ ವಿಚಾರವಾಗಿದೆ' ಎಂದು ಪೀಠವು ಹೇಳಿದೆ. ಪಿಎಂಎಲ್‌ಎಗೆ ತಂದಿರುವ ಕೆಲವು ತಿದ್ದುಪಡಿಗಳನ್ನು ಪ್ರಶ್ನಿಸಿರುವ ಅರ್ಜಿಗಳನ್ನು ವಿಸ್ತೃತ ಪೀಠವು ಪರಿಶೀಲಿಸಬೇಕು ಎಂದು ಪೀಠವು ಹೇಳಿದೆ.

10ನೇ ಪುಟ ನೋಡಿ

### 'ಇಸಿಐಆರ್ ಕಡ್ಡಾಯವಲ್ಲ'

ಹಣ ಅಕ್ರಮ ವರ್ಗಾವಣೆ ಪ್ರಕರಣಗಳಲ್ಲಿ ಜಾರಿ ನಿರ್ದೇಶನಾಲಯವು ಸಿದ್ಧಪಡಿಸುವ 'ಜಾರಿ ಪ್ರಕರಣ ಮಾಹಿತಿ ವರದಿ (ಇಸಿಐಆರ್)', ಎಫ್‌ಐಆರ್‌ಗೆ ಸಮಾನವಾದ ದಾಖಲೆಯಲ್ಲ. ಹೀಗಾಗಿ ಆರೋಪಿಗಳ ಬಂಧನದ ಸಂದರ್ಭದಲ್ಲಿ ಇಸಿಐಆರ್ ಅನ್ನು ನೀಡುವುದು ಕಡ್ಡಾಯವಲ್ಲ ಎಂದು ಸುಪ್ರೀಂ ಕೋರ್ಟ್ ಪೀಠವು ಹೇಳಿದೆ.

ಪಿಎಂಎಲ್‌ಎ ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸುವಾಗ ಜಾರಿ ನಿರ್ದೇಶನಾಲಯವು ಇಸಿಐಆರ್ ಅನ್ನು ನೀಡುತ್ತಿಲ್ಲ ಎಂಬುದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗೆ ಸಂಬಂಧಿಸಿದಂತೆ ಪೀಠವು ಹೀಗೆ ಹೇಳಿದೆ.

'ಎಫ್‌ಐಆರ್ ದಾಖಲಿಸುವುದು ಕಡ್ಡಾಯ ಮತ್ತು ಬಂಧನದ ವೇಳೆ ಆರೋಪಿಗಳಿಗೆ ಎಫ್‌ಐಆರ್ ತೋರಿಸುವುದು ಕಡ್ಡಾಯ. ಆದರೆ ಇಸಿಐಆರ್, ಎಫ್‌ಐಆರ್ ಅಲ್ಲ. ಅದು ಜಾರಿ ನಿರ್ದೇಶನಾಲಯದ ಆಂತರಿಕ ದಾಖಲೆ. ಆರೋಪಿಗಳ ಬಂಧನದ ವೇಳೆ ಇಸಿಐಆರ್ ಅನ್ನು ನೀಡುವುದು ಕಡ್ಡಾಯವಲ್ಲ. ಬಂಧನದ ವೇಳೆ ಯಾವ ಕಾರಣಕ್ಕೆ ಬಂಧಿಸಲಾಗುತ್ತಿದೆ ಎಂಬ ಮಾಹಿತಿ ನೀಡಿದರೂ ಸಾಕು' ಎಂದು ಪೀಠವು ಹೇಳಿದೆ.

ಆದರೆ, 'ಆರೋಪಿಯನ್ನು ನ್ಯಾಯಾಲಯದ ಎದುರು ಹಾಜರುಪಡಿಸಿದಾಗ, ಎಲ್ಲಾ ದಾಖಲೆಗಳನ್ನು ಪ್ರಸ್ತುತಪಡಿಸಿ ಎಂದು ನ್ಯಾಯಾಲಯವು ಕೇಳಬಹುದು. ಅದು ಸಂಪೂರ್ಣವಾಗಿ, ನ್ಯಾಯಾಲಯದ ವಿವೇಚನೆಗೆ ಬಿಟ್ಟ ವಿಚಾರ' ಎಂದೂ ಪೀಠವು ಹೇಳಿದೆ.

> **ಸರ್ಕಾರವು ರಾಜಕೀಯ ದ್ವೇಷದಲ್ಲಿ ತೊಡಗಿರುವಾಗ, ಸುಪ್ರೀಂ ಕೋರ್ಟ್ ನೀಡಿರುವ ಈ ತೀರ್ಪು ಪ್ರಜಾಪ್ರಭುತ್ವವನ್ನು ಬಾಧಿಸುತ್ತದೆ**
> **ಜೈರಾಮ್ ರಮೇಶ್,** ಕಾಂಗ್ರೆಸ್ ನಾಯಕ

## ಕನಸುಗಳ ಕಣಜ
### ಕಾಮನ್‌ವೆಲ್ತ್ ಕ್ರೀಡಾಕೂಟ





| | |
|---|---|
| ಅವಧಿ | ಜುಲೈ 28ರಿಂದ ಆಗಸ್ಟ್ 8 |
| ಆತಿಥ್ಯ | ಬರ್ಮಿಂಗ್‌ಹ್ಯಾಮ್, ಇಂಗ್ಲೆಂಡ್ |
| ಭಾಗವಹಿಸುವ ದೇಶಗಳು | 72 |
| ಒಟ್ಟು ಅಥ್ಲೀಟ್‌ಗಳು | 5,054 |
| ಆವೃತ್ತಿ | 22 |
| ಒಟ್ಟು ಕ್ರೀಡೆಗಳು | 20 |
| ಮರುಸೇರ್ಪಡೆ | ಜುಡೊ ಮತ್ತು ಕ್ರಿಕೆಟ್ |
| ರದ್ದು | ಶೂಟಿಂಗ್ |
| ಒಟ್ಟು ಪದಕಗಳು | 1,875 |
| ಭಾರತದ ಅಥ್ಲೀಟ್‌ಗಳು | 215 |
| ಧ್ವಜಧಾರಿ | ಪಿ.ವಿ. ಸಿಂಧು |
| ಉದ್ಘಾಟನೆ | ರಾತ್ರಿ 11.30 (ಭಾರತೀಯ ಕಾಲಮಾನ) |

ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಮತ್ತಷ್ಟು ಸುದ್ದಿಗಳು 14

### ಚಿನಕುರಳಿ

ಪ್ರಕಾಶ್ ಶೆಟ್ಟಿ





### ಒಳ ಪುಟಗಳು





### 3,065 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ ಸಿಐಡಿ

# ಪಿಎಸ್‌ಐ ಅಕ್ರಮ: ಹಣ ವರ್ಗಾವಣೆ, ಆಸ್ತಿ ಖರೀದಿ ವಿವರ ಉಲ್ಲೇಖ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮದಲ್ಲಿ ತನಿಖೆ ಪೂರ್ಣವಾದ ಆರೋಪಿಗಳ ವಿರುದ್ಧದ ಆರೋಪ ಪಟ್ಟಿಯನ್ನು 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಬುಧವಾರ ಸಿಐಡಿ ಸಲ್ಲಿಸಿತು.

30 ಆರೋಪಿಗಳ ವಿರುದ್ಧದ 3,065 ಪುಟಗಳ ಆರೋಪ ಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ತನಿಖಾಧಿಕಾರಿಗಳು ಸಲ್ಲಿಸಿದರು.

ಆರೋಪಿಗಳ ಮಧ್ಯೆ ನಡೆದ ಹಣಕಾಸಿನ ವ್ಯವಹಾರ, ಬಂದ ಹಣದಿಂದ ಆರೋಪಿಗಳು ಖರೀದಿಸಿರುವ ಆಸ್ತಿ ವಿವರವು ಆರೋಪ ಪಟ್ಟಿಯಲ್ಲಿದೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ. ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಹೊರತುಪಡಿಸಿ ಉಳಿದವರ ವಿರುದ್ಧದ ಆರೋಪ ಪಟ್ಟಿ ಇದು.

ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ಸಂಬಂಧ ನೇಮಕಾತಿ ವಿಭಾಗದ 5 ಮಂದಿ, 18 ಅಭ್ಯರ್ಥಿಗಳು ಹಾಗೂ 7 ಮಂದಿ ಮಧ್ಯವರ್ತಿಗಳ ವಿರುದ್ಧದ ಆರೋಪ ಪಟ್ಟಿ ಸಲ್ಲಿಸಲಾಗಿದೆ. 202 ಸಾಕ್ಷಿದಾರರ ಹೇಳಿಕೆ ಹಾಗೂ 330 ಸಾಕ್ಷ್ಯ, ದಾಖಲೆಗಳನ್ನು ಸಂಗ್ರಹಿಸಿರುವುದು ಗೊತ್ತಾಗಿದೆ.

'ಆರೋಪಿಗಳ ಮಧ್ಯೆ ₹2.50 ಕೋಟಿ ಹಣದ ವ್ಯವಹಾರ ನಡೆದಿದೆ. ಯಾರ್‍ಯಾರು ಎಷ್ಟು ಪಾಲು ಪಡೆದಿದ್ದರು ಎಂಬ ಮಾಹಿತಿ ಉಲ್ಲೇಖಿಸಲಾಗಿದೆ. ಡಿವೈಎಸ್‌ಪಿ ಆಗಿದ್ದ ಶಾಂತಕುಮಾರ್ ಹೇಳಿಕೆಗಳು ಪ್ರಮುಖವಾಗಿವೆ' ಎಂದು ಮೂಲಗಳು ತಿಳಿಸಿವೆ.

'ಅಮ್ರಿತ್ ಪೌಲ್ ನಡೆಸಿರುವ ಅಕ್ರಮ ಕುರಿತು ಇನ್ನೂ ತನಿಖೆ ಪ್ರಗತಿಯಲ್ಲಿದೆ. ವಶಕ್ಕೆ ಪಡೆದಿದ್ದ ಮೊಬೈಲ್‌ನ ಪಾಸ್‌ವರ್ಡ್ ಸಿಗುವುದು ತಡವಾಗಿತ್ತು. ದಾಖಲೆಗಳನ್ನೂ ಅಳಿಸಲಾಗಿತ್ತು. ಮೊಬೈಲ್ ಅನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗಿದೆ. ಅದರ ವರದಿ ಬಂದಿಲ್ಲ. ಹೀಗಾಗಿ, ಪೌಲ್ ಸೇರಿದಂತೆ ತಡವಾಗಿ ಬಂಧಿಸಿದ ಆರೋಪಿಗಳ ವಿರುದ್ಧದ ಆರೋಪ ಪಟ್ಟಿ ಸಲ್ಲಿಸಿಲ್ಲ' ಎಂದು ಮೂಲಗಳು ತಿಳಿಸಿವೆ.

**ಮುಖ್ಯಾಂಶಗಳು**

- 202 ಸಾಕ್ಷಿದಾರರ ಹೇಳಿಕೆ ದಾಖಲು
- 30 ಆರೋಪಿಗಳ 330 ಸಾಕ್ಷ್ಯ, ದಾಖಲೆ ಸಂಗ್ರಹ
- ತನಿಖೆ ಪೂರ್ಣಗೊಂಡ ಆರೋಪಿಗಳ ಆರೋಪಪಟ್ಟಿ ಸಲ್ಲಿಕೆ

ಪರಿಪೂರ್ಣ ಸ್ನಾನಕ್ಕೆ ಬಳಸಿ

ಪರಿಶುದ್ಧ ಕಡಲೆಹಿಟ್ಟಿನೊಂದಿಗೆ ತಯಾರಿಸಲಾದ

ಸದ್ಗುರು ಆಯುರ್ವೇದ

ಗ್ರಾಮ್ ಫ್ಲೋರ್ ಸೋಪ್





ಎಲ್ಲಾ ಕಿರಾಣಿ ಅಂಗಡಿ,ಮೆಡಿಕಲ್ ಸ್ಟೋರ್ಸ್,ಸೂಪರ್ ಮಾರ್ಕೆಟ್ ಹಾಗು ಫ್ಯಾನ್ಸಿ ಸ್ಟೋರ್‌ಗಳಲ್ಲಿ ದೊರೆಯುತ್ತದೆ.

For Online shopping-www.sadguruayurveda.com.com For Queries:8970703070




ಐಐಎಸ್ಸಿ ಘಟಿಕೋತ್ಸವ • 344 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

# 'ಮಾನವನ ಒಳಿತಿಗೆ ವಿಜ್ಞಾನ ಬಳಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾನವನ ಒಳಿತಿಗಾಗಿ ಮಾತ್ರ ವಿಜ್ಞಾನವು ಅಸ್ತ್ರವಾಗಿ ಬಳಕೆಯಾಗಬೇಕು. ವಿದ್ಯಾರ್ಥಿಗಳು ತಾವು ಪಡೆದಿರುವ ಜ್ಞಾನವನ್ನು ಈ ನಿಟ್ಟಿನಲ್ಲಿ ತೊಡಗಿಸಿಕೊಳ್ಳಬೇಕು' ಎಂದು ಒಡಿಶಾ ಕೌಶಲ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹಾಗೂ ಮೈಂಡ್ ಟ್ರೀ ಸಹ ಸಂಸ್ಥಾಪಕ ಸುಬ್ರತೋ ಬಾಗ್ಚಿ ಸಲಹೆ ನೀಡಿದರು.

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್ಸಿ) ಬುಧವಾರ ನಡೆದ ಘಟಿಕೋತ್ಸವ ಭಾಷಣ ಮಾಡಿದ ಅವರು, 'ಪರೋಪಕಾರ ಗುಣವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು. ಆದರೆ, ಪರೋಪಕಾರಿ ಕಾರ್ಯ ಕೈಗೊಳ್ಳುವ ಮುನ್ನ ತೆರಿಗೆಯನ್ನು ಸಹ ಸರ್ಕಾರಕ್ಕೆ ಸಕಾಲಕ್ಕೆ ಪಾವತಿಸಬೇಕು' ಎಂದು ಸಲಹೆ ನೀಡಿದರು.

ತಮ್ಮ ಬಾಲ್ಯ ಮತ್ತು ವೃತ್ತಿಯ ಸಂದರ್ಭದಲ್ಲಿನ ಪರೋಪಕಾರಿ ಗುಣಗಳನ್ನು ನೆನಪಿಸಿಕೊಂಡ ಅವರು, 'ನಾನು ಬಾಲ್ಯದಿಂದಲೂ ದಾನ ಮಾಡುವ ಗುಣ ಬೆಳೆಸಿಕೊಂಡಿದ್ದೆ. ಜನರ ಸಂಕಷ್ಟಗಳಿಗೆ ಸ್ಪಂದಿಸುವ ತಾಯಿಯ ಮನೋಭಾವವೇ ಈ ಕಾರ್ಯಕ್ಕೆ ಕಾರಣವಾಗಿತ್ತು. ಸ್ಟ್ಯಾನ್‌ಫೋರ್ಡ್, ಯಾಲೆ, ಹಾರ್ವರ್ಡ್ ಮತ್ತು ಪ್ರಿನ್ಸ್‌ಟನ್‌ನಂತಹ ಸಂಸ್ಥೆಗಳ ಬೆಳವಣಿಗೆ ದಾನಿಗಳ ಉದಾರ ದೇಣಿಗೆಯಿಂದ ಸಾಧ್ಯವಾಗಿದೆ. ಹೃದಯ ವೈಶಾಲ್ಯದಿಂದ ದೇಣಿಗೆ ನೀಡುವ ಸಣ್ಣ ಕಾರ್ಯಗಳು ಮಹತ್ವದ ಬದಲಾವಣೆಯನ್ನು ತರುತ್ತವೆ' ಎಂದು ವಿವರಿಸಿದರು.



ಐಐಎಸ್ಸಿ ಘಟಿಕೋತ್ಸವದಲ್ಲಿ ಪದವಿ ಪಡೆದ ವಿದ್ಯಾರ್ಥಿಗಳೊಂದಿಗೆ ಪ್ರೊ. ವಿನೋದ್ ಶರ್ಮಾ, ರಿಜಿಸ್ಟ್ರಾರ್ ಕ್ಯಾಪ್ಟನ್ ಶ್ರೀಧರ್ ವಾರಿಯರ್, ನಿರ್ದೇಶಕ ಪ್ರೊ. ಗೋವಿಂದನ್ ರಂಗರಾಜನ್, ಒಡಿಶಾ ಕೌಶಲ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಸುಬ್ರತೋ ಬಾಗ್ಚಿ, ಐಐಎಸ್ಸಿ ಕೌನ್ಸಿಲ್ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್, ಪ್ರೊ. ಉಮೇಶ್ ವರ್ಷ್ನಿ ಮತ್ತು ಪ್ರೊ. ಬಾಲಾಜಿ ಜಹಗೀರದಾರ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

## ಪಾಚಿಯಿಂದ ಇಂಧನ!

'ಪಾಚಿಯಿಂದ ಇಂಧನ ತಯಾರಿಸುವ ವಿಷಯದ ಬಗ್ಗೆ ಸಂಶೋಧನಾ ಪ್ರಬಂಧ ಮಂಡಿಸಿದ್ದಕ್ಕೆ ಪಿಎಚ್‌.ಡಿ. ದೊರೆತಿದೆ' ಎಂದು ಸಂಸ್ಥೆಯ ವಿದ್ಯಾರ್ಥಿ ದೀಪ್ತಿ ಹೆಬ್ಬಾಲೆ ಪ್ರತಿಕ್ರಿಯಿಸಿದರು.

'ಉಪ್ಪು ನೀರಿನಲ್ಲಿ ಬೆಳೆಯುವ ಎರಡು ಪ್ರಕಾರದ ಪಾಚಿಗಳಿಂದ ಇಂಧನ ತಯಾರಿಸಬಹುದು. ಕಬ್ಬು, ಆಹಾರ ಧಾನ್ಯಗಳ ತ್ಯಾಜ್ಯಗಳಂತೆ ಪಾಚಿಗಳಿಂದ ಎಥೆನಾಲ್ ತಯಾರಿಸಿ ಅದನ್ನು ಪೆಟ್ರೋಲಿಯಂ ಜೊತೆಗೆ ಮಿಶ್ರಣ ಮಾಡಿ ಬಳಸಬಹುದು. ಪಾಚಿ ಬಗ್ಗೆ ಇನ್ನಷ್ಟು ಸಂಶೋಧನೆ ಅಗತ್ಯವಿದೆ. ಕರ್ನಾಟಕದಲ್ಲಿ 200 ಕಿ.ಮೀ. ಉದ್ದದ ಕರಾವಳಿ ಇರುವುದರಿಂದ ಪಾಚಿ ಕೃಷಿಗೆ ಹೆಚ್ಚಿನ ಅವಕಾಶವಿದೆ' ಎಂದು ವಿವರಿಸಿದರು.

ಐಐಎಸ್ಸಿ ಪರಿಷತ್‌ನ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್ ಮಾತನಾಡಿ, 'ಭಾರತ ಅಭಿವೃದ್ಧಿ ಹೊಂದಿದ ದೇಶವಾಗಬೇಕಾದರೆ ಜ್ಞಾನಾಧಾರಿತ ಸಮಾಜದ ನಿರ್ಮಾಣವಾಗಬೇಕು. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿನ ಮಹತ್ವದ ಪ್ರಗತಿಯಿಂದ ಈ ಕಾರ್ಯಸಾಧ್ಯ' ಎಂದು ಪ್ರತಿಪಾದಿಸಿದರು.

'ಕೋವಿಡ್ ವಿದ್ಯಾರ್ಥಿಗಳ ಮುಂದೆ ಸವಾಲುಗಳನ್ನು ಒಡ್ಡಿತ್ತು. ಆದರೆ, ಕಠಿಣ ಸವಾಲುಗಳ ನಡುವೆ ಡಿಜಿಟಲೀಕರಣಕ್ಕೆ ತೆರೆದುಕೊಳ್ಳುವ ಮೂಲಕ, ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಹಿಮ್ಮೆಟ್ಟಿಸಿದ್ದೀರಿ. ಇದು ಹೊಸ ಆತ್ಮ ವಿಶ್ವಾಸವನ್ನು ಮೂಡಿಸಿದೆ' ಎಂದು ಹೇಳಿದರು.

ಘಟಿಕೋತ್ಸವದಲ್ಲಿ ಪಿಎಚ್‌.ಡಿ. ಸೇರಿ ಒಟ್ಟು 344 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. 64 ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಉತ್ಕೃಷ್ಟತೆಗಾಗಿ ಪದಕಗಳನ್ನು ನೀಡಲಾಯಿತು. 246 ಪಿಎಚ್‌.ಡಿ. ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು 98 ಪದವಿ ವಿದ್ಯಾರ್ಥಿಗಳು ಪದವಿ ಪಡೆದರು.

ಐಐಎಸ್ಸಿ ನಿರ್ದೇಶಕ ಪ್ರೊ. ಗೋವಿಂದನ್ ರಂಗರಾಜನ್ ಇದ್ದರು.

## ಸಂಕ್ಷಿಪ್ತ ಸುದ್ದಿ

### ಕಾಸ್ಮೋಪಾಲಿಟನ್ ಕ್ಲಬ್‌ಗೆ ಆಯ್ಕೆ



ಎ.ಎನ್‌.ಕೆ. ರಾಜು

ಬೆಂಗಳೂರು: ಜಯನಗರದ ಕಾಸ್ಮೋಪಾಲಿಟನ್ ಕ್ಲಬ್‌ಗೆ ನೂತನ ಅಧ್ಯಕ್ಷರಾಗಿ ಎ.ಎನ್‌. ಕೆ.ರಾಜು ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಎಸ್‌.ರವಿಕುಮಾರ್–ಉಪಾಧ್ಯಕ್ಷ, ಕೇದಾರನಾಥ್–ಕಾರ್ಯದರ್ಶಿ, ಟಿ.ವಿ ಶ್ರೀಧರ್ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ಇಂದು ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್‌ಎಸ್‌ಬಿ) ವತಿಯಿಂದ ವಿವಿಧ ಉಪವಿಭಾಗಗಳಲ್ಲಿ ಇದೇ 28ರಂದು ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ನೀರಿನ ಬಿಲ್, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಸೇರಿ ವಿವಿಧ ಕುಂದುಕೊರತೆಗಳನ್ನು ಪರಿಹರಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 9.30ರಿಂದ 11 ಗಂಟೆಯವರೆಗೆ ಅದಾಲತ್ ನಡೆಯಲಿದೆ ಎಂದು ಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಗೆ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ: 8762228888ಗೆ ಸಂದೇಶ ಕಳುಹಿಸುವ ಮೂಲಕವೂ ದೂರು ದಾಖಲಿಸಬಹುದು ಎಂದು ತಿಳಿಸಿದ್ದಾರೆ.

## 30ರಂದು ಯು.ಆರ್. ರಾವ್ ಜೀವನ ಚರಿತ್ರೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಶಾಂತ್‌.ಜಿ.ಎನ್‌. ಅವರು ಬರೆದ ಬಾಹ್ಯಾಕಾಶ ವಿಜ್ಞಾನಿ ಪ್ರೊ.ಯು.ಆರ್. ರಾವ್ ಅವರ ಜೀವನ ಆಧಾರಿತ 'ದಿ ಲೈಫ್ ಆ್ಯಂಡ್ ಟೈಮ್ಸ್ ಆಫ್ ಯು.ಆರ್. ರಾವ್: ಫ್ರಮ್ ಹಂಬಲ್ ಆರಿಜಿನ್ಸ್ ಟು ಎ ಸ್ಪೇಸ್ ಲೆಜೆಂಡ್–ಎ ಬಯೋಗ್ರಾಫಿಕಲ್ ಅಕೌಂಟ್' ಎಂಬ ಪುಸ್ತಕವನ್ನು ಜುಲೈ 30ರಂದು ಭಾರತೀಯ ವಿದ್ಯಾಭವನದಲ್ಲಿ ಬಿಡುಗಡೆ ಮಾಡಲಾಗುವುದು.

'ಬಾಹ್ಯಾಕಾಶ ವಿಜ್ಞಾನಿ, ಇಸ್ರೊ ಮಾಜಿ ಅಧ್ಯಕ್ಷ ಪ್ರೊ.ಯು.ಆರ್. ರಾವ್ ಅವರ ವೈಯಕ್ತಿಕ ಮತ್ತು ವೃತ್ತಿ ಜೀವನದ ಕುರಿತು ಮಾಹಿತಿಗಳನ್ನು ಪುಸ್ತಕದಲ್ಲಿ ವಿವರಿಸಲಾಗಿದೆ'.

'ಪ್ರೊ.ರಾವ್ ಅವರು ತಮ್ಮ ಶಿಕ್ಷಕರಿಂದ ಹಿಡಿದು ಭಾರತದ ಪ್ರಧಾನಿಗಳು, ರಾಷ್ಟ್ರಪತಿಗಳು ಮತ್ತು ವಿಶ್ವದ ಹಲವು ಬೌದ್ಧಿಕ ಗಣ್ಯರೊಂದಿಗೆ ನಡೆಸಿದ ಸಂವಾದಗಳು, ಅನುಭವಗಳು ಮತ್ತು ಸಂಭಾಷಣೆಗಳು ಈ ಪುಸ್ತಕಗಳಲ್ಲಿ ಅಡಕವಾಗಿವೆ. ನಾಕುತಂತಿ ಪ್ರಕಾಶನ ಈ ಪುಸ್ತಕವನ್ನು ಪ್ರಕಟಿಸಿದೆ' ಎಂದು ತಿಳಿಸಿದರು.

ಡಾ.ಕೆ. ಕಸ್ತೂರಿ ರಂಗನ್, ಯು.ಆರ್. ರಾವ್, ಡಾ.ಎಂ. ಅಣ್ಣಾದೊರೈ, ಡಾ.ಎಂ.ಗೋವಿಂದ ರಾವ್, ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದ್ದಾರೆ.



### ನಗರದಲ್ಲಿ ವಾಹನ ದಟ್ಟಣೆ ತಡೆಗೆ ಅಧ್ಯಯನ • ಸಮಯ ಕಡಿತ

# ಗೂಗಲ್ ಸಿಗ್ನಲ್‌ಲೈಟ್ ವ್ಯವಸ್ಥೆ: ಪ್ರಾಯೋಗಿಕ ಯೋಜನೆ ಯಶಸ್ವಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗೂಗಲ್ ಕಂಪನಿಯು ನಗರದ ಸಂಚಾರ ಪೊಲೀಸರ ಸಹಕಾರದಲ್ಲಿ ಕತ್ರಿಗುಪ್ಪೆ ವೃತ್ತದಲ್ಲಿ ವಾಹನ ದಟ್ಟಣೆ ಅಧ್ಯಯನ ಮಾಡಿ, ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಸಿಗ್ನಲ್‌ಲೈಟ್‌ನಲ್ಲಿ ಹಸಿರು, ಕೆಂಪು ದೀಪಗಳು ಹೊತ್ತುವ ಸಮಯ ನಿಗದಿಪಡಿಸಲು ಕತ್ರಿಗುಪ್ಪೆ ವೃತ್ತದಲ್ಲಿ ಪ್ರಾಯೋಗಿಕ ಯೋಜನೆ ಅನುಷ್ಠಾನಕ್ಕೆ ತಂದಿತ್ತು. ಅದು ಯಶಸ್ವಿಯಾಗಿದ್ದು, ಇತರೆ ವೃತ್ತಗಳಲ್ಲೂ ಈ ಯೋಜನೆ ಜಾರಿಗೊಳಿಸಲು ನಗರ ಪೊಲೀಸರು ಮುಂದಾಗಿದ್ದಾರೆ.

ಈ ವೃತ್ತದಲ್ಲಿ ವಾಹನ ದಟ್ಟಣೆಯ ಸ್ಥಿತಿಯನ್ನು ಗೂಗಲ್ ಸಂಸ್ಥೆಯು ಉಪಗ್ರಹದ ಮೂಲಕ ಅಧ್ಯಯನ ನಡೆಸಿ, ಸಿಗ್ನಲ್‌ಲೈಟ್ ಸಮಯವನ್ನು ಮರು ನಿಗದಿಪಡಿಸಿದೆ. ಈ ಪ್ರಾಯೋಗಿಕ ಯೋಜನೆ ಯಶಸ್ವಿಯಾಗಿದೆ.



ನಗರದಲ್ಲಿ ವಾಹನ ದಟ್ಟಣೆ (ಸಂಗ್ರಹ ಚಿತ್ರ)

ಚಾಲಕರಿಗೆ ಇದರಿಂದ ಸಮಯ ಹಾಗೂ ಇಂಧನ ಉಳಿತಾಯವಾಗುತ್ತಿದೆ.ವಿಶ್ವದಲ್ಲಿ ನಾಲ್ಕು ಪ್ರಮುಖ ನಗರಗಳು ಈ ಪ್ರಾಯೋಗಿಕ ಯೋಜನೆಗೆ ಆಯ್ಕೆಯಾಗಿದ್ದವು. ಬೆಂಗಳೂರು ಕೂಡ ಆಯ್ಕೆಯಾಗಿತ್ತು. ನಾಲ್ಕು ತಿಂಗಳ ಹಿಂದೆ ಗೂಗಲ್, ಕತ್ರಿಗುಪ್ಪೆ ವೃತ್ತದ ವಾಹನ ದಟ್ಟಣೆ ಅಂಕಿಅಂಶ ಅಧ್ಯಯನ ಆರಂಭಿಸಿತ್ತು. ಆಯಾ ವೃತ್ತಗಳ ವಾಹನ ದಟ್ಟಣೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ, ಸಮಯ ನಿಗದಿ ಮಾಡುವುದರಿಂದ ಪರಿಹಾರ ಸಿಗಲಿದೆ ಎಂದು ಸಂಚಾರ ವಿಭಾಗದ ಜಂಟಿ ಆಯುಕ್ತ ರವಿಕಾಂತೇಗೌಡ ಅವರು ತಿಳಿಸಿದ್ದಾರೆ.

ನಗರದಲ್ಲಿ 14 ಸಾವಿರ ಕಿ.ಮೀ ಪ್ರಮುಖ ರಸ್ತೆ, 44 ಸಾವಿರ ಜಂಕ್ಷನ್‌ಗಳು, ಒಂದು ಸಾವಿರ ಪ್ರಮುಖ ವೃತ್ತ, 398 ವೃತ್ತದಲ್ಲಿ ಸಿಗ್ನಲ್‌ಲೈಟ್‌ಗಳಲ್ಲಿ ಪೊಲೀಸರು ಟ್ರಾಫಿಕ್ ನಿಯಂತ್ರಿಸಬೇಕಿದೆ. ಸಂಚಾರ ನಿಯಂತ್ರಣಕ್ಕೆ ಪೊಲೀಸ್ ಇಲಾಖೆ ತಂತ್ರಜ್ಞಾನ ಅವಳಡಿಕೆ ಮಾಡಿಕೊಳ್ಳುತ್ತಲೇ ಇದೆ. ಈಗ ಮತ್ತೊಂದು ಹೆಜ್ಜೆ ಮುಂದಕ್ಕೆ ಹೋಗಿದ್ದೇವೆ ಎಂದು ಹೇಳಿದರು.

## ಆಂಬುಲೆನ್ಸ್: ಟೆಂಡರ್ ವೇಳಾಪಟ್ಟಿ ಹೈಕೋರ್ಟ್‌ಗೆ ಸಲ್ಲಿಕೆ

**ಬೆಂಗಳೂರು:** ಅತ್ಯಾಧುನಿಕ ತಂತ್ರ ಜ್ಞಾನ ಆಧಾರಿತ ಆಂಬುಲೆನ್ಸ್ ನಿರ್ವ ಹಣಾ ವ್ಯವಸ್ಥೆ ಜಾರಿಗೊಳಿಸುವ ನಿಟ್ಟಿನಲ್ಲಿನ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸುವುದಕ್ಕೆ ಸಂಬಂಧಿಸಿದ ವೇಳಾಪಟ್ಟಿಯನ್ನು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಸಲ್ಲಿಸಿದೆ.

ಈ ಕುರಿತಂತೆ 'ಭಾರತ್ ಪುನರುತ್ಥಾನ ಟ್ರಸ್ಟ್' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹೆಚ್ಚುವರಿ ಸರ್ಕಾರಿ ವಕೀಲ ವಿಜಯಕುಮಾರ್ ಎ.ಪಾಟೀಲ, ಯೋಜನೆಯ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸುವ ನಿಟ್ಟಿನಲ್ಲಿ ರಾಜ್ಯ ಆರೋಗ್ಯ ಇಲಾಖೆ ಆಯುಕ್ತರು ಸಲ್ಲಿಸಿರುವ ವೇಳಾಪಟ್ಟಿಯನ್ನು ನ್ಯಾಯಪೀಠಕ್ಕೆ ನೀಡಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಯೋಜನೆ ಜಾರಿಗೆ ವಿಳಂಬ ಮಾಡದಂತೆ, ವೇಳಾಪಟ್ಟಿಗೆ ಬದ್ಧವಾಗಿರಬೇಕು. ಟೆಂಡರ್ ಪ್ರಕ್ರಿಯೆಯ ಪ್ರಗತಿ ವರದಿಯನ್ನು ಮುಂದಿನ ವಿಚಾರಣೆ ವೇಳೆಗೆ ಸಲ್ಲಿಸಬೇಕು' ಎಂದು ನಿರ್ದೇಶಿಸಿ ವಿಚಾರಣೆಯನ್ನು ಅಕ್ಟೋಬರ್ 25ಕ್ಕೆ ಮುಂದೂಡಿದೆ.

**ವೇಳಾಪಟ್ಟಿಯಲ್ಲಿ ಏನಿದೆ?:** 'ಪೂರ್ವ ಟೆಂಡರ್ ಪರಿಶೀಲನಾ ಸಮಿತಿಯಿಂದ 2022ರ ಆಗಸ್ಟ್ 29ರೊಳಗೆ ಅನು ಮೋದನೆ ಸಿಗುವ ಸಾಧ್ಯತೆಯಿದೆ. ಆಗಸ್ಟ್ 30ರಂದು ಟೆಂಡರ್ ಆಹ್ವಾನಿಸಲಾಗುವುದು. ಅ.17ರಂದು ದರ ಪ್ರಸ್ತಾವನೆ ಆರಂ ಭಿಸಿ, ನಂತರದ 15 ದಿನದಲ್ಲಿ ಯಶಸ್ವಿ ಸೇವಾದಾರರಿಗೆ ಕೋರಿಕೆ ಪತ್ರ ನೀಡಲಾಗುವುದು' ಎಂದು ವಿವರಿಸಲಾಗಿದೆ.

# ಪರಿಷತ್ ಉಪಚುನಾವಣೆ: ಬಿಜೆಪಿಯಲ್ಲಿ ಟಿಕೆಟ್‌ಗೆ ಪೈಪೋಟಿ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಆಗಸ್ಟ್ 11 ರಂದು ಉಪಚುನಾವಣೆ
- ಮೋಹನ್ ಲಿಂಬಿಕಾಯಿ, ಎಸ್ ಪ್ರಕಾಶ್, ಗೀತಾ ವಿವೇಕಾನಂದ ಆಕಾಂಕ್ಷಿಗಳು
- ಅಚ್ಚರಿ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುವ ಸಾಧ್ಯತೆ

**ಬೆಂಗಳೂರು:** ವಿಧಾನಸಭೆಯಿಂದ ವಿಧಾನಪರಿಷತ್ತಿನ ಒಂದು ಸ್ಥಾನಕ್ಕೆ ಆಗಸ್ಟ್ 11 ರಂದು ಉಪಚುನಾವಣೆ ನಡೆಯಲಿದ್ದು, ಬಿಜೆಪಿಯಲ್ಲಿ ಹಲವು ಪ್ರಮುಖರು ಟಿಕೆಟ್‌ಗಾಗಿ ಪೈಪೋಟಿ ಆರಂಭಿಸಿದ್ದಾರೆ.

ಸಿ.ಎಂ.ಇಬ್ರಾಹಿಂ ರಾಜೀನಾಮೆಯಿಂದ ಈ ಸ್ಥಾನ ತೆರವಾಗಿದೆ. ಚುನಾಯಿತರಾಗುವ ಸದಸ್ಯರ ಅವಧಿ 2024 ರ ಜೂನ್ 17 ರವರೆಗೆ ಇರಲಿದೆ. ವಿಧಾನಸಭೆಯಲ್ಲಿ ಬಿಜೆಪಿಗೆ ಬಹುಮತವಿದೆ. ಹೀಗಾಗಿ ಕಾಂಗ್ರೆಸ್ ಅಥವಾ ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸಾಧ್ಯತೆ ಇಲ್ಲ. ಬಿಜೆಪಿ ಅಭ್ಯರ್ಥಿಯೇ ಅವಿರೋಧವಾಗಿ ಆಯ್ಕೆ ಆಗಲಿದ್ದಾರೆ.

ಈ ಸ್ಥಾನಕ್ಕಾಗಿ ಮಾಜಿ ವಿಧಾನಪರಿಷತ್ ಸದಸ್ಯ ಮೋಹನ್ ಲಿಂಬಿಕಾಯಿ, ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸಚ್ಚಿದಾನಂದಮೂರ್ತಿ, ಬಿಜೆಪಿಯ ಮಾಜಿ ವಕ್ತಾರ ಎಸ್.ಪ್ರಕಾಶ್, ಹುಬ್ಬಳಿಯ ಲಿಂಗರಾಜ್ ಪಾಟೀಲ, ಭದ್ರಾವತಿಯ ಮಂಜುಳಾ, ಗೀತಾ ವಿವೇಕಾನಂದ ಅವರ ಹೆಸರು ಚಾಲ್ತಿಯಲ್ಲಿವೆ. ಅಲ್ಲದೆ, ದಾವಣಗೆರೆಯ ವೈದ್ಯ ಡಾ. ಸಿ.ಆರ್ ನಸೀರ್ ಅಹ್ಮದ್ ಅವರಿಗೆ ಅವಕಾಶ ನೀಡಬೇಕು ಎಂದು ಕೆಲವು ಮಠಾಧೀಶರು ಬಿಜೆಪಿ ವರಿಷ್ಠರಿಗೆ ಪತ್ರ ಬರೆದಿದ್ದಾರೆ.

ಕೆಲವು ತಿಂಗಳ ಹಿಂದೆ ವಿಧಾನ-ಪರಿಷತ್‌ನ ಶಿಕ್ಷಕರ ಕ್ಷೇತ್ರಕ್ಕೆ ಚುನಾವಣೆ ನಡೆದಾಗ ಮೋಹನ್ ಲಿಂಬಿಕಾಯಿ ಅವರಿಗೆ ಟಿಕೆಟ್ ತಪ್ಪಿತ್ತು. ಜೆಡಿಎಸ್‌ನಿಂದ ಬಂದ ಬಸವರಾಜ ಹೊರಟ್ಟಿ ಅವರಿಗೆ ಟಿಕೆಟ್ ನೀಡಲಾಗಿತ್ತು. ಇದರಿಂದ ಲಿಂಬಿಕಾಯಿ ಅಸಮಾಧಾನಗೊಂಡಿದ್ದರು. ಈ ಬಾರಿಯಾದರೂ ಅವಕಾಶ ನೀಡಬೇಕು ಎಂಬ ಪ್ರಯತ್ನ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸಚ್ಚಿದಾನಂದಮೂರ್ತಿ ಮತ್ತು ಬಿಜೆಪಿಯ ಮಾಜಿ ವಕ್ತಾರ ಎಸ್. ಪ್ರಕಾಶ್ ಕೂಡ ಪ್ರಯತ್ನ ನಡೆಸಿದ್ದಾರೆ. ವಿಧಾನಪರಿಷತ್‌ನಲ್ಲಿ ಬಿಜೆಪಿಯಿಂದ ಬ್ರಾಹ್ಮಣ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಿಲ್ಲ. ಹಿಂದೆಲ್ಲ ಒಬ್ಬರು ಅಥವಾ ಇಬ್ಬರು ಇರುತ್ತಿದ್ದರು. ಈಗ ಯಾರೂ ಇಲ್ಲ. ಆದ್ದರಿಂದ ಪಕ್ಷಕ್ಕಾಗಿ ದುಡಿದ ಬ್ರಾಹ್ಮಣ ಸಮುದಾಯವರಿಗೇ ಅವಕಾಶ ನೀಡಬೇಕು ಎಂದು ಬಿಜೆಪಿಯ ಬ್ರಾಹ್ಮಣ ಮುಖಂಡರೊಬ್ಬರು ತಿಳಿಸಿದರು.

ದಾವಣಗೆರೆಯ ವೈದ್ಯ ಡಾ.ಸಿ. ಆರ್. ನಸೀರ್ ಅಹ್ಮದ್ ಅವರಿಗೆ ಅವಕಾಶ ನೀಡಬೇಕು ಎಂದು ಕೆಲವು ಮಠಾಧೀಶರು ಬಿಜೆಪಿ ವರಿಷ್ಠರಿಗೆ ಪತ್ರ ಬರೆದಿದ್ದಾರೆ. ಬಿಜೆಪಿ ಜತೆ ಹಲವು ವರ್ಷಗಳಿಂದ ನಂಟು ಹೊಂದಿರುವ ಇವರು ರಾಜ್ಯ ಯೋಜನಾ ಆಯೋಗದ ಸದಸ್ಯರೂ ಆಗಿದ್ದು, ಕೆಲವು ಸ್ವಾಮೀಜಿಗಳು ಇವರ ಪರವಾಗಿ ಜೆ.ಪಿ. ನಡ್ಡಾ, ಬಿ.ಎಲ್.ಸಂತೋಷ್ ಅವರಿಗೆ ಪತ್ರ ಬರೆದಿದ್ದಾರೆ. ಆದರೆ, ವರಿಷ್ಠರು ಬಹಳಷ್ಟು ಸಲ ಅಚ್ಚರಿಯ ಅಭ್ಯರ್ಥಿಗಳನ್ನೇ ಕಣಕ್ಕೆ ಇಳಿಸಿದ್ದಾರೆ, ಈ ಬಾರಿ ಅದೇ ರೀತಿ ಆದರೂ ಅಚ್ಚರಿ ಇಲ್ಲ ಎಂದು ಮೂಲಗಳು ತಿಳಿಸಿವೆ.

ಈ ಉಪಚುನಾವಣೆಗೆ ಸಂಬಂಧಿಸಿದಂತೆ ಇದೇ 25 ರಂದು ಅಧಿಸೂಚನೆ ಹೊರಡಿಸಲಾಗಿದೆ. ನಾಮಪತ್ರ ಸಲ್ಲಿಸಲು ಆಗಸ್ಟ್ 1 ಕೊನೆಯ ದಿನವಾಗಿದೆ. ಆ. 2 ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, ಆ.4 ನಾಮಪತ್ರ ಹಿಂದಕ್ಕೆ ಪಡೆಯಲು ಕೊನೆಯ ದಿನವಾಗಿದೆ. ಆ.11 ರಂದು ಮತದಾನ ಮತ್ತು ಅದೇ ದಿನ ಸಂಜೆ ಮತಗಳ ಎಣಿಕೆ ನಡೆಯಲಿದೆ.

## ವಿಐಟಿಯ ಇಬ್ಬರು ವಿದ್ಯಾರ್ಥಿಗಳಿಗೆ ₹1.02 ಕೋಟಿ ವೇತನ

**ಬೆಂಗಳೂರು:** ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ವಿಐಟಿ) ಇಬ್ಬರು ವಿದ್ಯಾರ್ಥಿಗಳಿಗೆ ವಾರ್ಷಿಕ ₹1.02 ಕೋಟಿ ವೇತನದ ಉದ್ಯೋಗ ದೊರೆತಿದೆ.

ಇದು ಕಂಪನಿಗಳು ಉದ್ಯೋಗಿಗಳಿಗಾಗಿ ಮಾಡುವ ವಾರ್ಷಿಕ ವೆಚ್ಚವಾಗಿದೆ (ಕಾಸ್ಟ್ ಟು ಕಂಪನಿ–ಸಿಟಿಸಿ) ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ. ವಿದ್ಯಾರ್ಥಿಗಳಾದ ಅಮಿತ್ ಅಗರವಾಲ್ ಮತ್ತು ಸಾರ್ಥಕ್ ಭಾರದ್ವಾಜ್ ಅವ ರನ್ನು ನೇಮಿಸಿಕೊಂಡಿರುವ ಮೋಟಾರ್ಕ್ ಕಂಪನಿಯು ಈ ಆಕರ್ಷಕ ವೇತನ ನೀಡಿದೆ. ಈ ವಿದ್ಯಾರ್ಥಿಗಳು ಬೇಸಿಗೆಯ ಇಂಟರ್ನ್‌ಶಿಪ್ ಅನ್ನು ಇದೇ ಕಂಪನಿಯಲ್ಲಿ ಪೂರ್ಣಗೊಳಿಸಿದ್ದರು. ಜುಲೈ 12ರಿಂದ ಸಂಸ್ಥೆಯಲ್ಲಿ ಆರಂಭವಾದ ನೇಮಕಾತಿ ಪ್ರಕ್ರಿಯೆಯಲ್ಲಿ ಮೈಕ್ರೊಸಾಫ್ಟ್, ಡಿಇ ಶಾ, ಮಾರ್ಗನ್ ಸ್ಟ್ಯಾನ್ಲಿ ಮುಂತಾದ ಪ್ರತಿಷ್ಠಿತ ಕಂಪನಿಗಳು ಭಾಗವಹಿಸಿದ್ದವು. 2023ರಲ್ಲಿ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ಈ ಪ್ರಕ್ರಿಯೆ ಕೈಗೊಳ್ಳಲಾಗಿತ್ತು ಎಂದು ಸಂಸ್ಥೆಯ ಕುಲಪತಿ ಡಾ.ಜಿ. ವಿಶ್ವನಾಥನ್ ತಿಳಿಸಿದ್ದಾರೆ.

ವಿಐಟಿಯ ವೆಲ್ಲೂರು, ಚೆನ್ನೈ, ಅಮರಾವತಿ ಮತ್ತು ಭೋಪಾಲ್‌ನಲ್ಲಿ ನಡೆದ ಕ್ಯಾಂಪಸ್ ಸಂದರ್ಶನದಲ್ಲಿ ಈ ನೇಮಕಾತಿ ಪ್ರಕ್ರಿಯೆ ನಡೆಯಿತು. 110 ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಮಾಡುವ ಅವಕಾಶವನ್ನು ಅಮೆಜಾನ್ ಕಂಪನಿ ಕಲ್ಪಿಸಿದೆ.

## ಎಐಸಿಟಿಇಯಿಂದ ಹೈಬ್ರೀಡ್ ಕಲಿಕೆಗೆ ಚಾಲನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಟೆಕ್ ಆವಂತ್-ಗಾರ್ಡೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 10 ಸಾವಿರ ಅಖಿಲ ಭಾರತ ಅನುಮೋದಿತ ಸಂಸ್ಥೆಗಳು ಮತ್ತು ಕಾಲೇಜುಗಳಲ್ಲಿ ಹೈಬ್ರೀಡ್ ಕಲಿಕೆಗೆ ಎಐಸಿಟಿಇ (ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿ) ಅಧ್ಯಕ್ಷ ಪ್ರೊ. ಅನಿಲ್ ದತ್ತಾತ್ರೇಯ ಸಹಸ್ರಬುಧೆ ಮಂಗಳವಾರ ಚಾಲನೆ ನೀಡಿದರು.

ಟೆಕ್ ಆವಂತ್-ಗಾರ್ಡೆನ ಸಿಇಒ ಆಲಿ ಸೇಟ್ ಮಾತನಾಡಿ, 'ಹೈಬ್ರೀಡ್ ಕಲಿಕೆಯಲ್ಲಿ ಶಿಕ್ಷಣವನ್ನು ಮರು ಕಲ್ಪಿಸಲಾಗುತ್ತದೆ. ಇದರಿಂದ ಶಿಕ್ಷಕರು ತಮ್ಮ ಸಂಪೂರ್ಣ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಸಹಕಾರಿಯಾಗುತ್ತದೆ' ಎಂದರು.

'ಮೂರು ಬ್ಯಾಚ್‌ಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಜುಲೈ 29ರಿಂದ ತರಬೇತಿ ಪ್ರಾರಂಭವಾಗಲಿದೆ. ಆಸಕ್ತರು https://tagevent.in/aicte ಗೆ ಭೇಟಿ ನೀಡಿ ನೋಂದಾಯಿಸಿಕೊಳ್ಳಬಹುದು' ಎಂದು ಮಾಹಿತಿ ನೀಡಿದರು.

ಡಾ.ಬುದ್ಧ ಚಂದ್ರಶೇಖರ್, ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಉಪಾಧ್ಯಕ್ಷ ಪ್ರೊ.ಬಿ.ತಿಮ್ಮೇಗೌಡ ಇದ್ದರು.

# ಕಿದ್ವಾಯಿ: 'ಪೆಟ್ ಸ್ಕ್ಯಾನ್' ಘಟಕ ಉದ್ಘಾಟನೆಗೆ ಸಜ್ಜು

**ಬೆಂಗಳೂರು:** 'ಕ್ಯಾನ್ಸರ್ ಪತ್ತೆಗೆ ನೆರವಾಗುವ 'ಪೆಟ್ ಸ್ಕ್ಯಾನ್' ಘಟಕಕ್ಕೆ ಶೀಘ್ರದಲ್ಲಿಯೇ ಚಾಲನೆ ದೊರೆಯಲಿದೆ. ಖಾಸಗಿ ಆಸ್ಪತ್ರೆಯಲ್ಲಿ ₹ 25 ಸಾವಿರ ಪಾವತಿಸಬೇಕಾದ ಸ್ಕ್ಯಾನ್ ಅನ್ನು ₹ 7,200ಕ್ಕೆ ಮಾಡಲಾಗುತ್ತದೆ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ತಿಳಿಸಿದೆ.



ಡಾ.ಸಿ. ರಾಮಚಂದ್ರ

'ಪೆಟ್ ಸ್ಕ್ಯಾನ್ ಕ್ಯಾನ್ಸರ್ ರೋಗಿಗಳಿಗೆ ಅಗತ್ಯವಾದ ಪರೀಕ್ಷೆ. ರಕ್ತದ ಕ್ಯಾನ್ಸರ್ (ಲಿಂಪೋಮಾ), ಲುಕೆಮಿಯಾ, ಕ್ಷಯದಂತಹ ಸೋಂಕುಗಳನ್ನು ಪತ್ತೆ ಹಚ್ಚಲು ಹಾಗೂ ಕ್ಯಾನ್ಸರ್ ಕಾಯಿಲೆಯ ಹಂತಗಳನ್ನು ನಿಖರವಾಗಿ ತಿಳಿಯಲು ಈ ಪರೀಕ್ಷೆ ಸಹಕಾರಿ. ಖಾಸಗಿ ಆಸ್ಪತ್ರೆಗಳಲ್ಲಿ ಈ ಪರೀಕ್ಷೆ ದುಬಾರಿಯಾಗಿರುವುದರಿಂದ ಎಲ್ಲರಿಗೂ ಮಾಡಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸಂಸ್ಥೆಯಲ್ಲಿಯೇ ಪ್ರಾರಂಭಿಸಲಾಗುತ್ತಿದೆ' ಎಂದು ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದ್ದಾರೆ.

'ಸಂಸ್ಥೆಯಲ್ಲಿ ಈಗಾಗಲೇ ಅಸ್ಥಿ ಮಜ್ಜೆ ಕಸಿ ಘಟಕ ಕಾರ್ಯನಿರ್ವಹಿಸುತ್ತಿದ್ದು, ಮೊದಲಿಗೆ 8 ವರ್ಷದ ಬಾಲಕನಿಗೆ ನಡೆಸಿರುವ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ. ರಾಜ್ಯದಲ್ಲಿ ಅಸ್ಥಿಮಜ್ಜೆ ಘಟಕ ಹೊಂದಿರುವ ಏಕೈಕ ಸರ್ಕಾರಿ ಆಸ್ಪತ್ರೆ ಕಿದ್ವಾಯಿ. ಇದೀಗ ಅಸ್ಥಿಮಜ್ಜೆ ಕಸಿಗೆ ಬೇಡಿಕೆ ಹೆಚ್ಚಿದ್ದು, 40ಕ್ಕೂ ಹೆಚ್ಚು ರೋಗಿಗಳು ಚಿಕಿತ್ಸೆಗೆ ಹೆಸರು ನೋಂದಾಯಿಸಿಕೊಂಡಿದ್ದಾರೆ' ಎಂದಿದ್ದಾರೆ.

**5 ಶಸ್ತ್ರಚಿಕಿತ್ಸಾ ಘಟಕ:** 'ಅತ್ಯಾಧುನಿಕ ತಂತ್ರಜ್ಞಾನ ಆಧಾರಿತ ಐದು ಶಸ್ತ್ರಚಿಕಿತ್ಸಾ ಘಟಕ ನಿರ್ಮಾಣಗೊಂಡಿದ್ದು, ಉದ್ಘಾಟನೆಗೆ ಸಜ್ಜಾಗಿವೆ. ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದಾಗಿ ಶಸ್ತ್ರಚಿಕಿತ್ಸಾ ಘಟಕಗಳ ಸಂಖ್ಯೆಯನ್ನೂ ಹೆಚ್ಚಿಸಲಾಗುತ್ತಿದೆ. 2023ರ ಜನವರಿ ವೇಳೆಗೆ ಇನ್ನೂ ಎರಡು ಘಟಕಗಳು ಲಭ್ಯವಾಗಲಿವೆ' ಎಂದು ತಿಳಿಸಿದ್ದಾರೆ.

'ವೆಂಕಟೇಶ್ವರ ಧರ್ಮಶಾಲೆಯನ್ನು ನವೀಕರಣ ಮಾಡಲಾಗಿದೆ. ಹೊಸದಾಗಿ ತೀವ್ರ ನಿಗಾ ಘಟಕ (ಐಸಿಯು) ಹಾಗೂ ಫುಡ್‌ಕೋರ್ಟ್ ನಿರ್ಮಿಸಲಾಗಿದೆ. ಇವು ಸಹ ಶೀಘ್ರವೇ ಉದ್ಘಾಟನೆ ಆಗಲಿವೆ' ಎಂದಿದ್ದಾರೆ.

## ಶಾಲಾ ಪ್ರವೇಶಕ್ಕೆ 6 ವರ್ಷ: ಕಾಂಗ್ರೆಸ್ ವಿರೋಧ

**ಬೆಂಗಳೂರು:** 'ಒಂದನೇ ತರಗತಿಗೆ ಸೇರುವ ಮಕ್ಕಳಿಗೆ ಜೂನ್ 1ಕ್ಕೆ ಆರು ವರ್ಷ ಪೂರ್ಣವಾಗಿರಬೇಕೆಂದು ಹೊರಡಿಸಿರುವ ಆದೇಶವನ್ನು ರಾಜ್ಯ ಸರ್ಕಾರ ಹಿಂಪಡೆಯಬೇಕು' ಎಂದು ಕೆಪಿಸಿಸಿ ಸಂವಹನ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು ಆಗ್ರಹಿಸಿದರು.



ರಮೇಶ ಬಾಬು

'ಯಾವುದೇ ವಿಮರ್ಶೆ ಮಾಡದೆ, ಶಿಕ್ಷಣ ತಜ್ಞರ ಅಭಿಪ್ರಾಯ ಸಂಗ್ರಹಿಸದೆ ಈ ಆದೇಶ ಹೊರಡಿಸಲಾಗಿದೆ. ಇದರಿಂದ ಪೋಷಕರು, ಶಿಕ್ಷಕರು ಗೊಂದಲಕ್ಕೀಡಾಗಿದ್ದಾರೆ' ಎಂದರು.

'ಶಿಕ್ಷಣ ಇಲಾಖೆಯು ಪ್ರಸಕ್ತ ಶೈಕ್ಷಣಿಕ ವರ್ಷವನ್ನು ಮೇ ತಿಂಗಳಿನಿಂದಲೇ ಘೋಷಿಸಿದ್ದು, ಈಗಾಗಲೇ ತ್ರೈಮಾಸಿಕ ಅವಧಿ ಮುಕ್ತಾಯವಾಗಿದೆ. ಆದರೆ, ಈಗ ಆದೇಶ ಹೊರಡಿಸಲಾಗಿದೆ. ಈ ವರ್ಷದಿಂದಲೇ ಈ ಆದೇಶ ಜಾರಿಗೆ ಬರಲಿದೆಯೇ ಅಥವಾ ಮುಂದಿನ ವರ್ಷದಿಂದ ಜಾರಿ ಆಗಲಿದೆಯೇ ಎಂಬ ಬಗ್ಗೆಯೂ ಆದೇಶದಲ್ಲಿ ಸ್ಪಷ್ಟತೆ ಇಲ್ಲ. ಹೀಗಾಗಿ, ಸಾರ್ವಜನಿಕರ ಹಿತದೃಷ್ಟಿಯಿಂದ ಈ ಆದೇಶವನ್ನು ಹಿಂಪಡೆಯಬೇಕು' ಎಂದರು.

## 'ಆರೆಸ್ಸೆಸ್‌ನವರು ಬಾಯಿಗೆ ಬಂದಂತೆ ಮಾತನಾಡುತ್ತಾರೆ'

**ಬೆಂಗಳೂರು:** 'ಆರ್‌ಎಸ್‌ಎಸ್, ಬಜರಂಗದಳದವರು ಬಾಯಿಗೆ ಬಂದಂತೆ ಹೇಳಿಕೆ ಕೊಡುತ್ತಿದ್ದಾರೆ. ನಾವೂ ಹಾಗೆಯೇ ಮಾತನಾಡುತ್ತಿದ್ದೇವೆ. ಯಾವುದೇ ಪುರುಷಾರ್ಥಕ್ಕೂ ಇಲ್ಲದಂತೆ ಹತ್ಯೆಗಳು ನಡೆಯುತ್ತಿವೆ' ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಎಚ್. ವಿಶ್ವನಾಥ್ ಹೇಳಿದರು.

ಬುಧವಾರ ಮಾತನಾಡಿದ ಅವರು, 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವೀಣ್ ನೆಟ್ಟಾರು ಹತ್ಯೆ ನಡೆದಿರುವುದು ದುರದೃಷ್ಟಕರ. ಈ ಕುರಿತು ಪೊಲೀಸರು ಸರಿಯಾಗಿ ತನಿಖೆ ನಡೆಸಿ, ಆರೋಪಿಗಳಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು' ಎಂದರು. ಕಾಸು ಕೊಟ್ಟು ಬಂದವರು ಕೆಲಸ ಎಲ್ಲಿ ಮಾಡುತ್ತಾರೆ ಎಂದು ಪೊಲೀಸರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

## ವರದಿ ಸಲ್ಲಿಕೆಗೆ ಕಾಲಾವಕಾಶ

**ಬೆಂಗಳೂರು:** 'ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವ ವಿಚಾರಕ್ಕೆ ಸಂಬಂಧಿಸಿದಂತೆ ಉನ್ನತಾಧಿಕಾರ ಸಮಿತಿ ಸಭೆಯಲ್ಲಿ ನಡೆದ ವಿವರಗಳನ್ನು ಸಲ್ಲಿಸಲು ಸಮಯ ಕೋರಿದ ಅಮಿಕಸ್ ಕ್ಯೂರಿ (ಕೋರ್ಟ್‌ಗೆ ಸಹಕರಿಸುವ ವಕೀಲ) ಮನವಿಯನ್ನು ಹೈಕೋರ್ಟ್ ಮಾನ್ಯ ಮಾಡಿದ್ದು ಎರಡು ವಾರಗಳ ಕಾಲಾವಕಾಶ ನೀಡಿದೆ.

ಈ ಸಂಬಂಧ 2013ರಲ್ಲಿ ಹೈಕೋರ್ಟ್, ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹೈಕೋರ್ಟ್‌ನ ಹಿರಿಯ ವಕೀಲರೂ ಆದ ಅಮಿಕಸ್ ಕ್ಯೂರಿ ಕೆ.ಎನ್. ಫಣೀಂದ್ರ, 'ಹೈಕೋರ್ಟ್ ನಿರ್ದೇಶನದ ಅನುಸಾರ ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಕರೆತರುವ ವಿಚಾರಕ್ಕೆ ಸಂಬಂಧಿಸಿದಂತೆ ಉನ್ನತಾಧಿಕಾರ ಸಮಿತಿ ಇದೇ 16ರಂದು ಸಭೆ ನಡೆಸಿದೆ. ಸಭೆಯ ನಡಾವಳಿಯ ಕರಡು ಪಟ್ಟಿ ನನಗೆ ತಲುಪಿದೆ. ಆದರೆ, ಅದನ್ನು ಅಂತಿಮಗೊಳಿಸಿ ವರದಿಯನ್ನು ಕೋರ್ಟ್‌ಗೆ ಸಲ್ಲಿಸಲು ಎರಡು ವಾರಗಳ ಕಾಲಾವಕಾಶ ಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

'ರಾಜ್ಯದಲ್ಲಿ ಅಂಗನವಾಡಿಗಳಿಂದ 6 ವರ್ಷದೊಳಗಿನ 9.8 ಲಕ್ಷಕ್ಕೂ ಅಧಿಕ ಮಕ್ಕಳು ಹಾಗೂ 14 ವರ್ಷದ ಅಂದಾಜು 25 ಸಾವಿರ ಮಕ್ಕಳು ಶಾಲೆಗಳಿಂದ ಹೊರಗುಳಿದಿದ್ದಾರೆ. ಒಟ್ಟಾರೆ 10 ಲಕ್ಷಕ್ಕೂ ಅಧಿಕ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ' ಎಂದು ಅಮಿಕಸ್ ಕ್ಯೂರಿ ಕಳೆದ ವಿಚಾರಣೆ ವೇಳೆ ನ್ಯಾಯಪೀಠಕ್ಕೆ ವರದಿ ಸಲ್ಲಿಸಿದ್ದರು.

## ಕನ್ನಡ ಕಡೆಗಣಿಸಿದ ಐಸಿಸಿಆರ್: ಕಸಾಪ ಖಂಡನೆ

**ಬೆಂಗಳೂರು:** 'ಪ್ರಾಧ್ಯಾಪಕರ ನೇಮಕಾತಿಗೆ ಸಂಬಂಧಿಸಿದಂತೆ ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯು (ಐಸಿಸಿಆರ್) ಜಾಹೀರಾತಿನಲ್ಲಿ ಕನ್ನಡ ಕಡೆಗಣಿಸಿರುವುದು ಖಂಡನೀಯ. ಕೂಡಲೇ ಕನ್ನಡ ಭಾಷೆಗೆ ಸೂಕ್ತ ಗೌರವ ನೀಡಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಆಗ್ರಹಿಸಿದ್ದಾರೆ.

'ಸಂಸ್ಥೆಯು ಇತ್ತೀಚೆಗೆ ನೀಡಿರುವ ಪತ್ರಿಕಾ ಜಾಹೀರಾತಿನಲ್ಲಿ ಹಿಂದಿ, ಉರ್ದು, ಸಂಸ್ಕೃತ, ತಮಿಳು ಮತ್ತು ಇತರ ವಿಷಯಗಳ ಪ್ರಾಧ್ಯಾಪಕರ ಹುದ್ದೆಗಳ ನೇಮಕ ಕುರಿತು ಪ್ರಕಟಣೆ ನೀಡಿದೆ. ಕನ್ನಡ ವಿಷಯದ ಪ್ರಾಧ್ಯಾಪಕರ ಹುದ್ದೆ ಕುರಿತು ಪ್ರಸ್ತಾಪ ಮಾಡಿಲ್ಲ. ದೇಶದ ಎಲ್ಲ ಭಾಷೆ ಸಂಸ್ಕೃತಿಗಳನ್ನು ಗೌರವಿಸಬೇಕಿದ್ದ ಈ ಸಂಸ್ಥೆ, ತನಗೆ ಬೇಕಾದ ಕೆಲವೇ ಭಾಷೆಗಳಿಗೆ ಮಣೆ ಹಾಕುತ್ತಿರುವುದು ಸರಿಯಲ್ಲ' ಎಂದಿದ್ದಾರೆ.

'ಕೇಂದ್ರದ ಅಧೀನದ ಸಂಸ್ಥೆ, ಪ್ರಪಂಚದಾದ್ಯಂತ ಭಾರತೀಯ ಸಂಸ್ಕೃತಿಯನ್ನು ಪ್ರಚುರಪಡಿಸುತ್ತಿದೆ. ಕನ್ನಡ ಭಾಷೆಯು ಶಾಸ್ತ್ರೀಯ ಸ್ಥಾನಮಾನ ಹೊಂದಿದ್ದು, ನಮ್ಮ ಭಾಷೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಸೂಕ್ತ ಪೀಠವನ್ನು ಸ್ಥಾಪಿಸುವ ಹೊಣೆಯನ್ನೂ ಸಂಸ್ಥೆ ನಿರ್ವಹಿಸಬೇಕಿದೆ. ಐಸಿಸಿಆರ್ ಸಂಸ್ಥೆ ಈ ರೀತಿಯ ಮಹತ್ವಪೂರ್ಣ ಮತ್ತು ಘನತೆಯ ಜವಾಬ್ದಾರಿಯನ್ನು ಮರೆತಿದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಸಂಸ್ಥೆಯ ನಡೆ ಖಂಡಿಸಿ ಕೇಂದ್ರ ಸಚಿವರು, ಮುಖ್ಯಮಂತ್ರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಿಗೆ ಪತ್ರ ಬರೆಯಲಾಗಿದೆ' ಎಂದಿದ್ದಾರೆ.





# ಇಂಡಿಯಾ ಗೇಟ್

**ನಿಮಗಿದು ಗೊತ್ತೇ?**

'ಇಂಡಿಯಾ ಗೇಟ್'– ನಮ್ಮ ದೇಶದ ರಾಜಧಾನಿ ದೆಹಲಿಯ ಹೃದಯಭಾಗದಲ್ಲಿದೆ. ಇದು ಮೊದಲನೇ ಮಹಾಯುದ್ಧ ಹಾಗೂ ಮೂರನೇ ಆಂಗ್ಲೋ ಅಫ್ಘಾನ್ ಯುದ್ಧದಲ್ಲಿ ಹುತಾತ್ಮರಾದ ಬ್ರಿಟಿಷ್- ಭಾರತೀಯ ಯೋಧರ ನೆನಪಿಗಾಗಿ ನಿರ್ಮಿಸಿರುವ ಸ್ಮಾರಕ.

ಈ ಕಟ್ಟಡದ ರೂಪುರೇಷೆ(ಡಿಸೈನ್) ರೂಪಿಸಿದವರು ಸರ್.ಎಡ್ವಿನ್ ಲ್ಯೂಟೇನ್ಸ್(Sir Edwin Lutyens). 1921ರ ಫೆಬ್ರವರಿ 10 ರಂದು ಬ್ರಿಟಿಷ್ ರಾಜ ಡ್ಯೂಕ್ ಆಫ್ ಕೆನಾಟ್ ಇದರ ಶಿಲಾನ್ಯಾಸ ನೆರವೇರಿಸಿದರು. ಇದಾದ ಹತ್ತು ವರ್ಷಗಳ ನಂತರ ಲಾರ್ಡ್ ಇರ್ವಿನ್ ಇದನ್ನು ದೇಶಕ್ಕೆ ಸಮರ್ಪಿಸಿದರು.

ಭಾರತಕ್ಕೆ ಸ್ವಾತಂತ್ರ್ಯ ಬಂದೊಡನೆ ಇದು ನಮ್ಮ ದೇಶದ ರಕ್ಷಣಾಪಡೆಗಳ ಪ್ರೇರಣಾ ಸ್ಥಳವಾಯಿತು. ಇಲ್ಲಿ ಅಮರ್ ಜವಾನ್ ಜ್ಯೋತಿ ಬೆಳಗುತ್ತಿತ್ತು. 42 ಮೀಟರ್ ಎತ್ತರ ಈ ಬೃಹತ್ ಕಟ್ಟಡ, ದೇಶದ ಪ್ರವಾಸಿ ಜನಾಕರ್ಷಣೆಯ ಕೇಂದ್ರವೂ ಹೌದು. ಇದರ ಎದುರಿಗೆ ರಾಷ್ಟ್ರಪತಿ ಭವನ, ಸಂಸತ್ ಭವನಗಳಿವೆ.

ಜನವರಿ 26, 1971ರಿಂದ ಇತ್ತೀಚಿನ ತನಕವೂ ನಿರಂತರವಾಗಿ ಅಲ್ಲಿ ಜ್ಯೋತಿ ಉರಿಯುತ್ತಿತ್ತು. 1971ರಲ್ಲಿ ಭಾರತ ಪಾಕಿಸ್ತಾನ ಯುದ್ಧ ಗೆದ್ದ ನೆನಪಿಗಾಗಿ ಅಲ್ಲಿ ಜ್ಯೋತಿ ಉರಿಸಲಾಗಿತ್ತು. ಪ್ರಸ್ತುತ ಆ ಜ್ಯೋತಿಯನ್ನು ಸ್ಥಳಾಂತರಿಸಲಾಗಿದೆ. ಪ್ರತಿ ವರ್ಷ ಗಣರಾಜ್ಯೋತ್ಸವದ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಭವನದಿಂದ ಆರಂಭವಾಗುವ ಸೇನಾ ಕವಾಯತು ಇಂಡಿಯಾ ಗೇಟ್ ಮೂಲಕ ಹಾದು ಹೋಗುತ್ತದೆ.

# ಮಾದರಿ ಪ್ರಶ್ನೋತ್ತರ

## ಸಾಮಾನ್ಯ ಜ್ಞಾನ

ಕೆಪಿಎಸ್‌ಸಿ ಗ್ರೂಪ್ 'ಸಿ'ಯ ವಿವಿಧ ಹುದ್ದೆಗಳು, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಆ್ಯಂಡ್ ಐಆರ್‌ಬಿ) ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇರ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

**1) ಇದೇ ಮೊದಲ ಬಾರಿಗೆ ಕರ್ನಾಟಕದಲ್ಲಿ ದ್ರವ ರೂಪದ ಯೂರಿಯಾ (ಇಫ್ಕೊ ನ್ಯಾನೊ ಯೂರಿಯಾ) ತಯಾರಿಸುವ ಸ್ಥಾವರವನ್ನು ಎಲ್ಲಿ ಸ್ಥಾಪಿಸಲು ನಿಶ್ಚಯಿಸಲಾಗಿದೆ?**

ಎ) ನಾಗನಾಯಕನ ಹಳ್ಳಿ (ದೇವನಹಳ್ಳಿ ಸಮೀಪ)
ಬಿ) ಅಂಕಲಗಾ (ಕಲಬುರ್ಗಿ ಸಮೀಪ)
ಸಿ) ಬಿದರಗೆರೆ (ಗೋಕರ್ಣ ಸಮೀಪ)
ಡಿ) ಶಿರೂರು (ಉಡುಪಿ ಸಮೀಪ)


**ಉತ್ತರ: ಎ**

**2) ಮತ್ತೆ 'ಭೂಚೇತನ ಯೋಜನೆ' ಜಾರಿಗೆ ತರಲು ಕರ್ನಾಟಕ ಸರ್ಕಾರ ನಿಶ್ಚಯಿಸಿದೆ. ಹಾಗಾದರೆ ಇದು ಯಾವುದಕ್ಕೆ ಸಂಬಂಧಿಸಿದೆ?**

ಎ) ನಾಟಿ ಕೋಳಿ ಸಾಕಾಣಿಕೆ ಬಿ)ಅರಣ್ಯ ಸಂರಕ್ಷಣೆ
ಸಿ) ಮಣ್ಣಿನ ಫಲವತ್ತತೆ ಡಿ) ಗುಡಿ/ ಸಣ್ಣ ಕೈಗಾರಿಕೆ

**ಉತ್ತರ: ಸಿ**

**3) ಪ್ರಸಿದ್ಧ ರಂಗಭೂಮಿ ನಿರ್ದೇಶಕ, 90ರ ಇಳಿವಯಸ್ಸಿನಲ್ಲಿಯೂ ಬಣ್ಣ ಹಚ್ಚಿ ಪಾತ್ರ ನಿರ್ವಹಿಸಿದ್ದ 'ಪೀಟರ್ ಬ್ರೂಕ್' ಇತ್ತೀಚೆಗೆ ನಿಧನರಾದರು. ಇವರು ನಿರ್ದೇಶಿಸಿದ 9 ಗಂಟೆಗಳ ಕಾಲ ಸುದೀರ್ಘ ಪ್ರದರ್ಶನ ಕಂಡ ಹಿಂದು ಮಹಾಕಾವ್ಯ ಯಾವುದು?**



ಎ) ರಾಮಾಯಣ ಬಿ) ಶಾಕುಂತಲಾ
ಸಿ) ಮಹಾಭಾರತ ಡಿ) ಆದಿಪುರಾಣ

**ಉತ್ತರ: ಸಿ**

**4) ಕೆಳಗಿನ ಹೇಳಿಕೆಗಳನ್ನು ಗಮನಿಸಿ**

1) ವಿಶ್ವ ಸಂಸ್ಥೆಯ ಅರ್ಥಶಾಸ್ತ್ರ ಮತ್ತು ಸಾಮಾಜಿಕ ವ್ಯವಹಾರಗಳ ವಿಭಾಗ ಹಾಗೂ ಜನಸಂಖ್ಯಾ ಘಟಕ ಹೊರತಂದಿರುವ `ದಿ ವರ್ಲ್ಡ್ ಪಾಪ್ಯುಲೇಷನ್-2022' ವರದಿ ಪ್ರಕಾರ ಭಾರತವು 2023ರಲ್ಲಿ ವಿಶ್ವದ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ನಿಲ್ಲಲಿದೆ.
2) ಭಾರತದ ಜನಸಂಖ್ಯೆ ಪ್ರಸ್ತುತ 141.2 ಕೋಟಿ ಇದ್ದು ಇದೇ ಪ್ರಮಾಣದಲ್ಲಿ ಬೆಳೆಯುತ್ತಾ ಹೋದರೆ 2023ರಲ್ಲಿ 142.9 ಕೋಟಿಗೆ ಏರಲಿದ್ದು ಅದೇ ಸಮಯದಲ್ಲಿ ಚೀನಾದ ಜನಸಂಖ್ಯೆ 142.6 ಕೋಟಿ ಇರಲಿದೆ.

ಉತ್ತರ ಸಂಕೇತಗಳು



ಎ) ಹೇಳಿಕೆ 2 ಮಾತ್ರ ಸರಿಯಾಗಿದೆ
ಬಿ) ಹೇಳಿಕೆ 1 ಮಾತ್ರ ಸರಿಯಾಗಿದೆ
ಸಿ) ಹೇಳಿಕೆ 1 ಮತ್ತು 2 ಸರಿಯಾಗಿವೆ
ಡಿ) ಯಾವ ಹೇಳಿಕೆಗಳು ಸರಿಯಾಗಿಲ್ಲ

**ಉತ್ತರ: ಸಿ**

**5) ಭಾರತದ ಅತಿದೊಡ್ಡ ತೇಲುವ ಸೌರ ವಿದ್ಯುತ್ ಯೋಜನೆ ಎಲ್ಲಿ ಕಾರ್ಯಾರಂಭಿಸಿದೆ?**

ಎ) ರಾಮಗುಂಡಂ (ತೆಲಂಗಾಣ)
ಬಿ) ರಾಮನಗರ(ಕರ್ನಾಟಕ)
ಸಿ) ಭುವನೇಶ್ವರ (ಒಡಿಶಾ) ಡಿ) ಶ್ರೀನಗರ (ಕಾಶ್ಮೀರ)

**ಉತ್ತರ: ಎ**

**6) ವಿಶ್ವದಲ್ಲಿರುವ ಭಯೋತ್ಪಾದಕರ ಆರ್ಥಿಕ ಮೂಲಗಳ ನಿಗ್ರಹ ಸಂಸ್ಥೆಯಾದ ಫೈನಾನ್ಶಿಯಲ್ ಆ್ಯಕ್ಷನ್ ಟಾಸ್ಕ್ ಫೋರ್ಸ್ (FATF)ಅಧ್ಯಕ್ಷರು ಯಾರು ?**

ಎ) ಟಿ. ರಾಜಕುಮಾರ್
ಬಿ) ಜೊಜೊ ಮ್ಯಾಥ್ಯೂಸ್
ಸಿ) ಲಿಲ್ಲಿ ಥಾಮಸ್
ಡಿ) ರಷೀದ್ ಅಹಮ್ಮದ್ ಭಟ್

**ಉತ್ತರ: ಎ**

**7) ಕೆಳಗಿನ ಹೇಳಿಕೆಗಳನ್ನು ಗಮನಿಸಿ**



1) ಭಾರತೀಯ ವಿಜ್ಞಾನ ಸಂಸ್ಥೆಯ(ಐಐಎಸ್‌ಸಿ) ಸೆಂಟರ್ ಫಾರ್ ನ್ಯೂರೊ ಸೈನ್ಸ್ ಸಂಶೋಧಕರು ಅಭಿವೃದ್ಧಿಪಡಿಸಿರುವ ಗ್ರಾಫಿಕ್ ಪ್ರೊಸೆಸಿಂಗ್ ಯೂನಿಟ್ ಆಧಾರಿತ ಮಷಿನ್ ಲರ್ನಿಂಗ್ ಅಲ್ಗಾರಿದಮ್, ಮಿದುಳಿನ ಭಾಗಗಗಳ ನಡುವಿನ ಸಂಪರ್ಕವನ್ನು ಹೆಚ್ಚು ತರ್ಕಬದ್ಧವಾಗಿ ಅರ್ಥೈಸಿಕೊಂಡು ಮುಂದೇನಾಗಬಹುದು ಎಂದು ಊಹಿಸಲು ಅಥವಾ ಭವಿಷ್ಯ ತಿಳಿಯಲು ಅನುಕೂಲವಾಗುವುದು.
2) ಭಾರತೀಯ ವಿಜ್ಞಾನ ಸಂಸ್ಥೆ ಅಭಿವೃದ್ಧಿಪಡಿಸಿರುವ ಅಲ್ಗಾರಿದಮ್ ವ್ಯವಸ್ಥೆಯು ಡಿಫ್ಯೂಷನ್ ಮ್ಯಾಗ್ನೆಟಿಕ್ ರೆಸೋನಾನ್ಸ್ ಇಮೇಜಿಂಗ್(ಡಿ-ಎಂಆರ್‌ಐ) ನಿಂದ ಮಾನವ ಮಿದುಳನ್ನು ಸ್ಕ್ಯಾನ್ ಮಾಡಿ ಸೃಷ್ಟಿಸುವ ಅಗಾಧ ಪ್ರಮಾಣದ ದತ್ತಾಂಶವನ್ನು ಅತಿ ವೇಗದಲ್ಲಿ ವಿಶ್ಲೇಷಣೆ ಮಾಡುತ್ತದೆ.

ಎ) ಹೇಳಿಕೆ 2 ಮಾತ್ರ ಸರಿಯಾಗಿದೆ
ಬಿ) ಹೇಳಿಕೆ 1 ಮಾತ್ರ ಸರಿಯಾಗಿದೆ
ಸಿ) ಹೇಳಿಕೆ 1 ಮತ್ತು 2 ಸರಿಯಾಗಿವೆ
ಡಿ) ಯಾವ ಹೇಳಿಕೆಗಳು ಸರಿಯಾಗಿಲ್ಲ

**ಉತ್ತರ: ಸಿ**

**8) ಕೆಳಗಿನ ಹೇಳಿಕೆಗಳನ್ನು ಗಮನಿಸಿ**

1) ಕೇಂದ್ರ ಸರ್ಕಾರವು ದೇಶದಲ್ಲಿರುವ ಒಟ್ಟು 63 ಸಾವಿರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣಕ್ಕೆ ಮುಂದಾಗಿದೆ. ಅದಕ್ಕಾಗಿ ₹ 2,516 ಕೋಟಿಗಳ ಅನುದಾನ ಪ್ರಕಟಿಸಿದೆ.
2) ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಕ್ಲೌಡ್ ಆಧಾರಿತ ಏಕರೂಪ ತಂತ್ರಾಂಶ ಅಭಿವೃದ್ಧಿಪಡಿಸುವುದು. ಸೈಬರ್ ಭದ್ರತೆ ಜತೆಗೆ ದತ್ತಾಂಶ ಸಂಗ್ರಹಣೆ, ಹಳೆಯ ದಾಖಲೆಗಳ ಡಿಜಿಟಲಿಕರಣ, ಸ್ಥಳೀಯ ಭಾಷೆಯ ಸಾಫ್ಟ್‌ವೇರ್ ಅಭಿವೃದ್ಧಿ ಮಾಡಲು ಕೇಂದ್ರ ಸರ್ಕಾರ ಮುಂದಾಗಿದೆ.

**ಉತ್ತರ ಸಂಕೇತಗಳು**

ಎ) ಹೇಳಿಕೆ 2 ಮಾತ್ರ ಸರಿಯಾಗಿದೆ
ಬಿ) ಹೇಳಿಕೆ 1 ಮಾತ್ರ ಸರಿಯಾಗಿದೆ
ಸಿ) ಹೇಳಿಕೆ 1 ಮತ್ತು 2 ಸರಿಯಾಗಿವೆ
ಡಿ) ಯಾವ ಹೇಳಿಕೆಗಳು ಸರಿಯಾಗಿಲ್ಲ

**ಉತ್ತರ: ಸಿ**

**9) 'ರುಯ್ಯು(Ryugu) ಕ್ಷುದ್ರಗ್ರಹವನ್ನು ಸಂಪರ್ಕಿಸುವ ಉದ್ದೇಶದಿಂದ ಡಿಸೆಂಬರ್ 2014ರಲ್ಲಿ 'ಹಯಾಬುಸಾ-2' ಎಂಬ ನೌಕೆಯನ್ನು ಉಡಾಯಿಸಲಾಯಿತು. 2020ರಲ್ಲಿ ಅದೇ ನೌಕೆ ವಾಪಸ್ ಭೂಮಿಗೆ ಮರಳುವಲ್ಲಿ ಯಶಸ್ವಿಯಾಯಿತು. ಹಾಗಾದರೆ ಈ ಕೆಳಗೆ ತಿಳಿಸಿರುವ ಯಾವ ಸಂಸ್ಥೆ, ಈ ಉಡಾವಣಾ ಕಾರ್ಯಾಚರಣೆ ಕೈಗೊಂಡಿತು ?**

ಎ) ಭಾರತದ ಇಸ್ರೊ
ಬಿ) ಜಪಾನಿನ ಬಾಹ್ಯಾಕಾಶ ಸಂಸ್ಥೆ ಜಾಕ್ಸ(JAXA)
ಸಿ) ಅಮೆರಿಕದ - ನಾಸಾ
ಡಿ) ಮೇಲಿನ ಯಾವುದೂ ಅಲ್ಲ

**ಉತ್ತರ: ಬಿ**

**10) ಇತ್ತೀಚೆಗೆ ಸಂಸ್ಥೆಯೊಂದು ಪ್ಲಾಸ್ಟಿಕ್ ಚೀಲದಂತೆ ಇರುವ ಮತ್ತು 180 ದಿನಗಳಲ್ಲಿ ಸಂಪೂರ್ಣವಾಗಿ ಮಣ್ಣಿನಲ್ಲಿ ಕರಗಿಹೋಗುವ ಚೀಲಗಳನ್ನು ವಿಶೇಷ ತಂತ್ರಜ್ಞಾನ ಬಳಸಿ ತಯಾರಿಸಿದೆ. ಇದನ್ನು ಅಭಿವೃದ್ಧಿಪಡಿಸಿದ ಸಂಸ್ಥೆ ಯಾವುದು?**

ಎ) ಭಾರತೀಯ ವಿಜ್ಞಾನ ಸಂಸ್ಥೆ
ಬಿ) ಪರಿಸರ ಮಾಲಿನ್ಯ ಮಂಡಳಿ
ಸಿ) ಇಸ್ರೊ
ಡಿ) ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ (ಡಿಎಫ್‌ಆರ್‌ಎಲ್)

**ಉತ್ತರ: ಡಿ**

**11) 'ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು' ಹೊರಡಿಸಿದ ಮನರಂಜನಾ ಉದ್ಯಮದಲ್ಲಿ ಮಕ್ಕಳ ಭಾಗವಹಿಸುವಿಕೆಯ ನಿಯಂತ್ರಕ ಮಾರ್ಗಸೂಚಿಯಲ್ಲಿರುವ ಕೆಲವು ಅಂಶಗಳನ್ನು ನೀಡಿದೆ. ಅವುಗಳನ್ನು ಗಮನಿಸಿ**

1) ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಕ್ಕಾಗಿ ನೀಡುವ ಸಂಭಾವನೆಯಲ್ಲಿ ಶೇ 20ರಷ್ಟನ್ನು ಪ್ರೌಢರಾದ ಬಳಿಕ ಅವರಿಗೇ ಲಭ್ಯವಾಗುವಂತೆ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಠೇವಣಿ ಇರಿಸುವುದು.
2) ಬಾಲ ನಟ/ನಟಿಯರಿಗೆ ಕೆಲಸದ ಸ್ಥಳದಲ್ಲಿ ಮಾನಸಿಕ ಹಾಗೂ ದೈಹಿಕ ಒತ್ತಡ ಬೀಳದಂತೆ ಆರೋಗ್ಯಕರ ಕೆಲಸದ ವಾತಾವರಣ ನಿರ್ಮಾಣ ಮಾಡುವುದು. ಚಿತ್ರೀಕರಣದಲ್ಲಿ ಬಾಲ ಕಲಾವಿದರನ್ನು ತೊಡಗಿಸಿಕೊಳ್ಳುವ ಮುನ್ನ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಅನುಮತಿ ಪಡೆಯುವುದು.
3) ಶೂಟಿಂಗ್‌ನಲ್ಲಿ ಪಾಲ್ಗೊಳ್ಳುವ ಮಗುವಿನ ಶಿಕ್ಷಣಕ್ಕೆ ಯಾವುದೇ ಅಡ್ಡಿಯಾಗದಂತೆ ನೋಡಿಕೊಳ್ಳುವುದು ನಿರ್ಮಾಪಕರ ಕರ್ತವ್ಯವಾಗಿದೆ. ಅವರು ಶಾಲೆಗೆ ಗೈರು ಹಾಜರಾಗುವ ಬಾಲ ಕಲಾವಿದರಿಗೆ ಖಾಸಗಿ ಶಿಕ್ಷಕರಿಂದ ಪಾಠಬೋಧನೆ ವ್ಯವಸ್ಥೆ ಮಾಡಬೇಕು
4) ಮಗುವಿನ ವಯಸ್ಸು, ಪ್ರೌಢಿಮೆ, ಭಾವನಾತ್ಮಕ ಅಥವಾ ಮಾನಸಿಕ ಬೆಳವಣಿಗೆಗೆ ತಕ್ಕುದಲ್ಲದ ಹಾಗೂ ಮಗುವಿಗೆ ಮುಜುಗರ ಮಾಡುವಂತಹ ಪಾತ್ರಗಳಲ್ಲಿ ಬಾಲ ನಟರು ಕೆಲಸ ಮಾಡುವಂತೆ ಇಲ್ಲ.

**ಉತ್ತರ ಸಂಕೇತಗಳು**

ಎ) ಹೇಳಿಕೆ 1, 2 ಮತ್ತು 4 ಮಾತ್ರ ಸರಿಯಾಗಿದೆ
ಬಿ) ಹೇಳಿಕೆ 2 ಮತ್ತು 3 ಮಾತ್ರ ಸರಿಯಾಗಿದೆ
ಸಿ) ಹೇಳಿಕೆ 1 ಮತ್ತು 2 ಮಾತ್ರ ಸರಿಯಾಗಿವೆ
ಡಿ) ನಾಲ್ಕು ಹೇಳಿಕೆಗಳು ಸರಿಯಾಗಿವೆ

**ಉತ್ತರ: ಡಿ**

**(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)**

# ರಾಷ್ಟ್ರಪತಿ ಚುನಾವಣೆ

ಯುಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3, ಕೆಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3 ಸೇರಿದಂತೆ ಎಲ್ಲಾ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ವಿದ್ಯಮಾನದ ಮಾಹಿತಿ ಇಲ್ಲಿದೆ.



**ಯು.ಟಿ.ಆಯಿಶ ಫರ್ಝಾನ**

ಭಾರತೀಯ ಸಂವಿಧಾನದ 62 ನೇ ವಿಧಿಯ ಪ್ರಕಾರ, ಪ್ರಸ್ತುತವಿರುವ ರಾಷ್ಟ್ರಾಧ್ಯಕ್ಷರ ಅಧಿಕಾರದ ಅವಧಿ ಮುಗಿಯುವ ಮೊದಲೇ, ಅಧಿಕಾರದ ಅವಧಿಯು ಮುಕ್ತಾಯಗೊಳ್ಳುವುದರಿಂದ ಉಂಟಾಗುವ ಖಾಲಿ ಸ್ಥಾನವನ್ನು ತುಂಬಲು ಕಡ್ಡಾಯವಾಗಿ ಚುನಾವಣೆ ನಡೆಸಬೇಕು.

ಇತ್ತೀಚೆಗೆ ಇದೇ ಪ್ರಕ್ರಿಯೆಯಲ್ಲೇ ನೂತನ ರಾಷ್ಟ್ರಪತಿಯವರ ಆಯ್ಕೆ ನಡೆಯಿತು. ರಾಮನಾಥ್ ಕೋವಿಂದ್ ಅವರ ಅಧಿಕಾರಾವಧಿ ಜುಲೈ 24, 2022ಕ್ಕೆ ಮುಗಿದಿದ್ದು, ಅದಕ್ಕೂ ಮುನ್ನವೇ ನೂತನ ರಾಷ್ಟ್ರಪತಿ ಆಯ್ಕೆಗೆ ಚುನಾವಣೆ ನಡೆಯಿತು. ಭಾರತದ 15ನೇ ರಾಷ್ಟ್ರಪತಿಯಾಗಿ ದ್ರೌಪದಿ ಮುರ್ಮು ಆಯ್ಕೆಯಾದರು. ಜುಲೈ 25, 2022 ರಂದು ಅಧಿಕಾರ ಸ್ವೀಕರಿಸಿದರು.

ಹಾಗಾದರೆ, ರಾಷ್ಟ್ರಪತಿಯವರನ್ನು ಆಯ್ಕೆ ಮಾಡುವ ಚುನಾವಣಾ ಪ್ರಕ್ರಿಯೆಗಳು, ಕಾಯ್ದೆ, ನೀತಿ–ನಿಯಮಗಳು ಹೇಗಿರುತ್ತವೆ ? ಎಂಬುದನ್ನು ತಿಳಿಯೋಣ ಬನ್ನಿ.

## ಸಾಂವಿಧಾನಿಕ ಮತ್ತು ಕಾನೂನು ನಿಬಂಧನೆಗಳು

- ಸಂವಿಧಾನದ 324ನೇ ವಿಧಿಯ ಅನ್ವಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ಕಾಯ್ದೆ 1952 ಹಾಗೂ ಅಧ್ಯಕ್ಷ ಮತ್ತು ಉಪಾಧ್ಯಕ್ಷೀಯ ಚುನಾವಣಾ ನಿಯಮಗಳು 1974 ಅನ್ನು ಜಾರಿಗೆ ತಂದಿದ್ದು, ಈ ಕಾಯ್ದೆ ಹಾಗೂ ನಿಯಮಾವಳಿಗಳ ಅನ್ವಯ ಭಾರತೀಯ ಚುನಾವಣಾ ಆಯೋಗ ರಾಷ್ಟ್ರಪತಿ ಹುದ್ದೆಗೆ ಸಂಬಂಧಿಸಿದಂತೆ ಚುನಾವಣಾ ನಿರ್ವಹಣೆ, ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣದ ಕಾರ್ಯವನ್ನು ನಿರ್ವಹಿಸುತ್ತದೆ.
- ದೇಶದ ಅತ್ಯುನ್ನತ ಸ್ಥಾನವಾದ ಭಾರತದ ರಾಷ್ಟ್ರಪತಿ ಹುದ್ದೆಯ ಆಯ್ಕೆಗಾಗಿ ನಡೆಯುವ ಚುನಾವಣೆಯು ಮುಕ್ತ ಮತ್ತು ನ್ಯಾಯಸಮ್ಮತವಾಗಿರಬೇಕು ಎಂದು ಖಚಿತಪಡಿಸಿಕೊಳ್ಳಲು ಚುನಾವಣಾ ಆಯೋಗವು ಬಾಧ್ಯಸ್ಥವಾಗಿರುತ್ತದೆ.
- ಅಧ್ಯಕ್ಷೀಯ ಮತ್ತು ಉಪಾಧ್ಯಕ್ಷರ ಚುನಾವಣೆಗಳ ಕಾಯಿದೆ, 1952 ರ ಸೆಕ್ಷನ್ 4(3)ರ ಪ್ರಕಾರ ನಿರ್ಗಮಿತ ಅಧ್ಯಕ್ಷರ ಅಧಿಕಾರದ ಅವಧಿ ಮುಗಿಯಲು 60 ದಿನಗಳಿರುವಾಗ ಅಥವಾ ನಂತರ ರಾಷ್ಟ್ರಪತಿ ಚುನಾವಣೆಯ ಅಧಿಸೂಚನೆ ಹೊರಡಿಸಲಾಗುತ್ತದೆ.

## ಮತದಾರರ ಗುಂಪು

ಸಂವಿಧಾನದ 54ನೇ ವಿಧಿಯ ಪ್ರಕಾರ ಭಾರತದ ಸಂವಿಧಾನ, ಅಧ್ಯಕ್ಷರನ್ನು ಸಂವಿಧಾನ ನಿರ್ದಿಷ್ಟಪಡಿಸಿದ ಮತದಾರಗುಂಪು (ಎಲೆಕ್ಟರಲ್ ಕಾಲೇಜ್ ಅಥವಾ ನಿರ್ವಚನಾ ಮಂಡಳಿ) ಆಯ್ಕೆ ಮಾಡುತ್ತದೆ. ಆ ಗುಂಪು ಈ ಕೆಳಗಿನ ಸದಸ್ಯರನ್ನು ಹೊಂದಿರುತ್ತದೆ:

(i) ಸಂಸತ್ತಿನ ಉಭಯ ಸದನಗಳ ಚುನಾಯಿತ ಸದಸ್ಯರು ಮತ್ತು
(II)ಎಲ್ಲಾ ರಾಜ್ಯಗಳ ವಿಧಾನಸಭೆಗಳ ಚುನಾಯಿತ ಸದಸ್ಯರು ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶವಾದ ದೆಹಲಿ ಮತ್ತು ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿ ವಿಧಾನಸಭೆಗಳ ಚುನಾಯಿತ ಸದಸ್ಯರನ್ನು ಒಳಗೊಂಡಿರುತ್ತದೆ.

- ರಾಜ್ಯಸಭೆ ಮತ್ತು ಲೋಕಸಭೆ ಅಥವಾ ರಾಜ್ಯಗಳ ವಿಧಾನಸಭೆಗಳ ನಾಮನಿರ್ದೇಶಿತ ಸದಸ್ಯರು ಚುನಾವಣಾ ಗುಂಪಿನಲ್ಲಿ ಸೇರ್ಪಡೆಗೊಳ್ಳಲು ಅರ್ಹರಾಗಿರುವುದಿಲ್ಲ ಆದ್ದರಿಂದ, ಅವರು ಈ ಚುನಾವಣೆಯಲ್ಲಿ ಭಾಗವಹಿಸುವಂತಿರುವುದಿಲ್ಲ.
- ಅದೇ ರೀತಿ ವಿಧಾನ ಪರಿಷತ್ತಿನ ಸದಸ್ಯರು ಕೂಡ ರಾಷ್ಟ್ರಪತಿ ಚುನಾವಣೆಗೆ ಆಯ್ಕೆದಾರರಲ್ಲ.
- ರಾಜ್ಯ ವಿಧಾನಸಭೆಗಳು ಮತ್ತು ಸಂಸತ್ತಿನ ಉಭಯ ಸದನಗಳ ಚುನಾಯಿತ ಸದಸ್ಯರ ಮತಗಳ ಮೌಲ್ಯವನ್ನು ಸಂವಿಧಾನದ 55(2) ನೇ ವಿಧಿಯ ಮೂಲಕ ನಿರ್ಧರಿಸಲಾಗುತ್ತದೆ.

1) 16ನೇ ರಾಷ್ಟ್ರಪತಿ ಚುನಾವಣೆಗೆ ಶಾಸಕರ ಒಟ್ಟು ಮತಗಳ ಮೌಲ್ಯ 5,43,231 ಆಗಿರುತ್ತದೆ.
2) ಸಂಸದರ ಒಟ್ಟು ಮತಗಳ ಮೌಲ್ಯ 5,43,200 ಆಗಿರುತ್ತದೆ.
3) ಅಧ್ಯಕ್ಷೀಯ ಚುನಾವಣೆ 2022 ರ ಮತದಾರರ ಒಟ್ಟು ಮತದ ಮೌಲ್ಯವು 10,86,431 ಆಗಿದೆ.

- ಸಂವಿಧಾನದ 55(3)ನೇ ವಿಧಿ ಪ್ರಕಾರ ಏಕ ವರ್ಗಾವಣಾ ಮತದ ಮೂಲಕ ಅನುಪಾತದ ಪ್ರಾತಿನಿಧ್ಯ ವ್ಯವಸ್ಥೆಗೆ ಅನುಗುಣವಾಗಿ ಚುನಾವಣೆ ನಡೆಸಬೇಕು ಎಂದು ಹೇಳುತ್ತದೆ.
- ರಹಸ್ಯ ಮತದಾನದ ಮೂಲಕ ಮತದಾನ ನಡೆಯಬೇಕು ಮತ್ತು ಈ ವ್ಯವಸ್ಥೆಯಲ್ಲಿ, ಮತದಾರರು ಅಭ್ಯರ್ಥಿಗಳ ಹೆಸರಿನ ವಿರುದ್ಧ ತಮ್ಮ ಆದ್ಯತೆಗಳನ್ನು ಗುರುತಿಸಬೇಕು.
- ಅಭ್ಯರ್ಥಿಗಳ ಸಂಖ್ಯೆಯಷ್ಟು ಆದ್ಯತೆಗಳನ್ನು ಮತದಾರರು ಗುರುತಿಸಬಹುದು. ಬ್ಯಾಲೆಟ್ ಪೇಪರ್ ಮಾನ್ಯವಾಗಬೇಕಾದರೆ ಮೊದಲ ಆದ್ಯತೆಯ ಗುರುತು ಕಡ್ಡಾಯವಾಗಿರುತ್ತದೆ. ಆದರೆ ನಂತರದ ಆದ್ಯತೆಗಳು ಐಚ್ಛಿಕವಾಗಿರುತ್ತವೆ.
- ಅಧ್ಯಕ್ಷೀಯ ಚುನಾವಣೆಯ ಮತದಾನದ ವಿಷಯದಲ್ಲಿ ಪಕ್ಷಗಳು ತಮ್ಮ ಸಂಸದರು ಮತ್ತು ಶಾಸಕರಿಗೆ ಯಾವುದೇ ವಿಪ್ ನೀಡುವಂತಿಲ್ಲ .
- ಅಧ್ಯಕ್ಷೀಯ ಮತ್ತು ಉಪಾಧ್ಯಕ್ಷರ ಚುನಾವಣೆಗಳ ಕಾಯಿದೆ - 1952 ರ ಸೆಕ್ಷನ್ 18 ರ ಪ್ರಕಾರ, ಚುನಾವಣಾ ಬಿಕ್ಕಟ್ಟುಗಳು ಸಂಭವಿಸಿದಲ್ಲಿ ಇತ್ಯರ್ಥಪಡಿಸುವ ಮತ್ತು ಚುನಾವಣೆಯನ್ನು ಅನೂರ್ಜಿತ ಎಂದು ಘೋಷಿಸುವ ಅಧಿಕಾರ ಸುಪ್ರೀಂ ಕೋರ್ಟ್‌ಗೆ ಇದೆ.

### ರಾಷ್ಟ್ರಪತಿಯಾಗಲು ಅರ್ಹತೆಗಳು

ಸಂವಿಧಾನದ 58 ನೇ ವಿಧಿ ಅಡಿಯಲ್ಲಿ, ಭಾರತದ ರಾಷ್ಟ್ರಪತಿ ಅಭ್ಯರ್ಥಿಯಾಗಲು ಈ ಕೆಳಗಿನ ಮಾನದಂಡಗಳನ್ನು ಪೂರೈಸಬೇಕು.

1. ಭಾರತದ ಪ್ರಜೆಯಾಗಿರಬೇಕು.
2. ಕನಿಷ್ಠ 35 ವರ್ಷಗಳಿಗಿಂತ ಮೇಲ್ಪಟ್ಟವರಾಗಿರಬೇಕು.
3. ಲೋಕಸಭೆಯ ಸದಸ್ಯರಾಗಲು ಅರ್ಹರಾಗಿರಬೇಕು.
4. ಭಾರತ ಸರ್ಕಾರ ಅಥವಾ ಯಾವುದೇ ರಾಜ್ಯದ ಸರ್ಕಾರದ ಅಡಿಯಲ್ಲಿ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಸಾರ್ವಜನಿಕ ಪ್ರಾಧಿಕಾರದ ಅಡಿಯಲ್ಲಿ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು.

ಅಧಿಕಾರದಲ್ಲಿರುವ ರಾಷ್ಟ್ರಾಧ್ಯಕ್ಷರು ಅಥವಾ ಉಪರಾಷ್ಟ್ರಾಧ್ಯಕ್ಷರು, ಯಾವುದೇ ರಾಜ್ಯದ ರಾಜ್ಯಪಾಲರು ಮತ್ತು ಕೇಂದ್ರ ಅಥವಾ ಯಾವುದೇ ರಾಜ್ಯದ ಮಂತ್ರಿಗಳು - ಈ ಹುದ್ದೆಗಳನ್ನು ಸಂವಿಧಾನವು ಲಾಭದಾಯಕ ಹುದ್ದೆಗಳು ಎಂದು ಪರಿಗಣಿಸುವುದಿಲ್ಲ ಆದ್ದರಿಂದ ಈ ಹುದ್ದೆಯಲ್ಲಿರುವ ವ್ಯಕ್ತಿಗಳು ರಾಷ್ಟ್ರಾಧ್ಯಕ್ಷ ಚುನಾವಣೆಯಲ್ಲಿ ಭಾಗವಹಿಸಬಹುದು.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಮತ್ತಷ್ಟು 'ಪ್ರಚಲಿತ'ಕ್ಕಾಗಿ..
ರಾಷ್ಟ್ರಪತಿ ಚುನಾವಣೆ ಕುರಿತ ಸಂಪೂರ್ಣ ಮಾಹಿತಿ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಸಫಲರಾಗಲು ಅತ್ಯವಶ್ಯವಿರುವ ಇಂಥ ಹತ್ತು ಹಲವು ಪ್ರಮುಖ ಮಾಹಿತಿಗಳಿಗಾಗಿ ಪ್ರಜಾವಾಣಿ – ಡೆಕ್ಕನ್‌ಹೆರಾಲ್ಡ್ ಪತ್ರಿಕೆಯ 'ಮಾಸ್ಟರ್ ಮೈಂಡ್' ಇ–ಪೇಪರ್‌ಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.
www.exammastermind.com

# ಉದ್ಯೋಗ ವಾರ್ತೆ

## ದೆಹಲಿ ಪೊಲೀಸ್ ಪರೀಕ್ಷೆ 2022 ಕಾನ್‌ಸ್ಟೆಬಲ್(ಚಾಲಕ) ಹುದ್ದೆಗಳ ಆಯ್ಕೆ

ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗವು ಕಾನ್‌ಸ್ಟೆಬಲ್(ಚಾಲಕ-ಪುರುಷ) ಹುದ್ದೆಗಾಗಿ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಯ್ಕೆ ಮಾಡಲು ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ.

'ದೆಹಲಿ ಪೊಲೀಸ್ ಪರೀಕ್ಷೆ 2022' ಶೀರ್ಷಿಕೆಯಡಿ ಈ ಪರೀಕ್ಷೆ ನಡೆಯಲಿದೆ. ಎಷ್ಟು ಹುದ್ದೆಗಳಿಗಾಗಿ ಪರೀಕ್ಷೆ ನಡೆಸಲಾಗುತ್ತಿದೆ ಎಂಬುದನ್ನು ನಿಗದಿಪಡಿಸಿಲ್ಲ. ನಂತರ ಹುದ್ದೆಗಳ ಸಂಖ್ಯೆ ನಿಗದಿಗೊಳಿಸುವುದಾಗಿ ಜುಲೈ 8ರಂದು ಬಿಡುಗಡೆ ಮಾಡಿದ ಅಧಿಸೂಚನೆಯಲ್ಲಿ ತಿಳಿಸಿದೆ.

**ವಿದ್ಯಾರ್ಹತೆ:** 10 + 2 ಅಥವಾ ದ್ವಿತೀಯ ಪಿಯುಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಾಸಾಗಿರಬೇಕು. ಭಾರಿ ವಾಹನಗಳ ಚಾಲನೆಯಲ್ಲಿ ಅನುಭವವಿರಬೇಕು. ಭಾರಿ ಮೋಟಾರು ವಾಹನಗಳಿಗೆ ಮಾನ್ಯವಾದ ಚಾಲನಾ ಪರವಾನಗಿ (ಆನ್‌ಲೈನ್ ಸ್ವೀಕೃತಿಯ ಅಂತಿಮ ದಿನಾಕದಂತೆ ಪರವಾನಗಿ ಹೊಂದಿರಬೇಕು) ಹೊಂದಿರಬೇಕು. ವಾಹನಗಳ ನಿರ್ವಹಣೆಯ ಜ್ಞಾನವನ್ನೂ ಹೊಂದಿರಬೇಕು.

**ವಯೋಮಿತಿ:** ಜುಲೈ1, 2022ರ ಅನ್ವಯ ಕನಿಷ್ಠ 21 ವರ್ಷ. ಗರಿಷ್ಠ 30 ವರ್ಷಗಳು. ನಿರ್ದಿಷ್ಟ ವರ್ಗದವರು ವಯೋಮಿತಿ ಸಡಿಲಿಕೆಗೆಗಾಗಿ ಜುಲೈ 8ರಂದು ಆಯೋಗ ತನ್ನ ಜಾಲತಾಣದಲ್ಲಿ ಪ್ರಕಟಿಸಿರುವ ಅಧಿಸೂಚನೆಯ ಪ್ಯಾರಾ–4ಅನ್ನು ಪರಿಶೀಲಿಸಬಹುದು.

**ಪ್ರವೇಶ ಶುಲ್ಕ:** ₹100(ಮಾಜಿ ಸೈನಿಕರಿಗೆ, ಎಸ್ಸಿ, ಎಸ್‌ಟಿ, ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕವಿಲ್ಲ)

**ಅರ್ಜಿ ಸಲ್ಲಿಸುವ ವಿಧಾನ:** ಸಿಬ್ಬಂದಿ ನೇಮಕಾತಿ ಸಂಸ್ಥೆ (ಎಸ್‌ಎಸ್‌ಸಿ)ಯ ಜಾಲತಾಣ https//ssc.nic.in ಮೂಲಕವೇ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಅಧಿಸೂಚನೆಯ ಅನುಬಂಧ-III ಮತ್ತು IV ಅನ್ನು ನೋಡಿ.

**ಅರ್ಜಿ ಸಲ್ಲಿಸಲು ಕೊನೆ ದಿನ:** ಜುಲೈ 29, 2022. ಆನ್‌ಲೈನ್ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುತ್ತದೆ.

**ಆಯ್ಕೆ ವಿಧಾನ :** ಆನ್‌ಲೈನ್ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

**ಪರೀಕ್ಷೆ ವಿಷಯಗಳು:**

- ಪತ್ರಿಕೆ –1 : ಇದು ಕಂಪ್ಯೂಟರ್ ವಿಷಯ ಆಧಾರಿತವಾದ ಪರೀಕ್ಷೆ. ವಸ್ತುನಿಷ್ಠ (objective)ಮಾದರಿಯಲ್ಲಿ ಬಹು ಆಯ್ಕೆಯ ಪ್ರಶ್ನೆಗಳಿರುತ್ತವೆ.
- ದೈಹಿಕ ಸಹಿಷ್ಣುತೆ ಮತ್ತ ಮಾಪನ ಪರೀಕ್ಷೆ (PE&MT)
- ಟ್ರೇಡ್ ಪರೀಕ್ಷೆ
- ವೈದ್ಯಕೀಯ ಪರೀಕ್ಷೆ

ಈ ಹುದ್ದೆಯ ಹೆಚ್ಚಿನ ವಿವರಕ್ಕಾಗಿ www.ssckkr.kar.nic.in ಮತ್ತು https://ssc.nic.in ಜಾಲತಾಣಗಳಿಗೆ ಭೇಟಿ ನೀಡಬಹುದು.



## ಐಟಿಬಿಪಿ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ಅರ್ಜಿ ಆಹ್ವಾನ

ಕೇಂದ್ರ ಸರ್ಕಾರದ ಗೃಹ ವ್ಯವಹಾರಗಳ ಇಲಾಖೆ ಇಂಡೊ ಟಿಬೆಟಿಯನ್ ಗಡಿ ಪೊಲೀಸ್ ಪಡೆ (ಐಟಿಬಿಪಿ)ಯಲ್ಲಿ ಖಾಲಿ ಇರುವ 37 ಸಬ್ ಇನ್‌ಸ್ಪೆಕ್ಟರ್(ಮೇಲ್ವಿಚಾರಕ) ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ. ಈ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

**ವಯೋಮಿತಿ :** ಕನಿಷ್ಠ 20 ವರ್ಷಗಳು ಗರಿಷ್ಠ 25 ವರ್ಷಗಳು. ಸರ್ಕಾರದ ನಿಯಮಾನುಸಾರ ವಿವಿಧ ನಿರ್ದಿಷ್ಟ ವರ್ಗಗಳಿಗಿರುವ ವಯೋಮಿತಿ ಸಡಿಲಿಕೆಯ ವಿವರಗಳಿಗಾಗಿ ಆಯೋಗದ ವೆಬ್‌ಸೈಟ್‌ನಲ್ಲಿ (ಜುಲೈ08 2022) ಅಧಿಸೂಚನೆಯ ಪ್ಯಾರಾ-3.a ಅನ್ನು ಪರಿಶೀಲಿಸಬಹುದು.

**ವಿದ್ಯಾರ್ಹತೆ:** 10 + 2 ನೇ ತರಗತಿ ಅಥವಾ ತತ್ಸಮಾನ ವಿದ್ಯಾರ್ಹತೆ ಜೊತೆಗೆ, ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಪಡೆದಿರಬೇಕು.

**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಬೇಕು. ಅದೂ ಐಟಿಬಿಪಿ ಇಲಾಖೆಯ ಅಧಿಕೃತ ವೆಬ್‌ಸೈಟ್ www.recruitment.itbpolice.nic.in – ಮೂಲಕವೇ ಅರ್ಜಿ ಸಲ್ಲಿಸಬೇಕು. ವಿವರಗಳಿಗೆ ಅಧಿಸೂಚನೆಯಲ್ಲಿರುವ ಅನುಬಂಧ-5ನ್ನು ಗಮನಿಸಿ.

**ಅರ್ಜಿ ಸಲ್ಲಿಸಲು ಕೊನೆ ದಿನ:** ಆಗಸ್ಟ್ 14, 2022



**ತಿಂಗಳ ವೇತನ:** ಹಂತ-6 ನೇ ವೇತನ ಶ್ರೇಣಿ. ₹35,400 ದಿಂದ 1,12,400(7ನೇ ವೇತನ ಆಯೋಗ)

**ಪರೀಕ್ಷೆಯ ವಿಧಾನ :** ಎರಡು ಹಂತಗಳಲ್ಲಿ ಪರೀಕ್ಷೆ ನಡೆಯುತ್ತದೆ. ಮೊದಲ ಹಂತ ಅಭ್ಯರ್ಥಿಯ ದೇಹದಾಢ್ಯತೆ ಮತ್ತು ಸಹಿಷ್ಣುತೆ ಪರೀಕ್ಷೆ. ಎರಡನೇ ಹಂತ ಲಿಖಿತ ಪರೀಕ್ಷೆ. ವಿವರ ಇಲ್ಲಿದೆ;

- ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆ
- ಪುರುಷರಿಗೆ 1600 ಮಿ ಓಟ- 7ನಿಮಿಷ 30 ಸೆಕೆಂಡ್‌ಗಳು ಮತ್ತು 100ಮಿ- 16ಸೆ.
- ಮಹಿಳೆಯರಿಗೆ- 800ಮಿ ಓಟ 4ನಿಮಿಷ 45 ಸೆಕೆಂಡ್‌ಗಳಲ್ಲಿ ಹಾಗೂ 100ಮಿ ಓಟ 18 ಸೆಕೆಂಡ್‌ಗಳಲ್ಲಿ.
- ಮೂರು ಗಂಟೆ ಅವಧಿಯ 200 ಅಂಕಗಳ ಲಿಖಿತ ಪರೀಕ್ಷೆ: ಈ ಪ್ರಶ್ನೆ ಪತ್ರಿಕೆಯಲ್ಲಿ 160 ಅಂಕಗಳ ಎಂಜಿನಿಯರಿಂಗ್ ಸಂಬಂಧಿಸಿದ ಪ್ರಶ್ನೆಗಳು ಹಾಗೂ ಸಾಮಾನ್ಯ ಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ 40 ಅಂಕಗಳ ಪ್ರಶ್ನೆಗಳಿರುತ್ತವೆ.
- ನಂತರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ದಾಖಲಾತಿ ಪರಿಶೀಲನೆ ಮಾಡಲಾಗುತ್ತದೆ.

ಅಧಿಸೂಚನೆ ಸೇರಿದಂತೆ ಹೆಚ್ಚಿನ ವಿವರಗಳಿಗೆ www.recruitment.itbpolice.nic.in ಜಾಲತಾಣ ನೋಡಬಹುದು.

**ಸಹಾಯವಾಣಿಗಳು: ಇಮೇಲ್ ಐಡಿ – rectsupport@itbp.gov.in**
**011-24369482 & 24369483**

## ಬ್ಯಾಂಕ್ ಉದ್ಯೋಗಿ ಆತ್ಮಹತ್ಯೆ

ಬೆಂಗಳೂರು: ಕೆಂಗೇರಿ ಸಮೀಪದ ದೊಡ್ಡಗೊಲ್ಲರಹಟ್ಟಿ ನಿವಾಸಿ ನಂದಕುಮಾರ್ (52) ಎಂಬುವವರು ನಾಯಂಡಹಳ್ಳಿ ಬಳಿ ಚಲಿಸುತ್ತಿದ್ದ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರು ಸಹಕಾರಿ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದರು.

ಮೈಸೂರು ಕಡೆಯಿಂದ ಬರುತ್ತಿದ್ದ ಪ್ಯಾಸೆಂಜರ್ ರೈಲಿಗೆ ಅಡ್ಡಬಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮನೆ ನಿರ್ಮಿಸಲು ಸ್ನೇಹಿತರ ಬಳಿ ಸಾಲ ಮಾಡಿಕೊಂಡಿದ್ದರು. ಬಳಿಕ ಅದನ್ನು ತೀರಿಸಲು ಮೊಬೈಲ್ ಆ್ಯಪ್ ಮೂಲಕ ಸಾಲ ಮಾಡಿದ್ದರು. 'ಸಾಲ ನೀಡಿದವರ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ' ಎಂದು ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ ಎಂದು ರೈಲ್ವೆ ಪೊಲೀಸ್ ಮೂಲಗಳು ತಿಳಿಸಿವೆ.

### ಕೋಟ್ಪಾ ಕಾಯ್ದೆ ಬಲಪಡಿಸುವಂತೆ ಆಗ್ರಹಿಸಿ ಪ್ರಧಾನಿ ನರೇಂದ್ರ ಮೋದಿಗೆ ಪತ್ರ

# 'ತಂಬಾಕು ಉತ್ಪನ್ನಕ್ಕೆ ಕಡಿವಾಣ ಹಾಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋಟ್ಪಾ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ತಂಬಾಕು ಉತ್ಪನ್ನಗಳ ಸೇವನೆಗೆ ಕಡಿವಾಣ ಹಾಕಬೇಕು. ಈ ಮೂಲಕ ಸಾರ್ವಜನಿಕ ಸ್ಥಳಗಳನ್ನು ಶೇ 100ರಷ್ಟು ಧೂಮಪಾನ ಮುಕ್ತಗೊಳಿಸಬೇಕು' ಎಂದು ನಗರದ ಯುವಜನರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರದ ಮೂಲಕ ಆಗ್ರಹಿಸಿದ್ದಾರೆ.



ಕೋಟ್ಪಾ ಕಾಯ್ದೆ ತಿದ್ದುಪಡಿಗೆ ಆಗ್ರಹಿಸಿ ಪ್ರಧಾನಿಗೆ ಬರೆದ ಪತ್ರವನ್ನು ಅಂಚೆ ಪೆಟ್ಟಿಗೆಗೆ ಹಾಕಿದ ಮಕ್ಕಳು

ಕೋಟ್ಪಾ ತಿದ್ದುಪಡಿ ಮಸೂದೆಯನ್ನು ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಅಂಗೀಕರಿಸುವಂತೆ ಒತ್ತಾಯಿಸಿ, ವಿದ್ಯಾರ್ಥಿಗಳು ಸೇರಿ ಸಾವಿರಕ್ಕೂ ಅಧಿಕ ಮಂದಿ ಪತ್ರ ಬರೆದಿದ್ದಾರೆ. ತಂಬಾಕುಮುಕ್ತ ಕರ್ನಾಟಕ ವೇದಿಕೆ, ತಂಬಾಕು ವಿರೋಧಿ ವೇದಿಕೆ, ರಾಷ್ಟ್ರೀಯ ಕಾನೂನು ಶಾಲೆ ಹಾಗೂ ವಿವಿಧ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳೂ ಪತ್ರದ ಮೂಲಕ ಪ್ರಧಾನಿಗೆ ಈ ಬಗ್ಗೆ ಒತ್ತಾಯಿಸಿದ್ದಾರೆ.

'ತಂಬಾಕು ಉತ್ಪನ್ನಗಳ ಬಳಕೆ ತಡೆಗಟ್ಟಲು ಮತ್ತು ವ್ಯಸನದಿಂದ ಯುವಕರನ್ನು ರಕ್ಷಿಸಲು ಕೋಟ್ಪಾ ಕಾಯ್ದೆ ಬಲಪಡಿಸಬೇಕು. ತಂಬಾಕು ಸೇವನೆಯ ಕಾನೂನುಬದ್ಧ ವಯಸ್ಸನ್ನು 18ರಿಂದ 21ಕ್ಕೆ ಹೆಚ್ಚಿಸಬೇಕು. ವಿಮಾನ ನಿಲ್ದಾಣ, ಹೋಟೆಲ್ ಮತ್ತು ಬಾರ್‌ಗಳಲ್ಲಿ ನಿರ್ದಿಷ್ಟ ಧೂಮಪಾನ ಪ್ರದೇಶಗಳನ್ನು ನಿಷೇಧಿಸಬೇಕು. ತಂಬಾಕಿನ ನೇರ ಮತ್ತು ಪರೋಕ್ಷ ಜಾಹೀರಾತನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡಿದರೆ ಭಾರಿ ದಂಡ ವಿಧಿಸಬೇಕು. ಸಾರ್ವಜನಿಕ ಸ್ಥಳಗಳನ್ನು ಶೇ 100ರಷ್ಟು ಧೂಮಪಾನ ಹೊಗೆ ಮುಕ್ತಗೊಳಿಸಬೇಕು' ಎಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

**ಜಾಹೀರಾತು ನಿಷೇಧಿಸಿ:** 'ಕೋಟ್ಪಾ ಕಾಯ್ದೆಯನ್ನು ಎಲ್ಲೆಡೆ ಉಲ್ಲಂಘಿಸಲಾಗುತ್ತಿದೆ. 'ಯುವ ಜನರಲ್ಲಿ ತಂಬಾಕು ಬಳಕೆ' ಜಾಗತಿಕ ಸಮೀಕ್ಷೆಯ ಪ್ರಕಾರ 10 ವರ್ಷಕ್ಕಿಂತ ಮೊದಲೇ ಹೆಚ್ಚಿನ ಮಕ್ಕಳು ತಂಬಾಕು ಉತ್ಪನ್ನಗಳ ಸೇವನೆ ಚಟಕ್ಕೆ ಒಳಗಾಗುತ್ತಿದ್ದಾರೆ. ಅಕ್ರಮ ಜಾಹೀರಾತುಗಳ ಮೂಲಕ ಮಕ್ಕಳು ಮತ್ತು ಯುವಜನರನ್ನು ತಂಬಾಕು ಸೇವನೆಯತ್ತ ಸೆಳೆಯಲಾಗುತ್ತಿದೆ. ಕೋಟ್ಪಾ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಎಲ್ಲ ರೀತಿಯ ನೇರ ಮತ್ತು ಪರೋಕ್ಷ ತಂಬಾಕು ಜಾಹೀರಾತನ್ನು ನಿಷೇಧಿಸಬೇಕು' ಎಂದು ತಂಬಾಕು ಮುಕ್ತ ಕರ್ನಾಟಕ ವೇದಿಕೆಯ ಸಂಚಾಲಕ ಎಸ್.ಜೆ. ಚಂದರ್ ಒತ್ತಾಯಿಸಿದ್ದಾರೆ.

'ತಂಬಾಕು ಉತ್ಪನ್ನಗಳ ಪ್ರಚಾರ ತಂತ್ರಗಳಿಗೆ ಯುವಕರು ಮಾರುಹೋಗುತ್ತಿದ್ದಾರೆ. ಒಮ್ಮೆ ತಂಬಾಕಿನ ಚಟಕ್ಕೆ ಬಿದ್ದರೆ ಅದರ ವಿಷವರ್ತುಲದಿಂದ ಹೊರಬರುವುದು ಕಷ್ಟ. ತಂಬಾಕು ಉತ್ಪನ್ನ ತಯಾರಿಕಾ ಸಂಸ್ಥೆಗಳು ಯುವಜನರನ್ನೇ ತಮ್ಮ ಪ್ರಮುಖ ಗುರಿಯಾಗಿಸಿಕೊಂಡಿವೆ. ಹದಿಹರೆಯದಲ್ಲಿ ಬಹುತೇಕರು ತಂಬಾಕಿನ ದುಷ್ಪರಿಣಾಮಗಳನ್ನು ಅರಿಯುವುದಿಲ್ಲವಾದ್ದರಿಂದ, ತಂಬಾಕು ಬಳಕೆಗೆ ಕಾನೂನುಬದ್ಧ ವಯಸ್ಸನ್ನು 21 ವರ್ಷಕ್ಕೆ ಏರಿಸಬೇಕು' ಎಂದು ಪ್ರಧಾನಿಗೆ ಪತ್ರ ಬರೆದ ಇಶಾನ್ ಎಸ್. ತಿಳಿಸಿದ್ದಾರೆ.

### 'ಸಾರ್ವಜನಿಕ ಸ್ಥಳ ಧೂಮಪಾನ ಮುಕ್ತವಾಗಲಿ'

'ಬಹುತೇಕರು ಹದಿಹರೆಯದವರಾಗಿದ್ದಾಗಲೇ ತಂಬಾಕು ಉತ್ಪನ್ನಗಳ ಸೇವನೆ ಪ್ರಾರಂಭಿಸುತ್ತಾರೆ. ಪ್ರತಿಯೊಬ್ಬರಿಗೂ ಆರೋಗ್ಯದ ಹಕ್ಕು ಮತ್ತು ಧೂಮಪಾನ ಮುಕ್ತ ಸಾರ್ವಜನಿಕ ಸ್ಥಳಗಳ ಹಕ್ಕು ಇದೆ. ಭಾರತೀಯ ಸಂವಿಧಾನದ 21ನೇ ವಿಧಿ ಇದನ್ನು ಖಾತರಿಪಡಿಸುತ್ತದೆ. ಹೀಗಾಗಿ, ಧೂಮಪಾನಿಗಳು ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವಾಗ ಜನರ ಆರೋಗ್ಯವನ್ನು ಹಾಳುಮಾಡುವುದಲ್ಲದೆ, ಆ ಸಾರ್ವಜನಿಕ ಸ್ಥಳದಲ್ಲಿ ಇರುವವರೆಲ್ಲರ ಜೀವ ಮತ್ತು ಆರೋಗ್ಯಕ್ಕೆ ಕುತ್ತು ತರುತ್ತಿದ್ದಾರೆ' ಎಂದು ರಾಜ್ಯ ಸರ್ಕಾರದ ತಂಬಾಕು ನಿಯಂತ್ರಣ ಉನ್ನತ ಮಟ್ಟದ ಸಮಿತಿ ಸದಸ್ಯ ಡಾ. ವಿಶಾಲ್ ರಾವ್ ಬೇಸರ ವ್ಯಕ್ತಪಡಿಸಿದ್ದಾರೆ.

'ಸಾರ್ವಜನಿಕ ಸ್ಥಳಗಳನ್ನು ಶೇ 100ರಷ್ಟು ಧೂಮಪಾನ ಮುಕ್ತಗೊಳಿಸಲು ಕೋಟ್ಪಾ ಕಾಯ್ದೆಗೆ ತಿದ್ದುಪಡಿ ತರಬೇಕು' ಎಂದು ಆಗ್ರಹಿಸಿದ್ದಾರೆ.

## ಸುದ್ದಿ 2 ನಿಮಿಷ

### ತನಿಖೆಯ ಓಂನಾಮವೇ ಗೊತ್ತಿಲ್ಲ: ಎಸಿಬಿಗೆ ಹೈಕೋರ್ಟ್ ಚಾಟಿ

ಬೆಂಗಳೂರು: 'ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಅಪರಾಧ ಪ್ರಕರಣಗಳ ತನಿಖೆಯ ಓಂನಾಮವೇ ಗೊತ್ತಿಲ್ಲ' ಎಂದು ಚಾಟಿ ಬೀಸಿದ ಹೈಕೋರ್ಟ್, 'ಇಂತಹ ಲೋಪಗಳನ್ನು ಕಂಡೂ ಕಣ್ಮುಚ್ಚಿ ಕೂರಲಾಗುವುದಿಲ್ಲ' ಎಂದು ಖಡಕ್ ಎಚ್ಚರಿಕೆ ನೀಡಿದೆ.

ಎಸಿಬಿ ಕ್ರಮ ಪ್ರಶ್ನಿಸಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕೆಪಿಟಿಸಿಎಲ್) ಕಾರ್ಯನಿರ್ವಾಹಕ ಎಂಜಿನಿಯರ್ ಕೆ.ಆರ್. ಕುಮಾರ್ ನಾಯ್ಕ ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಕಿಡಿ ಕಾರಿದೆ.



ಅರ್ಜಿದಾರರ ಪರ ವಕೀಲ ಕೆ.ಸತೀಶ್, 'ಪ್ರಕರಣದಲ್ಲಿ ಎಸಿಬಿ ನಡೆಸಿರುವ ತನಿಖೆಯ ವಿಧಾನ ಕಾನೂನು ಬಾಹಿರವಾಗಿದೆ. ಎಫ್‌ಐಆರ್‌ಗೂ ಮೊದಲು ಎಸಿಬಿ ಪ್ರಾಥಮಿಕ ತನಿಖೆ ನಡೆಸಿಲ್ಲ ಹಾಗೂ ಮೂಲ ವರದಿಯನ್ನೂ ತಯಾರಿಸಿಲ್ಲ. ದಾಳಿ ನಡೆಸಿ ಅರ್ಜಿದಾರರಿಗೆ ಮಾನಸಿಕ ಹಿಂಸೆ ನೀಡಲಾಗಿದೆ' ಎಂದು ಆಕ್ಷೇಪಿಸಿದರು. ಈ ಆಕ್ಷೇಪಣೆಗೆ ದಾಖಲೆ ಪರಿಶೀಲಿಸಿದ ನ್ಯಾಯಪೀಠ, 'ಕಾನೂನು ಪ್ರಕ್ರಿಯೆಯ ದುರುಪಯೋಗ ಮಾಡಿಕೊಳ್ಳಲಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿತು.

ಆರ್‌ಟಿಒ ಹೆಚ್ಚುವರಿ ಆಯುಕ್ತ ಜ್ಞಾನೇಂದ್ರ ಕುಮಾರ್ ವಿರುದ್ಧದ ಆದಾಯಕ್ಕೂ ಮೀರಿದ ಆಸ್ತಿ ಗಳಿಕೆ ಪ್ರಕರಣವೊಂದರಲ್ಲಿ ಕುಮಾರ್ ನಾಯ್ಕ ವಿರುದ್ಧ ಎಸಿಬಿ ಮಾರ್ಚ್ 16ರಂದು ಆದಾಯ ಮೀರಿ ಆಸ್ತಿ ಗಳಿಕೆಗೆ ಸಂಬಂಧಿಸಿದ ಪ್ರಕರಣ ಇದಾಗಿದೆ.

### ಜನನ–ಮರಣ ನೋಂದಣಿ: ವಕೀಲರ ಸಂಘದ ವಿರೋಧ

ಬೆಂಗಳೂರು: ಜನನ ಮತ್ತು ಮರಣ ನೋಂದಣಿ ಪ್ರಕರಣಗಳನ್ನು ನ್ಯಾಯಾಲಯಗಳ ವ್ಯಾಪ್ತಿಯಿಂದ ಉಪವಿಭಾಗಾಧಿಕಾರಿಗಳಿಗೆ ವರ್ಗಾಯಿಸುವ ಸರ್ಕಾರದ ಕ್ರಮಕ್ಕೆ ಬೆಂಗಳೂರು ವಕೀಲರ ಸಂಘ ತೀವ್ರ ವಿರೋಧ ವ್ಯಕ್ತಪಡಿಸಿದ್ದು, 'ಈ ತಿದ್ದುಪಡಿಯಿಂದ ವೃತ್ತಿಪರ ವಕೀಲರಿಗೆ ತೊಂದರೆಯಾಗಲಿದೆ' ಎಂದು ಆತಂಕ ವ್ಯಕ್ತಪಡಿಸಿದೆ.

ಈ ಕುರಿತಂತೆ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಮತ್ತು ಖಜಾಂಚಿ ಎಂ.ಟಿ. ಹರೀಶ್ ಕಾನೂನು ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದು, 'ಈ ತಿದ್ದುಪಡಿ ಕಾಯ್ದೆ ಕಾನೂನು ಬಾಹಿರ. ಆದ್ದರಿಂದ, ಕೂಡಲೇ ವಾಪಸು ಪಡೆಯಬೇಕು' ಎಂದು ಆಗ್ರಹಿಸಿದ್ದಾರೆ.

'ಸಾರ್ವಜನಿಕ ವಲಯದಲ್ಲಿ ಅಪಾರ ಪ್ರಮಾಣದಲ್ಲಿ ನಕಲಿ ಜನನ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್ ಬಳಕೆ ಮಾಡಲಾಗುತ್ತಿದೆ. ಇದನ್ನು ತಡೆಯುವ ಶಕ್ತಿ ಕೇವಲ ನ್ಯಾಯಾಂಗಕ್ಕೆ ಮಾತ್ರವಿದೆ. ನ್ಯಾಯಾಧೀಶರಾದರೆ, ಯಾವುದೇ ಅಳುಕು ಇಲ್ಲದೇ ಅಥವಾ ಮೀನಮೇಷ ಎಣಿಸಿದೇ ಕಾನೂನು ಪ್ರಕಾರ ಆದೇಶ ನೀಡುತ್ತಾರೆ. ಹಾಗಾಗಿ, ಜನನ ಮತ್ತು ಮರಣ ನೋಂದಣಿ ವಿಚಾರಗಳನ್ನು ಕಂದಾಯ ಇಲಾಖೆಯ ಅಧಿಕಾರಿಗಳಿಗಿಂತ ನ್ಯಾಯಾಧೀಶರ ಸುಪರ್ದಿಯಲ್ಲೇ ಇತ್ಯರ್ಥಗೊಳಿಸುವಂತಾಗಬೇಕು' ಎಂದು ಒತ್ತಾಯಿಸಿದ್ದಾರೆ.


ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**R.E.S. POLYTECHNIC**
Recognised by Govt. of Karnataka & Approved by AICTE, New Delhi
PUC / ITI Pass Join 2 yrs Diploma Engg
10th Pass Join 3 yrs Diploma Engg
1. Automobile Engineering 2. Computer Science
3. Electrical & Electronics 4. Electronics & Commn.
5. Civil Engineering 6. Mechanical Engineering
7. Commerce - Com. Practice 8. Arts - Fashion Technology
RES-22312
# 5, Sunkadakatte, Magadi Main Road, Hegganahalli Cross, Bengaluru-91 Phone: 080-23484814, 99166 46466

**2nd PU Failed?**
Don't be left behind!
A golden opportunity to study degree under Bangalore University this academic year and save one precious year of your life.
BBA B.Com BCA BA
Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
7846000222

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

**PUBLIC NOTICE**

ELCITA
TENDERS INVITED BY ELECTRONICS CITY INDUSTRIAL TOWNSHIP AUTHORITY (ELCITA), BANGALORE
ELECTRONICS CITY INDUSTRIAL TOWNSHIP AUTHORITY (ELCITA), having its office at Sy. No. 7 (P), West Phase, Electronics City, Bangalore-560 100 has invited tender as detailed below:

| Tender Name |
| --- |
| Supply of Explosive Vapour Detector for ELCITA, Electronics city, Bangalore-560100 |
| Tender Number |
| ELCITA/ UDD/2022-23/ EVD_2507 |
| Last date to apply |
| 08.08.2022 |
| Closing timings hrs |
| 17.00 hrs |

Details of the Tenders can be downloaded from the e-procurement website eproc.karnataka.gov.in under Urban Development Department - Electronics city Industrial Township Authority. Also, details are available in www.elcita.in
For queries Contact: 080-4660 2222 / write to: sec.mgr3@elcita.in and cso@elcita.in

**BUSINESS**

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

**EDUCATIONAL**

Admission

DIRECT FINAL: LLB (Become Lawyer),B.Tech/ MBA/BCA/BBA/B.Sc/B.Com/ D.Pharm/B.Pharm/BAMS/ BYNS/Nursing/PU/SSLC. Last few seats. Asha Academy, Bangalore. Ph:9448460103/ 7093438248.

**JOB OPPORTUNITIES**

Part-Time Jobs

REPUTED MNC COMPANY will Provide WORK FROM HOME, Earn 35000 to 40000 Malleshwaram: 7019215243/ 9886641282

Teachers/ Professors

WANTED LECTURERS Subject: Kannada/ Commerce, Srinivasa College, Hosur Main Road, Kudlugate, Bengaluru. Contact: 9341948860

**PERSONAL**

Change of Name

I, TAMMISETTI VENKATESWRARAO, R/o #9-49, Pulipadu Village, Gurajala Mandalam Guntur District, A.P.- 522415, have changed my name to THAMMISETTY VENKATESH, vide affidavit dated 26.07.2022 before Notary L. Gopalakrishna, Bangalore.

6493205X, HAV/ASH, KAMESHWAR SINGH, Vill- Ahmedpur Kusumbha, Khaga, Fatehpur, Uttar Pradesh, changed daughter's name KUMARI AMITA to AMITA, 26/07/2022, Notary K.V. Mani, Bangalore

SUMAN KUMAR JHA, JC675814X NB SUB, Vill- Kochatolli, Namkum, Ranchi, Jharkhand, changed Son's name from PARS JHA to PARAS JHA, 26/07/2022, Notary K.V. Mani, Bangalore

I, H.C. RAJGOPAL Residing at #E-497, Dhanik-Nilaya, Chikkabidarakallu, Nagsandra Post, Bangalore-57 have changed my son name from DHANIK GOWDA to DHANIK GOWDA.R (DHANIK GOWDA RAJGOPAL) vide affidavit dated 5/7/2022 before Notary Anuradha.D, Bangalore

I, VAYALPADU SARDAR BASHA S/o Sameer Basha, residing at #59/2 6th cross Rashad Nagar, Ibrahim Saheb Street, AC Post, Bangalore 560045, have changed my name to SARDAR BASHA S/o Shameer Basha, vide affidavit dated 27.07.2022 before Notary Leela, Bangalore.

I, SHASHIKANTH Nayak Residing at TF-4, Ajantha Paradise 31 2nd Main Kathriguppe East BSK 3rd Stage Bangalore-85 have changed my Daughters Name from SMRITI.S.NAYAK to SMRITI NAYAK vide affidavit dated 26-07-2022 before H.G. Venaktaramu Notary Bangalore

I, KADHIRUELU KUMAR, S/o Late A.M.Kadhirvelu Naicker aged 58 years Resident of KSR Nilaya, Plot No.12, Chowdappa Layout, Vinayaka Nagar, Chikkabanavara Post, Bangalore– 560090 have changed my name to KADHIRVELU KUMAR vide affidavit Dated: 22/07/2022 notary T.V.Bhadravijaya

WE, SANDEEPA K and Vedavathi K.N R/a Handhigudda Village, Bylakuppe, Piriyapatna, Mysuru. Have Changed Our Minor Son's Name From AMRUTH S. to DIVEETH. S (01.12.2015) vide Affidavit Dated 23.08.2021 Before Notary Poovaiah BC Madikeri

I, VENU KUMAR E R/a, #147/3, 4th Cross, 1st main Road, K.H. Ranganatha Colony, J.J.R Nagar Bangalore- 560018 Have Changed My Minor Son name from SUJAY KUMAR V To EGGIDI SUJAY KUMAR vide Affidavit Dated 25/07/2022 Before Notary Mamatha .N.K Bangalore

WE, MR. MANJUNATH .M (43 years) AND Mrs. ASHWINI .R (33 years), residing at Old No. 478, New No. 675, Near Muddappa Circle, Dasappanapalya, Chikkabanavara, Bangalore North, Bangalore-560090, have changed our son's name from YASHAS .M to YASHAS AGASTYA .M vide affidavit dated 14-07-2022 sworn to before notary Anuradha .D, Bangalore.

I, RUDRESH. M Residing at #17, SF-1, SS Residency, Nanjappa Layout, Yelachenahalli, Bengaluru-78, have changed my name to VIJAY RAJ RUDRESH, vide affidavit dated 27.07.2022, before notary S. Samuel Solomon, Bengaluru. Henceforth I shall be called VIJAY RAJ RUDRESH, only.

SUMAN, MOTHER/O 14894272N YS/MT, TARUN, Vill- Rajwara, Mundawar, Alwar, Rajasthan, changed name from SUMAN to SUMAN DEVI, 26/07/2022, Notary K.V. Mani, Bangalore

CONNECT

Earn Full / Part Time / Freelance Projects
**UNBOX DIGITAL MARKETING**
PRESENTED BY MEDIA 360 EVENTS
LEARN FROM EXPERTS
NO CODING REQUIRED — Create dynamic and responsive website, apps, blogs and much more
MASTER SOCIAL SELLING — Promote websites, products /services on any online platform Google, Facebook, YouTube, Instagram etc.
NEW WAYS TO EARN — Monetize your learning through working Full/Part Time, Freelance Projects, Affiliate Marketing, YouTube Channel & more
CLASSROOM SESSIONS — 4 days in-person training. Bangalore batch - 20th, 21st, 27th & 28th August. 9am-5pm with Lunch & Hi-Tea
PROGRAM FEES — Rs. 14,399/ + 18% GST
WHO CAN ATTEND? — Employees, Self Employed, Freelancers, Businessmen, Educators or Professionals
To Enroll call: 9611555203 | 7338021446 | 9686681034
LET'S UNPUZZLE THESE TOGETHER

DH ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in


## 'ಮುಸ್ಲಿಮರು ಸಿ.ಎಂ ಆಗಲು ಬಿಡಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದಲ್ಲಿ ಯಾವತ್ತೂ ಮುಸ್ಲಿಮರು ಮುಖ್ಯಮಂತ್ರಿಯಾಗಲು ಬಿಡುವುದಿಲ್ಲ' ಎಂದು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿದ್ದೇವೆ ಎಂದು ಕಾಂಗ್ರೆಸ್ ಶಾಸಕ ಜಮೀರ್ ಅಹಮ್ಮದ್ ಖಾನ್ ಹೋದಲ್ಲೆಲ್ಲ ಹೇಳುತ್ತಿದ್ದಾರೆ. ಜಮೀರ್ ಅವರಿಗೆ ತಾಕತ್ತಿದ್ದರೆ ಮುಸ್ಲಿಮರನ್ನು ಮುಖ್ಯಮಂತ್ರಿ ಮಾಡಿ ತೋರಿಸಲಿ. ಇದು ಹಿಂದೂಗಳೇ ಹೆಚ್ಚಿನ ಸಂಖ್ಯೆಯಲ್ಲಿರುವ ದೇಶ. ಇಲ್ಲಿ ಹಿಂದೂಗಳೇ ಮುಖ್ಯಮಂತ್ರಿ ಆಗಬೇಕು' ಎಂದರು.

'ಮೌಲ್ವಿಗಳು, ಧರ್ಮ ಗುರುಗಳ ಪ್ರಚೋದನೆಯಿಂದ ಜಮೀರ್ ಈ ರೀತಿ ಹೇಳಿಕೆ ನೀಡುತ್ತಿದ್ದಾರೆ. ಹಿಂದೂ– ಮುಸ್ಲಿಮರ ನಡುವೆ ಕೋಮು ಭಾವನೆ ಕೆರಳಿಸುತ್ತಿದ್ದಾರೆ. ಅವರು ಇಂತಹ ಪ್ರಯತ್ನವನ್ನು ತಕ್ಷಣ ನಿಲ್ಲಿಸಬೇಕು ' ಎಂದರು.

ಯುಪಿ ಮಾದರಿ ಬೇಕು: 'ರಾಜ್ಯದಲ್ಲಿ ಹಿಂದುತ್ವ ಪರ ಸಂಘಟನೆಗಳ ಕಾರ್ಯಕರ್ತರ ಹತ್ಯೆ ನಿರಂತರವಾಗಿ ನಡೆಯುತ್ತಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 10–15 ಜನ ಹಿಂದೂ ಕಾರ್ಯಕರ್ತರ ಹತ್ಯೆ ನಡೆದಿತ್ತು. ಈಗಲೂ ನಡೆಯುತ್ತಿದೆ. ಈ ರೀತಿ ದುಷ್ಕೃತ್ಯ ಎಸಗುವವರನ್ನು ನಿಯಂತ್ರಣದಲ್ಲಿಡಲು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನೇತೃತ್ವದ ಸರ್ಕಾರದ ಮಾದರಿ ಅನುಸರಿಸಬೇಕು' ಎಂದು ಒತ್ತಾಯಿಸಿದರು.

## ರಾಷ್ಟ್ರೀಯ ವಿಚಾರ ಸಂಕಿರಣ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ನಾಡಪ್ರಭು ಕೆಂಪೇಗೌಡ ಮಾನವಿಕ ಮತ್ತು ಸಮಾಜ ವಿಜ್ಞಾನಗಳ ಕೇಂದ್ರ ಹಾಗೂ ಇತಿಹಾಸ ವಿಭಾಗದ ಸಹಯೋಗದಲ್ಲಿ ಇದೇ 28 ಮತ್ತು 29ರಂದು ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಮುಂದೂಡಲಾಗಿದೆ.

ಯಲಹಂಕ ನಾಡಪ್ರಭುಗಳ ಸಾಂಸ್ಕೃತಿಕ ಪರಂಪರೆ ಕುರಿತು ಈ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು.

## 'ಗೃಹ ಸಚಿವರಿಗೆ ಪಕ್ಷ ಮುಖ್ಯವಾಗಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾರಿ ನಿರ್ದೇಶನಾಲಯದ (ಇಡಿ) ವಿಚಾರಣೆ ಮುಂದುವರಿಸಿ, ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಕೇಂದ್ರ ಸರ್ಕಾರ ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿ ರೇಸ್ ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದ ಗಾಂಧಿ ಪ್ರತಿಮೆ ಎದುರು ಕೆಪಿಸಿಸಿ ವತಿಯಿಂದ ಬುಧವಾರ ಕೂಡಾ ಮೌನ ಪ್ರತಿಭಟನೆ ನಡೆಯಿತು.

ಈ ವೇಳೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್, 'ಒಬ್ಬ ಗೃಹ ಸಚಿವ, ಪಕ್ಷ ಎಂದು ತೆಗೆದುಕೊಂಡರೆ ರಾಜ್ಯ ಉಳಿಯಲು ಸಾಧ್ಯವಿಲ್ಲ' ಎಂದರು. 'ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಹಿಂದೆ ಹಿಜಾಬ್ ಹಿಂದಿನ ಶಕ್ತಿಗಳಿವೆ' ಎಂಬ ಗೃಹ ಸಚಿವರ ಹೇಳಿಕೆಗೆ ಅವರು ಈ ರೀತಿ ಪ್ರತಿಕ್ರಿಯಿಸಿದರು.

'ಈ ಘಟನೆಯ ಹಿಂದೆ ಯಾರಿದ್ದಾರೆಂದು ಡಿಜಿಪಿ ಅಥವಾ ಎಸ್‌ಪಿ ಹೇಳಬೇಕು. ಇಂಥ ಹತ್ಯೆಗಳು ರಾಜಕೀಯ ಕಾರಣಕ್ಕೆ ನಡೆಯಿತಾ, ವೈಯಕ್ತಿಕ ದ್ವೇಷವೇ, ಬೇರೆ ಏನಾದರೂ ಉದ್ದೇಶ ಇತ್ತೇ ಎಂದು ಪೊಲೀಸ್ ಅಧಿಕಾರಿಗಳು ಪ್ರಮಾಣೀಕರಿಸಬೇಕು' ಎಂದು ಶಿವಕುಮಾರ್ ಅವರು ಹೇಳಿದರು.

'ಸುಮ್ಮನೆ ಬಾಳೆಹಣ್ಣು ತಿಂದು ಸಿಪ್ಪೆನಾ ಬೇರೆಯವರ ಬಾಯಿಗೆ ಅಂಟಿಸುವ ಪ್ರಯತ್ನ ಮಾಡಬಾರದು. ತನಿಖೆ ನಡೆಯಲಿ, ಆರೋಪಿಗಳನ್ನು ಬಂಧಿಸಲಿ, ಸತ್ಯಾಂಶ ಹೊರಗೆ ಬರಲಿ. ಇದರ ಹಿಂದೆ ಯಾರೇ ಇದ್ದರೂ ಕಾನೂನು ಕ್ರಮ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದ ಅವರು, 'ಕಾನೂನು ಸುವ್ಯವಸ್ಥೆ, ಗೃಹ ಸಚಿವ, ಸರ್ಕಾರದ ವೈಫಲ್ಯವೇ ಈ ಘಟನೆಗೆ ಕಾರಣ' ಎಂದೂ ಅವರು ದೂರಿದರು.

'ಪ್ರವೀಣ್ ಕೊಲೆಯ ಹಿಂದೆ ಕಾಂಗ್ರೆಸ್ ಬೆಂಬಲಿತ ಮತಾಂಧ ಶಕ್ತಿಗಳು ಇವೆ' ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿದ ಶಾಸಕ ಕೃಷ್ಣ ಬೈರೇಗೌಡ, 'ತನಿಖೆಗೂ ಮೊದಲೇ ಬಣ್ಣ ಕಟ್ಟುವುದು ಸೂಕ್ತವಲ್ಲ. ಬಿಜೆಪಿಯವರು ಧರ್ಮದ ಹೆಸರಿನಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ' ಎಂದು ಶಿವಕುಮಾರ್ ಅವರು ಆರೋಪಿಸಿದರು.



### ಶುಭ ಹಾರೈಕೆ

ಕೆ.ಆರ್.ಐ.ಡಿ.ಎಲ್ ಅಧ್ಯಕ್ಷ ಎಂ.ರುದ್ರೇಶ್ ಅವರ ಜನ್ಮದಿನದ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಶುಭ ಹಾರೈಸಿದರು

## ರಸ್ತೆ ಗುಂಡಿ: ವರದಿ ಸಲ್ಲಿಕೆಗೆ ಸಮಯಾವಕಾಶ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ರಸ್ತೆ ಗುಂಡಿ ಮುಚ್ಚುವ ಕಾರ್ಯಕ್ಕೆ ಸಂಬಂಧಿಸಿದ ವಸ್ತುಸ್ಥಿತಿ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಲು ಆಗಸ್ಟ್ 3ರವರೆಗೆ ಕಾಲಾವಕಾಶ ನೀಡಲಾಗಿದೆ.

ವಿಜಯನ್ ಮೆನನ್ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿದ್ದು, ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲ ವಿ.ಶ್ರೀನಿಧಿ, 'ರಸ್ತೆ ಗುಂಡಿ ಮುಚ್ಚುವ ಕಾರ್ಯ ಕುರಿತಂತೆ ವಸ್ತುಸ್ಥಿತಿ ವರದಿ ಸಲ್ಲಿಸಲು ಹೈಕೋರ್ಟ್ ನಿರ್ದೇಶನದ ಅನುಸಾರ ಅನುಪಾಲನಾ ವರದಿ ಸಿದ್ಧವಿದೆ. ಅದನ್ನು ಸಲ್ಲಿಸಲು ಸ್ವಲ್ಪ ಕಾಲಾವಕಾಶಬೇಕು' ಎಂದು ಮನವಿ ಮಾಡಿದರು.

'ಆಗಸ್ಟ್ 3ರೊಳಗೆ ಅನುಪಾಲನಾ ವರದಿ ಸಲ್ಲಿಸಬೇಕು. ಆ ವರದಿಗೆ ಆಕ್ಷೇಪಣೆ ಇದ್ದಲ್ಲಿ ಅರ್ಜಿದಾರರು ಒಂದು ವಾರದಲ್ಲಿ ಸಲ್ಲಿಸಬೇಕು' ಎಂದು ನ್ಯಾಯಪೀಠ ನಿರ್ದೇಶಿಸಿ ವಿಚಾರಣೆಯನ್ನು ಆಗಸ್ಟ್ 11ಕ್ಕೆ ಮುಂದೂಡಿದೆ.

### ಆರೋಪಿಗಳನ್ನು ಬಂಧಿಸಿದ ಪೊಲೀಸರು

# 20 ದ್ವಿಚಕ್ರ ವಾಹನ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ಠಾಣೆಗಳ ಪೊಲೀಸರು ಪ್ರತ್ಯೇಕವಾಗಿ ಕಾರ್ಯಾಚರಣೆ ನಡೆಸಿ, ಕಳವು ಮಾಡಲಾಗಿದ್ದ 20 ದ್ವಿಚಕ್ರ ವಾಹನ ವಶಕ್ಕೆ ಪಡೆದಿದ್ದಾರೆ.

ನಾಗರಬಾವಿಯ ಎನ್‌ಜಿಇಎಫ್ ಲೇಔಟ್‌ನ ಚಿಕ್ಕತಿಮ್ಮಯ್ಯ ಕಾಂಪೌಂಡ್‌ನ ಡಿ.ಆರ್.ಗಣೇಶ ಹಾಗೂ ವಿನಾಯಕ ಲೇಔಟ್‌ನ ಮಾದೇಶನನ್ನು ಅನ್ನಪೂರ್ಣೇಶ್ವರಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳು ಕಳವು ಮಾಡಿದ್ದ 10 ದ್ವಿಚಕ್ರ ಹಾಗೂ 9 ಮೊಬೈಲ್ ವಶಕ್ಕೆ ಪಡೆದಿದ್ದಾರೆ.

ಸೋಲದೇವನಹಳ್ಳಿಯ ಪೊಲೀಸರು ಬಾಲಕನ ಮಾಹಿತಿ ಆಧರಿಸಿ ₹5.56 ಲಕ್ಷ ಮೌಲ್ಯದ 10 ದ್ವಿಚಕ್ರ ವಾಹನ ವಶಕ್ಕೆ ಪಡೆದಿದ್ದಾರೆ. ಸೋಲದೇವನಹಳ್ಳಿ, ದಾಬಸ್‌ಪೇಟೆ, ಚಳ್ಳಕೆರೆ, ಹಿರಿಯೂರು, ಮಾಗಡಿ, ಚಿತ್ರದುರ್ಗ, ಬ್ಯಾಡರಹಳ್ಳಿ, ತುಮಕೂರು ಕ್ಯಾತ್ಸಂದ್ರದಲ್ಲಿ ಆರೋಪಿಗಳು ಬೈಕ್ ಕಳವು ಮಾಡಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

### ಬೀಗ ಹಾಕಿದ ಮನೆಗಳಿಗೆ ಕನ್ನ

ಅಪರಾಧ ಸುದ್ದಿ

ಬೆಂಗಳೂರು: ಬೀಗ ಹಾಕಿದ ಮನೆಗಳನ್ನೇ ಗುರುತಿಸಿ, ಕಳವು ಮಾಡುತ್ತಿದ್ದ ಆರೋಪಿಯನ್ನು ಗೋವಿಂದರಾಜನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಂಧಿತನಿಂದ 157 ಗ್ರಾಂ ಚಿನ್ನಾಭರಣ, 1 ಕೆ.ಜಿ. 424 ಗ್ರಾಂ ಬೆಳ್ಳಿಯ ಆಭರಣ ವಶಕ್ಕೆ ಪಡೆಯಲಾಗಿದೆ. ಮನೆಯೊಂದರಲ್ಲಿ ಗೃಹಿಣಿ ಟೇಬಲ್ ಮೇಲೆ ಮಾಂಗಲ್ಯ ಸರವಿಟ್ಟು ಸ್ನಾನಕ್ಕೆ ತೆರಳಿದ್ದರು. ಆರೋಪಿಯು ಮನೆಯ ಬಾಗಿಲು ಒಡೆದು ಸರ ಕಳವು ಮಾಡಿದ್ದ. ಗೃಹಿಣಿ ನೀಡಿದ ದೂರು ಆಧರಿಸಿ ತನಿಖೆ ನಡೆಸಿದ ಪೊಲೀಸರು ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತ ಆರೋಪಿಯು ಗೋವಿಂದರಾಜನಗರ, ಮಾಗಡಿ ರಸ್ತೆ, ಅನ್ನಪೂರ್ಣೇಶ್ವರಿ ನಗರ, ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಿರಂತರ ಕಳವು ನಡೆಸುತ್ತಿರುವುದು ತನಿಖೆಯಿಂದ ಪತ್ತೆಯಾಗಿದೆ. ಒಟ್ಟು ₹ 9 ಲಕ್ಷ ಮೌಲ್ಯದ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ.

## ಸೆಪ್ಟೆಂಬರ್‌ನಲ್ಲಿ ಮಂಥನ ಶಿಬಿರ

ಬೆಂಗಳೂರು: ನಗರದಲ್ಲಿ ಸೆಪ್ಟೆಂಬರ್ 8 ಮತ್ತು 9 ರಂದು ನಡೆಯಲಿರುವ 2 ದಿನಗಳ ಮಂಥನ ಶಿಬಿರ ಹಾಗೂ 41 ನೇ ಸಾರಿಗೆ ಅಭಿವೃದ್ಧಿ ಮಂಡಳಿ ಸಭೆಯ ಮೇಲ್ವಿಚಾರಣೆಗೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೇಂದ್ರ ರಸ್ತೆ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಸಚಿವಾಲಯ ಹಮ್ಮಿಕೊಂಡಿರುವ 'ಮಂಥನ' ರಾಷ್ಟ್ರೀಯ ಸಮ್ಮೇಳನದ ಕುರಿತು ಕೇಂದ್ರ ರಸ್ತೆ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರು ನಡೆಸಿದ ವಿಡಿಯೊ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದರು.

ಮೋಟಾರು ವಾಹನಗಳ ಕಾಯ್ದೆಯ ಅನುಷ್ಠಾನದಲ್ಲಿರುವ ಕೆಲವು ಸಮಸ್ಯೆಗಳಿಗೆ ಪರಿಹಾರಗಳನ್ನು ಮಂಥನ ಶಿಬಿರದಲ್ಲಿ ಕಂಡುಕೊಳ್ಳಲು ಸಾಧ್ಯವಾಗಲಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಮನೆ ಬಾಗಿಲಿಗೆ ಹಂಚಿಕೆ; ₹25, ₹10 ದರ ನಿಗದಿ

# 10 ಲಕ್ಷ ರಾಷ್ಟ್ರಧ್ವಜ ಹಾರಿಸುವ ಗುರಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ 'ಹರ್‌ಘರ್ ತಿರಂಗಾ' ಕಾರ್ಯಕ್ರಮದಡಿ ಕನಿಷ್ಠ 10 ಲಕ್ಷ ರಾಷ್ಟ್ರಧ್ವಜ ಹಾರಿಸುವ ಗುರಿ ಹೊಂದಲಾಗಿದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬಿಬಿಎಂಪಿಗೆ ಧ್ವಜಗಳನ್ನು ಸರಬರಾಜು ಮಾಡಲಾಗುತ್ತದೆ. ₹25 ಹಾಗೂ ₹10 ಎರಡು ದರದಲ್ಲಿ ನಾಗರಿಕರು ಧ್ವಜಗಳನ್ನು ಖರೀದಿಸಬಹುದು. ನಮ್ಮದು ಎಂಬ ಭಾವನೆ ಬರಲಿ ಎಂಬ ಕಾರಣಕ್ಕೆ ದರ ನಿಗದಿ ಮಾಡಲಾಗಿದೆ' ಎಂದು ಸುದ್ದಿಗಾರರಿಗೆ ಬುಧವಾರ ವಿವರ ನೀಡಿದರು.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಎಲ್ಲ ಕಚೇರಿಗಳಲ್ಲಿ ವಿಶೇಷ ಆಚರಣೆ ಮಾಡಲು ನಿರ್ಧರಿಸಲಾಗಿದೆ. ಈ ಸಂಬಂಧ ವಿಶೇಷ ಕವರ್ ಅನ್ನು ಬಿಬಿಎಂಪಿ ಹೊರತರುತ್ತಿದೆ. ವಿಶೇಷ ಸ್ಟಿಕರ್, ಬ್ಯಾನರ್, ಎಲ್‌ಇಡಿಗಳನ್ನು ವಿನ್ಯಾಸಗೊಳಿಸಿ ಪ್ರದರ್ಶನ ಮಾಡಲಾಗುತ್ತದೆ. ಆ.10ರೊಳಗೆ ಕಾರ್ಯಕ್ರಮ ಪಟ್ಟಿ, ವಿವರಣೆ ಪ್ರಕಟಿಸಲಾಗುತ್ತದೆ ಎಂದರು.

ವಲಯವಾರು ವಾರ್ಡ್‌ಮಟ್ಟದಲ್ಲಿ ಎಲ್ಲ ಮನೆಗಳಿಗೂ ಧ್ವಜಗಳನ್ನು ವಿತರಿಸುವ ಕಾರ್ಯವನ್ನು ಸಹಾಯಕ ಎಂಜಿನಿಯರ್, ಕಂದಾಯ ನಿರೀಕ್ಷಕರಿಗೆ ವಹಿಸಲಾಗಿದೆ. ಅವರು ತಮ್ಮ ವ್ಯಾಪ್ತಿಯ ಮನೆಗಳಿಗೆ ಧ್ವಜಗಳನ್ನು ತಲುಪಿಸಬೇಕು. ಜನರು ₹25 ಅಥವಾ ₹10ರ ದರದ ಧ್ವಜವನ್ನು ಕೇಳಿದರೆ ಅವರಿಗೆ ನೀಡಬೇಕು. ಒಟ್ಟು ಹಣವನ್ನು ಅವರು ವಲಯ ಆಯುಕ್ತರ ಕಚೇರಿಯಲ್ಲಿ ಸಂದಾಯ ಮಾಡಬೇಕು. ಬಿಬಿಎಂಪಿ ಎಲ್ಲವನ್ನೂ ಒಟ್ಟುಗೂಡಿಸಿ ಸರ್ಕಾರಕ್ಕೆ ತಲುಪಿಸುತ್ತದೆ ಎಂದರು.

'ಹರ್ ಘರ್ ತಿರಂಗಾ'ದಡಿ ಆ.13ರಿಂದ 15ರವರೆಗೆ ರಾಷ್ಟ್ರಧ್ವಜವನ್ನು ಎಲ್ಲರೂ ಹಾರಿಸಬಹುದು. ಅದಕ್ಕೆ ಕೆಲವು ನಿಯಮಗಳಿವೆ. ಅವುಗಳ ಬಗೆಗೂ ಜನರಿಗೆ, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಅಪಾರ್ಟ್‌ಮೆಂಟ್‌ಗಳವರಿಗೆ ಮಾಹಿತಿ ನೀಡಲಾಗುತ್ತದೆ. ಇದರ ಸಂಪೂರ್ಣ ನಿರ್ವಹಣೆಯನ್ನು ಆಡಳಿತ ವಿಭಾಗದ ವಿಶೇಷ ಆಯುಕ್ತರಿಗೆ ನೀಡಲಾಗಿದೆ' ಎಂದು ಹೇಳಿದರು.

ಬಿಬಿಎಂಪಿಯಲ್ಲಿರುವ ಎಲ್ಲ 16 ಸಾವಿರ ಪೌರಕಾರ್ಮಿಕರು ತಲಾ ₹10ರ ಧ್ವಜವನ್ನು ಪಡೆಯಲು ಸಮ್ಮತಿಸಿದ್ದಾರೆ. ಇವರಲ್ಲದೆ ನಮ್ಮ ಎಲ್ಲ ಸಿಬ್ಬಂದಿಯೂ ಖರೀದಿಸಲಿದ್ದಾರೆ. ಬಿಬಿಎಂಪಿಯಲ್ಲೇ ಸುಮಾರು 20 ಸಾವಿರ ಧ್ವಜ ಖರೀದಿಯಾಗಲಿದೆ ಎಂದರು.

'ಧರ್ಮ, ಜಾತಿ ಎಲ್ಲಕ್ಕಿಂತ ರಾಷ್ಟ್ರ, ರಾಷ್ಟ್ರಧ್ವಜ ದೊಡ್ಡದು. ಇದನ್ನು ನಮ್ಮ ಸಂವಿಧಾನವೇ ಹೇಳಿದೆ. ಜಾಗದ ಮಾಲೀಕತ್ವದ ಪ್ರಶ್ನೆ ಇದರಲ್ಲಿ ಬರುವುದೇ ಇಲ್ಲ, ಯಾವುದೇ ಕಟ್ಟಡ, ಮೈದಾನ 'ಇದಕ್ಕೆ ಹೊರತಲ್ಲ' ಎಂದು ಈದ್ಗಾ ಮೈದಾನ ವಿವಾದದ ಪ್ರಶ್ನೆಗೆ ಉತ್ತರಿಸಿದರು.

ಪಿಒಪಿ ಗಣಪತಿ ಮೂರ್ತಿಗಳನ್ನು ಬಳಸುವಂತಿಲ್ಲ. ಈ ಬಗ್ಗೆ ಸೂಕ್ತ ಮಾಹಿತಿ, ನಿಯಮಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೀಡಬೇಕಿದೆ ಎಂದರು.

### ಎಲ್ಲ ಕಟ್ಟಡಗಳಲ್ಲೂ ಕಡ್ಡಾಯ

'ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2 ಲಕ್ಷ ಧ್ವಜ ಈಗಾಗಲೇ ಸರಬರಾಜು ಆಗಿದೆ. ಇವುಗಳನ್ನು ವಲಯಗಳ ಜಂಟಿ ಆಯುಕ್ತರಿಗೆ ಮರುವಿತರಣೆ ಮಾಡಲಾಗಿದೆ. ಅವರು ಮನೆಮನೆಗಳಿಗೆ ತಲುಪಿಸುವ ವ್ಯವಸ್ಥೆ ಮಾಡಲಿದ್ದಾರೆ' ಎಂದು ಬಿಬಿಎಂಪಿ ಆಡಳಿತ ವಿಭಾಗದ ವಿಶೇಷ ಆಯುಕ್ತ ರಂಗಪ್ಪ ಹೇಳಿದರು.

'ಶಾಲೆ-ಕಾಲೇಜು, ಚರ್ಚ್, ಮಸೀದಿ, ಮದರಸಾ ಸೇರಿ ಯಾವುದೇ ಸಂಸ್ಥೆಗಳು ಸರ್ಕಾರದಿಂದ ಅನುದಾನ ಪಡೆಯುತ್ತಿದ್ದರೆ ಆಯಾ ಕಟ್ಟಡಗಳ ಮೇಲೆ ರಾಷ್ಟ್ರೀಯ ಧ್ವಜ ಹಾರಿಸುವುದು ಕಡ್ಡಾಯ. ಇದು ಎಲ್ಲರ ಸಂವಿಧಾನ ಹಕ್ಕೂ ಹೌದು. ಅದು ಆಗದಿದ್ದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ. ಇದನ್ನು ವಲಯಗಳ ಜಂಟಿ ಆಯುಕ್ತರು ನಿರ್ವಹಣೆ ಮಾಡಲಿದ್ದಾರೆ' ಎಂದರು.

### ಮೇಲ್ಸೇತುವೆ: ಶೀಘ್ರ ತೀರ್ಮಾನ

ಈಜಿಪುರ ಮೇಲ್ಸೇತುವೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ಆದೇಶದಂತೆ ಮತ್ತೊಮ್ಮೆ ಗುತ್ತಿಗೆದಾರರೊಂದಿಗೆ ಮಾತುಕತೆ ನಡೆಸಿ, 9 ತಿಂಗಳಲ್ಲಿ ಕಾಮಗಾರಿ ನಡೆಸಲು ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ಬಹು ಅಂತಸ್ತಿನ ವಾಹನ ನಿಲುಗಡೆ ಪ್ರದೇಶದಲ್ಲಿ ಅನಧಿಕೃತವಾಗಿ ಯಾರಾದರೂ ಬಂದಿದ್ದರೆ ಆ ಬಗ್ಗೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಫ್ರೀಡಂ ಪಾರ್ಕ್ ಹಾಗೂ ಜೆ.ಸಿ. ರಸ್ತೆ ಬಹು ಅಂತಸ್ತಿನ ವಾಹನ ನಿಲುಗಡೆ ಆರಂಭವಾದ ಮೇಲೆ ಸುತ್ತಮುತ್ತಲಿನ ಪ್ರದೇಶದಲ್ಲಿ 'ನೋ ಪಾರ್ಕಿಂಗ್' ಮಾಡಲಾಗುತ್ತದೆ. ಈ ಬಗ್ಗೆ ಪೊಲೀಸ್ ಆಯುಕ್ತರೊಂದಿಗೆ ಚರ್ಚಿಸಲಾಗುವುದು ಎಂದರು.

ಪ್ಲಾಸ್ಟಿಕ್ ನಿಷೇಧ ಜಾರಿಗೆ ತರಲು ಎಲ್ಲೆಡೆ ಇನ್ನಷ್ಟು ಕ್ರಿಯಾತ್ಮಕ ಕಾರ್ಯಾಚರಣೆ ಮಾಡಲಾಗುತ್ತದೆ. ಗಾಂಧಿಬಜಾರ್ ಹಾಗೂ ಕೆ.ಆರ್. ಮಾರುಕಟ್ಟೆಯಲ್ಲಿ ಇಬ್ಬರ ಮೇಲೆ ಹಲ್ಲೆ ನಡೆಸಿದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ ಎಂದರು.

ಪ್ರಧಾನಿ ಹುದ್ದೆಗೆ ಅಭ್ಯರ್ಥಿ ನಾಮನಿರ್ದೇಶನ

## ಇರಾಕ್ ಸಂಸತ್ತಿಗೆ ನುಗ್ಗಿ ಧ್ವಜ ಹಾರಿಸಿದ ಪ್ರತಿಭಟನಕಾರರು

**ಬಾಗ್ದಾದ್ (ಎಪಿ):** ಇರಾಕ್‌ನ ಧರ್ಮಗುರು ಮೊಕ್ತಾದ ಸಾದರ್ ಅವರ ಬೆಂಬಲಿಗರು ಬುಧವಾರ ಇರಾಕ್ ಸಂಸತ್ತಿಗೆ ನುಗ್ಗಿದ್ದಾರೆ.

ಪ್ರತಿಸ್ಪರ್ಧಿ ಬಣದವರು ಪ್ರಧಾನಿ ಹುದ್ದೆಗೆ ಅಭ್ಯರ್ಥಿಯನ್ನು ನಾಮನಿರ್ದೇಶನ ಮಾಡಿದ್ದರಿಂದ ಕೆರಳಿರುವ ಸಾದರ್ ಬೆಂಬಲಿಗರು ಸಂಸತ್ತಿನೊಳಗೆ ನುಗ್ಗಿ ಹಾಡಿ-ಕುಣಿದಾಡಿದ್ದಾರೆ. ಇರಾಕ್‌ನ ಧ್ವಜಗಳನ್ನೂ ಹಾರಿಸಿದ್ದಾರೆ.

ಪೊಲೀಸರು ಅಶ್ರುವಾಯು ಸಿಡಿಸಿದರೂ ಬಗ್ಗದ ಪ್ರತಿಭಟನಕಾರರು ಹಸಿರು ವಲಯದಲ್ಲಿರುವ ಸಂಸತ್ ಪ್ರವೇಶಿಸಿದ್ದಾರೆ ಎಂದು ಸ್ಥಳೀಯ ಮಾಧ್ಯಮವೊಂದು ವರದಿ ಮಾಡಿದೆ.

'ಪ್ರತಿಭಟನಕಾರರು ಕೂಡಲೇ ಸಂಸತ್ತಿನಿಂದ ಹೊರಹೋಗಬೇಕು. ಭದ್ರತಾ ಪಡೆಯವರು ಅವರನ್ನು ಆಚೆ ಹಾಕಬೇಕು' ಎಂದು ಪ್ರಧಾನ ಮಂತ್ರಿ ಮುಸ್ತಾಫಾ ಅಲ್ ಖಾಧಿಮಿ ಆಗ್ರಹಿಸಿದ್ದಾರೆ.

ಅಕ್ಟೋಬರ್‌ನಲ್ಲಿ ನಡೆದಿದ್ದ ಚುನಾವಣೆಯಲ್ಲಿ ಸಾದರ್ ಬಣವು ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆದರೆ ಬಹುಮತಕ್ಕೆ ಅಗತ್ಯವಿರುವಷ್ಟು ಸ್ಥಾನ ಗೆಲ್ಲಲು ಆಗಿರಲಿಲ್ಲ.

'ಅಧಿಕಾರದಲ್ಲಿರುವ ಭ್ರಷ್ಟ ಅಧಿಕಾರಿಗಳ ವಿರುದ್ಧವಾಗಿದ್ದೇನೆ. ಸುದಾನಿಯನ್ನು ಅಭ್ಯರ್ಥಿಯಾಗಿ ನಾಮನಿರ್ದೇಶನ ಮಾಡಿರುವುದನ್ನು ವಿರೋಧಿಸುತ್ತೇನೆ. ಏಕೆಂದರೆ ಆತ ಭ್ರಷ್ಟ' ಎಂದು ಪ್ರತಿಭಟನಾಕಾರ 41 ವರ್ಷದ ದಿನಗೂಲಿ ನೌಕರ ಮೊಹಮ್ಮದ್ ಅಲಿ ಹೇಳಿದರು.



ಮೊಹಮ್ಮದ್ ಸುದಾನಿಯನ್ನು ಪ್ರಧಾನಿ ಸ್ಥಾನಕ್ಕೆ ನಾಮನಿರ್ದೇಶನ ಮಾಡಿರುವುದನ್ನು ವಿರೋಧಿಸಿ ಇರಾಕ್‌ನ ಧರ್ಮಗುರು ಮೊಕ್ತಾದ ಸಾದರ್ ಅವರ ಬೆಂಬಲಿಗರು ಬಾಗ್ದಾದ್‌ನ ತಹ್ರೀರ್ ಚೌಕದಲ್ಲಿ ಪ್ರತಿಭಟಿಸಿದರು. –ಎಎಫ್‌ಪಿ ಚಿತ್ರ

**ಸಂಕ್ಷಿಪ್ತ ಸುದ್ದಿ**

## ವಿವಿಧೆಡೆ ಗುಡುಗು ಸಹಿತ ಮಳೆ

**ಬೆಂಗಳೂರು:** ರಾಜಧಾನಿಯ ವಿವಿಧೆಡೆ ಬುಧವಾರ ಸಂಜೆ ಉತ್ತಮ ಮಳೆ ಸುರಿಯಿತು.

ಇಡೀ ದಿನ ಬಿಸಿಲ ವಾತಾವರಣವಿದ್ದರೂ ಸಂಜೆಯ ವೇಳೆಗೆ ಅಲ್ಲಲ್ಲಿ ಜೋರು ಮಳೆ ಸುರಿದು ತಂಪೆರೆಯಿತು.

ಬನಶಂಕರಿ, ಜಯನಗರ, ಜೆ.ಪಿ. ನಗರ, ಹೊಸಕೆರೆಹಳ್ಳಿ, ಮೆಜೆಸ್ಟಿಕ್, ಮಾಗಡಿ ರಸ್ತೆ, ಮಾರುಕಟ್ಟೆ ಸುತ್ತಮುತ್ತ ಗುಡುಗು ಸಹಿತ ಮಳೆಯಾಗಿದೆ.

ಎಚ್‌ಎಎಲ್, ಶಿವಾಜಿನಗರ, ವಸಂತ ನಗರ, ಮೈಸೂರು ಬ್ಯಾಂಕ್ ವೃತ್ತ, ಎಂ.ಜಿ. ರಸ್ತೆ ಹಾಗೂ ವಿಜಯನಗರದ ಸುತ್ತಮುತ್ತಲಿನ ಪ್ರದೇಶದಲ್ಲಿ ಸಾಧಾರಣ ಮಳೆಯಾಗಿದೆ. ನಗರದಲ್ಲಿ ಒಂದು ವಾರದಿಂದ ಮಳೆ ಬಿಡುವು ನೀಡಿತ್ತು.

ಬುಧವಾರ ಸಂಜೆ ಸುರಿದ ಮಳೆಯಿಂದ ಕಚೇರಿಯಿಂದ ಮನೆಗೆ ದ್ವಿಚಕ್ರ ವಾಹನಗಳಲ್ಲಿ ತೆರಳುತ್ತಿದ್ದವರು ಪರದಾಡಬೇಕಾಯಿತು.

## ಕೆಡ್ಜ್ – ಜಗ್ಸೋಮ್‌ನಿಂದ ಐಬಿಬಿಎ ಕೋರ್ಸ್ ಪ್ರಾರಂಭ

**ಬೆಂಗಳೂರು:** ಕೆಡ್ಜ್ ಬಿಜಿನೆಸ್ ಸ್ಕೂಲ್(ಫ್ರಾನ್ಸ್) ಮತ್ತು ಮುಂಬೈನ ವಿಜಯಭೂಮಿ ವಿಶ್ವವಿದ್ಯಾಲಯದ ಜಗದೀಶ್ ಶೇಠ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ (ಜಗ್ಸೋಮ್) ಸಹಯೋಗದಲ್ಲಿ ನಾಲ್ಕು ವರ್ಷಗಳ ಇಂಟರ್‌ನ್ಯಾಷನಲ್ ಬ್ಯಾಚಲರ್ ಇನ್ ಬಿಜಿನೆಸ್ ಅಡ್ಮಿನಿಸ್ಟ್ರೇಷನ್(ಐಬಿಬಿಎ) ಪದವಿ ಕೋರ್ಸ್ ಪ್ರಾರಂಭಿಸಲಾಗಿದೆ.

'ಪ್ರತಿಯೊಬ್ಬ ವಿದ್ಯಾರ್ಥಿಗೆ ಎರಡು ಸಂಸ್ಥೆಗಳು ಪದವಿ ಪ್ರದಾನ ಮಾಡಲಿವೆ. ಭಾರತೀಯ ವಿದ್ಯಾರ್ಥಿಗಳಿಗೆ ಕಡಿಮೆ ವೆಚ್ಚದಲ್ಲಿ ಎರಡೂ ದೇಶಗಳ ವಿಶ್ವದರ್ಜೆ ಶಿಕ್ಷಣವನ್ನು ಒದಗಿಸುವುದು ಕೆಡ್ಜ್ ಮತ್ತು ಜಗ್ಸೋಮ್‌ನ ಉದ್ದೇಶವಾಗಿದೆ' ಎಂದು ವಿಜಯಭೂಮಿ ವಿಶ್ವವಿದ್ಯಾಲಯದ ಕುಲಪತಿ ಡಾ. ಆತಿಶ್ ಛಟ್ಟೋಪಾಧ್ಯಾಯ ಅವರು ಬೆಂಗಳೂರಿನ ಜಗ್ಸೋಮ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ತಿಳಿಸಿದರು.

'ಅಕ್ಟೋಬರ್ 1ರಿಂದ ಮುಂಬೈನ ವಿಜಯಭೂಮಿ ವಿಶ್ವವಿದ್ಯಾಲಯದ ಜಗ್ಸೋಮ್ ವಿಭಾಗದಲ್ಲಿ ಎರಡು ವರ್ಷಗಳ ಆರಂಭಿಕ ಕಲಿಕೆಗೆ ಮತ್ತು ತದನಂತರ ಫ್ರಾನ್ಸ್ ದೇಶದ ಮಾರ್ಸಲ್‌ನಲ್ಲಿ ಮತ್ತೆರಡು ವರ್ಷಗಳ ಕಲಿಕೆಗೆ ಯೋಜನೆ ರೂಪಿಸಲಾಗಿದೆ' ಎಂದು ಮಾಹಿತಿ ನೀಡಿದರು.

## ಅಜಿತ್ ನೈನನ್‌ಗೆ ಬಾರ್ಟನ್ಸ್ ಪ್ರಶಸ್ತಿ

**ಬೆಂಗಳೂರು:** ಬಾರ್ಟನ್ಸ್ ಜೀವಮಾನ ಸಾಧನೆ ಪ್ರಶಸ್ತಿಗೆ 'ಟೈಮ್ಸ್ ಆಫ್ ಇಂಡಿಯಾ'ದ ವ್ಯಂಗ್ಯಚಿತ್ರಕಾರ ಅಜಿತ್ ನೈನನ್ ಆಯ್ಕೆಯಾಗಿದ್ದಾರೆ.

ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿಯ 15ನೇ ವಾರ್ಷಿಕೋತ್ಸವದ ಅಂಗವಾಗಿ ಆಗಸ್ಟ್ 6ರಂದು ನಡೆಯುವ ಭಾರತೀಯ ವ್ಯಂಗ್ಯಚಿತ್ರಗಳ ಪ್ರದರ್ಶನದ ಉದ್ಘಾಟನೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

1961ರಿಂದ ಉತ್ಕೃಷ್ಟ ಬೆಳ್ಳಿಯ ಕಲಾಕೃತಿಗಳು ಮತ್ತು ವಸ್ತುಗಳಿಗೆ ಹೆಸರಾದ ಬಾರ್ಟನ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಭರತ ಮೆಹತಾ ವಾರ್ಷಿಕ ಜೀವಮಾನ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ. ಮೊದಲನೇ ಬಾರ್ಟನ್ಸ್ ಪ್ರಶಸ್ತಿಗೆ ಅಜಿತ್ ನೈನನ್ ಅವರನ್ನು ಆಯ್ಕೆ ಮಾಡಲಾಗಿದೆ.

## ಗೋಗೇರಿ ಪುಸ್ತಕಕ್ಕೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

**ಬೆಂಗಳೂರು:** ಕರ್ನಾಟಕ ಸಾಹಿತ್ಯ ಅಕಾಡೆಮಿಯ 2013ರ ಲಲಿತ ಪ್ರಬಂಧ ಪುಸ್ತಕ ಬಹುಮಾನಕ್ಕೆ ಎಂ.ಡಿ. ಗೋಗೇರಿ ಅವರ 'ಮಹಾಮಾತೆ ಮಲ್ಲಕ್ಕ ಮತ್ತು ಇತರೆ ಪ್ರಬಂಧಗಳು' ಪುಸ್ತಕ ಆಯ್ಕೆಯಾಗಿದೆ.

ಆಗ ಪುಸ್ತಕಗಳ ಆಯ್ಕೆ ವೇಳೆ ಗೋಗೇರಿ ಹಾಗೂ ಭಾರದ್ವಾಜ ಕೆ. ಆನಂದತೀರ್ಥ ಅವರ 'ಕೌತುಕವಲ್ಲದ ಕ್ಷಣಗಳು' ಪುಸ್ತಕಗಳಿಗೆ ಸಮಾನ ಅಂಕ ನೀಡಲಾಗಿತ್ತು. ಆ ವೇಳೆ ಗೋಗೇರಿ ಅವರ ಪುಸ್ತಕಕ್ಕೆ ಬಹುಮಾನ ನೀಡುವುದೆಂದು ಅಕಾಡೆಮಿಯ ಸಮಿತಿ ನಿರ್ಣಯಿಸಿತ್ತು. ಈ ವಿಚಾರಕ್ಕೆ ಭಾರದ್ವಾಜ ಅವರು ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು.

ಈ ಹಿಂದೆ ನೀಡಿದ್ದ ಪುಸ್ತಕ ಬಹುಮಾನ ರದ್ದುಗೊಳಿಸಿ, ಆಯ್ಕೆಗೆ ಮತ್ತೊಮ್ಮೆ ಉಪ ಸಮಿತಿ ರಚಿಸುವಂತೆ ಕೋರ್ಟ್ ಸೂಚಿಸಿತ್ತು. ಅದರಂತೆ ಅಕಾಡೆಮಿಯ ಅಧ್ಯಕ್ಷ ಬಿ.ವಿ. ವಸಂತಕುಮಾರ್ ನೇತೃತ್ವದಲ್ಲಿ ಜಿನದತ್ತ ಹಡಗಲಿ ಹಾಗೂ ಮಾರ್ಷಲ್ ಶರಾಂ ಅವರನ್ನು ಒಳಗೊಂಡ ಸಮಿತಿ, 'ಮಹಾಮಾತೆ ಮಲ್ಲಕ್ಕ ಮತ್ತು ಇತರೆ ಪ್ರಬಂಧಗಳು' ಪುಸ್ತಕ ಶಿಫಾರಸು ಮಾಡಿತ್ತು. ಇದೇ 25ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ ಉಪಸಮಿತಿ ಶಿಫಾರಸನ್ನು ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

## ಚೆನ್ನೈ: ಶಾಲಾ ಮಕ್ಕಳಿಗೆ ಉಚಿತವಾಗಿ ಉಪಾಹಾರ

**ಚೆನ್ನೈ:** ಒಂದರಿಂದ ಐದನೇ ತರಗತಿವರೆಗಿನ ಮಕ್ಕಳಿಗೆ ಬೆಳಗಿನ ತಿಂಡಿ ಉಚಿತವಾಗಿ ವಿತರಿಸುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯ ಮೊದಲ ಹಂತದ ಅನುಷ್ಠಾನವು ಸೆಪ್ಟೆಂಬರ್ ಮಧ್ಯಭಾಗದಿಂದ ಪ್ರಾರಂಭವಾಗಲಿದೆ. ಇದಕ್ಕಾಗಿ 1,545 ಸರ್ಕಾರಿ ಶಾಲೆಗಳನ್ನು ಆಯ್ಕೆ ಮಾಡಲಾಗಿದೆ. ಮೊದಲ ಹಂತದ ಅನುಷ್ಠಾನದಿಂದ 1.14 ಲಕ್ಷ ಮಕ್ಕಳಿಗೆ ಪ್ರಯೋಜನವಾಗಲಿದೆ.

'ಸೋಮವಾರದಿಂದ ಶುಕ್ರವಾರದವರೆಗೆ ಬೆಳಗಿನ ತಿಂಡಿಯನ್ನು ಬಿಸಿ ಬಿಸಿಯಾಗಿ ನೀಡಲು ಸರ್ಕಾರ ಉದ್ದೇಶಿಸಿದೆ. ಪ್ರತಿ ದಿನವೂ ಬೇರೆ ಬೇರೆ ತಿಂಡಿಗಳನ್ನು, ಅಂದರೆ, ಉಪ್ಪಿಟ್ಟು, ಕಿಚಡಿ, ಪೊಂಗಲ್ ನೀಡಲಾಗುವುದು. ಶುಕ್ರವಾರದಂದು ರವಾ ಕೇಸರಿಬಾತ್ ಅಥವಾ ಶಾವಿಗೆ ಕೇಸರಿಬಾತ್ ನೀಡಲು ಯೋಜಿಸಲಾಗಿದೆ. ಇದಕ್ಕಾಗಿ ಸರ್ಕಾರವು ಒಟ್ಟು ₹33.56 ಕೋಟಿ ಮೀಸಲಿರಿಸಿದೆ' ಎಂದು ಸರ್ಕಾರದ ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ರಾಜ್ಯ ಸರ್ಕಾರಕ್ಕೆ ವರ್ಷ ಪೂರೈಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಪ್ರಮುಖ ಐದು ಘೋಷಣೆಗಳಲ್ಲಿ ಬೆಳಗಿನ ತಿಂಡಿ ನೀಡುವುದೂ ಒಂದಾಗಿತ್ತು.

## ಕಾಂಗ್ರೆಸ್ ವಿರುದ್ಧ ಸಿ.ಎಂ ವಾಗ್ದಾಳಿ

**ಬೆಂಗಳೂರು:** 'ಕಾಂಗ್ರೆಸ್ ಪಕ್ಷವೇ ಭ್ರಷ್ಟಾಚಾರದ ಬ್ರಹ್ಮಾಂಡ ಇದ್ದಂತೆ. ಆ ಪಕ್ಷದ ರಾಷ್ಟ್ರೀಯ ಅಧ್ಯಕ್ಷೆ ಮತ್ತು ಹಿಂದಿನ ಅಧ್ಯಕ್ಷ ಇಬ್ಬರೂ ಭ್ರಷ್ಟಾಚಾರದ ವಿಚಾರದಲ್ಲಿ ತನಿಖೆ ಎದುರಿಸುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹರಿಹಾಯ್ದರು.

ಬಿಜೆಪಿ 'ಜನೋತ್ಸವ' ಅಲ್ಲ 'ಭ್ರಷ್ಟೋತ್ಸವ' ನಡೆಸುತ್ತಿದೆ ಎಂಬ ಕಾಂಗ್ರೆಸ್ ನಾಯಕರ ಟೀಕೆಗೆ ಆಕ್ರೋಶ ವ್ಯಕ್ತಪಡಿಸಿದ ಬೊಮ್ಮಾಯಿ, ರಾಜ್ಯ ಕಾಂಗ್ರೆಸ್‌ನ ಹಾಲಿ ಅಧ್ಯಕ್ಷರೂ ಭ್ರಷ್ಟಾಚಾರ ಪ್ರಕರಣಗಳಲ್ಲಿ ತನಿಖೆ ಎದುರಿಸುತ್ತಿದ್ದಾರೆ ಎಂದರು.

ಹಿಂದೆ ಐದು ವರ್ಷ ಅಧಿಕಾರ ನಡೆಸಿದ ಕಾಂಗ್ರೆಸ್ ಭ್ರಷ್ಟಾಚಾರ ಮಾಡಿದ್ದಕ್ಕೆ ಜನ ಅವರನ್ನು ಎಲ್ಲಿ ಕೂರಿಸಬೇಕೋ ಅಲ್ಲಿ ಕೂರಿಸಿದ್ದಾರೆ. ಅವರ ಅವಧಿಯಲ್ಲಿ ಬೇಕಾದಷ್ಟು ಭ್ರಷ್ಟಾಚಾರಗಳು ನಡೆದಿವೆ, ಅವುಗಳನ್ನು ಮುಂದಿನ ದಿನಗಳಲ್ಲಿ ಬಹಿರಂಗಪಡಿಸುತ್ತೇವೆ ಎಂದು ಕಿಡಿ ಕಾರಿದರು.

## ಒಂದು ಜಿಲ್ಲೆ, ಉತ್ಪನ್ನ ಪ್ರೋತ್ಸಾಹಿಸಲು ಕೂ ಜೊತೆ ಒಪ್ಪಂದ

**ಲಖನೌ:** 'ಒಂದು ಜಿಲ್ಲೆ, ಒಂದು ಉತ್ಪನ್ನ' (ಒಡಿಒಪಿ) ಅಭಿಯಾನವನ್ನು ಸ್ಥಳೀಯ ಭಾಷೆಗಳಲ್ಲಿ ಉತ್ತೇಜಿಸಲು ಉತ್ತರ ಪ್ರದೇಶದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ರಫ್ತು ಉತ್ತೇಜನ ಇಲಾಖೆಯು ಕೂ ಅಪ್ಲಿಕೇಶನ್‌ನೊಂದಿಗೆ ಪರಸ್ಪರ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿದೆ.

ಒಪ್ಪಂದದ ಭಾಗವಾಗಿ, ಕೂ ತನ್ನ ಪ್ಲಾಟ್‌ಫಾರ್ಮ್ ಮೂಲಕ 10 ಭಾಷೆಗಳಲ್ಲಿ ವಿಷಯ ಮತ್ತು ಉತ್ಪನ್ನಗಳ ಮಾಹಿತಿಯನ್ನು ನೀಡುವ ಮೂಲಕ ಅರಿವು ಮೂಡಿಸಲಿದೆ.

ವಿಶೇಷವಾಗಿ ಇಂಗ್ಲಿಷ್ ಮಾತನಾಡದ ಜನರಿಗೆ ಮತ್ತು ಸ್ಥಳೀಯ ಕುಶಲಕರ್ಮಿಗಳು ಭಿನ್ನ ಗ್ರಾಹಕರನ್ನು ತಲುಪಲು ಮತ್ತು ದೇಶದಾದ್ಯಂತ ತಮ್ಮ ವ್ಯಾಪಾರವನ್ನು ವಿಸ್ತರಿಸಲು ಇದು ಸಹಾಯ ಮಾಡಲಿದೆ.

ಉತ್ತರ ಪ್ರದೇಶ ಸರ್ಕಾರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಮತ್ತು ರಫ್ತು ಉತ್ತೇಜನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನವನೀತ್ ಸೆಹಗಲ್ ಹಾಗೂ ಕೂ ಸಹ ಸಂಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಪ್ರಮೇಯ ರಾಧಾಕೃಷ್ಣ ಅವರು ಈ ಒಪ್ಪಂದಕ್ಕೆ ಸಹಿ ಹಾಕಿದರು.

**ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ವಿಳಾಸ:** http://www.odopup.in/en

**ಚಿತ್ರಾವಳಿ**



ಉತ್ತಿಷ್ಠ ಭಾರತದ 8ನೇ ವಾರ್ಷಿಕೋತ್ಸವ ಮತ್ತು ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ನಿರಂತರ ಕಾರ್ಯಕ್ರಮವನ್ನು ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು. ಕಾರ್ಗಿಲ್ ಯುದ್ಧದಲ್ಲಿ ಭಾಗವಹಿಸಿದ್ದ ಕ್ಯಾಪ್ಟನ್ ನವೀನ್ ನಾಗಪ್ಪ ಅವರನ್ನು ಸನ್ಮಾನಿಸಲಾಯಿತು. ಪ್ರೊ.ಸುಂದರರಾಜ್, ನೀರಜ್ ಕಾಮತ್, ಇದ್ದಾರೆ



ಅಕ್ಷಯನಗರದ ಸಂತೋಷ ಕುಮಾರ್ ರಾವ್ ಚಾರಿಟೆಬಲ್ ಟ್ರಸ್ಟ್ ಹಾಗೂ ಕ್ಯಾನ್‌ಫಿನ್ ಹೋಮ್ಸ್ ಲಿಮಿಟೆಡ್‌ನ ಸಹಯೋಗದಲ್ಲಿ ಒಂದು ತಿಂಗಳ ಅವಧಿಯಲ್ಲಿ 55 ಸರ್ಕಾರಿ ಶಾಲೆಗಳ 12 ಸಾವಿರ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಿಸಲಾಯಿತು. ಯು. ಪ್ರಭಾಕರ್ ರಾವ್ ಇದ್ದಾರೆ

**ನಗರದಲ್ಲಿ ಇಂದು**

**ಎಸ್‌ಇಟಿ ಪ್ರತಿಭಾ ಪುರಸ್ಕಾರ:** ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಅತಿಥಿಗಳು: ಟಿ.ಎಚ್. ಅಂಜನಪ್ಪ, ಕೆ. ರಾಮಚಂದ್ರ, ವೂಡೇ.ಪಿ. ಕೃಷ್ಣ, ಆಯೋಜನೆ: ಶೇಷಾದ್ರಿಪುರ ಸಂಯುಕ್ತ ಪದವಿ ಪೂರ್ವ ಕಾಲೇಜು, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಬೆಳಿಗ್ಗೆ 9.30

**ಅರ್ಲಿ ಏಜ್ ಯೂನಿವರ್ಸಿಟಿ (ನರ್ಸರಿ, ಎಲ್‌ಕೆಜಿ, ಯುಕೆಜಿ) ಉದ್ಘಾಟನಾ ಸಮಾರಂಭ:** ಉದ್ಘಾಟನೆ: ಕೃಷ್ಣ ಬೈರೇಗೌಡ, ಯು.ಬಿ. ವೆಂಕಟೇಶ್, ಅತಿಥಿಗಳು: ಎಂ. ರುಕ್ಮಾಂಗದ ನಾಯ್ಡು, ಅಧ್ಯಕ್ಷತೆ: ಬಿ. ಗುರಪ್ಪ ನಾಯ್ಡು, ಆಯೋಜನೆ: ಬಿಜಿಎಸ್ ಬ್ಲೂಮ್‌ಫೀಲ್ಡ್, ಸ್ಥಳ: ಬಸವನಗುಡಿ, ಬೆಳಿಗ್ಗೆ 9.30

**84ನೇ ವರ್ಷದ ಭೀಮನ ಅಮಾವಾಸ್ಯೆ ಪ್ರಯುಕ್ತ ದೊಡ್ಡ ಮಾವಳ್ಳಿ ಬನಶಂಕರಿದೇವಿ ಅಮ್ಮನವರ ವಿಶೇಷ ಪೂಜೆ:** ಅತಿಥಿಗಳು: ಕೆ. ನಾರಾಯಣಸ್ವಾಮಿ, ಉದಯ್ ಗರುಡಾಚಾರ್, ಆರ್.ವಿ. ದೇವರಾಜ್, ಎಂ.ಡಿ. ಲಕ್ಷ್ಮೀನಾರಾಯಣ್, ಆಯೋಜನೆ: ಬನಶಂಕರಿ ದೇವಸ್ಥಾನದ ಸೇವಾ ಟ್ರಸ್ಟ್, ಸ್ಥಳ: ದೊಡ್ಡಮಾವಳ್ಳಿ.

**ಅಂತರ ಕಾಲೇಜು ಸಾಂಸ್ಕೃತಿಕ ಉತ್ಸವ: ಆಯೋಜನೆ ಮತ್ತು ಸ್ಥಳ:** ದಯಾನಂದ ಸಾಗರ್ ಬ್ಯುಸಿನೆಸ್ ಅಕಾಡೆಮಿ, ಉದಯಪುರ, ಕನಕಪುರ ಮುಖ್ಯ ರಸ್ತೆ.

**ಜರ್ನಲಿಸ್ಟ್‌ಗಳಿಗಾಗಿ ಪರ್ಯಾಯ ಜೀವನೋಪಾಯ ಸಾಧ್ಯತೆಗಳ ಕುರಿತು ಎರಡು ದಿನಗಳ ಕಾರ್ಯಾಗಾರ:** ಉದ್ಘಾಟನೆ: ನಾಗೇಶ ಹೆಗಡೆ, ಅಧ್ಯಕ್ಷತೆ: ಆರ್. ಶ್ರೀಧರ್, ಅತಿಥಿಗಳು: ರಾಘವೇಂದ್ರ ಕೆ. ತೊಗರ್ಸಿ, ಮಾಲತಿ ಭಟ್, ಆಯೋಜನೆ: ಬದುಕು ಸೆಂಟರ್ ಫಾರ್ ಲೈವ್ಲಿಹುಡ್ಸ್ ಲರ್ನಿಂಗ್, ಸ್ಥಳ: ಪ್ರೆಸ್ ಕ್ಲಬ್, ಬೆಳಿಗ್ಗೆ 10.30

**ನೂಪುರ ನಿರಂತರ ವಾರ್ಷಿಕ ನೃತ್ಯ ಸಮಾರಂಭ: ಭರತನಾಟ್ಯ ಪ್ರಸ್ತುತಿ:** ಕಾವ್ಯ ದಿಲೀಪ್ ಮತ್ತು ವಿದ್ಯಾರ್ಥಿನಿಯರು, ಉಪಸ್ಥಿತಿ: ವಿ.ಸೋಮಣ್ಣ, ಅರುಣ ಸೋಮಣ್ಣ, ವೈ.ಕೆ. ಸಂಧ್ಯಾ ಶರ್ಮಾ, ಆಯೋಜನೆ: ರಚನಾ ಡಾನ್ಸ್ ಅಕಾಡೆಮಿ, ಸ್ಥಳ: ಸೇವಾಸದನ ಸಭಾಂಗಣ, ಮಲ್ಲೇಶ್ವರ, ಸಂಜೆ 4

**ಸುವರ್ಣ ಮಹೋತ್ಸವದ ಉಪನ್ಯಾಸ ಮಾಲೆ:** ಉಪನ್ಯಾಸ: ಎಸ್.ಎನ್. ಶ್ರೀಧರ್, ಆಯೋಜನೆ: ಕನ್ನಡ ಸಂಘ, ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಹೊಸೂರು, ಸಂಜೆ 4.30

**ಗೋಪಿಗೀತ–ಭಾಗವತ ಧಾರ್ಮಿಕ ಪ್ರವಚನ:** ಪ್ರಸ್ತುತಿ: ದ್ವೈಪಾಯನಾಚಾರ್, ಭಜನೆ: ಆದಿಶಕ್ತಿ ಮಹಿಳಾ ಸಂಘ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಕನ್ನಿಕಾ ಪರಮೇಶ್ವರಿ ದೇವಸ್ಥಾನ, ರಾಜಾಜಿನಗರ, ಸಂಜೆ 6

**ಲೈಂಗಿಕ ಅಲ್ಪಸಂಖ್ಯಾತರ ಕುರಿತು ಉಪನ್ಯಾಸ:** ಉಪನ್ಯಾಸ- ಮಹೇಶ್ವರಿ ಪಟೇಲ್, ಅತಿಥಿಗಳು: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ, ಸಭಾಂಗಣ, ಹೊಂಬೇಗೌಡನಗರ, ವಿಲ್ಸನ್ ಗಾರ್ಡನ್, ಸಂಜೆ 6.30



ಪ್ರಣವಾಂಜಲಿ ಅಕಾಡೆಮಿ ಫಾರ್ ಪರ್ಫಾಮಿಂಗ್ ಆರ್ಟ್ಸ್ ಸಂಸ್ಥೆಯ ವಿದ್ಯಾರ್ಥಿಗಳು ಮತ್ತು ಆದ್ಯ ಮಯ್ಯ

**ಭರತನಾಟ್ಯ ಪ್ರದರ್ಶನ:** ಪ್ರಸ್ತುತಿ: ಪ್ರಣವಾಂಜಲಿ ಅಕಾಡೆಮಿ ಫಾರ್ ಪರ್ಫಾಮಿಂಗ್ ಆರ್ಟ್ಸ್ ಸಂಸ್ಥೆಯ ವಿದ್ಯಾರ್ಥಿಗಳು ಮತ್ತು ಆದ್ಯ ಮಯ್ಯ, ನಿರ್ದೇಶನ: ಪವಿತ್ರಾ ಪ್ರಶಾಂತ್, ಆಯೋಜನೆ ಮತ್ತು ಸ್ಥಳ: ನಂಜನಗೂಡ ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ, 7.30

### ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 02–ಎಕ್ಸ್‌ಇಎನ್–ಡಬ್ಲ್ಯುಎಸ್–ಯುಬಿಎಲ್‌ಎಸ್2022–23 ದಿನಾಂಕ : 25–07–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕೆಲಸದ ಹೆಸರು | ಅಂದಾಜು ಮೌಲ್ಯ |
|---|---|
| ಯುಬಿಎಲ್‌ಎಸ್ – ಹುಬ್ಬಳ್ಳಿ ಕಾರ್ಯಾಗಾರದಲ್ಲಿನ ಕ್ಯಾರಿಯೇಜ್ ಫರ್ನಿಶಿಂಗ್ ಶಾಪ್‌ನ ಛಾವಣಿಯ ಲೀಕೇಜ್‌ಗಳು ಮತ್ತು ವ್ಯಾಲಿ ಗಟರ್‌ಗಳ ರಿಪೇರಿ / ಬದಲಾವಣೆ. | ರೂ. 97,07,247.90 |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 25–08–2022 ರಂದು 15:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಕಾರ್ಯನಿರ್ವಾಹಕ ಇಂಜಿನಿಯರ್, ಕ್ಯಾರಿಯೇಜ್ ರಿಪೇರಿ ಕಾರ್ಯಾಗಾರ ಹುಬ್ಬಳ್ಳಿ

ಪಿಯುಬಿ/260/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways SWRRLY SWRRLY

### ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು

ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಕಛೇರಿ, ನಂ.1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ, ಬೆಂಗಳೂರು–560 042.

**ಟೆಂಡರ್‌ನ ಸಂಕ್ಷಿಪ್ತ ಅಧಿಸೂಚನೆ**

ಸಂಖ್ಯೆ: ಎಸ್‌ಟಿಎಸ್/120(21)/2020–21 ದಿನಾಂಕ: 26.07.2022

ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಉಪಯೋಗಕ್ಕೆ 100 ಸಂಖ್ಯೆಯ Floating Stretchers ವನ್ನು ಇಲಾಖೆಯ ಸ್ಪೆಸಿಫಿಕೇಶನ್ ಪ್ರಕಾರ ಸರಬರಾಜು ಮಾಡಲು ಬಿಡ್‌ಗಳನ್ನು ಇ–ಖರೀದಿ ಮುಖಾಂತರ ಸಲ್ಲಿಸಲು ಟೆಂಡರ್ ಕರೆಯಲಾಗಿದೆ.

ಅರ್ಹ ಸರಬರಾಜುದಾರರು ಇ–ಖರೀದಿ ಮುಖಾಂತರ ಮಾತ್ರ ಬಿಡ್‌ಗಳನ್ನು ಸಲ್ಲಿಸಲು ಕೋರಿದೆ. ಜಾಲತಾಣ: https://eproc.karnataka.gov.in

ಸಹಾಯವಾಣಿ: 080–8046010000, +91–8068948777

(1) ಟೆಂಡರ್ ವಿಚಾರಣೆಗೆ ಅಂತಿಮ ದಿನಾಂಕ ಮತ್ತು ಸಮಯ: ದಿ: 01.08.2022 ಸಂಜೆ 5.30 ಗಂಟೆಯವರೆಗೆ. (2) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: ದಿ: 15.08.2022 ಸಂಜೆ 5.30 ಗಂಟೆಯವರೆಗೆ (3) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: ದಿ: 16.08.2022 ಬೆಳಗ್ಗೆ 11.00 ಗಂಟೆಗೆ. (4) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: ತಿಳಿಸಲಾಗುವುದು.

ಸಹಿ/–
ಪೊಲೀಸ್ ಉಪ ಮಹಾ ನಿರೀಕ್ಷಕರು ಹಾಗೂ
ಟೆಂಡರ್ ಇನ್‌ವೈಟಿಂಗ್ ಅಧಿಕಾರಿ,
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು

ವಾಸಸಂಇ/ವಾ.ಪ್ರ/1527//2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

### ಟೀಂಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395

**ನೋಂದಾಯಿತ ಕಚೇರಿ:** "ಸಲಾರ್‌ಪುರಿಯಾ ಅಸೆಂಟ್", ಕೋರಮಂಗಲ ಇಂಡಸ್ಟ್ರೀಯಲ್ ಲೇಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560 095. ಕರ್ನಾಟಕ, ಭಾರತ

ದೂರವಾಣಿ: 91 80 6824 3000 / ಫ್ಯಾಕ್ಸ್: 91 80 6824 3001

corporateaffairs@teamlease.com, | https://group.teamlease.com/

**30ನೇ ಜೂನ್ 2022ಕ್ಕೆ ಕೊನೆಯಾದ ತ್ರೈಮಾಸಿಕಕ್ಕೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ**

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕೆಗಳು ಲಕ್ಷ ರೂಪಾಯಿಗಳಲ್ಲಿ)

| ವಿವರಗಳು | ಏಕಿಕೃತ | | ಕ್ರೋಡೀಕೃತ | |
|---|---|---|---|---|
| | 30.06.2022ಕ್ಕೆ ಕೊನೆಯಾದ 3 ತಿಂಗಳಿಗೆ | ಹಿಂದಿನ ಅವಧಿಯ 3 ತಿಂಗಳಿಗೆ ಕೊನೆಯಾದ 30.06.2021ಕ್ಕೆ | 30.06.2022ಕ್ಕೆ ಕೊನೆಯಾದ 3 ತಿಂಗಳಿಗೆ | ಹಿಂದಿನ ಅವಧಿಯ 3 ತಿಂಗಳಿಗೆ ಕೊನೆಯಾದ 30.06.2021ಕ್ಕೆ |
| | ಅಪರಿಶೋಧಿತ | ಅಪರಿಶೋಧಿತ | ಅಪರಿಶೋಧಿತ | ಅಪರಿಶೋಧಿತ |
| ಕಾರ್ಯಾಚರಣೆಗಳಿಂದ ಒಟ್ಟು ಆದಾಯ | 163,039.14 | 124,936.88 | 189,165.32 | 138,134.29 |
| ಸದರಿ ಅವಧಿಗೆ ನಿವ್ವಳ ಲಾಭ / (ನಷ್ಟ) (ತೆರಿಗೆಗೆ ಮುನ್ನ, ಅಸಾಮಾನ್ಯ ಮತ್ತು/ಅಥವಾ ಅಸಾಧಾರಣ ಐಟಂಗಳು) | 2,325.48 | 2,443.11 | 2,788.06 | 2,403.56 |
| ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ) (ಅಸಾಮಾನ್ಯ ಮತ್ತು/ ಅಥವಾ ಅಸಾಧಾರಣ ಐಟಂಗಳ ನಂತರ) | 2,329.98 | 2,201.66 | 2,652.12 | 2,691.78 |
| ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)] | 2,318.85 | 2,183.61 | 2,653.87 | 2,674.49 |
| ಪೇಯ್ಡ್–ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.) | 1,709.68 | 1,709.68 | 1,709.68 | 1,709.68 |
| ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು)–ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಷೀಟ್ ಪ್ರಕಾರ | 66,141.89 | 63,728.97 | 67,611.24 | 63,492.89 |
| ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕಿಕರಣಗೊಂಡಿಲ್ಲ) | | | | |
| (ಎ) ಮೂಲ (ರೂ.) | 13.63 | 12.88 | 15.51 | 15.83 |
| (ಬಿ) ಡೈಲ್ಯೂಟೆಡ್ (ರೂ.) | 13.63 | 12.88 | 15.51 | 15.83 |

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, 30ನೇ ಜೂನ್, 2022ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಅಪರಿಶೋಧಿತ ಏಕಿಕೃತ ಮತ್ತು ಕ್ರೋಡೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (https://group.teamlease.com/) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ 30ನೇ ಜೂನ್, 2022ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಲಿಯು 27ನೇ ಜುಲೈ, 2022ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

**ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ನಿರ್ದೇಶಕ ಮಂಡಲಿಗಾಗಿ, ಮತ್ತು ಅದರ ಪರವಾಗಿ**
ಸಹಿ/–
**ಅಶೋಕ್ ಕುಮಾರ್ ನೆಡುರುಮಲ್ಲಿ**
ವ್ಯವಸ್ಥಾಪಕ ನಿರ್ದೇಶಕರು
DIN: 00151814

**ದಿನಾಂಕ:** 27ನೇ ಜುಲೈ, 2022
**ಸ್ಥಳ:** ಬೆಂಗಳೂರು

### (ಜಿಲ್ಲಾ ಪಂಚಾಯತ್), ತೋಟಗಾರಿಕೆ ಇಲಾಖೆ

ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ
(ಜಿಲ್ಲಾ ಪಂಚಾಯತ್), ಪಿ.ಆರ್.ಎಸ್ ತೋಟಗಾರಿಕೆ ಕ್ಷೇತ್ರ,
ನಂದಿ ಕ್ರಾಸ್, ಚಿಕ್ಕಬಳ್ಳಾಪುರ–562103

ದೂ: 08156–295301 ಇ–ಮೇಲ್: ddchikkaballapura@gmail.com

ಸಂ: ತೋಉನಿ:ಜಿಪಂ:ಚಿಪುರ:ವಿನಿ2:20:2022–23 ದಿ: 19.07.2022

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ವಿಷಯ: ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ಚಿಕ್ಕಬಳ್ಳಾಪುರ ರವರ ಕಛೇರಿಯ ಉಪಯೋಗಕ್ಕಾಗಿ ಹೊರಗುತ್ತಿಗೆ ಸಂಸ್ಥೆಯಿಂದ ಬಾಡಿಗೆ ಲಘು ವಾಹನ ಒದಗಿಸುವ ಕುರಿತು.

ಉಲ್ಲೇಖ: (1) ಸರ್ಕಾರದ ಪತ್ರ ಸಂಖ್ಯೆ: ತೋಇ:113;2016, ದಿನಾಂಕ: 20.02.2017. (2) ತೋಇ:ಆಸಿ:ವಿನಿ15:13:14–15, ದಿನಾಂಕ: 03.03.2017 (3) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 30 ಶಿವಾನಿ 2019, ಬೆಂಗಳೂರು, ದಿನಾಂಕ: 31.03.2022.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ಈ ಮೂಲಕ ನೋಂದಾಯಿತ/ಟ್ರಾವಲ್ಸ್ ಏಜೆನ್ಸಿಯವರ ಗಮನಕ್ಕೆ ತರಬಯಸುವುದೇನೆಂದರೆ 2022–23ನೇ ಸಾಲಿಗೆ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ಚಿಕ್ಕಬಳ್ಳಾಪುರ ರವರ ಕಛೇರಿ ಉಪಯೋಕ್ಕಾಗಿ ನಿರ್ದೇಶನ ಮತ್ತು ಆಡಳಿತ ಯೋಜನೆಯಡಿ ಆಗಸ್ಟ್–2022 ರಿಂದ 31 ಮೇ–2023ರ ಮಾಹೆಯವರೆಗೆ ಇಲಾಖೆಯ ವಿವಿಧ ಯೋಜನೆಗಳನ್ನು ಸಮರ್ಪಕವಾಗಿ ಕ್ಷೇತ್ರಮಟ್ಟದಲ್ಲಿ ಅನುಷ್ಠಾನಗೊಳಿಸಲು ಅಧಿಕಾರಿಯವರ ಕಛೇರಿ ಉಪಯೋಗಕ್ಕಾಗಿ ಬಾಡಿಗೆ ಲಘು ವಾಹನವನ್ನು ಮಾಸಿಕ ಆಧಾರದ ಮೇಲೆ ಡಿಸೇಲ್ ಇಂಜಿನ್ ಹೊಂದಿರುವ ಲಘು ವಾಹನ (ಕಾರು)ಗಳ ಮಾದರಿ ಹೊಂದಿರುವ ವಾಹನ ಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ಆಸಕ್ತಿಯುಳ್ಳ ನೋಂದಾಯಿತ/ಟ್ರಾವಲ್ಸ್ ಏಜೆನ್ಸಿಯವರು ಈ ಕಛೇರಿಯಿಂದ **ರೂ.200/–** ಪಾವತಿಸಿ ಟೆಂಡರ್ ಅರ್ಜಿಗಳನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಅರ್ಜಿಗಳನ್ನು ವಿತರಿಸುವ ಪ್ರಾರಂಭ ದಿನಾಂಕ: **20.07.2022.** ಟೆಂಡರ್ ಅರ್ಜಿಗಳನ್ನು ವಿತರಿಸುವ ಕೊನೆಯ ದಿನಾಂಕ: **28.07.2022 ಮಧ್ಯಾಹ್ನ 1.00 ಗಂಟೆವರೆಗೆ.** ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **28.07.2022 ಮಧ್ಯಾಹ್ನ 4.00 ಗಂಟೆ** ಟೆಂಡರ್ ಲಕೋಟೆಗಳನ್ನು ತೆರೆಯುವ ದಿನಾಂಕ: **29.07.2022 ಮಧ್ಯಾಹ್ನ 4.00 ಗಂಟೆ.**

ಸಹಿ/– ತೋಟಗಾರಿಕೆ ಉಪ ನಿರ್ದೇಶಕರು,
ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ

ವಾಸಾಸಂಇ/ ಚಿಕ್ಕಬಳ್ಳಾಪುರ/ ಆರ್.ಓ.ಸಂಖ್ಯೆ 195/ ಎಂ.ಸಿ.ಎ/ 2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

### ಸಾರ್ವಜನಿಕ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, **ಶ್ರೀ ಬಿಜಯ್ ಕುಮಾರ್ ಅಗರ್‌ವಾಲ್** ಬಿನ್ ಶ್ರೀ ಆರ್.ಎಲ್. ಅಗರ್‌ವಾಲ್, **"ಶುಭಚಾಂದಿ ಗೃಹ ನಿರ್ಮಾಣ್ ಪ್ರೈವೇಟ್ ಲಿಮಿಟೆಡ್"**, ಇದರ ಕಾರ್ಪೋರೇಟ್ ಕಛೇರಿ ಸಂಖ್ಯೆ.3, ಸಲಾರ್‌ಪುರಿಯಾ ವಿಂಡ್ಸರ್, 4ನೇ ಮಹಡಿ, ಹಲಸೂರು ರಸ್ತೆ, ಬೆಂಗಳೂರು–560042. (**"ಮಾಲೀಕರು"**) ಇವರ ಮಾಲೀಕತ್ವದ **'ಷೆಡ್ಯೂಲ್'**ನಲ್ಲಿ ವಿವರಿಸಿರುವ ಸ್ಥಿರಾಸ್ತಿಯ ಸ್ವತ್ತು ಮತ್ತು ಇನ್ನು ಮುಂದೆ ಇದನ್ನು **"ಷೆಡ್ಯೂಲ್ ಸ್ವತ್ತು"** ಎಂದು ಕರೆಯಲ್ಪಡುವ, ಈ ಸ್ವತ್ತಿನ ಮಾಲೀಕತ್ವವನ್ನು ನಾವು ತನಿಖೆ ನಡೆಸುತ್ತಿದ್ದೇವೆ. ಸದರಿ ಮಾಲೀಕರು ಷೆಡ್ಯೂಲ್ ಸ್ವತ್ತನ್ನು ಸರ್ಕಾರಿ ಭೂಮಿ ಹರಾಜಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ನೀಡಿದ ಅನುಮತಿಯ ಅನುಸಾರವಾಗಿ ಬೆಂಗಳೂರು ಉತ್ತರ ಉಪವಿಭಾಗದ ಉಪವಿಭಾಗಾಧಿಕಾರಿ ಅವರು ದಿನಾಂಕ: 07.04.2005 ರಂದು ನೆಡೆಸಿದ ಸಾರ್ವಜನಿಕ ಹರಾಜಿನಲ್ಲಿ ಷೆಡ್ಯೂಲ್ ಸ್ವತ್ತನ್ನು ಖರೀದಿಸಿದ್ದಾರೆ ಎಂದು ಮಾಲೀಕರು ತಿಳಿಸಿದ್ದಾರೆ. ಕಂದಾಯ ಇಲಾಖೆ ಬೆಂಗಳೂರು ಇವರು ಮಾಲೀಕರಿಗೆ ದಿನಾಂಕ: 21.09.2015 ರಂದು ಸ್ಥಿರಾಸ್ತಿಯ ಮಾರಾಟದ ಪ್ರಮಾಣ ಪತ್ರವನ್ನು ನೀಡಿದ್ದು, ಇದರ ನೋಂದಣಿ ದಿನಾಂಕ: 01.10.2015 ರ ದಾಸ್ತಾವೇಜು ಸಂಖ್ಯೆ. INR–1–05367–2015–16, ಪುಸ್ತಕ–1, ಸಿ.ಡಿ. ನಂ.INRD153, ಉಪನೋಂದಣಾಧಿಕಾರಿಗಳ ಕಛೇರಿ, ಇಂದಿರಾನಗರ, ಬೆಂಗಳೂರು ಇಲ್ಲಿ ನೋಂದಣಿಯಾಗಿರುವ ಷೆಡ್ಯೂಲ್ ಸ್ವತ್ತಿಗೆ ನಾವೇ ಏಕಮಾತ್ರ ಮಾಲೀಕರಾಗಿರುತ್ತೇವೆ ಹಾಗೂ ಷೆಡ್ಯೂಲ್ ಸ್ವತ್ತನ್ನು ಮಾರುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ಸದರಿ ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ. ಹಾಗೂ ಸದರಿ ಷೆಡ್ಯೂಲ್ ಸ್ವತ್ತು ಎಲ್ಲಾ ಋಣಭಾರ ಅಡಮಾನ, ಭಾಗಾಂಶ, ಬಾಕಿ ದಾವೆಗಳು ಮತ್ತು ಇತರೆ ಯಾವುದೇ ಮೂರನೇ ವ್ಯಕ್ತಿಗಳ ಹಕ್ಕು/ಆಕ್ಷೇಪಣೆಗಳಿಂದ ಮುಕ್ತವಾಗಿದೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಎಲ್ಲಾ ವ್ಯಕ್ತಿಗಳು, ಹಿಂದೂ ಅವಿಭಕ್ತ ಕುಟುಂಬ ಕಂಪನಿಗಳು, ಬ್ಯಾಂಕುಗಳು, ಹಣಕಾಸು ಸಂಸ್ಥೆ(ಗಳು), ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ(ಗಳು), ಸಂಸ್ಥೆಗಳು, ವ್ಯಕ್ತಿಗಳ ಸಂಘ ಅಥವಾ ವ್ಯಕ್ತಿಗಳ ಸಂಸ್ಥೆ, ಸ್ಥಾಪನೆಯಾಗಿರುವುದೊ ಅಥವಾ ಇಲ್ಲದಿರುವುದೋ, ಹಣಕಾಸು ನೀಡಿಕೆದಾರರು ಮತ್ತು/ಅಥವಾ ಸಾಲನೀಡಿಕೆದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧದಲ್ಲಿ ಅಥವಾ ಅದರ ಯಾವುದೇ ಭಾಗ ಅಥವಾ ಅಂಶದ ಸಂಬಂಧದಲ್ಲಿ ಮಾರಾಟ, ವಿನಿಮಯ, ಈಡು, ಪ್ರಭಾರ, ಉಡುಗೊರೆ, ದತ್ತಿ, ಪಿತ್ರಾರ್ಜಿತ, ಉತ್ತರಾಧಿಕಾರ, ಕುಟುಂಬದ ವ್ಯವಸ್ಥೆ/ಒಪ್ಪಂದ, ಅಂತಿಮ ಇಷ್ಟಪತ್ರ, ಅನುಭೋಗದ ಹಕ್ಕು, ಒಡಂಬಡಿಕೆ, ಪರವಾನಗಿ, ಪಾಲು, ಹಂಚಿಕೆ, ಧರಣಾಧಿಕಾರ, ಜಪ್ತಿ, ಅಭಿವೃದ್ಧಿ ಹಕ್ಕು, ಪಾಲುದಾರಿಕೆ, ಹಕ್ಕಿನ ವ್ಯವಸ್ಥೆ, ಲಿಸ್ ಪೆಂಡೆನ್ಸ್, ಯಾವುದೇ ನ್ಯಾಯಾಂಗ/ಅರೆ ನ್ಯಾಯಾಂಗ ಪ್ರಾಧಿಕಾರಿಯ ಡಿಕ್ರಿ ಅಥವಾ ಆದೇಶ, ಮೀಸಲಾತಿ, ಗುತ್ತಿಗೆ/ಒಪ್ಪಂದ, ಪವರ್ ಆಫ್ ಅಟಾರ್ನಿ, ಆಯ್ಕೆ, ಎಫ್‌ಎಸ್‌ಐ/ಎಫ್‌ಎಆರ್ ಕನ್‌ಸಮ್‌ಷನ್, ಪ್ರಥಮ ನಿರಾಕರಣೆ ಹಕ್ಕು, ಮುನ್‌ಕೊಳ್ಳುವಿಕೆ, ಅಥವಾ ಯಾವುದೇ ಸ್ವರೂಪದ ಯಾವುದೇ ಅನುಕೂಲಗಳು, ಆಕ್ಷೇಪಣೆ, ಡಿಮ್ಯಾಂಡ್, ಹಕ್ಕು ಕೇಳಿಕೆ, ಹಕ್ಕು ಬಾಧ್ಯತೆ ಮತ್ತು ಆಸಕ್ತಿ ಹೊಂದಿದ್ದರೆ, ಮೂಲ ದಾಖಲೆ ಪತ್ರಗಳ ಬೆಂಬಲದೊಡನೆ ಸದರಿ ನೋಟೀಸ್ ಪ್ರಕಟವಾದ **15 (ಹದಿನೈದು) ದಿನಗಳ** ಕಾಲಾವಧಿಯ ಒಳಗೆ ಕೆಳಗೆ ತಿಳಿಸಿರುವ ವಿಳಾಸಕ್ಕೆ ಕಳುಹಿಸಬೇಕಾಗಿ ಈ ಮೂಲಕ ಕರೆ ನೀಡಲಾಗಿದೆ. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು ನಿಗದಿತ ಸದರಿ ಕಾಲಾವಧಿಯ ಒಳಗೆ ಬಾರದಿದ್ದರೆ, ಮೇಲೆ ತಿಳಿಸಿರುವ ಮಾಲೀಕರ ಹೊರತಾಗಿ ಬೇರೆಯಾರೂ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಕ್ಕು ಬಾಧ್ಯತೆ, ಹಿತಾಸಕ್ತಿ ಅಥವಾ ಯಾವುದೇ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮನ್ನು ಹೊಂದಿರುವುದಿಲ್ಲವೆಂದು ಭಾವಿಸಲಾಗುವುದು ಮತ್ತು ನಮ್ಮ ಕಕ್ಷಿದಾರರು ಸದರಿ ಮಾಲೀಕರೊಂದಿಗೆ ಉದ್ದೇಶಿತ ವ್ಯವಹಾರ ನಡೆಸಲು ಸ್ವತಂತ್ರರಾಗಿರುವರೆಂದು ತಿಳಿಯಲಾಗುವುದು. ನಿಗದಿತ ಸದರಿ ಕಾಲಾವಧಿ ಮುಗಿದ ನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮುಗಳನ್ನು ನಾವು ಸ್ವೀಕರಿಸುವುದಿಲ್ಲ ಮತ್ತು ಅಂತಹ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮುಗಳು ನಮ್ಮ ಕಕ್ಷಿದಾರರ ಮೇಲೆ ಬಂಧನೆಯಾಗುವುದಿಲ್ಲ.

**ಷೆಡ್ಯೂಲ್ ಸ್ವತ್ತು**

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ವಿಭೂತಿಪುರ ಗ್ರಾಮ, ವಸತಿ ಮುಖ್ಯ/ಪ್ರದೇಶ ಸುಧಾರಣೆ ಪರಿಧಿಯ ಬಳಕೆಯ ಉದ್ದೇಶಕ್ಕಾಗಿ ಪರಿವರ್ತಿತವಾಗಿರುವ, ಇಲ್ಲಿರುವ **ಸರ್ವೆ ನಂ.124 ರ ಜಮೀನಿನ ವಿಸ್ತೀರ್ಣ 6 ಎಕರೆ 21 ಗುಂಟೆಗಳು** (ಒಟ್ಟಾರೆ 7 ಎಕರೆ 36 ಗುಂಟೆಗಳಲ್ಲಿ) ಪ್ರಸ್ತುತ **ಬಿಬಿಎಂಪಿ ಮುನಿಸಿಪಲ್ ಖಾತಾ ಸಂಖ್ಯೆ.28, ಸರ್ವೆ ನಂ.124** ಅನ್ನು ಹೊಂದಿರುವ ಈ ಸ್ವತ್ತಿನ ಚಕ್ಕುಬಂದಿ ಈ ಕೆಳಕಂಡಂತಿರುವುದು:

ಪೂರ್ವದ ಕಡೆಗೆ : ಸರ್ವೆ ನಂ. 125 ರ ಜಮೀನು;
ಪಶ್ಚಿಮದ ಕಡೆಗೆ : ಸರ್ವೆ ನಂ. 124 ರ ಉಳಿಕೆ ಜಮೀನು ಮತ್ತು ಸರ್ವೆ ನಂ. 123ರ ಜಮೀನು;
ಉತ್ತರದ ಕಡೆಗೆ : ರಸ್ತೆ ಮತ್ತು ಸರ್ವೆ ನಂ. 123ರ ಜಮೀನು; ಮತ್ತು
ದಕ್ಷಿಣದ ಕಡೆಗೆ : ಸರ್ವೆ ನಂ. 121 ರ ಜಮೀನು;

**ಸಿ. ಆರ್. ಮುರಳಿಧರನ್,**
ಪಾಲುದಾರರು
**ದುಅ ಅಸೋಸಿಯೇಟ್ಸ್,**
ಅಡ್ವೋಕೇಟ್ಸ್ ಮತ್ತು ಸಾಲಿಸಿಟರ್ಸ್,
130/1, ಎರಡನೇ ಅಂತಸ್ತು, ಹಲಸೂರು ರಸ್ತೆ, ಬೆಂಗಳೂರು–560 042
ದೂ. ಸಂ. 91–80–25588799/25589909
ಇ–ಮೇಲ್: murali@duaassociates.com

ಸ್ಥಳ: ಬೆಂಗಳೂರು
ದಿನಾಂಕ: 28ನೇ ಜುಲೈ, 2022

## ಕುಂಜಿಬೆಟ್ಟು, ಮೌಲ್ಯ ಸ್ವಾಮಿಗೆ ದಿನಕರ ದೇಸಾಯಿ ಕಾವ್ಯ ಪ್ರಶಸ್ತಿ


ಕಾತ್ಯಾಯಿನಿ


ಮೌಲ್ಯ ಸ್ವಾಮಿ

ಅಂಕೋಲಾ: ಡಾ. ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನದಿಂದ ನೀಡುವ 22ನೇ ದಿನಕರ ದೇಸಾಯಿ ಕಾವ್ಯ ಪುರಸ್ಕಾರಕ್ಕೆ ಉಡುಪಿಯ ಡಾ. ಕಾತ್ಯಾಯಿನಿ ಕುಂಜಿಬೆಟ್ಟು ಅವರ 'ಅವನು ಹೆಣ್ಣಾಗಬೇಕು' ಹಾಗೂ ಮೈಸೂರಿನ ಮೌಲ್ಯ ಸ್ವಾಮಿ ಅವರ 'ಸುಮ್ಮನೆ ಬಿದ್ದಿರುವ ಬಿಲ್ಲುಗಳು' ಕೃತಿಗಳು ಆಯ್ಕೆಯಾಗಿವೆ.

ಡಾ. ಜಿ.ಪಿ. ಬಸವರಾಜು, ಸುಬ್ರಾಯ ಮತ್ತಿಹಳ್ಳಿ ಹಾಗೂ ಡಾ. ವಿನಯಾ ಒಕ್ಕುಂದ ಅವರನ್ನೊಳಗೊಂಡ ನಿರ್ಣಾಯಕ ಮಂಡಳಿಯ ತೀರ್ಮಾನದಂತೆ ಈ ಆಯ್ಕೆ ಮಾಡಲಾಗಿದೆ. ಪ್ರತಿ 2 ವರ್ಷಗಳಿಗೆ ಒಮ್ಮೆ ರಾಜ್ಯ ಮಟ್ಟದ ಪುರಸ್ಕಾರ ನೀಡಲಾಗುತ್ತದೆ. ಪುರಸ್ಕಾರದ ಮೊತ್ತ ₹ 25 ಸಾವಿರವಾಗಿದ್ದು, ಪ್ರಶಸ್ತಿ ಪ್ರದಾನ ಸಮಾರಂಭವು ನವೆಂಬರ್‌ನಲ್ಲಿ ಜರುಗಲಿದೆ ಎಂದು ಪ್ರತಿಷ್ಠಾನ ಪ್ರಕಟಣೆಯಲ್ಲಿ ತಿಳಿಸಿದೆ.

### ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು |
|---|---|---|---|---|
| ಕೆಆರ್‌ಎಸ್* | 124.80 | 12,655 | 124.80 | 124.80 |
| ಹಾರಂಗಿ | 2,859 | 2,856.66 | 2,900 | 1,000 |
| ಕಬಿನಿ | 2284.00 | 2,283.66 | 5,348 | 5,000 |
| ಹೇಮಾವತಿ | 2,922 | 2,922.00 | 3,030 | 2,975 |
| ಲಿಂಗನಮಕ್ಕಿ | 1,819 | 1,798 | 7,680 | 6,615 |
| ಸೂಪಾ (ಮೀ) | 564 | 541.78 | 6,191 | 3,732 |
| ಮಾಣಿ | 594 | 584 | 1200 | - |
| ತುಂಗಭದ್ರಾ | 1,633 | 1,632.78 | 33,465 | 44,312 |
| ಮಲಪ್ರಭಾ | 2079.5 | 2,068.90 | 2,755 | 394 |
| ಘಟಪ್ರಭಾ | 2175 | 2,155.41 | 4,692 | 168 |
| ಭದ್ರಾ | 186 | 184 | 9355 | 16,554 |
| ಆಲಮಟ್ಟಿ (ಮೀ) | 519.6 | 518.40 | 29,122 | 13,451 |
| ನಾರಾಯಣಪುರ (ಮೀ) | 492.25 | 491.82 | 20,000 | 17,480 |

* ನೆಲಮಟ್ಟದಿಂದ

### ಮೊಬೈಲ್‌ನಲ್ಲಿ ದಾಖಲೆ ಅಳಿಸಿ ಹಾಕಿರುವ ಶಂಕಿತ ಉಗ್ರರು

# ಪಾಕ್ ವ್ಯಕ್ತಿಗಳಿದ್ದ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಸಕ್ರಿಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಲ್‌ಕೈದಾ' ಉಗ್ರ ಸಂಘಟನೆ ಸೇರಲು ಹೊರಟಿದ್ದ ಶಂಕಿತ ಉಗ್ರರಾದ ಅಖ್ತರ್ ಹುಸೇನ್ ಲಷ್ಕರ್ ಹಾಗೂ ಅಬ್ದುಲ್ ಅಲೀಂ ಮಂಡಲ್‌ನ ವಿಚಾರಣೆ ನಡೆಯುತ್ತಿದ್ದು, ಉಗ್ರ ಚಟುವಟಿಕೆಗೆ ಸಂಚು ರೂಪಿಸುತ್ತಿದ್ದರು ಎಂಬುದಕ್ಕೆ ಕೆಲವು ಪುರಾವೆಗಳು ಸಿಸಿಬಿ ಪೊಲೀಸರಿಗೆ ಲಭಿಸಿವೆ.

ಇಬ್ಬರೂ ಶಂಕಿತರ ಮೊಬೈಲ್‌ನಲ್ಲಿ ರಹಸ್ಯ ಮಾಹಿತಿಗಳು ತನಿಖಾಧಿಕಾರಿಗಳಿಗೆ ಸಿಕ್ಕಿದ್ದು, ಇನ್ನೂ ಕೆಲವು ದಾಖಲೆಗಳನ್ನು ಕೆಲ ದಿನಗಳ ಹಿಂದಷ್ಟೇ ಅಳಿಸಿ ಹಾಕಿರುವುದು ತನಿಖೆ ವೇಳೆ ಬೆಳಕಿಗೆ ಬಂದಿದೆ. 'ಬಾಂಗ್ಲಾದೇಶ, ಪಾಕಿಸ್ತಾನ, ಅಫ್ಗಾನಿಸ್ತಾನ ಹಾಗೂ ಜಮ್ಮು-ಕಾಶ್ಮೀರದ ವ್ಯಕ್ತಿಗಳಿದ್ದ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಅಖ್ತರ್ ಹುಸೇನ್ ಸಕ್ರಿಯನಾಗಿದ್ದ. ಪ್ರತಿ ಗ್ರೂಪ್‌ನಲ್ಲೂ 25ರಿಂದ 30 ಮಂದಿ ಇದ್ದರು. ಉಗ್ರ ಚಟುವಟಿಕೆಗೆ ಸಂಬಂಧಿಸಿದಂತೆ ವಾಟ್ಸ್‌ಆ್ಯಪ್‌ನಲ್ಲಿ ಸಂದೇಶ ವಿನಿಮಯ ಆಗುತ್ತಿತ್ತು. ಉಗ್ರ ಸಂಘಟನೆ ಸೇರುವ ಬಗ್ಗೆ ಹಾಗೂ ಅಫ್ಗಾನಿಸ್ತಾನಕ್ಕೆ ತೆರಳುವ ಮಾರ್ಗದ ಕುರಿತು ಚರ್ಚೆ ನಡೆಯುತ್ತಿತ್ತು. ಚರ್ಚೆಯಾದ ವಿಷಯವನ್ನು ಆಗಿಂದಾಗಲೇ ಅಳಿಸಿ ಹಾಕುತ್ತಿದ್ದರು. ತಾಂತ್ರಿಕ ತಜ್ಞರ ಮೂಲಕ ದಾಖಲೆ ಮರಳಿ ಪಡೆಯಲು ಪ್ರಯತ್ನಿಸಲಾಗುತ್ತಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಇಬ್ಬರು ಶಂಕಿತ ಬಳಿಯೂ ತಜ್ಞರು ಮುದ್ರಿಸಿರುವ ಕುರಾನ್ ಪ್ರತಿಗಳು ಪತ್ತೆಯಾಗಿವೆ. ಯುವಕರನ್ನು ಪ್ರಚೋದಿಸಲು ಅಲ್‌ಕೈದಾ ಸಂಘಟನೆಯ ವ್ಯಕ್ತಿಯೊಬ್ಬ ಇಬ್ಬರಿಗೂ ಅವನ್ನು ಕಳುಹಿಸಿದ್ದ. ಅದರಲ್ಲಿ ಷರಿಯತ್ ಕಾನೂನು, ರಕ್ತಪಾತ, ತಮ್ಮದೇ ಕಾನೂನಿಗೆ ಅನುಗುಣವಾಗಿಯೇ ಬದುಕಬೇಕೆಂಬ ಮಾಹಿತಿಯಿದೆ. ಅಸ್ಸಾಂನ ಅಖ್ತರ್ ಹುಸೇನ್ ಹಾಗೂ ಪಶ್ಚಿಮ ಬಂಗಾಳದ ಅಬ್ದುಲ್ ಅಲೀಂ ಹಲವು ತಿಂಗಳಿನಿಂದ ಅಲ್‌ಕೈದಾ ಉಗ್ರ ಸಂಪರ್ಕದಲ್ಲಿದ್ದರು ವಿಚಾರಣೆಯಿಂದ ಗೊತ್ತಾಗಿದೆ' ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

### ಎನ್‌ಐಎಗೆ ವರ್ಗಾವಣೆ ಸಾಧ್ಯತೆ

ಶಂಕಿತ ಉಗ್ರರ ಬಂಧನದ ಮಾಹಿತಿ ಲಭಿಸುತ್ತಿದ್ದಂತೆಯೇ ದೆಹಲಿ ಹಾಗೂ ಚೆನ್ನೈನ ಎನ್‌ಐಎ ಅಧಿಕಾರಿಗಳು ರಾಜಧಾನಿಗೆ ಬಂದಿದ್ದು, ಪ್ರಕರಣದ ಮಾಹಿತಿ ಪಡೆದುಕೊಂಡಿದ್ದಾರೆ.

'ಸಿಸಿಬಿ ತಂಡವು ಬೆಂಗಳೂರಿನ ತಿಲಕ್‌ನಗರದಲ್ಲಿ ಅಖ್ತರ್ ಹುಸೇನ್ ಲಷ್ಕರ್ ಹಾಗೂ ಚೆನ್ನೈನಲ್ಲಿ ಅಬ್ದುಲ್ ಅಲೀಂನನ್ನು ಬಂಧಿಸಿತ್ತು. ಈಗ ಸಿಸಿಬಿ ಪೊಲೀಸರೇ ತನಿಖೆ ನಡೆಸುತ್ತಿದ್ದಾರೆ. ಪ್ರಕರಣವು ಎನ್‌ಐಎಗೆ ವರ್ಗಾವಣೆಗೊಳ್ಳುವ ಸಾಧ್ಯತೆ ಇದೆ' ಎಂದು ಮೂಲಗಳು ಹೇಳಿವೆ.

### ಆಸ್ತಿ ಮಾರಾಟಕ್ಕೆ ಮುಂದಾದವನಿಗೆ ಲಾಟರಿ ಭಾಗ್ಯ!

ಕಾಸರಗೋಡು: ಸಾಲದ ಹೊರೆ ಹೆಚ್ಚಾಗಿ ಮನೆ ಮಾರಾಟಕ್ಕೆ ಮುಂದಾಗಿದ್ದ ವ್ಯಕ್ತಿಗೆ ₹ 1 ಕೋಟಿ ಲಾಟರಿ ಭಾಗ್ಯ ಒಲಿದಿದೆ.

ಮಂಜೇಶ್ವರ ಬಳಿಯ ಪಾವೂರಿನ ಗ್ವಾರ್‌ಕಟ್ಟೆಯ ಮಹಮ್ಮದ್ ಅಲಿಯಾಸ್ ಬಾವಾ ಎಂಬುವರು ಬ್ಯಾಂಕ್, ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ಮಾಡಿದ್ದ ಸಾಲ ಮರುಪಾವತಿಗೆ ತಮ್ಮ ಇರುವ ಒಂದು ಮನೆ, ಆಸ್ತಿ ಮಾರುವ ಸಿದ್ಧತೆಯಲ್ಲಿದ್ದರು. ಕೇರಳ ಭಾಗ್ಯಕುರಿ ಸಂಸ್ಥೆಯ ಲಾಟರಿ ಟಿಕೆಟ್‌ನ ₹1 ಕೋಟಿಯ ಪ್ರಥಮ ಬಹುಮಾನ ಇವರಿಗೆ ಲಭಿಸಿದೆ. ಸಾಲ ತೀರಿಸಲು ಮನೆ ಮಾರಾಟದಲ್ಲದೆ ಬೇರೆ ದಾರಿಯಿಲ್ಲ ಎಂಬ ತೀರ್ಮಾನಕ್ಕೆ ಅವರು ಬಂದಿದ್ದರು.

## ಸುದ್ದಿ 2 ನಿಮಿಷ

### 'ಪರಿಸರ ಸೂಕ್ಷ್ಮ ಪ್ರದೇಶ ಅಧಿಸೂಚನೆ ತಿರಸ್ಕಾರ ಬೇಡ'



ಮಡಿಕೇರಿ: 'ಪಶ್ಚಿಮಘಟ್ಟ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಗುರುತಿಸಿ ಕೇಂದ್ರ ಸರ್ಕಾರ ಹೊರಡಿಸಿರುವ ಕರಡು ಅಧಿಸೂಚನೆಯನ್ನು ಸಾರಾಸಗಟಾಗಿ ವಿರೋಧಿಸುವುದು ಸರಿಯಲ್ಲ' ಎಂದು ಪರಿಸರ ಮತ್ತು ಆರೋಗ್ಯ ಫೌಂಡೇಷನ್ ಕಾರ್ಯದರ್ಶಿ ಕರ್ನಲ್ ಸಿ.ಪಿ. ಮುತ್ತಣ್ಣ ಪ್ರತಿಪಾದಿಸಿದರು.

'ನಕಾರಾತ್ಮಕ ಅಂಶಗಳನ್ನು ತೆಗೆದು ಸಕಾರಾತ್ಮಕ ಅಂಶಗಳನ್ನು ಉಳಿಸಿಕೊಂಡು ಅಧಿಸೂಚನೆ ಜಾರಿಗೊಳಿಸಬೇಕು' ಎಂದು ಅವರು ಇಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

'ಪರಿಸರ ಉಳಿಯಬೇಕಾದರೆ ಕಸ್ತೂರಿ ರಂಗನ್ ವರದಿ ಜಾರಿಗೆ ಬರಬೇಕು. ರೈತರು ಬೆಳೆಸಿರುವ ಮರಗಳಿಗೆ ನಿಗದಿತ ಸಹಾಯಧನ ಕೊಡಬೇಕು ಎಂದು ವರದಿಯಲ್ಲಿದೆ. ಈ ಅಂಶ ಕರಡು ಅಧಿಸೂಚನೆಯಲ್ಲಿ ಇಲ್ಲ. ಜಿಲ್ಲೆಯ ಬೆಳೆಗಾರರಿಗೆ ಅನುಕೂಲವಾಗುವಂತಹ ಅಂಶಗಳನ್ನು ಸೇರಿಸಿ ಅಧಿಸೂಚನೆಯನ್ನು ಜಾರಿಗೆ ತರಬೇಕು' ಎಂದು ಅವರು ಆಗ್ರಹಿಸಿದರು.

### ಮಹದಾಯಿ: ಕಾಮಗಾರಿ ಆರಂಭಕ್ಕೆ ಆಗ್ರಹ

ನವದೆಹಲಿ: ಮಹದಾಯಿ (ಕಳಸಾ– ಬಂಡೂರಿ) ಯೋಜನೆಯ ಕಾಮಗಾರಿಗೆ ಶೀಘ್ರ ಚಾಲನೆ ನೀಡಬೇಕು ಎಂದು ಆಗ್ರಹಿಸಿ ಕಳಸಾ-ಬಂಡೂರಿ ಮಹದಾಯಿ ಹೋರಾಟ ಸಮಿತಿಯ ರೈತರ ನಿಯೋಗವು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಮನವಿ ಸಲ್ಲಿಸಿತು.

ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ನೇತೃತ್ವದಲ್ಲಿ ನಿಯೋಗವು ಸಚಿವರನ್ನು ಭೇಟಿ ಮಾಡಿತು. 'ಮಹದಾಯಿ ಯೋಜನೆಗೆ ಇದ್ದ ಅಡ್ಡಿ ಆತಂಕಗಳು ಕಳೆದು ವರ್ಷಗಳೇ ಕಳೆದಿವೆ. ಆದರೂ, ಕರ್ನಾಟಕ ಸರ್ಕಾರ ಕಾಮಗಾರಿ ಆರಂಭಿಸಲು ನೆಪಗಳನ್ನು ಹೇಳುತ್ತಾ ಬಂದಿದೆ. ಈಗಷ್ಟೇ ಪರಿಷ್ಕೃತ ಸಮಗ್ರ ಯೋಜನಾ ವರದಿಯನ್ನು (ಡಿಪಿಆರ್) ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿದೆ. ವಿಧಾನಸಭಾ ಚುನಾವಣೆ ಬಂದಾಗ ಮಾತ್ರ ಯೋಜನೆಯ ನೆನಪು ಆಗುತ್ತದೆ. ಶೀಘ್ರ ಟೆಂಡರ್ ಕರೆದು ಯೋಜನೆಯನ್ನು ಅನುಷ್ಠಾನ ಮಾಡಬೇಕು' ಎಂದು ನಿಯೋಗದ ಸದಸ್ಯರು ಆಗ್ರಹಿಸಿದರು.

### ಮಳೆಯ ಅಬ್ಬರ • ತಗ್ಗು ಪ್ರದೇಶಗಳಿಗೆ ನುಗ್ಗಿದ ನೀರು

# ಹುಬ್ಬಳ್ಳಿ: ಗೋಡೆ ಕುಸಿದು ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕೆಲವು ದಿನಗಳಿಂದ ಕಡಿಮೆಯಾಗಿದ್ದ ಮಳೆ ಬುಧವಾರ ಸಾಯಂಕಾಲ ನಗರದಲ್ಲಿ ಏಕಾಏಕಿ ರಭಸವಾಗಿ ಸುರಿಯಿತು. ಅಬ್ಬರದ ಮಳೆಗೆ ಗೋಕುಲ ರಸ್ತೆಯ ಹೊಸ ಬಸ್ ನಿಲ್ದಾಣದ ಪಕ್ಕದಲ್ಲಿರುವ ಶ್ರೇಯಾ ಜ್ಯುಪಿಟರ್ ಕಾಂಪ್ಲೆಕ್ಸ್‌ನ ತಡೆಗೋಡೆ ಕುಸಿದು ಕಲಬುರ್ಗಿ ಮೂಲದ, ಇಲ್ಲಿನ ಬೆಂಗೇರಿ ನಿವಾಸಿ ದರ್ಶನ್(16) ಮೃತಪಟ್ಟಿದ್ದಾರೆ.

ಮಾರುಕಟ್ಟೆ ಪ್ರದೇಶ ಸೇರಿದಂತೆ, ಕೆಲವು ತಗ್ಗು ಪ್ರದೇಶಗಳ ಮನೆಗಳಿಗೆ ಮಳೆ ನೀರು ನುಗ್ಗಿದೆ. ಹೊಸೂರು ವೃತ್ತ, ಹೊಸೂರು ಬಿಆರ್‌ಟಿಎಸ್ ಬಸ್ ನಿಲ್ದಾಣ, ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ನೀರು ನಿಂತಿತ್ತು.

### ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದ ದಂಪತಿ ಶವ ಪತ್ತೆ



ಚಿಂಚೋಳಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಜಟ್ಟೂರು ಗ್ರಾಮದ ಬಳಿ ಕಾಗಿಣಾ ನದಿಯ ಪ್ರವಾಹದಲ್ಲಿ ಮಂಗಳವಾರ ಮಧ್ಯಾಹ್ನ ಕೊಚ್ಚಿ ಹೋಗಿದ್ದ ತೆಲಂಗಾಣದ ಮಂತಟ್ಟಿ ಗ್ರಾಮದ ಬುಗ್ಗಪ್ಪ ನರಸಪ್ಪ (60) ಮತ್ತು ಯಾದಮ್ಮ ಬುಗ್ಗಪ್ಪ (55) ದಂಪತಿ ಶವಗಳು ಬುಧವಾರ ಬೆಳಿಗ್ಗೆ ಪತ್ತೆಯಾಗಿವೆ.

'ತರಕಾರಿ ಮಾರಲು ಚಂದ್ರವಂಚ ಗ್ರಾಮಕ್ಕೆ ಬಂದಿದ್ದ ಅವರಿಬ್ಬರೂ ಮನೆಗೆ ಮರಳುತ್ತಿದ್ದ ವೇಳೆ ಘಟನೆ ನಡೆದಿದೆ. ಮಂಗಳವಾರ ಸಂಜೆ ಯಾದಮ್ಮ ಶವ ಕಾಣಿಸಿತ್ತು. ಆದರೆ, ಪ್ರವಾಹ ಹೆಚ್ಚಿದ್ದ ಕಾರಣ ಕಾರ್ಯಾಚರಣೆ ನಡೆಸಲು ಆಗಿರಲಿಲ್ಲ. ಬುಧವಾರ ಬೆಳಿಗ್ಗೆ ಪ್ರವಾಹ ಕೊಂಚ ತಗ್ಗಿದ್ದರಿಂದ ಶವಗಳು ಪತ್ತೆಯಾದವು' ಎಂದು ಸುಲೇಪೇಟ ಠಾಣೆ ಪೊಲೀಸರು ತಿಳಿಸಿದ್ದಾರೆ.

### ಮೈಸೂರು, ಕೊಡಗಿನಲ್ಲಿ ಮಳೆ

ಮೈಸೂರು/ಮಡಿಕೇರಿ: ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರದಲ್ಲಿ ಬುಧವಾರ ಸಂಜೆ ಸುಮಾರು ಇಪ್ಪತ್ತು ನಿಮಿಷಗಳ ಕಾಲ ಬಿರುಸಿನ ಮಳೆ ಸುರಿಯಿತು.

ಕೊಡಗು ಜಿಲ್ಲಾ ಕೇಂದ್ರ ಮಡಿಕೇರಿ ಸೇರಿದಂತೆ ಸೋಮವಾರಪೇಟೆ, ಶನಿವಾರಸಂತೆ, ನಾಪೋಕ್ಲು, ಸುಂಟಿಕೊಪ್ಪ ಭಾಗಗಳಲ್ಲಿ ಬುಧವಾರ ಸಂಜೆಯಿಂದ ಗುಡುಗು ಸಹಿತ ಭಾರಿ ಮಳೆಯಾಯಿತು.

**ಸಿಡಿಲು ಬಡಿದು ಯುವತಿಗೆ ಗಾಯ**

ಉತ್ತರ ಕನ್ನಡದ ಹಳಿಯಾಳ, ಸಿದ್ದಾಪುರ, ಭಟ್ಕಳ ತಾಲ್ಲೂಕುಗಳ ಕೆಲವೆಡೆ ಸಂಜೆ ಮಳೆಯಾಗಿದೆ. ಸಿದ್ದಾಪುರ ತಾಲ್ಲೂಕಿನ ಹೇಮಗಾರ ಗ್ರಾಮದಲ್ಲಿ ಸಿಡಿಲು ಬಡಿದು ಜ್ಯೋತಿ ಅಣ್ಣಪ್ಪ ನಾಯ್ಕ (20) ಎಂಬುವವರು ಗಾಯಗೊಂಡಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಶಿವಮೊಗ್ಗಕ್ಕೆ ಕರೆದುಕೊಂಡು ಹೋಗಲಾಗಿದೆ.

ಹಳಿಯಾಳದಲ್ಲಿ ಅರ್ಧ ಗಂಟೆಗೂ ಹೆಚ್ಚು ಜೋರಾಗಿ ಮಳೆಯಾದ ಬಗ್ಗೆ ವರದಿಯಾಗಿದೆ.

# ಆನೆ ದಾಳಿ, ವಾಚರ್ ಸಾವು

ಪ್ರಜಾವಾಣಿ ವಾರ್ತೆ

ಯಳಂದೂರು/ಚಾಮರಾಜನಗರ: ಯಳಂದೂರು ವನ್ಯಜೀವಿ ವಲಯದ ಕುಕ್ಕಟ್ಟಿಕೊಡು ಬಳಿ ಬುಧವಾರ ಕಾಡಾನೆ ದಾಳಿ ನಡೆಸಿ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ವಾಚರ್, ಕೆ.ಗುಡಿ ಬಳಿಯ ಕನ್ನೇರಿ ಕಾಲೊನಿ ನಿವಾಸಿ ಕಿಶೋರ್ ಕುಮಾರ್ (44) ಸ್ಥಳದಲ್ಲೇ ಮೃತಪಟ್ಟರು.

ಪುಣಜನೂರು ವಲಯದ ವಾಚರ್ ಕಿಶೋರ್ ನಿಯೋಜನೆ ಮೇರೆಗೆ ಯಳಂದೂರು ವಲಯದಲ್ಲಿ ಕೆಲಸ ಮಾಡುತ್ತಿದ್ದರು.

ಬುಧವಾರ ಬೆಳಿಗ್ಗೆ ಮಗನನ್ನು ಕರೆದುಕೊಂಡು ಸೀಮೆಟಿ ಕಳ್ಳ ತಡೆ ಶಿಬಿರದತ್ತ ಕರ್ತವ್ಯಕ್ಕೆ ಹಾಜರಾಗಲು ಬೈಕ್‌ನಲ್ಲಿ ಹೋಗುತ್ತಿದ್ದಾಗ ಕಾಡಾನೆಯೊಂದು ಏಕಾಏಕಿ ಅಡ್ಡ ಬಂದು ದಾಳಿ ನಡೆಸಿತ್ತು. ಬೈಕ್ ಹಿಂಬದಿ ಕುಳಿತಿದ್ದ ಅವರ ಮಗ ಮಾದೇಗೌಡ ಅವರಿಗೆ ಚಿಕ್ಕಪುಟ್ಟ ಗಾಯಗಳಾಗಿದ್ದು, ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.


ಕರ್ನಾಟಕ ಸರಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಬಂದರು ಮತ್ತು ಮೀನುಗಾರಿಕಾ ವಿಭಾಗ, 2ನೇ ಮಹಡಿ, ಶಾಮಿಲಿ ಹಾಲ್, ಅಂಬಲಪಾಡಿ, ಉಡುಪಿ–576103
ಫೋ/ಫ್ಯಾಕ್ಸ್: 0820–2532961, Website:www.kpwd.gov.in, Email: pfdudupi@gmail.com
ನಂ:ಕಾನಿಇಂ:ಬಂಮೀವಿ:ಉಡುಪಿ:ಎಇ:ಟೆಂಡರ್ ಪ್ರಕಟಣೆ 05:2022–23 ದಿ: 21.07.2022.

**ಟೆಂಡರು ಪ್ರಕಟಣೆ**
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (ದ್ವಿ ದಾಖಲೆ ಪದ್ಧತಿ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು **www.eproc.karnataka.gov.in** ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.

**ಕಾಮಗಾರಿಯ ಹೆಸರು ಮತ್ತು ಟೆಂಡರ್ ನಂಬರ್** (1) ಉಡುಪಿ ಜಿಲ್ಲೆ ಹಂಗಾರಕಟ್ಟೆಯಲ್ಲಿ ಕೋಸ್ಟಲ್ ಬರ್ತ್ ಅಭಿವೃದ್ಧಿ ಕಾಮಗಾರಿ. ಟೆಂಡರಿಗಿಟ್ಟ ಮೊತ್ತ ರೂ. **47,44,32,545.62**, **ಇಎಂಡಿ ಮೊತ್ತ:** Rs. 47.45 lakhs (Rs. 1.00 lakh e-payment + Rs.46.45 lakh as mentioned in bid document), **ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ವೇಳೆ: 19.08.2022 ರಂದು 16.00 ಗಂಟೆಯವರೆಗೆ, ಟೆಂಡರ್ ಪಡೆಯುವ ದಿನಾಂಕ ಮತ್ತು ವೇಳೆ: 22.08.2022 ರಂದು 17.00** ಗಂಟೆಯವರೆಗೆ

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ
ವಾಸಾಇ/ಸನಿಉ/ಎಂಸಿಎ/284/22–23 ದಿ: 27.07.2022



**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಕಾರ್ಯಪಾಲಕ ಅಭಿಯಂತರವರ ಕಚೇರಿ (ವಿದ್ಯುತ್),
ದಕ್ಷಿಣ ವಲಯ, ಜಯನಗರ, ಬೆಂಗಳೂರು.
ಸಂಖ್ಯೆ:ಬೃಬೆಂಮಪಾ/ಕಾಅ/ವಿದ್ಯುತ್/ದ/ಟೆಂಡರ್/05/2022-23 ದಿನಾಂಕ: 27-07-2022

**ಅಲ್ಪಾವಧಿ ಟೆಂಡರ್‌ಗಳ ಆಹ್ವಾನ** (ಐಎಫ್‌ಟಿ) (ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ದಕ್ಷಿಣ ವಲಯ, ಕೆಟಿಪಿಪಿ ಕಾಯ್ದೆ 2000 ಅನುಗುಣವಾಗಿ ಅರ್ಹ ಗುತ್ತಿಗೆದಾರರಿಂದ ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂಇಎಸ್/ರೈಲ್ವೇಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ. | ಕೆಲಸದ ಹೆಸರು | ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ. ಗಳಲ್ಲಿ) | ಇಎಂಡಿ ಮೊತ್ತ (ರೂ. ಗಳಲ್ಲಿ) |
|---|---|---|---|
| 1. | ಸಿದ್ದಾಪುರ ವ್ಯಾಪ್ತಿಗೆ ಬರುವ ಪ್ರಮುಖ ರಸ್ತೆಗಳಿಗೆ ಬೀದಿ ದೀಪಗಳನ್ನು ಪರಿಕರಗಳ ಬೆಳಕಿನೊಂದಿಗೆ ಒದಗಿಸುವುದು ಮತ್ತು ವಾರ್ಡ್ ನಂ.144ರಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಒಳಾಂಗಣ ಕ್ರೀಡಾಂಗಣಕ್ಕೆ ವಿದ್ಯುದೀಕರಣ ದೊಂದಿಗೆ ದೀಪಗಳನ್ನು ಒದಗಿಸುವುದು. | 100.00 | 200000.00 |
| 2. | ವಾರ್ಡ್ ನಂ.119ರ ಎ ಬ್ಲಾಕ್‌ನಲ್ಲಿ 72 ಬಿ ಬ್ಲಾಕ್‌ನಲ್ಲಿ 44 ಮನೆಗಳಿರುವ ಬಹುಮಹಡಿ ಕಟ್ಟಡಕ್ಕೆ ಟ್ರಾನ್ಸ್‌ಫಾರ್ಮರ್ ಆರ್‌ಎಂಯು ಹೆಚ್‌ಟಿ ಕೇಬಲ್ ಒದಗಿಸುವ ಮೂಲಕ ಹೆಚ್‌ಟಿ ವಿದ್ಯುತ್ ಪೂರೈಕೆಯನ್ನು ವ್ಯವಸ್ಥೆಗೊಳಿಸುವುದು. | 99.00 | 198000.00 |

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ದಾಖಲೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡುವ ದಿನಾಂಕ: 28–07–2022 ರಿಂದ. 2) ಟೆಂಡರ್ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ದಿನಾಂಕ: 08–08–2022ರ ಸಂಜೆ 5:00 ಗಂಟೆಯೊಳಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10–08–2022ರ ಸಂಜೆ 5:00 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 12–08–2022ರ ಸಂಜೆ 4:00 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಭೇಟಿನೀಡಿ ಅಥವಾ **https://eproc.karnataka.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/–, ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ದಕ್ಷಿಣ ವಲಯ, ಬೃಬೆಂಮಪಾ.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಜಿಲ್ಲಾ ನಗರಾಭಿವೃದ್ಧಿ ಕೋಶ,**
**ಜಿಲ್ಲಾಧಿಕಾರಿಗಳ ಕಛೇರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ 577201**
ದೂರವಾಣಿ & ಫ್ಯಾಕ್ಸ್ : 08182–226268
E-mai: dudc_smg@yahoo.com
ಸಂಖ್ಯೆ: ಎಎಂಜಿಡಿಸಿ/ಯೋಜನೆ/15/89862/2022 ದಿನಾಂಕ: 23.07.2022

**ಟೆಂಡರ್ ಪ್ರಕಟಣೆ**

ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ, ಇವರು ಕೆಟಿಪಿಪಿ ಕಾಯ್ದೆ 1999 ನಿಯಮ 2000ರ ಅನುಸಾರ ಅಮೃತ ನಗರೋತ್ಥಾನ ಫೇಸ್–4 ಯೋಜನೆ ಕಾಮಗಾರಿಗಳಿಗೆ ಪಿಡಬ್ಲ್ಯೂಡಿ ನೋಂದಾಯಿತ 1ನೇ ದರ್ಜೆ ಗುತ್ತಿಗೆದಾರರಿಂದ ಕೆಳಕಂಡಂತೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡುವ ದಿನಾಂಕ: 25.07.2022, ಸಂಜೆ 4.30 ಗಂಟೆ. ಪ್ರೀ ಬಿಡ್ ಸಭೆ ದಿನಾಂಕ: 18.08.2022, ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 29.08.2022, ಸಂಜೆ 5.00 ಗಂಟೆವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01.09.2022, ಬೆಳಿಗ್ಗೆ 12.30 ಗಂಟೆಗೆ. ಹಣಕಾಸು ಬಿಡ್ ತೆರೆಯುವ ದಿನಾಂಕ: 09.09.2022, ಬೆಳಿಗ್ಗೆ 12.30 ಗಂಟೆಗೆ.

**ಕಾಮಗಾರಿ ವಿವರ: 1)** ಅಮೃತ ನಗರೋತ್ಥಾನ (ಪುರಸಭೆ) ಫೇಸ್–4 ಯೋಜನೆಯ ಅಡಿಯಲ್ಲಿ ನಗರ ಸ್ಥಳೀಯ ಸಂಸ್ಥೆ ಸಿಎಂಸಿ ಸಾಗರ್ ಲಿಮಿಟ್ಸ್‌ಗೆ ನಗರ ಮೂಲಸೌಕರ್ಯ ಕಾಮಗಾರಿಗಳು (ರಸ್ತೆಗಳು, ಒಳಚರಂಡಿ ಮತ್ತು ಕವರಿಂಗ್ ಸ್ಲ್ಯಾಬ್ ಕಾಮಗಾರಿಗಳು) (ಡಿಎಂಎ/2022–23/ಆರ್‌ಡಿ/ ವರ್ಕ್_ಇಂಡೆಂಟ್133484). **ಟೆಂಡರ್‌ಗಿಟ್ಟ ಮೊತ್ತ, ಜಿಎಸ್‌ಟಿ ಹೊರತುಪಡಿಸಿ:** ರೂ.1410.08 ಲಕ್ಷಗಳು. **ಇಎಂಡಿ:** ರೂ.15.00 ಲಕ್ಷಗಳು. **ಟೆಂಡರ್ ಕಾಲಾವಧಿ:** 18 ತಿಂಗಳು. **2)** ಅಮೃತ ನಗರೋತ್ಥಾನ (ಪುರಸಭೆ) ಫೇಸ್–4 ಯೋಜನೆಯ ಅಡಿಯಲ್ಲಿ ಟಿಪಿ ಜೆಓಜಿ ಮತ್ತು ಕೆಎಆರ್‌ಜಿಎಎಲ್ ಲಿಮಿಟ್ಸ್‌ನ ನಗರ ಸ್ಥಳೀಯ ಸಂಸ್ಥೆಗೆ ನಗರ ಮೂಲಸೌಕರ್ಯ ಕಾಮಗಾರಿಗಳು (ರಸ್ತೆಗಳು, ಒಳಚರಂಡಿ ಮತ್ತು ಕವರಿಂಗ್ ಸ್ಲ್ಯಾಬ್ ಕಾಮಗಾರಿಗಳು) (ಡಿಎಂಎ/2022–23/ಆರ್‌ಡಿ/ವರ್ಕ್_ಇಂಡೆಂಟ್132121/ಕರೆ–2). **ಟೆಂಡರ್‌ಗಿಟ್ಟ ಮೊತ್ತ, ಜಿಎಸ್‌ಟಿ ಹೊರತುಪಡಿಸಿ:** ರೂ.207.47 ಲಕ್ಷಗಳು. **ಇಎಂಡಿ:** ರೂ.3.12 ಲಕ್ಷಗಳು. **ಟೆಂಡರ್ ಕಾಲಾವಧಿ:** 6 ತಿಂಗಳು.

ಇತರೆ ಹೆಚ್ಚಿನ ಟೆಂಡರ್ ಮಾಹಿತಿಗಳನ್ನು ವೆಬ್‌ಸೈಟ್: https://eproc.karnataka.gov.inನಲ್ಲಿ ಅಥವಾ ಕಾರ್ಯನಿರ್ವಾಹಕ ಅಭಿಯಂತರರು, ಡಿಯುಡಿಸಿ, ಜಿಲ್ಲಾಧಿಕಾರಿಯವರ ಕಚೇರಿ, ಶಿವಮೊಗ್ಗ, ಸಂಪರ್ಕಿಸಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿ ಕಚೇರಿ, ಶಿವಮೊಗ್ಗ.
ವಾ.ಸಾ.ಸಂ.ಇ/ಎಂಸಿಎ/ಶಿ/148/07/22–23/667



ಕರ್ನಾಟಕ ಸರ್ಕಾರ
**ಲೋಕೋಪಯೋಗಿ ಇಲಾಖೆ**
**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.**
www:eepwdmys21@gmail.com ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

**ಅಲ್ಪಾವಧಿ ಟೆಂಡರು ಅಧಿಸೂಚನೆ ಸಂ.06 /2022–23/ ದಿನಾಂಕ: 25.07.2022**

ಕರ್ನಾಟಕರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ 'ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ8 ಕಾಮಗಾರಿಗಳಿಗೆ KW-4 ನಿಬಂಧನೆ ಮತ್ತು ಷರತುಗಳನ್ವಯ ಟೆಂಡರ್‌ನ್ನುದ್ವಿ–ಲಕೋಟೆ ಪದ್ಧತಿಯಲ್ಲಿಐಟಂವಾರುಅಲ್ಪಾವಧಿಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಗರಿಷ್ಠ ಟೆಂಡರಿಗಿಟ್ಟ ಮೊತ್ತ ರೂ. 840.99 ಮತ್ತು ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.215.60 ಲಕ್ಷಗಳು ಮತ್ತು ಗರಿಷ್ಠ ಇ.ಎಂ.ಡಿ ಮೊತ್ತ ರೂ.12.61 ಲಕ್ಷಗಳು ಮತ್ತು ಕನಿಷ್ಠ ಇ.ಎಂ.ಡಿ. ಮೊತ್ತ ರೂ.3.23 ಲಕ್ಷಗಳು. ಮೇಲ್ಕಂಡ ಕಾಮಗಾರಿಗಳಲ್ಲಿ ಕ್ರ.ಸಂ 4,5 ಮತ್ತು 8 ರ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (ನೋಂದಾಯಿತ ಎರಡನೆ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಹಾಗು ಕ್ರಸಂ. 1,2,3,6 ಮತ್ತು 7 ರ ಕಾಮಗಾರಿಗಳಿಗೆ ಮೊದಲನೇ ದರ್ಜೆಗುತ್ತಿಗೆದಾರರು **01.08.2022** ರಿಂದ **20.08.2022**ರ ಸಂಜೆ 4.00 ಘಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ ಪೂರ್ವಭಾವಿ ಸಭೆಯನ್ನು ದಿನಾಂಕ **10.08.2022** ರಂದು **ಬೆಳಿಗ್ಗೆ 11.30 ಘಂಟೆಗೆ** ಕೆಳಗೆ ಸಹಿ ಮಾಡಿರುವವರ 'ಕಛೇರಿಯಲ್ಲಿ ಕರೆಯಲಾಗಿದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

**ಕಾರ್ಯಪಾಲಕ ಇಂಜಿನಿಯರ್,**
**ಲೋಕೋಪಯೋಗಿ ಇಲಾಖೆ,**
**ಮೈಸೂರು ವಿಭಾಗ, ಮೈಸೂರು.**



**ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.**
ನಂ:ದಾಮಪಾ:ಕಾಅ2.ಇ.ಟೆಂಡರ್:12:2022–23 ದಿನಾಂಕ: 18–07–2022

**ಟೆಂಡರ್ ಪ್ರಕಟಣೆ**
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2021–22 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ – 03 ಕಾಮಗಾರಿ, 2021–22 ನೇ ಸಾಲಿನ 15ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್ – 01 ಕಾಮಗಾರಿ ಒಟ್ಟು 04 ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ www.eproc.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಇ–ಪ್ರಕ್ಯೂರ್‌ಮೆಂಟ್ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8068948777 ರಿಂದ ಮಾಹಿತಿ ಪಡೆಯಬಹುದು. **(1) ಪ್ರೀ ಬಿಡ್ ಮೀಟಿಂಗ್ ದಿನಾಂಕ & ವೇಳೆ (ರೂ.100.00 ಲಕ್ಷ ಮೇಲ್ಪಟ್ಟ ಕಾಮಗಾರಿಗಳಿಗೆ ಮಾತ್ರ) : 27–07–2022 ಸಮಯ : 11.00 (2) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ: 03–08–2022 ಸಮಯ : 16.30 (3) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 03–08–2022 ಸಮಯ : 17.00 (4) ಬಿಡ್ ತೆರೆಯುವ ದಿನಾಂಕ & ವೇಳೆ : 05–08–2022 ಸಮಯ : 11.00**

ಸಹಿ/– ಆಯುಕ್ತರು,
ಮಹಾನಗರ ಪಾಲಿಕೆ, ದಾವಣಗೆರೆ
ವಾಸಾಇ/ದಾವಣಗೆರೆ/
330/ಎಂಸಿಎ/2022–23



**ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಡೆತನದ್ದು)
ಕಾರ್ಯಪಾಲಕ ಅಭಿಯಂತರರ ಕಛೇರಿ, ಕೃಭಾಜನಿನಿ
ಮುಏನೀ ವಿಭಾಗ ನಂ–4 ದೇವರ ಹಿಪ್ಪರಗಿ, ಜಿಲ್ಲೆ: ವಿಜಯಪುರ
ಸಂ/ಕೃಭಾಜನಿನಿ/ಮುಏನೀ/ವಿ–4/ಟೆಂಡರ್/2022–23/301 ದಿನಾಂಕ: 25.07.2022

**ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೋಕ್ಯುರಮೆಂಟ್‌ನಲ್ಲಿ ಮಾತ್ರ)**

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರು ಟರ್ನ್ ಕೀ ಆಧಾರದ ಮೇಲೆ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ ಸಂಖ್ಯೆ KBJNL/2022-23/GH/WORK_INDENT22679/CALL-2 ಕಾಮಗಾರಿಗೆ ಎರಡು ಕವರ್‌ಗಳಲ್ಲಿ (ತಾಂತ್ರಿಕ ಬಿಡ್ & ಆರ್ಥಿಕ ಬಿಡ್) ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ಮತ್ತು ಇ.ಎಮ್.ಡಿ. ಮೊತ್ತ ಅನುಕ್ರಮವಾಗಿ ರೂ 19.60 ಲಕ್ಷ ಮತ್ತು ರೂ 0.49 ಲಕ್ಷ ಆಗಿರುತ್ತದೆ.

ಪೂರ್ಣಗೊಳಿಸಿದ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 03.08.2022** ಸಾಯಂಕಾಲ 5.00 ಗಂಟೆಯಾಗಿರುತ್ತದೆ. ಕಾಮಗಾರಿ ಕುರಿತು ಪ್ರಶ್ನಾವಳಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 29.07.2022** ಸಾಯಂಕಾಲ 5.00 ಗಂಟೆಯಾಗಿರುತ್ತದೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 05.08.2022** ಬೆಳಿಗ್ಗೆ 11.00 ಗಂಟೆ ಆಗಿರುತ್ತದೆ. ಸದರಿ ಟೆಂಡರ್ ಕುರಿತು ಯಾವುದೇ ತಿದ್ದುಪಡಿ / ಸೇರ್ಪಡೆ/ ಪರಿಷ್ಕೃತ ದಿನಾಂಕಗಳು ಇದ್ದಲ್ಲಿ ಜಾಲತಾಣ (ವೆಬ್ ಸೈಟ್)ದಲ್ಲಿ ಮಾತ್ರ ಪ್ರಕಟಿಸಲಾಗುವುದು. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಜಾಲತಾಣ (ವೆಬ್‌ಸೈಟ್) https://eproc.karnataka.gov.in.in/eportal/index.seam ದಲ್ಲಿ ಹಾಗೂ ಈ ಕೆಳಗೆ ಸಹಿ ಮಾಡಿದ ಕಛೇರಿಯ ಕೆಲಸದ ಅವಧಿಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ,ಮುಏನೀ ವಿಭಾಗ–04, ದೇವರಹಿಪ್ಪರಗಿ
ವಾಸಾಸಂಇ/ವಿಜಯಪುರ/309/ಎಂಸಿಎ/2022–23



**ಬೆಳಗಾವಿ ಮಹಾನಗರ ಪಾಲಿಕೆ**
ಸಂಖ್ಯೆ:ಸಿಸಿಬಿ:ಲೋ.ವಿ./ಕಾಅ/ಡಿಎಮ್/ಟಿಎನ್‌ಡಿ/ಇಪ್ರೋ–07/2022–23 ದಿನಾಂಕ:27–07–2022

**ಇ–ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ**

ಆಯುಕರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಬೆಳಗಾವಿ ಮಹಾನೆಗರ ಪಾಲಿಕೆಗೆ ಬಿಡುಗಡೆಯಾದ ಸ್ವಚ್ಛ ಭಾರತ ಮಿಷನ್ ಹಾಗೂ 13ನೇ ಹಣಕಾಸಿನ ಆಯೋಗದ ಅನುದಾನ ಹಾಗೂ ಮಹಾನಗರ ಪಾಲಿಕೆ, ನಿಧಿಯಡಿ ಎಸ್.ಸಿ ಮಿಸಲಾತಿಯಡಿ 02 ಕಾಮಗಾರಿ ಹಾಗೂ ಎಸ್.ಟಿ ಮಿಸಲಾತಿಯಡಿ 1 ಕಾಮಗಾರಿ ಹಾಗೂ ಸಾಮಾನ್ಯ ಮಿಸಲಾತಿಯಡಿ 08 ಕಾಮಗಾರಿಗಳ ಕುರಿತು ಇ–ಪ್ರೋಕ್ಯೂರಮೆಂಟ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್‌ಸೈಟ್ (https://www.eproc.karnataka.gov.in) ನಲ್ಲಿ ವೇಳ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ.

ಸಹಿ/–ಆಯುಕ್ತರು
ಮಹಾನಗರ ಪಾಲಿಕೆ, ಬೆಳಗಾವಿ
DIPR/BGM/RO-NO-615/MCA/2022-23



ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
**ಕಾರ್ಯನಿರ್ವಾಹಕ ಅಭಿಯಂತರರು,**
**ಲೋಕೋಪಯೋಗಿ, ಇಲಾಖೆ, ವಿಭಾಗ, ರಾಯಚೂರು**
ದೂರವಾಣಿ ಸಂಖ್ಯೆ : 08532–225778 & 234747

**ಇ–ಪ್ರೊಕ್ಯುರ್‌ಮೆಂಟ್ ಅಲ್ಪಾವದಿ ಟೆಂಡರ್ ಪ್ರಕಟಣೆ**
**(ಕೆ.ಡಬ್ಲ್ಯೂ–1, 2, 3 & 4)**

**THESE WORKS ARE GENARAL, SC & ST CONTRACTORS**
1) ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ : **ಲೋಇ/ರಾವಿ/ತಾಂಶಾ–4/ಟೆಂಪ್ರ/2022–23/1929 ದಿನಾಂಕಃ 26–07–2022,** 2) ಕಾಮಗಾರಿ ಹೆಸರು: ರಾಯಚೂರು ಜಿಲ್ಲೆಯ ಒಟ್ಟು 20 ಕಾಮಗಾರಿಗಳು. ರಾಯಚೂರು, ಮಾನವಿ, ದೇವದುರ್ಗ, ಲಿಂಗಸುಗೂರು & ಸಿಂಧನೂರು ತಾಲೂಕು ವಿವಿದೆಡೆ ವಿವಿಧ ರಸ್ತೆ, ಕಟ್ಟಡ ಹಾಗೂ ಇನ್ನಿತರೆ ಕಾಮಗಾರಿಗಳ ನಿರ್ಮಾಣ. ಮತ್ತು ಅಭಿವೃದ್ಧಿ ಕಾಮಗಾರಿ. 3) ಕಾಮಗಾರಿಯ ಮೊತ್ತ: ಕನಿಷ್ಠ ರೂ. 879778.10, ಗರಿಷ್ಠ ರೂ. 27066249.27, 4) ಮುಂಗಡ ಠೇವಣಿ ಮೊತ್ತ : ಕನಿಷ್ಠ ರೂ. 8900.00 ಗರಿಷ್ಠ ರೂ. 406000.00, 5) ಕಾಲಾವಧಿ (ಮಳೆಗಾಲ ಸೇರಿ) : ಕನಿಷ್ಠ 3 (ಮೂರು) ತಿಂಗಳು ಗರಿಷ್ಠ 9 (ಒಂಬತ್ತು) ತಿಂಗಳು, 6) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ : 05–08–2022 ಸಂಜೆ 4.00 ಗಂಟೆಯವರೆಗೆ, 7) ಟೆಂಡರ್ ತೆರೆಯುವ ದಿನಾಂಕ : 06–08–2022 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳು ವೆಬ್‌ಸೈಟ್ https://www.eproc.karnataka.gov.in ಮುಖಾಂತರ ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.
ವಾ.ಸಾ.ಸಂ.ಇ/ರಾಯಚೂರು/227/ಎಂ.ಸಿ.&ಎ/2022–23



**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**
ಆಸ್ತಿ ಅಧಿಕಾರಿಗಳ ಕಛೇರಿ, ಗಾ. ಕೃ. ವಿ. ಕೆ, ಬೆಂಗಳೂರು–560 065.
NO.EO/CANTEEN/GKVK/2022-23 DATED: 25-07-2022

**ಮರುಟೆಂಡರ್ ಅಧಿಸೂಚನೆ ಪ್ರಿಕ್ವಾಲಿಫಿಕೇಷನ್ ಟೆಂಡರ್**

ಕೃಷಿ ವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ **ಸುಮಾರು 2000 ವಿದ್ಯಾರ್ಥಿಗಳು ಮತ್ತು ಸಿಬ್ಬಂಧಿಗಳಿಗೆ ಉಪಹಾರ/ಆಹಾರವನ್ನು ಪೂರೈಕೆ ಮಾಡಲು ಕಾರ್ಮಿಕ ಕಾಯ್ದೆಯಡಿಯಲ್ಲಿ ನೋಂದಾಯಿತ ನುರಿತ ಕ್ಯಾಟರರ್ಸ್/ಹೋಟೇಲ್ ಉದ್ಯಮಿಗಳಂದ ತಾಂತ್ರಿಕ ಬಿಡ್ಡ್‌ಗಳನ್ನು ಆಹ್ವಾನಿಸಲಾಗಿದೆ.**

ಸಸ್ಯಹಾರಿ ಉಪಹಾರ ಮಂದಿರ ಸಸ್ಯೋದ್ಯಾನದ ಬಳಿ. ಟೆಂಡರ್‌ದಾರರು ತಾಂತ್ರಿಕ ಬಿಡ್ಡುಗಳನ್ನು **ದಿನಾಂಕ: 08–08–2022 ರ ಅಪರಾಹ್ನ 2.00 ಗಂಟೆಗೆ** ಸೀಲ್ ಮಾಡಲಾದ ಲಕೋಟೆಯಲ್ಲಿ ಆಸ್ತಿ ಅಧಿಕಾರಿಗಳ ಕಛೇರಿಯಲ್ಲಿಟ್ಟಿರುವ ಪೆಟ್ಟಿಗೆಯಲ್ಲಿ ಹಾಕುವುದು. ತಾಂತ್ರಿಕ ಬಿಡ್ಡಿನಲ್ಲಿ 1) ನೋಂದಾವಣೆ ಪ್ರಮಾಣ ಪತ್ರ. 2) ಅನುಭವದ ಪ್ರಮಾಣ ಪತ್ರ. 3) ಕೆಲಸ ನಿರ್ವಹಿಸುತ್ತಿರುವ ಮಾನವ ಸಂಪನ್ಮೂಲಗಳ ವಿವರ. 4) ರೂ.2,00,000/– ಗಳಿಗೆ ಸಾಲ್ವೆನ್ಸಿಪ್ರಮಾಣ ಪತ್ರ. 5) ಹಾಲಿ ಕಾರ್ಯನಿರ್ವಹಿಸುತ್ತಿರುವ ಹೋಟೆಲ್‌ಗಳ ಛಾಯಚಿತ್ರಗಳು ಒಳಗೊಂಡಿರಬೇಕು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು. ಕೃಷಿ ವಿಶ್ವವಿದ್ಯಾನಿಲಯಕ್ಕೆ ಟೆಂಡರ್ ಅನ್ನು ಯಾವುದೇ ಕಾರಣ ನೀಡದೆ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರವಿರುತ್ತದೆ. ತಾಂತ್ರಿಕ ಬಿಡ್ಡುಗಳನ್ನು **ದಿನಾಂಕ: 08–08–2022 ರ ಅಪರಾಹ್ನ 2.30 ಗಂಟೆಗೆ** ತೆರೆಯಲಾಗುವುದು. ಉಪಹಾರ ಮಂದಿರದ ಮೇಲ್ವಿಚಾರಣಾ ಸಮಿತಿಯು ತಾಂತ್ರಿಕ ಬಿಡ್ಡುಗಳನ್ನು ಪರಿಶೀಲಿಸಿ ಅಂತಿಮ ನಿರ್ಣಯ ತೆಗೆದುಕೊಳ್ಳುತ್ತದೆ. ಹಣಕಾಸಿನ ಬಿಡ್ಡನ್ನು ತಾಂತ್ರಿಕವಾಗಿ ತೇರ್ಗಡೆ ಹೊಂದಿದ ಉಪಹಾರ ಮಂದಿರದಿಂದ ಪಡೆಯಲಾಗುವುದು.

DIPR/CP/RO1525/AAPL/2022-23 ಸಹಿ/– ಆಸ್ತಿ ಅಧಿಕಾರಿಗಳು

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,**
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816–2281105 Email:eemitmk@gmail.com
ಐ.ಎಫ್.ಟಿ ಸಂಖ್ಯೆ.06/2022–23 ಕೆ.ಡಬ್ಲ್ಯೂ–1,3& 4 (ದ್ವಿಕ ಲಕೋಟೆ & ದ್ವಿಕ ಲಕೋಟೆ) ದಿನಾಂಕ: 26.07.2022

**ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 26.07.2022**

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2022–23 ನೇ ಸಾಲಿನ ಲೆಕ್ಕ ಶೀರ್ಷಿಕೆ: 4702– ಪ್ರಧಾನ ಕಾಮಗಾರಿಗಳು ಮತ್ತು 4702–ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 06/2022–23, ದಿ: 26.07.2022 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ http// eproc.karnataka.gov.in ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:
1. ಟೆಂಡರ್ ಪ್ರಕಟಣೆಯನ್ನು ದಿನಾಂಕ: **29.07.2022** ರಂದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪ್ರಕಟಿಸಲಾಗುವುದು. 2. ಅವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು ಪಡೆಯಲು ದಿನಾಂಕ: **05.08.2022** ಬೆಳ್ಳಗ್ಗೆ 11.30 ಗಂಟೆಯವರೆಗೆ ಸ್ವೀಕರಿಸಲಾಗುವುದು. 3. ಗುತ್ತಿಗೆದಾರರಿಂದ ಟೆಂಡರ್‌ನ್ನು"ಇ" ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: **08.08.2022** ಸಾಯಂಕಾಲ 5.00 ಗಂಟೆಯವರೆಗೆ ಸ್ವೀಕರಿಸಲಾಗುವುದು. 4. ತಾಂತ್ರಿಕ ಬಿಡ್ಡನ್ನು ದಿನಾಂಕ: **10.08.2022** ಬೆಳ್ಳಗ್ಗೆ ಗಂಟೆಗೆ ತೆರೆಯಲಾಗುವುದು. 5. ಆರ್ಥಿಕ ಬಿಡ್ಡನ್ನು ದಿನಾಂಕ: **12.08.2022** ಬೆಳ್ಳಗ್ಗೆ ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.
DIPR/TUM/360MCA/2022-23



ಕರ್ನಾಟಕ ಸರ್ಕಾರ
**ಉಪನಿರ್ದೇಶಕರ ಕಾರ್ಯಾಲಯ,**
**ಸಮಾಜ ಕಲ್ಯಾಣ ಇಲಾಖೆ, ವಿಜಯಪುರ.**
ದೂರವಾಣಿ ಸಂಖ್ಯೆ:08352–276124, ಇ–ಮೇಲ್: dswovjp@gmail.com

**ಟೆಂಡರ್ ಅಧಿಸೂಚನೆ**
**ಟೆಂಡರ ಡಾಕ್ಯೂಮೆಂಟ್ ವಿಭಾಗ–1**

2022–23 ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆ / ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ **ಮುದ್ದೇಬಿಹಾಳ** ತಾಲೂಕಿಗೆ ಸಂಬಂಧಿಸಿದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು, ಆಶ್ರಮ ಶಾಲೆಗಳ ವಿದ್ಯಾರ್ಥಿಗಳಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುವ ಇ–ಟೆಂಡರ್‌ನ್ನು online system ನಲ್ಲಿ(https://eproc.karnataka.gov.in) ಇ–ಪ್ರೊಕ್ಯೂರಮೆಂಟ್ ಮುಖಾಂತರ ಕರೆಯಲಾಗಿದೆ.ಈ ಕೆಳಕಂಡ ವೇಳಾಪಟ್ಟಿ ಪ್ರಕಾರ ಆಹ್ವಾನಿಸಲಾಗಿದೆ.

1) ಟೆಂಡರ್ ಉಲ್ಲೇಖ ಸಂಖ್ಯೆ ಮತ್ತು ದಿನಾಂಕ: **ಉನಿಸಕಇ/ಸಿಬ್ಬಂದಿ/ಸಿಆರ್/2022–23 ದಿನಾಂಕ:20–07–2022**
2) ಟೆಂಡರ್‌ಗೆ ಹಾಕಲಾದ ಮೊತ್ತ **ರೂ.313.94 ಲಕ್ಷ**
3) ಪೂರ್ವ ಬಿಡ್ ಸಭೆಯ ದಿನಾಂಕ, ಸಮಯ ಮತ್ತು ವಿಳಾಸ: **10.08.2022 ರಂದು ಬೆಳಿಗ್ಗೆ 11–00 ಗಂಟೆಗೆ ಉಪನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ವಿಜಯಪುರ.**
4) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **22.08.2022 ರಂದು ಸಾಯಂಕಾಲ 5–00 ಗಂಟೆಗೆ**
5) ಸ್ಯಾಂಪಲ್‌ಗಳನ್ನು ಸಲ್ಲಿಸುವ ದಿನಾಂಕ: **20.08.2022 ರಂದು** ಸಾಯಂಕಾಲ 5–00 ಗಂಟೆಗೆ ಸ್ಯಾಂಪಲ್‌ಗಳನ್ನು ಸಲ್ಲಿಸಿದ ಪ್ರತಿಗೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ಸಹಿಯೊಂದಿಗೆ ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.
6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **25.08.2022 ರಂದು** ಬೆಳಿಗ್ಗೆ 11–00 ಗಂಟೆಗೆ.
7) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **29.08.2022 ರಂದು** ಬೆಳಿಗ್ಗೆ 11–00 ಗಂಟೆಗೆ
8) ಇ.ಎಂ.ಡಿ ಮೊತ್ತ **ರೂ.4.71 ಲಕ್ಷ**
9) **ಟೆಂಡರ್ ತೆರೆಯುವ ಸ್ಥಳ:** ಉಪನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ವಿಜಯಪುರ.
10) ಟೆಂಡರ್ ಬಗ್ಗೆ ಮಾಹಿತಿ ಪಡೆದುಕೊಳ್ಳುವ ವಿಳಾಸ: **ಉಪನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಕನಕದಾಸ ಬಡಾವಣೆ, ವಿಜಯಪುರ–586109**

ಸಹಿ/–ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ವಿಜಯಪುರ
ವಾಸಾಸಂಇ/ವಿಜಯಪುರ/305/ಎಂಸಿಎ/2022–23

### ಪುತ್ರಶೋಕದಲ್ಲಿ ಕಣ್ಣೀರಿಟ್ಟ ಪ್ರವೀಣ್ ತಾಯಿ ರತ್ನಾವತಿ • ಮನೆ ಕಟ್ಟಬೇಕಿದ್ದ ಜಾಗದಲ್ಲೇ ಮಗನ ಅಂತ್ಯ ಸಂಸ್ಕಾರ

# ಅವರಿಗೆ ಗಲ್ಲು ಶಿಕ್ಷೆಯನ್ನೇ ಕೊಡಬೇಕು...

• ಲೋಕೇಶ್ ಪೆರ್ಲಂಪಾಡಿ

**ಸುಳ್ಯ (ದಕ್ಷಿಣ ಕನ್ನಡ):** 'ನನಗೆ ಇನ್ನು ಯಾರಿದ್ದಾರೆ. ಇದ್ದ ಒಬ್ಬನೇ ಮಗನನ್ನು ಕೊಂದೇ ಬಿಟ್ಟರು. ಅವರಿಗೆ ಗಲ್ಲು ಶಿಕ್ಷೆನೇ ಆಗಬೇಕು'.

ಇದು ಮೃತ ಪ್ರವೀಣ್ ನೆಟ್ಟಾರು (32) ಅವರ ತಾಯಿ ರತ್ನಾವತಿ ಅವರು ಹೇಳಿದ ಮಾತು.

ಪ್ರವೀಣ್ ಅವರು ಶೇಖರ ಪೂಜಾರಿ– ರತ್ನಾವತಿ ದಂಪತಿಯ ಪುತ್ರ. ಮೂರ್ತೆದಾರಿಕೆ ಹಾಗೂ ಕೂಲಿ ಕೆಲಸ ಮಾಡಿಕೊಂಡು ಶೇಖರ ಪೂಜಾರಿ ದಂಪತಿ ಮಕ್ಕಳನ್ನು ಬೆಳೆಸಿದ್ದರು.

ದಂಪತಿಯ ಒಬ್ಬರೇ ಗಂಡು ಕುಡಿ ಪ್ರವೀಣ್. ಅವರೇ ಕುಟುಂಬಕ್ಕೆ ಆಧಾರ ಸ್ತಂಭವಾಗಿದ್ದರು. ಅವರ ಇಬ್ಬರು ಸಹೋದರಿಯರಿಗೆ ಮದುವೆ ಆಗಿದೆ. ಪ್ರವೀಣ್ ಮೂರು ವರ್ಷಗಳ ಹಿಂದೆ ನೂತನಾ ಅವರನ್ನು ಮದುವೆ ಆಗಿದ್ದಾರೆ. ಅವರ ಪತ್ನಿ ಪುತ್ತೂರು ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ಗ್ರಂಥಪಾಲಕಿಯಾಗಿದ್ದಾರೆ. ತನ್ನ ಸಂಸಾರಕ್ಕೆ ನೆಮ್ಮದಿ ಜೀವನ ನೀಡಬೇಕು ಎಂಬ ತುಡಿತದೊಂದಿಗೆ ನೆಟ್ಟಾರಿನಲ್ಲಿ ಸ್ವಲ್ಪ ಜಾಗದಲ್ಲಿ ಮನೆ ಕಟ್ಟುವ ಕನಸು ಕಂಡಿದ್ದ ಪ್ರವೀಣ್ ಅದಕ್ಕಾಗಿ ಒಂದು ಕೊಳವೆ ಬಾವಿ ಕೊರೆಯಿಸಿದ್ದರು.


'ಮನೆ ಕಟ್ಟಲು ಜಾಗವನ್ನೂ ಸಮತಟ್ಟು ಕೂಡಾ ಮಾಡಿಟ್ಟಿದ್ದ. ಆದರೆ ಅದೇ ಜಾಗದಲ್ಲಿ ಅವನ ಅಂತ್ಯ ಸಂಸ್ಕಾರ ಮಾಡಬೇಕಾಗಿ ಬಂತಲ್ಲ' ಎಂದು ಪ್ರವೀಣ್ ಅವರ ಸಂಬಂಧಿಕರೊಬ್ಬರು ಕಣ್ಣೀರಿಟ್ಟರು.

**ಹಂತ ಹಂತವಾಗಿ ಬೆಳೆದ ಪ್ರವೀಣ್:** ಪ್ರವೀಣ್ ಅವರಿಗೆ ರಾಜಕೀಯ ಮಹತ್ವಾಕಾಂಕ್ಷೆಗಳೇನೂ ಇರಲಿಲ್ಲ. ಪಿಯುಸಿ ವರೆಗೆ ಶಿಕ್ಷಣ ಪಡೆದಿದ್ದ ಅವರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಇದರಿಂದಾಗಿಯೇ ಬಜರಂಗದಳ ಹಾಗೂ ವಿಶ್ವಹಿಂದೂ ಪರಿಷತ್ ನಂಟು ಬೆಳೆದಿತ್ತು ಎನ್ನುತ್ತಾರೆ ಅವರ ಒಡನಾಡಿಗಳು.

ಬಿಲ್ಲವರ ಸಂಘಟನೆಯಾಗಿರುವ ಯುವ ವಾಹಿನಿಯ ಸುಳ್ಯ ತಾಲ್ಲೂಕು ಘಟಕದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು. ತುಳುವರ ಆರಾಧ್ಯ ದೈವಗಳಾದ ಕೋಟಿ ಚೆನ್ನಯರ ಮೂಲಸ್ಥಾನವಾದ ಗೆಜ್ಜೆಗಿರಿ ಕ್ಷೇತ್ರದ ಬ್ರಹ್ಮಕಲಶೋತ್ಸವ ಸಮಿತಿಯ ಸಹಸಂಚಾಲಕರಾಗಿದ್ದರು. ಈ ಕಾರ್ಯಕ್ರಮದಲ್ಲಿ ಪ್ರಸಾದ ವಿತರಣೆಯ ದೊಡ್ಡ ಜವಾಬ್ದಾರಿಯನ್ನು ವಹಿಸಿಕೊಂಡು ಯಶಸ್ವಿಯಾಗಿ ನಿರ್ವಹಿಸಿದ್ದರು.

ಜೀವನ ನಿರ್ವಹಣೆಗಾಗಿ ಕೆಲವು ತಿಂಗಳ ಹಿಂದೆ ಬೆಳ್ಳಾರೆಯಲ್ಲಿ ಕೋಳಿ ಮಾಂಸ ಮಾರಾಟ ಅಂಗಡಿ ಆರಂಭಿಸಿದ್ದ ಪ್ರವೀಣ್ ಅದರ ಜೊತೆಗೆ ಸಮಾಜ-ಸೇವೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದರು.

ಬಿಲ್ಲವ ಸಮುದಾಯದ ಯುವ ನಾಯಕನಾಗಿ ಮೂಡಿಬಂದಿದ್ದ ಪ್ರವೀಣ್ ಅವರ ಸಮುದಾಯ ಸೇವೆಗಳನ್ನು ಗುರುತಿಸಿ ಬಿಜೆಪಿ ಅವರಿಗೆ ಯುವಮೋರ್ಚಾದ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ನೇಮಿಸಿತ್ತು.



ಪ್ರವೀಣ್– ನೂತನಾ ದಂಪತಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

### 'ಎಲ್ಲರಿಗೂ ಬೇಕಾಗಿದ್ದ ವ್ಯಕ್ತಿ'

ಸೇವೆ, ಸಹಾಯ ಮಾಡುವುದು ಪ್ರವೀಣ್ ಅವರ ಹುಟ್ಟು ಗುಣ. ಸೇವೆಯಲ್ಲಿ ಎಂದೂ ಭೇದ ಮಾಡಿದವರಲ್ಲ. ಎಲ್ಲಾ ಮತ, ಜಾತಿಯವರಿಗೆ ಬೇಕಾಗಿದ್ದವರು. ಕಾನೂನು ಮತ್ತು ಮಾನವೀಯತೆ ಮೀರಿದಾಗ ಅದನ್ನು ಕಠೋರವಾಗಿ ವಿರೋಧಿಸಿಯೂ ಇದ್ದರು. ಮುಸ್ಲಿಮರ ಜೊತೆಯೂ ಸ್ನೇಹದಲ್ಲೇ ಇದ್ದರು. ತಾನು ಬಿಜೆಪಿ ನಾಯಕನಾಗಿದ್ದರೂ ಕಾಂಗ್ರೆಸ್ ಇತರ ಪಕ್ಷದರ ಜೊತೆ ಸೌಹಾರ್ದದಿಂದ ಇದ್ದರು ಎಂದು ಸ್ಮರಿಸುತ್ತಾರೆ ಸ್ಥಳೀಯರು.

### 'ನಾನು ಜೊತೆಯಲ್ಲಿರುತ್ತಿದಿದ್ದರೆ ಹೀಗಾಗುತ್ತಿರಲಿಲ್ಲ'

'ಹೆಚ್ಚಿನ ದಿನ ಸಂಜೆ ಅಂಗಡಿಯಲ್ಲಿ ನಾನು ಇರುತ್ತಿದ್ದೆ. ಎಲ್ಲಿಗೆ ಹೋಗುವುದಿದ್ದರೂ ಜೊತೆಯಾಗಿ ಹೋಗುತ್ತಿದ್ದೆವು. ಆದರೆ, ನಿನ್ನೆ ನಾನು ತಾಯಿ ಮನೆಗೆ ಹೋಗಿದ್ದೆ. ನಾನು ಇದ್ದಿದ್ದರೆ ಹೀಗಾಗುತ್ತಿರಲಿಲ್ಲ' ಎಂದು ಪ್ರವೀಣ್ ಅವರ ಪತ್ನಿ ನೂತನಾ ಕಣ್ಣೀರಿಟ್ಟರು.

'ಸಹಾಯ ಮಾಡುವುದು ಅವರ ಉಸಿರೇ ಆಗಿತ್ತು. ಯಾರೇ ಬಂದು ಕಷ್ಟ ಅಂತ ಹೇಳಿದರೂ ನನ್ನ ಮಾತನ್ನೂ ಕೇಳದೆ ಹೋಗಿ ಸ್ಪಂದಿಸುತ್ತಿದ್ದರು. ಅದುವೇ ಮುಳುವಾಗಿರಬೇಕು' ಎಂದು ನೂತನಾ ಗದ್ಗದಿತರಾದರು.



ದಕ್ಷಿಣ ಕನ್ನಡ ಜಿಲ್ಲೆ ನೆಟ್ಟಾರು ಗ್ರಾಮದಲ್ಲಿ ಹತ್ಯೆಯಾದ ಬಿಜೆಪಿ ಯುವ ಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಅವರ ಮೃತ ದೇಹದ ಅಂತಿಮ ಯಾತ್ರೆಯ ಮೆರವಣಿಗೆ ವೇಳೆ ರೊಚ್ಚಿಗೆದ್ದ ಹಿಂದೂ ಯುವಕರು ಸಂಸದ ನಳಿನ್‌ಕುಮಾರ್ ಕಟೀಲ್ ಅವರ ಕಾರಿಗೆ ಮುತ್ತಿಗೆ ಹಾಕಿ ಕಾರು ಬೀಳಿಸಲು ಯತ್ನಿಸಿದರು

ಪ್ರವೀಣ್ ನೆಟ್ಟಾರು ಹತ್ಯೆ ಖಂಡನೀಯ. ಪೊಲೀಸರು ಕೊಲೆಗಡುಕರನ್ನು ತಕ್ಷಣ ಬಂಧಿಸಿ, ಊಹಾಪೋಹಗಳಿಂದ ಶಾಂತಿ-ಸುವ್ಯವಸ್ಥೆ ಕದಡುವುದನ್ನು ತಪ್ಪಿಸಬೇಕು. ಕೊಲೆಗಡುಕರ ಜಾತಿ, ಧರ್ಮ, ಪಕ್ಷವನ್ನು ಲೆಕ್ಕಿಸದೆ ಕ್ರಮಕೈಗೊಳ್ಳಬೇಕು

**ಸಿದ್ದರಾಮಯ್ಯ,** ವಿಧಾನಸಭೆ ವಿರೋಧ ಪಕ್ಷದ ನಾಯಕ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವ ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆಗೆ ವಿದೇಶಗಳಿಂದ ಆರ್ಥಿಕ ನೆರವು ಬಂದಿರುವ ಗುಮಾನಿ ಇದೆ. ಈ ಹತ್ಯೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಎನ್‌ಐಎ ತನಿಖೆ ಅಗತ್ಯವಿದೆ. ಮುಖ್ಯಮಂತ್ರಿ ಗಮನಕ್ಕೆ ಇದನ್ನು ತರಲಾಗುವುದು. ರಾಜ್ಯದಲ್ಲಿ ಇಂತಹ ಪ್ರಕರಣ ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು

**ಡಾ. ಕೆ. ಸುಧಾಕರ್,** ಆರೋಗ್ಯ ಸಚಿವ

ಪ್ರವೀಣ್ ನೆಟ್ಟಾರು ಆದರ್ಶ ಕಾರ್ಯಕರ್ತ. ಯಾವುದೇ ದುಷ್ಕೃತ್ಯಗಳಲ್ಲಿ ಭಾಗಿಯಾದವರಲ್ಲ. ಜನರ ಕಷ್ಟಕ್ಕೆ ಸ್ಪಂದಿಸುತ್ತಿದ್ದರು. ಅವರ ಹತ್ಯೆ ಬಗ್ಗೆ ಜನರಲ್ಲಿ ಆಕ್ರೋಶ ಮಡುಗಟ್ಟಿದೆ. ಇಂತಹ ಘಟನೆ ಆದಾಗ ಕಾರ್ಯಕರ್ತರು ನನ್ನ ವಿರುದ್ಧವೂ ಆಕ್ರೋಶ ವ್ಯಕ್ತಪಡಿಸುವುದು ಸಹಜ

**ನಳಿನ್ ಕುಮಾರ್ ಕಟೀಲ್,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ನಾವು ಮನೆಯ ಮಗನನ್ನು ಕಳೆದುಕೊಂಡ ನೋವಿನಲ್ಲಿದ್ದೇವೆ. ಪ್ರವೀಣ್ ಹತ್ಯೆಯನ್ನು ನೋಡಿ ಸರ್ಕಾರ ಕೈಕಟ್ಟಿ ಕುಳಿತಿಲ್ಲ. ಇದಕ್ಕೆ ತಕ್ಕ ಉತ್ತರ ಕೊಟ್ಟೇ ಕೊಡುತ್ತೇವೆ. ಜನರ ಆಕ್ರೋಶ ನಮ್ಮ ಕಣ್ಮುಂದಿದೆ

**ವಿ.ಸುನೀಲ್ ಕುಮಾರ್,** ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ

ಕೋಮು ದ್ವೇಷದಿಂದ ಪ್ರವೀಣ್ ನೆಟ್ಟಾರು ಅವರಂತಹ ಕೊಲೆ ಪ್ರಕರಣಗಳಲ್ಲಿ ಅವರ ಪಾಲಕರಿಗೆ ಸಿಕ್ಕಿದ್ದು ಮಕ್ಕಳ ಶವ ಮಾತ್ರ. ಚುನಾವಣೆಗೆ ಒಂಬತ್ತು ತಿಂಗಳು ಇರುವ ಸಂದರ್ಭದಲ್ಲಿ ಮಾತ್ರ ಯಾಕೆ ರೀತಿ ಕೋಮು ಗಲಭೆಗಳು ನಡೆಯುತ್ತವೆ? ಇಂತಹ ಯಕ್ಷಪ್ರಶ್ನೆಗೆ ಉತ್ತರ ಹುಡುಕಬೇಕಾಗಿದೆ.

**ಮಿಥುನ್ ರೈ,** ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ, ಮಂಗಳೂರು

## 'ಹಂತಕರನ್ನು ಸದೆಬಡಿಯುತ್ತೇವೆ'

**ಒಂದನೇ ಪುಟದಿಂದ...**
ಬುಧವಾರ ಸುದ್ದಿಗಾರರ ಜತೆ ಮಾತನಾಡಿ, 'ಕೊಲೆಗಡುಕರು ಕೇರಳಕ್ಕೆ ಹೋಗಿದ್ದರೂ ಬಿಡುವುದಿಲ್ಲ' ಎಂದು ಎಚ್ಚರಿಕೆ ನೀಡಿದರು. 'ನಮ್ಮ ಪೊಲೀಸರು ಕೇರಳ ರಾಜ್ಯದ ಪೊಲೀಸರೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ. ಮಂಗಳೂರು ಎಸ್ಪಿ ಕಾಸರಗೋಡು ಎಸ್ಪಿ ಜತೆ ಮಾತನಾಡಿದ್ದಾರೆ. ಅಲ್ಲದೆ, ನಮ್ಮ ಡಿಜಿಪಿ ಕೇರಳದ ಡಿಜಿಪಿ ಜತೆಗೆ ಮಾತನಾಡಿದ್ದಾರೆ. ಪೊಲೀಸರ ತಂಡಗಳನ್ನು ರಚಿಸಿ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಹೇಳಿದರು.

'ರಾತ್ರಿ ವೇಳೆ ಹಿಂಬದಿಯಿಂದ ಬಂದು ಮೋಸದಿಂದ ಕೊಲೆ ಮಾಡಿದ್ದಾರೆ. ಇದರ ಹಿಂದೆ ವ್ಯವಸ್ಥಿತ ಸಂಚು ಇದೆ. ಸಮಾಜದಲ್ಲಿ ಕ್ಷೋಭೆ ಉಂಟು ಮಾಡಬೇಕು ಎಂಬುದೇ ಅವರ ಉದ್ದೇಶ. ಆದರೆ, ಅವರಿಗೆ ಉಗ್ರ ಶಿಕ್ಷೆ ಕಾದಿದೆ. ಅಮಾಯಕ ಕಾರ್ಯಕರ್ತನ ಕೊಲೆ ಆಗಿರುವುದರಿಂದ ಕಾರ್ಯಕರ್ತರು ಸಹಜವಾಗಿ ಆಕ್ರೋಶಗೊಂಡಿದ್ದಾರೆ. ಎಲ್ಲರೂ ಸಂಯಮದಿಂದ ಇರಬೇಕು, ಶಾಂತಿ ಕಾಪಾಡಬೇಕೆಂದು ಮನವಿ ಮಾಡುತ್ತೇನೆ' ಎಂದು ಬೊಮ್ಮಾಯಿ ಹೇಳಿದರು.

'ಈ ಹಿಂದೆ ಮಂಗಳೂರು, ಡಿ.ಜೆ.ಹಳ್ಳಿ ಮತ್ತು ಶಿವಮೊಗ್ಗದಲ್ಲಿ ನಡೆದ ಪ್ರಕರಣಗಳಂತೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಘಟನೆಯ ಹಿಂದಿರುವ ವ್ಯಕ್ತಿಗಳು, ಸಂಘಟನೆಗಳು ಯಾರೇ ಇದ್ದರೂ ಅವರನ್ನು ಮಟ್ಟ ಹಾಕುತ್ತೇವೆ. ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳಕ್ಕೆ ವಹಿಸಿಕೊಡುವ ಸಂದರ್ಭ ಬಂದರೆ ಅದಕ್ಕೆ ಹಿಂಜರಿಯುವುದಿಲ್ಲ' ಎಂದು ಅವರು ತಿಳಿಸಿದರು.

### ಪುತ್ತೂರು ಉಪ ವಿಭಾಗ ವ್ಯಾಪ್ತಿಯಲ್ಲಿ ಇಂದು ಮಧ್ಯರಾತ್ರಿ 12ರವರೆಗೆ ನಿಷೇಧಾಜ್ಞೆ

# ಸರ್ಕಾರದ ವಿರುದ್ಧ ಕೇಸರಿ ಪಡೆ ಕಿಡಿ

**ಒಂದನೇ ಪುಟದಿಂದ...**
ಕಾರನ್ನು ಸುತ್ತುವರಿದು ನಳಿನ್ ಕೆಳಗಿಳಿಯುವುದಕ್ಕೆ ಅವಕಾಶ ನೀಡಲಿಲ್ಲ. ಕಾರನ್ನೇ ಎತ್ತಿ ಅಲ್ಲಾಡಿಸುವ ಪ್ರಯತ್ನ ನಡೆಸಿದ್ದಲ್ಲದೇ ಬಿಜೆಪಿ ಹಾಗೂ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಪಕ್ಷದ ಅಮಾಯಕ ಕಾರ್ಯಕರ್ತನ ಸಾವಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿದರು.

ಆರ್‌ಎಸ್‌ಎಸ್‌ನ ಪ್ರಭಾವಿ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಅವರೂ ಕಾರ್ಯಕರ್ತರ ಆಕ್ರೋಶಕ್ಕೆ ಗುರಿಯಾಗಬೇಕಾಯಿತು. ಅಂತಿಮ ದರ್ಶನದ ಸಲುವಾಗಿ ನೆಟ್ಟಾರುಗೆ ಬಂದ ಅವರಿಗೂ ಕಾರ್ಯಕರ್ತರು ಧಿಕ್ಕಾರ ಕೂಗಿದರು. ಈ ಎಲ್ಲ ಬೆಳವಣಿಗೆಗಳಿಂದ ಸ್ಥಳದಲ್ಲಿ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಪೊಲೀಸರು ಲಾಠಿ ಪ್ರಹಾರ ನಡೆಸಿ ಕಾರ್ಯಕರ್ತರನ್ನು ಚದುರಿಸಿದರು.

**ಮೂರು ತಾಲ್ಲೂಕುಗಳು ಬಂದ್:** ಹತ್ಯೆ ಖಂಡಿಸಿ ಸಂಘ ಪರಿವಾರದ ಸಂಘಟನೆಗಳ ಕಾರ್ಯಕರ್ತರು ಪುತ್ತೂರು, ಸುಳ್ಯ ಹಾಗೂ ಕಡಬ ತಾಲ್ಲೂಕುಗಳಲ್ಲಿ ಬಂದ್ ನಡೆಸಿದರು. ಪುತ್ತೂರಿನ ಬೊಳುವಾರು ಬಳಿ ದುಷ್ಕರ್ಮಿಗಳು ಸರ್ಕಾರಿ ಬಸ್‌ಗೆ ಕಲ್ಲು ತೂರಿದರು. ಖಾಸಗಿ ಹಾಗೂ ಸರ್ಕಾರಿ ಬಸ್‌ಗಳು ಸಂಚಾರವನ್ನು ಸ್ಥಗಿತಗೊಳಿಸಿದ್ದವು. ಬಸ್ ಸಂಚಾರ ದಿಢೀರ್ ಸ್ಥಗಿತಗೊಂಡಿದ್ದರಿಂದ ಹೆಚ್ಚಿನ ವಿದ್ಯಾರ್ಥಿಗಳು ಶಾಲೆ, ಕಾಲೇಜುಗಳಿಗೆ ತೆರಳಲು ತೊಂದರೆ ಆಯಿತು. ವಿದ್ಯಾರ್ಥಿಗಳು ಶಾಲೆಗೆ ಹಾಜರಾಗದ ಕಾರಣ ಸರ್ಕಾರಿ ಶಾಲಾ ಕಾಲೇಜುಗಳು ಕಾರ್ಯನಿರ್ವಹಿಸಲಿಲ್ಲ. ಖಾಸಗಿ ಶಾಲೆ, ಕಾಲೇಜುಗಳು ರಜೆ ಘೋಷಿಸಿದ್ದವು.

**ವಾರದ ಹಿಂದಷ್ಟೇ ನಡೆದಿತ್ತು ಮಸೂದ್ ಹತ್ಯೆ:** ಸುಳ್ಯ ತಾಲ್ಲೂಕಿನ ಕಳೆಂಜದಲ್ಲಿ ಮಸೂದ್ (21 ವರ್ಷ) ಅವರ ಮೇಲೆ ಜುಲೈ 19ರಂದು ಒಂದು ಗುಂಪು ತೀವ್ರ ಹಲ್ಲೆ ನಡೆಸಿತ್ತು. ಅವರು ಜುಲೈ 21ರಂದು ಮೃತಪಟ್ಟಿದ್ದರು. ಸ್ಥಳೀಯ ನಿವಾಸಿ ಸುಧೀರ ಹಾಗೂ 8 ಮಂದಿಯ ತಂಡ ಹಲ್ಲೆ ನಡೆಸಿದೆ ಎಂದು ಪ್ರಕರಣ ದಾಖಲಾಗಿತ್ತು. ಬೆಳ್ಳಾರೆ ಠಾಣೆಯ ಪೊಲೀಸರು ಎಂಟು ಮಂದಿಯನ್ನು ಬಂಧಿಸಿದ್ದರು. ಇದೇ ಬೆಳ್ಳಾರೆ ಠಾಣೆ ವ್ಯಾಪ್ತಿಯಲ್ಲಿ ಪ್ರವೀಣ್ ನೆಟ್ಟಾರು ಅವರ ಹತ್ಯ ನಡೆದಿದೆ.

ಬೆಳ್ಳಾರೆ ಗ್ರಾಮದಲ್ಲಿ ನಾಲ್ಕೈದು ದಿನಗಳ ಅವಧಿಯಲ್ಲಿ ಮಸೂದ್ ಮತ್ತು ಪ್ರವೀಣ್ ಹತ್ಯೆ ನಡೆದಿವೆ. ಈ ಸರ್ಕಾರದಲ್ಲಿ ಜನಸಾಮಾನ್ಯರಿಗೆ ರಕ್ಷಣೆ ಇಲ್ಲ. ಮೃತ ಮಸೂದ್ ಮತ್ತು ಪ್ರವೀಣ್ ಅವರ ಕುಟುಂಬಗಳಿಗೆ ಸರ್ಕಾರ ಗರಿಷ್ಠ ಮೊತ್ತದ ಪರಿಹಾರ ನೀಡಬೇಕು

**ಯು.ಟಿ.ಖಾದರ್,** ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ

ಪ್ರವೀಣ್ ಹತ್ಯೆಯ ಹಿಂದೆ ದೇಶ ವಿರೋಧಿ ಸಂಘಟನೆಯ ಪಾತ್ರ ಇದೆ. ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಹಿಂದೂಗಳ ಸರಣಿ ಕೊಲೆ ಪ್ರಕರಣಗಳಿಗೆ ಸಂಬಂಧವಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ

**ಸುದರ್ಶನ ಎಂ.,** ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ

ಸುಳ್ಯದಲ್ಲಿ ಪ್ರವೀಣ್ ನೆಟ್ಟಾರು ಅವರನ್ನು ಬರ್ಬರವಾಗಿ ಹತ್ಯೆ ಮಾಡಿರುವುದು ಹೇಯಕೃತ್ಯ. ಇಂತಹ ಘಟನೆಗಳು ನಿರಂತರ ನಡೆದರೆ ಸಮಾಜದಲ್ಲಿ ಅಶಾಂತಿ, ಅಧಾರ್ಮಿಕತೆ ಬೆಳೆಯುವುದು ಖಂಡಿತ. ಸರ್ಕಾರ ಕಠಿಣವಾಗಿ ನಡೆದುಕೊಂಡು, ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿಸಬೇಕು.

**ವಿಖ್ಯಾತಾನಂದ ಸ್ವಾಮೀಜಿ,** ಆರ್ಯ ಈಡಿಗ ಮಹಾಸಂಸ್ಥಾನ ರೇಣುಕಾ ಪೀಠ, ಸೋಲೂರು

## ಕೆಲವರು ವಶಕ್ಕೆ: ಅಲೋಕ್ ಕುಮಾರ್

**ಮಂಗಳೂರು:** 'ಪ್ರವೀಣ್ ನೆಟ್ಟಾರು ಹತ್ಯೆಗೆ ಸಂಬಂಧಿಸಿದಂತೆ ಕೆಲವರನ್ನು ವಶಕ್ಕೆ ಪಡೆದು ಪೊಲೀಸರು ವಿಚಾರಣೆ ಮಾಡುತ್ತಿದ್ದಾರೆ. ಸದ್ಯಕ್ಕೆ ಯಾರ ಬಂಧನವೂ ಆಗಿಲ್ಲ' ಎಂದು ರಾಜ್ಯದ ಕಾನೂನು ಸುವ್ಯವಸ್ಥೆಯ ಎಡಿಜಿಪಿ ಅಲೋಕ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬೆಳ್ಳಾರೆ ಠಾಣೆ ವ್ಯಾಪ್ತಿಯಲ್ಲಿ ವಾರದ ಹಿಂದಷ್ಟೇ ಮಸೂದ್ ಎಂಬ ಯುವಕನ ಕೊಲೆ ನಡೆದಿತ್ತು. ಅದಕ್ಕೂ ಪ್ರವೀಣ್ ಕೊಲೆಗೂ ಸಂಬಂಧ ಇದೆಯೇ ಎಂಬ ಆಯಾಮದಲ್ಲೂ ಪರಿಶೀಲನೆ ನಡೆಸುತ್ತಿದ್ದೇವೆ. ಕಾಸರಗೋಡು ಕಡೆಯಿಂದ ಬಂದವರು ಹತ್ಯೆ ನಡೆಸಿರುವ ಸಾಧ್ಯತೆಯ ಬಗ್ಗೆಯು ಪರಿಶೀಲಿಸಲಾಗುತ್ತಿದೆ. ರಾಜಸ್ಥಾನದಲ್ಲಿ ಟೈಲರ್ ಕನ್ಹಯ್ಯಲಾಲ್ ಹತ್ಯೆ ಕುರಿತು ಪ್ರವೀಣ್ ತಮ್ಮ ಫೇಸ್‌ಬುಕ್‌ನಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದರು ಎಂದೂ ಕೆಲವರು ಗಮನಕ್ಕೆ ತಂದಿದ್ದಾರೆ. ಈ ಕಾರಣಕ್ಕೆ ಹತ್ಯೆ ನಡೆದಿದೆಯಾ ಎಂಬ ಆಯಾಮದಲ್ಲೂ ತನಿಖೆ ನಡೆಸುತ್ತೇವೆ' ಎಂದರು.

'ಪ್ರಕರಣದ ತನಿಖೆಗಾಗಿ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್, ಮಂಗಳೂರು ನಗರ ಕಮಿಷನರೇಟ್ ಹಾಗೂ ಮಂಗಳೂರು ಸಿಸಿಬಿ ಪೊಲೀಸರ ವಿಶೇಷ ತಂಡಗಳನ್ನು ರಚಿಸಲಾಗಿದೆ. ಈ ವಿಶೇಷ ತಂಡಗಳು ತನಿಖೆಯಲ್ಲಿ ತೊಡಗಿವೆ' ಎಂದರು.

## 'ಸಾವಿನ ಮನೆಯಲ್ಲಿ ಸಂಭ್ರಮ ಬೇಕೆ?'

**ಬೆಂಗಳೂರು:** ರಾಜ್ಯ ಸಾವಿನ ಮನೆಯಾಗಿದೆ. ಇಂಥಹ ಸಂದರ್ಭದಲ್ಲಿ ಸರ್ಕಾರದ ಸಂಭ್ರಮಾಚರಣೆ ಬೇಕೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮನೆಯಿಂದ ಹೊರ ಹೋದವರು ಸುರಕ್ಷಿತವಾಗಿ ಮರಳುತ್ತಾರೆ ಎಂಬ ಖಾತರಿ ಇಲ್ಲ. ಜನರಿಗೆ ರಕ್ಷಣೆ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ನಿರಂತರವಾಗಿ ಹತ್ಯೆಗಳು ನಡೆಯುತ್ತಿವೆ. ಇವರ ಸಂಭ್ರಮಾಚರಣೆ ಯಾರಿಗೆ ಬೇಕಿದೆ' ಎಂದು ಕೇಳಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯುವಕನೊಬ್ಬನ ಹತ್ಯೆ ನಡೆದಿದೆ. ಈಗ ಎಲ್ಲರೂ ಹೋಗಿ ಸಾಂತ್ವನ ಹೇಳಿ, ಪರಿಹಾರ ಕೊಡುತ್ತಿದ್ದಾರೆ. ಕೃತಕವಾಗಿ ಸಾಂತ್ವನ ಹೇಳುವುದು, ಪರಿಹಾರ ನೀಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಹೋದ ಜೀವ ಮರಳಿ ಬರುವುದೆ? ಹತ್ಯೆಗಳನ್ನು ನಿಲ್ಲಿಸಿದರೆ ಅದೇ ದೊಡ್ಡ ಉತ್ಸವ ಎಂದರು.ರಾಜ್ಯದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸರ್ಕಾರಗಳು ಇದ್ದಾಗಲೆಲ್ಲ ಈ ರೀತಿ ಹತ್ಯೆಗಳಾಗುತ್ತವೆ. ಜೆಡಿಎಸ್ ನೇತೃತ್ವದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಇಂತಹ ಘಟನೆಗಳಿಗೆ ಅವಕಾಶ ಇರಲಿಲ್ಲ. ಸಮ್ಮಿಶ್ರ ಸರ್ಕಾರ ಪತನವಾಗಿ ಬಿಜೆಪಿ ಸರ್ಕಾರ ಬಂದ ಬಳಿಕ ಮತ್ತೆ ಅದೇ ಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು.

'ಕಠಿಣ ಕ್ರಮ ಕೇವಲ ಬಾಯಿ ಮಾತಿನಿಂದ ಆಗುವುದಿಲ್ಲ. ಬಿಜೆಪಿ ನಾಯಕರು ವೀರಾವೇಶದ ಮಾತುಗಳನ್ನು ಆಡುತ್ತಿದ್ದಾರೆ. ಇಂತಹ ಮಾತುಗಳಿಂದ ಅಶಾಂತಿ ಸೃಷ್ಟಿಯಾಗುತ್ತದೆ. ಈ ರೀತಿಯ ಘಟನೆಗಳಿಂದ ಅನುಕೂಲ ಪಡೆಯಲು ಯತ್ನಿಸುವುದು ತಪ್ಪು. ಸರಿಯಾದ ಆಡಳಿತ ಕೊಡುವುದು ಅವರ ಜವಾಬ್ದಾರಿ' ಎಂದರು.

## 'ಸರ್ಕಾರದ ಸಮರ್ಥನೆ ಮಾಡಲ್ಲ'

**ಬೆಂಗಳೂರು:** 'ಹಿಂದೂಗಳ ಹತ್ಯೆ ಆದಾಗ ಸರ್ಕಾರವನ್ನು ಸಮರ್ಥನೆ ಮಾಡಿಕೊಂಡು ಕೂರುವುದಿಲ್ಲ. ಜಿಹಾದ್ ಅನ್ನು ಕಿತ್ತು ಹಾಕಲು ಬದ್ಧರಿದ್ದೇವೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಜಿಹಾದಿಗಳ ಆಟಾಟೋಪಕ್ಕೆ ಕೊನೆಯೇ ಇಲ್ಲವೇ ಎಂಬ ಪ್ರಶ್ನೆ ಕಾಡುತ್ತಿದೆ. ಹಾಗೆಂದು ಕೈಕಟ್ಟಿ ಕೂರುವುದಿಲ್ಲ. ಜಿಹಾದ್ ವಿರುದ್ಧದ ಹೋರಾಟಕ್ಕೆ ವ್ಯವಸ್ಥೆಯನ್ನೇ ಅಣಿಗೊಳಿಸಬೇಕಾಗಿದೆ' ಎಂದೂ ಅವರು ತಿಳಿಸಿದರು. 'ಕೇಂದ್ರ ಮತ್ತು ರಾಜ್ಯ ಎರಡೂ ಕಡೆ ನಾವೇ ಇದ್ದರೂ ಜಿಹಾದಿಗಳ ಆಟಾಟೋಪಕ್ಕೆ ಕಡಿವಾಣ ಹಾಕಲು ಸಾಧ್ಯವಾಗುತ್ತಿಲ್ಲ ಎಂಬ ಅಸಹಾಯಕತೆಯನ್ನು ಕಾರ್ಯಕರ್ತರು ತೋಡಿ ಕೊಂಡಿದ್ದಾರೆ. ನಾವು ಕೇವಲ ಅಧಿಕಾರ ಮಾಡಲು ಬಂದವರಲ್ಲ. ಅವರ ಜತೆ ನಿಲ್ಲುತ್ತೇವೆ ಎಂದರು.


ಕರ್ನಾಟಕ ಸರಕಾರ

**ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಶಹಾಬಾದ**

**(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)**

ದೂರವಾಣಿ : 08474-209363 ಇ–ಮೇಲ್ : cdposhahabad3@gmail.com

ಸಂ: ಶಿಅಯೋಶ/ಮಮಅಇ/ಐಸಿಡಿಎಸ್/ಮೊಟ್ಟೆ/ಟೆಂಡರ್/2022–23/ ದಿನಾಂಕ: 26–07–2022

**ಇ–ಪ್ರೋಕ್ಯೂರಮೆಂಟ್ ಟೆಂಡರ ಪ್ರಕಟಣೆ**

ಶಹಾಬಾದ ತಾಲೂಕಿನ ಶಹಾಬಾದ ಯೋಜನೆಯ 255–ಅಂಗನವಾಡಿ ಕೇಂದ್ರದ ಫಲಾನುಭವಿಗಳಾದ 06 ತಿಂಗಳಿಂದ 06 ವರ್ಷದೊಳಗಿನ ಮಕ್ಕಳಿಗೆ, ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ವಿತರಿಸಲು ಅಗತ್ಯವಿರುವ ಕೋಳಿ ಮೊಟ್ಟೆಗಳ ಸರಬರಾಜು ಮಾಡಲು ಇ-ಟೆಂಡರನ್ನು ಅಹ್ವಾನಿಸಲಾಗಿದ್ದು, ಸದರಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ : 26–07–2022 ರಿಂದ ಕೊನೆಯ ದಿನಾಂಕ : 29–08–2022 ಸಾಯಂಕಾಲ 05:30 ಗಂಟೆಯವರೆಗೆ ಮತ್ತು ತಾಂತ್ರಿಕ ಬಿಡ್‌ನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ : 01–09–2022 ಸಮಯ : 11:00 AM ಹಾಗೂ ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ 03–09–2022 11:00 AM ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಶಹಾಬಾದ ಕಛೇರಿ, ಇವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ : 08474-209363 ಹಾಗೂ ಇ-ಮೇಲ್ ವಿಳಾಸ : cdposhahabad3@gmail.com

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಶಹಾಬಾದ

ವಾ.ಸಾ.ಸಂ.ಇ/ಕಲಬುರಗಿ/431/ಎಂ.ಸಿ.&ಎ/2022–23



**ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ**

(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮಕ್ಕೆ ಒಳಪಟ್ಟಿದೆ.)

ಸೈರಾಬಾಗ್, ನಂ.19/4, 3ನೇ ಮಹಡಿ, ಕನ್ನಿಂಗ್ ಹ್ಯಾಂ ರೋಡ್, ಬೆಂಗಳೂರು–560052 ಕಚೇರಿ ದೂರವಾಣಿ: 080–23221320/29551320

E-mail: ksskdc03@gmail.com Website: www.ksskdc.kar.nic.in

**2022–23ನೇ ಸಾಲಿನ ವಿವಿಧ ಯೋಜನೆಗಳಿಗೆ ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಫಲಾಪೇಕ್ಷಿಗಳಿಂದ ಆನ್‌ಲೈನ್ ನಲ್ಲಿ ಸುವಿಧಾ ಪೋರ್ಟಲ್ https://suvidha.karnataka.gov.in ಮೂಲಕ ಅರ್ಜಿ ಆಹ್ವಾನ**

**ಯೋಜನೆಗಳು**

**1. ಸ್ವಯಂ ಉದ್ಯೋಗ ನೇರ ಸಾಲ ಯೋಜನೆ:**

ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಮತ್ತು ಅವರ ಅವಲಂಬಿತರಿಗೆ ನೇರಸಾಲ : ಕಿರು ಆರ್ಥಿಕ ಚಟುವಟಿಕೆಗಳಾದ ತರಕಾರಿ, ಹಣ್ಣು ಹಂಪಲು, ಮೀನು, ಮಾಂಸ ಮಾರಾಟ, ಕುರಿ/ಹಂದಿ/ಮೊಲ ಸಾಕಾಣಿಕೆ, ತಳ್ಳುವ ಗಾಡಿ ಘಟಕಗಳನ್ನು ಸ್ಥಾಪಿಸಲು ದುಡಿಮೆ ಬಂಡವಾಳ ಸೇರಿದಂತೆ ಮುಂತಾದ ಚಟುವಟಿಕೆಗಳಿಗೆ ಘಟಕ ವೆಚ್ಚ ರೂ.1,00,000/– ಈ ಪೈಕಿ ಶೇ.50 ಸಾಲ ಮತ್ತು ಶೇ.50 ಸಹಾಯಧನ.

**2. ಸ್ವಯಂ ಉದ್ಯೋಗ ಉದ್ಯಮ ಶೀಲತಾ ಯೋಜನೆ–1 :**

ರೂ. 2.00 ಲಕ್ಷಗಳ ಸಹಾಯಧನದ ಸೌಲಭ್ಯವನ್ನು ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಮತ್ತು ಅವಲಂಬಿತರಿಗೆ ವಿವಿಧ ಯೋಜನೆಗಳಡಿ ಘಟಕ ವೆಚ್ಚದ ಶೇ.70 ರಷ್ಟು ಅಥವಾ ಗರಿಷ್ಟ ರೂ.2.00 ಲಕ್ಷದವರೆಗೆ ಸಹಾಯಧನ ಹಾಗೂ ಬ್ಯಾಂಕ್ ಸಾಲ ( ಕನಿಷ್ಟ ಒಂದು ಲಕ್ಷ ಬ್ಯಾಂಕ್ ಸಾಲ ಪಡೆಯುವುದು).

**3. ಉದ್ಯಮ ಶೀಲತಾ ಯೋಜನೆ–2:**

ರೂ. 3.50 ಲಕ್ಷ ಸಹಾಯಧನ ಸೌಲಭ್ಯವನ್ನು ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಮತ್ತು ಅವಲಂಬಿತರಿಗೆ ವಿವಿಧ ಯೋಜನೆಗಳಡಿ ಘಟಕ ವೆಚ್ಚದ ಶೇ.70 ರಷ್ಟು ಅಥವಾ ಗರಿಷ್ಟ ರೂ.3.50 ಲಕ್ಷದವರೆಗೆ ಸಹಾಯಧನ ಹಾಗೂ ಬ್ಯಾಂಕ್ ಸಾಲ. (ಕನಿಷ್ಟ ಒಂದುವರೆ ಲಕ್ಷ ಬ್ಯಾಂಕ್ ಸಾಲ ಪಡೆಯುವುದು).

**4. ಮೈಕ್ರೋ ಕ್ರೆಡಿಟ್ ಯೋಜನೆ:**

ಘಟಕ ವೆಚ್ಚ ರೂ.2.50 ಲಕ್ಷಗಳ ಮೇಲ್ಪಟ್ಟ ಘಟಕಗಳಿಗೆ ರೂ.1,50,000/– ಸಹಾಯಧನ ಉಳಿದ ರೂ.1,00,000/– ಸಾಲ. ಮಹಿಳಾ ಸ್ವ ಸಹಾಯ ಸಂಘಗಳ ಆರ್ಥಿಕ ಚಟುವಟಿಕೆಗಾಗಿ (ಕನಿಷ್ಟ 10 ಮಹಿಳಾ ಸದಸ್ಯರುಗಳು) (ಸ್ವಯಂ ಉದ್ಯೋಗ ಕೇಂದ್ರಗಳು) (100 ಸ್ವ ಸಹಾಯ ಗುಂಪುಗಳಿಗೆ ಪ್ರತಿ ಸದಸ್ಯರಿಗೆ ರೂ.25,000/–) ಸಹಾಯಧನ ರೂ.1,50,000/– ಮತ್ತು ಬೀಜಧನ ರೂ.1,00,000/– ಒಂದೂವರೆ ಲಕ್ಷ ಬ್ಯಾಂಕ್ ಸಾಲ ಪಡೆಯುವುದು).

**5. ಭೂ ಒಡೆತನ ಯೋಜನೆ:**

ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಮತ್ತು ಅವರ ಅವಲಂಬಿತರ ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ತಮ್ಮ ವಾಸ ಸ್ಥಳದಿಂದ 10 ಕೀ.ಮೀ ವ್ಯಾಪ್ತಿಯೊಳಗೆ ಕೃಷಿಗೆ ಯೋಗ್ಯವಾದ 02 ಎಕರೆ ಖುಷ್ಕಿ ಅಥವಾ 01 ಎಕರೆ ತರಿ ಜಮೀನು ಖರೀದಿಸಲು ಸಹಾಯಧನ ಮತ್ತು ಸಾಲ ನೀಡಲಾಗುವುದು.

**ಅರ್ಜಿ ಸಲ್ಲಿಸುವ ವಿಧಾನ: ಫಲಾಪೇಕ್ಷಿಗಳು ಅರ್ಜಿಯನ್ನು ಆನ್‌ಲೈನ್ ಮೂಲಕ ಮತ್ತು ದಾಖಲೆಗಳನ್ನು ಸುವಿಧಾ ಪೋರ್ಟಲ್ https://suvidha.karnataka.gov.in ನಲ್ಲಿ ಸಲ್ಲಿಸುವುದು.**

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20.08.2022**

**ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲಾ ವ್ಯವಸ್ಥಾಪಕರು, ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ / ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ರವರನ್ನು ಸಂಪರ್ಕಿಸಬಹುದು**

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ವಾ.ಸಾ.ಸಂ.ಇ/ವಾಪ್ರ/1521/ಆಕಾರ್/22-23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**

**ಟೆಂಡರ್‌ಗಾಗಿ ಆಹ್ವಾನ**

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

| ಕ್ರ.ಸಂ. | ಕಾಮಗಾರಿ ವಿವರ | ಕಾಮಗಾರಿಗಿಟ್ಟ ಮೊತ್ತ / ಇಎಂಡಿ ಮೊತ್ತ |
|---|---|---|
| | **ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ)–ಪಶ್ಚಿಮ, 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009** | |
| | ಐಎಫ್‌ಟಿ ಸಂಖ್ಯೆ : ಬೆಂಜಮಂ/ಮುಅ(ತ್ಯಾನೀನಿ)–ಪ/ಅಮುಅ(ತ್ಯಾನೀನಿ)–ಪ/ಉಮುಅ(ತ್ಯಾನೀನಿ)/29/2022–23 | ದಿನಾಂಕ:25.07.2022 |
| 1 | ಬೆಂಗಳೂರಿನ ರಾಚೇನಹಳ್ಳಿ ಕೆರೆ ಪಕ್ಕದಲ್ಲಿರುವ ಮಹಾತ್ಮ ಗಾಂಧಿ ಗ್ರಾಮೀಣ ಶಕ್ತಿ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ಜೈವಿಕ ಪೋಷಕಾಂಶ ತೆಗೆಯುವಿಕೆಯೊಂದಿಗೆ ಅನುಕ್ರಮ ಬ್ಯಾಚ್ ರಿಯಾಕ್ಟರ್ ಪ್ರಕ್ರಿಯೆಯ ಆಧಾರದ ಮೇಲೆ 10 ಎಂಎಲ್‌ಡಿ ತ್ಯಾಜ್ಯನೀರಿನ ಸಂಸ್ಕರಣಾ ಘಟಕದ ವಿನ್ಯಾಸ ಮತ್ತು ನಿರ್ಮಾಣ ಮತ್ತು ಎಲ್ಲಾ ಉಪಕರಣಗಳ ಸಾಮಾನ್ಯ ಮತ್ತು ಬೃಹತ್ ದುರಸ್ತಿ ಸೇರಿದಂತೆ ತ್ಯಾಜ್ಯನೀರು ಸಂಸ್ಕರಣಾ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆ ಹಾಗೂ ಘಟಕದ ಕಾರ್ಯಾಚರಣೆಗೆ ಅಗತ್ಯವಿರುವ ಎಲ್ಲಾ ಬಿಡಿಭಾಗಗಳು, ತೈಲ ಮತ್ತು ಲೂಬ್ರಿಕಂಟ್‌ಗಳ ಸರಬರಾಜು, ಮೇಲ್ವಿಚಾರಕ ಮತ್ತು ಭದ್ರತಾ ಸಿಬ್ಬಂದಿಗಳ ಪೂರೈಕೆ, ಎಲ್ಲಾ ಪ್ರಾಸಂಗಿಕ ವಸ್ತುಗಳನ್ನು ಒಳಗೊಂಡಂತೆ ಉದ್ಯಾನವನಗಳು ಮತ್ತು ಮರಗಳ ನಿರ್ವಹಣಾ ಕಾಮಗಾರಿಗಳು, ದಿನಪೂರ್ತಿ 5 ವರ್ಷಗಳ ಅವಧಿಗೆ. | CAPEX - ರೂ. 2756 ಲಕ್ಷಗಳು OPEX - ರೂ. 578 ಲಕ್ಷಗಳು ಒಟ್ಟು ರೂ. 3334 ಲಕ್ಷಗಳು / ರೂ. 33.35 ಲಕ್ಷಗಳು |

ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : **29.08.2022 ರ ಸಂಜೆ 4.00 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **01.09.2022 ರ ಸಂಜೆ 4.00 ಗಂಟೆಗೆ.**

ಸಹಿ/–
ಮುಖ್ಯ ಅಭಿಯಂತರರು(ತ್ಯಾನೀನಿ)–ಪಶ್ಚಿಮ

| ಕ್ರ.ಸಂ. | ಕಾಮಗಾರಿ ವಿವರ | ಕಾಮಗಾರಿಗಿಟ್ಟ ಮೊತ್ತ / ಇಎಂಡಿ ಮೊತ್ತ |
|---|---|---|
| | **ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ & ಗುಆ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009** | |
| | ಐಎಫ್‌ಟಿ ಸಂಖ್ಯೆ : ಬೆಂಜಮಂ/ಸಿಇಡಿಕ್ಯೂಎಟಿಇ/ಅಮುಅ(ಎಂಐಎಸ್)/ತಾಂಸ(ವಿ)/535/2022–23 | ದಿನಾಂಕ:27.07.2022 |
| 2 | ಬೆಂಗಳೂರು ಜಲ ಮಂಡಳಿ ಕಚೇರಿಗಳಲ್ಲಿ ಸ್ಪಾಟ್ ಬಿಲ್ಲಿಂಗ್ ಪ್ರಿಂಟರ್‌ಗಳೊಂದಿಗೆ ಹ್ಯಾಂಡ್ ಹೆಲ್ಡ್ ಟರ್ಮಿನಲ್‌ಗಳ ನೇಮಕ ಕಾಮಗಾರಿ ( ಕರೆ–2). | ರೂ. 7.37 ಕೋಟಿಗಳು / ರೂ. 11.05 ಲಕ್ಷಗಳು |

ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : **29.08.2022 ರ ಸಂಜೆ 4.00 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **01.09.2022 ರ ಮಧ್ಯಾಹ್ನ 3.00 ಗಂಟೆಗೆ.**

ಸಹಿ/–
ಮುಖ್ಯ ಅಭಿಯಂತರರು (ವಿನ್ಯಾಸ & ಗುಆ)

ಟೆಂಡರ್ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ವಿವರಗಳನ್ನು https://eproc.karnataka.gov.in ಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ವಾಪ್ರ/ಜೆಎ/1531/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಬೆಂಗಳೂರು ವಿಶ್ವವಿದ್ಯಾಲಯ**

NAAC Accredited with 'A' GRADE

ಜ್ಞಾನಭಾರತಿ, ಬೆಂಗಳೂರು – 560056

ಸಂಖ್ಯೆ:ಎಸಿಎ–IV/ಬೆಂ.ವಿ./5ವರ್ಷದ ಇಂಟಿಕೋರ್ಸ್/2022–23 ದಿನಾಂಕ: 22.07.2022

**ಅಧಿಸೂಚನೆ**

**ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ: 21.07.2022**

2022–23ನೇ ಶೈಕ್ಷಣಿಕ ಸಾಲಿಗೆ ಬೆಂಗಳೂರು ವಿಶ್ವವಿದ್ಯಾಲಯವು ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅಡಿಯಲ್ಲಿ ಈ ಕೆಳಕಂಡ ಕೋರ್ಸುಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

| ಕ್ರ.ಸಂ. | ಪ್ರೋಗ್ರಾಮ್ ಹೆಸರು | ಪ್ರವೇಶಾತಿಯ ಅರ್ಹತೆ ಮಾನದಂಡ |
|---|---|---|
| 1* | ಬಿ.ಎಸ್‌ಸಿ. ಮತ್ತು ಎಂ.ಎಸ್‌ಸಿ. ಭೂಗೋಳಶಾಸ್ತ್ರ ಜಿಯೋಇನ್ಫರ್ಮ್ಯಾಟಿಕ್ಸ್ ಅಥವಾ ನೈಸರ್ಗಿಕ ವಿಪತ್ತು ನಿರ್ವಹಣೆಯ ವಿಶೇಷತೆಯೊಂದಿಗೆ 5 ವರ್ಷಗಳ ಇಂಟಿಗ್ರೇಟೆಡ್ ಪ್ರೋಗ್ರಾಮ್. | ಕರ್ನಾಟಕದ ಪದವಿ ಪೂರ್ವ ಶಿಕ್ಷಣ ಬೋರ್ಡ್ ನಡೆಸುವ ಎರಡು ವರ್ಷಗಳ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಅಥವಾ CBSE ಅಥವಾ ICSE ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ವಿಜ್ಞಾನ, ವಾಣಿಜ್ಯ ಹಾಗೂ ಕಲಾ ಅಧ್ಯಯನದಲ್ಲಿ ಭೂಗೋಳ ಒಂದು ವಿಷಯವಾಗಿ ಅಭ್ಯಯಿಸಿರುವ ಅಭ್ಯರ್ಥಿಗಳು ಪ್ರವೇಶ ಪಡೆಯಲು ಅರ್ಹರಿರುತ್ತಾರೆ. ಹಾಗೂ ಅರ್ಹತಾ ಪರೀಕ್ಷೆಯಲ್ಲಿ ಶೇ.50ರಷ್ಟು ಅಂಕಗಳನ್ನು ಗಳಿಸಿರಬೇಕು. |
| | * ಪ್ರವೇಶ ಸಂಖ್ಯೆ 10 ವಿದ್ಯಾರ್ಥಿಗಳಿಗಿಂತ ಕಡಿಮೆಯಾದಲ್ಲಿ 2022–23ನೇ ಸಾಲಿಗೆ ಕೋರ್ಸ್‌ನ್ನು ನಡೆಸಲಾಗುವುದಿಲ್ಲ. | |
| 2. | 5 ವರ್ಷಗಳ ಎಂ.ಎಸ್‌ಸಿ. ಜೈವಿಕ ವಿಜ್ಞಾನ ಸ್ನಾತಕೋತ್ತರ ಪದವಿ (ಇಂಟಿಗ್ರೇಟೆಡ್) ಪ್ರೋಗ್ರಾಮ್. | ಐದು ವರ್ಷದ **ಇಂಟಿಗ್ರೇಟೆಡ್ ಜೈವಿಕ ವಿಜ್ಞಾನ ಸ್ನಾತಕೋತ್ತರ** ಕೋರ್ಸ್‌ಗೆ ದ್ವಿತೀಯ ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪ್ರತಿಶತ 50%ರಷ್ಟು ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಅರ್ಹತರಾಗಿರುತ್ತಾರೆ. |
| 3. | ನಾಲ್ಕು ವರ್ಷದ ಬಿ.ಎ., ಬಿ.ಕಾಂ. ಮತ್ತು ಬಿ.ಬಿ.ಎ. ಹಾನರ್ಸ್ ಪದವಿ ಪ್ರೋಗ್ರಾಮ್. | ಎರಡು ವರ್ಷದ ಪಿಯುಸಿ ಅಥವಾ ತತ್ಸಮಾನ ಕಲೆ/ವಿಜ್ಞಾನ/ವಾಣಿಜ್ಯ ವಿಷಯಗಳ ಐಚ್ಚಿಕ ಮತ್ತು ಕನಿಷ್ಠ 50% ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಅರ್ಹತರಾಗಿರುತ್ತಾರೆ. |
| 4. | ನಾಲ್ಕು ವರ್ಷದ ಬಿ.ಎಸ್‌ಸಿ. ಹಾನರ್ಸ್ ಪದವಿ ಪ್ರೋಗ್ರಾಮ್. | ಎರಡು ವರ್ಷದ ಪಿಯುಸಿ ಅಥವಾ ತತ್ಸಮಾನವನ್ನು ಕಡ್ಡಾಯವಾಗಿ, ಗಣಿತ ಮತ್ತು ವಿಜ್ಞಾನ ವಿಷಯಗಳ ಐಚ್ಚಿಕ ಮತ್ತು ಕನಿಷ್ಠ 50% ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಅರ್ಹತರಾಗಿರುತ್ತಾರೆ. |

ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ಅಭ್ಯರ್ಥಿಗಳಿಗೆ ಪ್ರತಿಶತ 45%ರಷ್ಟು ಅಂಕಗಳು. **ಅಭ್ಯರ್ಥಿಗಳ ಅಯ್ಕೆಯ ಪ್ರಕ್ರಿಯೆಯನ್ನು ಅವರುಗಳಿಸಿದ ಅಂಕಗಳ ಜೇಷ್ಠತಾ ಅಧಾರದ ಮೇಲೆ ನಿರ್ಧರಿಸಲಾಗುವುದು.**

**ಟಿಪ್ಪಣಿ:** ಅಭ್ಯರ್ಥಿಗಳು ಯು.ಯು.ಸಿ.ಎಂ.ಎಸ್ ಪೋರ್ಟಲ್ **https://uucms.karnataka.gov.in/** ಮುಖಾಂತರ ಅರ್ಜಿಗಳನ್ನು ಸಲ್ಲಿಸಬೇಕಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್‌ಗೆ ಭೇಟಿ ನೀಡಿ **www.bangaloreuniversity.ac.in** ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 16.08.2022.**

**ಸಹಿ/–, ಕುಲಸಚಿವರು**

# ಅಭಿಮತ



**ಸುಭಾಷಿತ**
ತನಗೂ ಒಂದು ದಿನ ಸಾವಿದೆ ಎಂದು ಅರಿತವನು ಇನ್ನೊಬ್ಬರಿಗೆ ಎಂದೂ ತೊಂದರೆ ಕೊಡುವುದಿಲ್ಲ.
–ಗೌತಮ ಬುದ್ಧ

## ವೈದ್ಯಕೀಯ ಗರ್ಭಪಾತಕ್ಕೆ ಅವಕಾಶ ಮಹಿಳೆಯರ ಹಕ್ಕುಗಳಿಗೆ ಜಯ

**ಒಬ್ಬ** ಮಹಿಳೆಯು ವಿವಾಹಿತೆಯಲ್ಲ ಎಂಬ ಒಂದೇ ಕಾರಣಕ್ಕೆ ಆಕೆಗೆ ವೈದ್ಯಕೀಯ ಗರ್ಭಪಾತದ ಸೌಲಭ್ಯವನ್ನು ನಿರಾಕರಿಸಲು ಅವಕಾಶವಿಲ್ಲ ಎಂದು ಸುಪ್ರೀಂ ಕೋರ್ಟ್ ಈಚೆಗೆ ಸ್ಪಷ್ಟಪಡಿಸಿದೆ. ಈ ಮೂಲಕ ಕೋರ್ಟ್, ಗರ್ಭಪಾತಕ್ಕೆ ಸಂಬಂಧಿಸಿದ ಕಾನೂನಿನ ನಿಜವಾದ ಆಶಯವನ್ನು, ಉದ್ದೇಶವನ್ನು ಗಟ್ಟಿಯಾಗಿ ಸಾರಿದೆ. ಇದು ಸ್ವಾಗತಾರ್ಹ. ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ, 25 ವರ್ಷ ವಯಸ್ಸಿನ ಒಬ್ಬ ಮಹಿಳೆಗೆ 24 ವಾರಗಳ ಭ್ರೂಣವನ್ನು ತೆಗೆಸಲು ಅವಕಾಶ ಕಲ್ಪಿಸಿದೆ, ದೆಹಲಿ ಹೈಕೋರ್ಟ್ ಆದೇಶವನ್ನು ಅಸಿಂಧುಗೊಳಿಸಿದೆ. ಗರ್ಭಪಾತ ಮಾಡುವುದು ಮಗುವನ್ನು ಕೊಲ್ಲುವುದಕ್ಕೆ ಸಮ ಎಂದು ಹೇಳಿದ್ದ ಹೈಕೋರ್ಟ್, ಆ ಮಹಿಳೆಯ ಅರ್ಜಿಯನ್ನು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಮಹಿಳೆಯು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಸಮ್ಮತಿಯ ಸಂಬಂಧದ ಕಾರಣದಿಂದಾಗಿಯೇ ತಾನು ಗರ್ಭ ಧರಿಸಿದ್ದು, ಜೊತೆಗಾರನು ತನ್ನನ್ನು ಮದುವೆಯಾಗಲು ನಿರಾಕರಿಸಿರುವ ಕಾರಣ ಗರ್ಭಪಾತ ಮಾಡಿಸಿಕೊಳ್ಳಲು ಬಯಸಿರುವುದಾಗಿ ಆ ಮಹಿಳೆ ಹೇಳಿದ್ದರು. ಮದುವೆಯಾಗದೆ ಇರುವ ಕಾರಣಕ್ಕಾಗಿ ತಾನು ಸಮಾಜದಲ್ಲಿ ಇತರರಿಂದ ನಿಂದನೆಗೆ ಗುರಿಯಾಗುವ ಭಯ ಕಾಡುತ್ತಿದೆ ಎಂದೂ ಅವರು ಹೇಳಿದ್ದರು. ಆದರೆ, ಭ್ರೂಣದ ವಯಸ್ಸು 20–24 ವಾರಗಳ ನಡುವೆ ಇದ್ದಾಗ, ಅವಿವಾಹಿತ ಮಹಿಳೆಗೆ ಗರ್ಭಪಾತಕ್ಕೆ ಅವಕಾಶ ಕೊಡಲಾಗದು. ಅದರಲ್ಲೂ, ಆಕೆ ಮತ್ತು ಜೊತೆಗಾರನ ನಡುವಿನ ಸಂಬಂಧದ ಸ್ವರೂಪ ಬದಲಾಗಿದೆ ಎಂಬ ಕಾರಣಕ್ಕೆ ಗರ್ಭಪಾತಕ್ಕೆ ಅವಕಾಶ ಕೊಡಲು ಆಗುವುದಿಲ್ಲ ಎಂದು ದೆಹಲಿ ಹೈಕೋರ್ಟ್ ಹೇಳಿತ್ತು. ಇಂತಹ ಪರಿಸ್ಥಿತಿಯಲ್ಲಿ ಗರ್ಭಪಾತಕ್ಕೆ ಅವಕಾಶ ಮಾಡಿಕೊಡುವುದು ಕಾನೂನಿಗೆ ಮೀರಿದ ಕೆಲಸವಾಗುತ್ತದೆ ಎಂದು ಅದು ಅಭಿಪ್ರಾಯಪಟ್ಟಿತ್ತು.



ಗರ್ಭಪಾತಕ್ಕೆ ಸಂಬಂಧಿಸಿದ ಕಾನೂನಿನ ನಿಜವಾದ ಆಶಯವನ್ನು, ಉದ್ದೇಶವನ್ನು ಸುಪ್ರೀಂ ಕೋರ್ಟ್ ತೀರ್ಪು ಗಟ್ಟಿಯಾಗಿ ಸಾರಿದೆ

ವೈದ್ಯಕೀಯ ಗರ್ಭಪಾತ (ಎಂಟಿಪಿ) ಕಾಯ್ದೆ– 1971ರ ಆಶಯಗಳಿಗೂ, ಮಹಿಳೆಯು ವಿವಾಹಿತೆಯೋ ಅಲ್ಲವೋ ಎಂಬುದಕ್ಕೂ ಸಂಬಂಧ ಇಲ್ಲ ಎಂದು ಸುಪ್ರೀಂ ಕೋರ್ಟ್ ಈಗ ಸ್ಪಷ್ಟವಾಗಿ ಸಾರಿದೆ. ಜನ್ಮನೀಡುವ ಹಕ್ಕುಗಳ ವಿಚಾರವಾಗಿ ತೀರ್ಮಾನ ಕೈಗೊಳ್ಳುವ ಅಧಿಕಾರವು ಮಹಿಳೆಗೆ ಇರುತ್ತದೆ ಎಂಬ ನೆಲೆಯಲ್ಲಿಯೇ ಈ ಕಾಯ್ದೆಯನ್ನು ಅರ್ಥೈಸಿಕೊಳ್ಳಬೇಕು ಎಂಬುದು ಸರಿಯಾದ ನಿಲುವು. ಮಹಿಳೆಯು ತಾನು ವಿವಾಹಿತೆಯೋ ಅಲ್ಲವೋ ಎಂಬುದನ್ನು ಆಧರಿಸಿ ಈ ವಿಚಾರವಾಗಿ ತೀರ್ಮಾನ ಕೈಗೊಳ್ಳಬೇಕು ಎನ್ನುವುದು ಈ ಕಾಯ್ದೆಯ ಉದ್ದೇಶಕ್ಕೆ ವಿರುದ್ಧವಾದ ನಿಲುವಾಗುತ್ತದೆ. ಆದರೆ, ಈ ಕಾಯ್ದೆಯು ಮಹಿಳೆಗೆ ನೀಡಿರುವ ಸ್ವಾಯತ್ತೆಯನ್ನು ದೆಹಲಿ ಹೈಕೋರ್ಟ್ ಪೂರ್ಣ ಪ್ರಮಾಣದಲ್ಲಿ ಗುರುತಿಸಲಿಲ್ಲ. ಅದು ಪುರುಷ ಪ್ರಧಾನ ನೆಲೆಯಲ್ಲಿ ಮಹಿಳೆಯರ ಹಕ್ಕುಗಳನ್ನು ಗ್ರಹಿಸಿತು. ಮಗು ಜನಿಸಿದ ನಂತರ ಅದನ್ನು ದತ್ತು ನೀಡಲು ಅವಕಾಶ ಕಲ್ಪಿಸುವ ಆಯ್ಕೆಯನ್ನು ಮಹಿಳೆಗೆ ನೀಡಬಹುದು ಎಂದು ಕೋರ್ಟ್ ಹೇಳಿದ್ದನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ಮಗು ಬೇಕೇ ಬೇಡವೇ ಎಂಬ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವನ್ನು ಕಾನೂನು ಮಹಿಳೆಗೆ ನೀಡಿದೆ ಎಂಬುದನ್ನು ಹೈಕೋರ್ಟ್ ಗಮನಿಸಲಿಲ್ಲ.

ವೈದ್ಯಕೀಯ ಗರ್ಭಪಾತ ಕಾಯ್ದೆಯನ್ನು ಹಲವು ವಿಧಗಳಲ್ಲಿ ವ್ಯಾಖ್ಯಾನಿಸಲಾಗಿದೆ. ಜನಸಂಖ್ಯಾ ಹೆಚ್ಚಳದ ವಿರುದ್ಧದ ಹೋರಾಟದಲ್ಲಿ ಇದು ಒಂದು ಅಸ್ತ್ರ ಎಂಬಂತೆ ಕಾಣಲಾಗಿದೆ. ಜೀವ ಪರ ಹಾಗೂ ಜೀವ ವಿರೋಧಿ ಎಂಬ ನೆಲೆಗಳಲ್ಲಿಯೂ ಈ ಕಾಯ್ದೆಯನ್ನು ವ್ಯಾಖ್ಯಾನಿಸಲಾಗಿದೆ. ಅಲ್ಲದೆ, ಇದು ದುರ್ಬಳಕೆಗೆ ಅವಕಾಶ ಮಾಡಿಕೊಡುವ ಕಾನೂನು ಎಂದು ಕೂಡ ಕೆಲವರು ಹೇಳಿದ್ದಾರೆ. ಆದರೆ, ಈ ಕಾಯ್ದೆಯ ಹಾಗೂ ಇದಕ್ಕೆ 2021ರಲ್ಲಿ ತರಲಾಗಿರುವ ತಿದ್ದುಪಡಿಯ ನಿಜವಾದ ಗುರಿ ಇರುವುದು ಮಹಿಳೆಗೆ ಆಕೆಯ ದೇಹ ಮತ್ತು ಆರೋಗ್ಯದ ಮೇಲೆ ಹೆಚ್ಚಿನ ಅಧಿಕಾರ ನೀಡುವುದು. ಕಾಯ್ದೆಯ ವ್ಯಾಪ್ತಿಯನ್ನು 2021ರ ತಿದ್ದುಪಡಿಯ ಮೂಲಕ ಹಿಗ್ಗಿಸಲಾಗಿದೆ. ಭಾರತದಲ್ಲಿ ಇಂಥದ್ದೊಂದು ಕಾನೂನು ಜಾರಿಯಲ್ಲಿ ಇದೆ ಎಂಬುದು ಹೆಮ್ಮೆಯ ವಿಷಯ. ಅಮೆರಿಕ ಸೇರಿದಂತೆ ವಿಶ್ವದ ಹಲವು ದೇಶಗಳಲ್ಲಿ ಈ ಮಾದರಿಯ ಕಾನೂನು ಇಲ್ಲ ಎಂಬುದು ಕೂಡ ಗಮನಾರ್ಹ.

### ದಿನದ ಟ್ವೀಟ್

**ಟ್ರಾಫಿಕ್ ಜಾಮ್‌ಗೆ ಕಾರಣ**



**ಬೆಂಗಳೂರಿನ ದೊಡ್ಡ ಸಮಸ್ಯೆಯಾದ ಟ್ರಾಫಿಕ್ ಜಾಮ್‌ಗೆ ಕಾರಣ ಆಗುವವರು ಓಲಾ, ಉಬರ್ ಮತ್ತು ಇತರ ಟ್ಯಾಕ್ಸಿ ಚಾಲಕರು. ತಿರುವು ತೆಗೆದುಕೊಳ್ಳುವಾಗ, ಮ್ಯಾಪ್ ಬಳಸುವಾಗ ರಸ್ತೆಯ ನಿಯಮಗಳನ್ನು ಅವರು ತಿಳಿದಿರಬೇಕು. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕು, ಚಾಲಕರಿಗೆ ಸಲಹೆ ನೀಡಬೇಕು.**

**ಸುನಿಲ್ ಜೋಶಿ,** ಮಾಜಿ ಕ್ರಿಕೆಟಿಗ

### ಕಿಡಿನುಡಿ



**ನಮಗೆ ಅಚ್ಛೇದಿನ್ ಬೇಡ ಸ್ವಾಮಿ, ಅಚ್ಛೇರಸ್ತೆ ಕೊಟ್ಟುಬಿಡಿ ಸಾಕು. ಉತ್ತಮ ರಸ್ತೆ ಇದ್ದರೆ ಇಂಧನ ಕಡಿಮೆ ಖರ್ಚಾಗುತ್ತದೆ, ಗಾಡಿ ಒಳ್ಳೆಯ ಕ್ಷಮತೆ ಕೊಡುತ್ತದೆ. ದೀರ್ಘಾವಧಿಯಲ್ಲಿ ವಾಹನಗಳ ಮೈಲೇಜ್ ಹೆಚ್ಚಾದಂತೆ ಇಂಧನ ಉಳಿಯುತ್ತದೆ, ಹಣವೂ ಉಳಿಯುತ್ತದೆ. ಉಳಿದ ಹಣದಲ್ಲಿ ಅಚ್ಛೇದಿನ್ ನಾವೇ ಕಂಡುಕೊಳ್ಳುತ್ತೇವೆ. ಅಮದು ಕಡಿಮೆ ಮಾಡಿ ನೀವು ಹಣ ಉಳಿಸಬಹುದು.**

**ರೋಹಿತ್ ಸಿಂಹ,** ಎಂಜಿನಿಯರ್

### 25 ವರ್ಷಗಳ ಹಿಂದೆ — ಸೋಮವಾರ, 28-7-1997

● **ಚರ್ಚೆಗೂ ಮುನ್ನ ಶಸ್ತ್ರ ತ್ಯಜಿಸಲು ಉಗ್ರರಿಗೆ ಪ್ರಧಾನಿ ಕರೆ**

**ಶ್ರೀನಗರ, ಜುಲೈ 27 (ಪಿಟಿಐ)**– ಜಮ್ಮು ಮತ್ತು ಕಾಶ್ಮೀರದಲ್ಲಿ ಕಳೆದ ಏಳು ವರ್ಷಗಳಿಂದ ನಡೆಯುತ್ತಿರುವ ಭಯೋತ್ಪಾದನೆಯನ್ನು ಕೊನೆಗಾಣಿಸುವ ದಿಸೆಯಲ್ಲಿ ಪ್ರತ್ಯೇಕತಾವಾದಿಗಳ ಜೊತೆ ಯಾವುದೇ ರೀತಿಯ ಮಾತುಕತೆ ಆರಂಭವಾಗಬೇಕಾದರೆ ಅವರು ಮೊದಲು ಶಸ್ತ್ರಾಸ್ತ್ರಗಳನ್ನು ತ್ಯಾಗ ಮಾಡಬೇಕೆಂದು ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಇಂದು ಇಲ್ಲಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತ್ಯೇಕತಾವಾದಿಗಳು ಕುತ್ತಿಗೆಗೆ ಬಂದೂಕನ್ನು ಹಾಕಿಕೊಂಡು ಬಂದರೆ ಮಾತುಕತೆ ನಡೆಸಲು ಸಾಧ್ಯವಿಲ್ಲ. ನಾನು ಅವರನ್ನೆಲ್ಲಾ ವಿಶೇಷವಾಗಿ ಯುವಕರನ್ನು ತಮ್ಮ ಸಮಸ್ಯೆಯ ಬಗ್ಗೆ ಚರ್ಚಿಸಲು ಮಾತುಕತೆಗೆ ಆಹ್ವಾನಿಸುತ್ತಿದ್ದೇನೆ ಎಂದರು.

● **‘ಜಾನಪದ ಹಾಸ್ಯ ಕಥೆಗಳು’ ತಕ್ಷಣ ವಾಪಸ್‌ಗೆ ಆದೇಶ**

**ಚಿಕ್ಕಮಗಳೂರು, ಜುಲೈ 27**– ರಾಜ್ಯ ಸಂಪನ್ಮೂಲ ಕೇಂದ್ರವು ಮುದ್ರಿಸಿ ರಾಜ್ಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಗ್ರಂಥಾಲಯಗಳಿಗೆ ಪೂರೈಕೆ ಮಾಡಿರುವ ‘ಜಾನಪದ ಹಾಸ್ಯ ಕಥೆಗಳು’ ಪುಸ್ತಕವನ್ನು ತಕ್ಷಣದಿಂದ ವಾಪಸ್ ಪಡೆಯಲು ಆದೇಶ ನೀಡಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಚ್.ಜಿ.ಗೋವಿಂದೇಗೌಡ ತಿಳಿಸಿದರು.

ಮುಗ್ಧ ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರಬಲ್ಲ ಅಶ್ಲೀಲ ಕಥೆಗಳನ್ನು ಈ ಪುಸ್ತಕ ಒಳಗೊಂಡಿದೆ ಎಂಬ ಆಕ್ಷೇಪಗಳ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಂಡಿರುವುದಾಗಿ ಅವರು ಸುದ್ದಿಗಾರರಿಗೆ ತಿಳಿಸಿದರು.

● **ಅನಾಥಾಲಯ ಸ್ಥಾಪಿಸುವ ಆಸೆ ವೀರಪ್ಪನ್‌ಗೆ**

**ಚೆನ್ನೈ, ಜುಲೈ 27 (ಯುಎನ್‌ಐ)**– ನರಹಂತಕ ವೀರಪ್ಪನ್‌ಗೆ ಈಗ ಅನಾಥಾಲಯ ಸ್ಥಾಪಿಸುವ ಹೆಬ್ಬಯಕೆ.

ಇದಕ್ಕಾಗಿ ಹೊಗೇನಕಲ್‌ನಲ್ಲಿ 2 ಎಕರೆ ಭೂಮಿ ಮಂಜೂರು ಮಾಡುವಂತೆ ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿ ಅವರಿಗೆ ಮನವಿ ಮಾಡಿಕೊಂಡಿದ್ದಾನೆ.

### 50 ವರ್ಷಗಳ ಹಿಂದೆ — ಶುಕ್ರವಾರ, 28-7-1972

● **ಉದಯವಾಯಿತು ನಮ್ಮ ಚೆಲುವ ‘ಕರ್ನಾಟಕ’**

**ಬೆಂಗಳೂರು, ಜುಲೈ 27**– ಮೈಸೂರು ಎಂಬ ಹೆಸರನ್ನು ಇತಿಹಾಸದ ಪುಟಗಳಿಗೆ ಸೇರಿಸಿ, ಹದಿನಾರರ ಹರೆಯದ ವಿಶಾಲ ರಾಜ್ಯಕ್ಕೆ ‘ಕರ್ನಾಟಕ’ವೆಂದು ಮರು ನಾಮಕರಣ ಮಾಡುವ ನಿರ್ಣಯವನ್ನು ಒಕ್ಕೊರಲಿನಿಂದ ಒಪ್ಪಿದ ವಿಧಾನಸಭೆಯಲ್ಲಿ ಇಂದು ಆನಂದ ಸಂತಸಗಳು ಕಟ್ಟೆ ಒಡೆದವು.

ಅಧ್ಯಕ್ಷೆ ಶ್ರೀಮತಿ ಕೆ.ಎಸ್. ನಾಗರತ್ನಮ್ಮ ಅವರು, ಅಧಿಕೃತ ನಿರ್ಣಯಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿದೆ ಎಂದು ಹೇಳಿದ ಕೂಡಲೇ, ಮುಖ್ಯಮಂತ್ರಿಯವರೇ ನೇತೃತ್ವ ವಹಿಸಿ ಎದ್ದು ನಿಂತಿದ್ದ ಸಭೆಯನ್ನು ಮೂರು ಬಾರಿ ‘ಕರ್ನಾಟಕಕ್ಕೆ ಜಯವಾಗಲಿ’ ಎಂದು ಕೂಗಿಸಿದಾಗ ಕಂಡ ದೃಶ್ಯ, ಕೇಳಿದ ಧ್ವನಿ, ಅಲ್ಲಿದ್ದವರಿಗೆ ಚಿರಸ್ಮರಣೀಯ.

● **ಮಹಾಭಾರತದಲ್ಲಿ ‘ಕರ್ನಾಟಕ’ ಹೆಸರಿನ ಉಲ್ಲೇಖ: ದೇಜಗೌ**

**ಮೈಸೂರು, ಜುಲೈ 27**– ‘ಕರ್ನಾಟಕ’ ಹೆಸರಿನ ಮೂಲವನ್ನು ಪ್ರಶ್ನಿಸಿ ಶ್ರೀ ಸಿ. ರಾಜಗೋಪಾಲಾಚಾರಿಯವರು ನೀಡಿರುವ ಹೇಳಿಕೆಯನ್ನು ಮೈಸೂರು ವಿಶ್ವವಿದ್ಯಾಲಯದ ಉಪ ಕುಲಪತಿ ಪ್ರೊ.ದೇ. ಜವರೇಗೌಡ ಅವರು ಪ್ರಸ್ತಾಪಿಸಿ ‘ಈ ಹಿರಿಯ ರಾಜಕಾರಣಿ ಹೇಳಿದುದನ್ನೆಲ್ಲ ಎಲ್ಲರೂ ಒಪ್ಪಿಕೊಳ್ಳಬೇಕೆಂದೇನೂ ಇಲ್ಲ’ ಎಂದು ತಿಳಿಸಿದ್ದಾರೆ.

ಮಹಾಭಾರತದಲ್ಲಿ ‘ಕರ್ನಾಟಕ’ ಹೆಸರಿನ ಉಲ್ಲೇಖವಿದೆಯೆಂದೂ ಅದರ ಅರ್ಥ ಉನ್ನತ ಪ್ರದೇಶ ಎಂದೂ, ಮೂರನೇ ಶತಮಾನದ ತಮಿಳು ಪುಸ್ತಕವೊಂದರಲ್ಲಿ ಈ ಹೆಸರಿನ ಉಲ್ಲೇಖವಾಗಿದೆಯೆಂದೂ ದೇಜಗೌ ತಿಳಿಸಿದ್ದಾರೆ.

## ‘ಸಿದ್ದರಾಮೋತ್ಸವ’ಕ್ಕಿಂತ ಈಗ ಬೇಕಿರುವುದು ಬದ್ಧರಾಮೋತ್ಸವ

# ಕಾಣದ ಪದವಿಗೆ ಹಂಬಲಿಸಿದೆ ಮನ!



ಅನುಸಂಧಾನ
ರವೀಂದ್ರ ಭಟ್ಟ

**ರಾಜ್ಯದಲ್ಲಿ** ನಡೆದ ಗೋಕಾಕ್ ಚಳವಳಿಯ ನಂತರ ಡಾ.ರಾಜ್‌ಕುಮಾರ್ ಅವರ ಜನಪ್ರಿಯತೆ ಉತ್ತುಂಗದಲ್ಲಿತ್ತು. ಆಗ ಒಂದಿಷ್ಟು ಮಂದಿ ರಾಜ್‌ಕುಮಾರ್ ಅವರಿಗೆ ‘ನೀವು ರಾಜಕೀಯ ಪ್ರವೇಶ ಮಾಡಿ’ ಎಂದು ಸಲಹೆ ಮಾಡಿದರು. ‘ಹೌದಾ, ರಾಜಕೀಯ ಪ್ರವೇಶ ಮಾಡಿದರೆ ಏನಾಗುತ್ತದೆ?’ ಎಂದು ಡಾ.ರಾಜ್ ಪ್ರಶ್ನೆ ಮಾಡಿದರು. ‘ರಾಜಕೀಯ ಪ್ರವೇಶ ಮಾಡಿದರೆ ನೀವು ಮುಖ್ಯಮಂತ್ರಿ ಆಗ್ತೀರಿ’ ಎಂದು ಇವರು ಪುಸಲಾಯಿಸಿದರು. ತಕ್ಷಣವೇ ನಕ್ಕ ರಾಜ್‌ಕುಮಾರ್ ‘ಏನ್ರಪಾ ನೀವು, ಈ ರಾಜ್ಯದ ಜನ ನನ್ನನ್ನು ರಾಜನನ್ನಾಗಿ ಮಾಡಿದ್ದಾರೆ. ನೀವು ನೋಡಿದರೆ ಮಂತ್ರಿ ಆಗಿ ಅನ್ನುತ್ತೀರಲ್ಲ’ ಎಂದು ಉತ್ತರಿಸಿದರಂತೆ. ಅದು ರಾಜ್‌ಕುಮಾರ್ ಅವರ ಶಕ್ತಿ. ರಾಜ್ಯದ ಬಗೆಗಿನ ಭಕ್ತಿ. ಅಭಿಮಾನಿಗಳ ಮೇಲಿನ ಅನುರಕ್ತಿ.

ಈ ಪ್ರಸಂಗ ಈಗ ನೆನಪಾಗುವುದಕ್ಕೆ ಕಾರಣ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 75ನೇ ಜನ್ಮದಿನದ ಕಾರ್ಯಕ್ರಮ. ವಿಧಾನಸಭೆ ಚುನಾವಣೆ ಹತ್ತಿರದಲ್ಲಿಯೇ ಇರುವಾಗ ಅವರ 75ನೇ ಹುಟ್ಟುಹಬ್ಬವೂ ಬಂದಿದೆ. ಅದು ಕಾಕತಾಳೀಯ ಎನ್ನೋಣ. ಸಿದ್ದರಾಮಯ್ಯ ಜನ್ಮದಿನವನ್ನು ಅದ್ದೂರಿಯಾಗಿ ಆಚರಿಸಬೇಕು ಎಂದು ಅವರ ಅಭಿಮಾನಿಗಳಿಗೆ ಅನ್ನಿಸಿದೆ. ಅದು ತಪ್ಪಲ್ಲ. ಅದಕ್ಕೇ ಅವರು ‘ಸಿದ್ದರಾಮೋತ್ಸವ’ ಆಚರಣೆಯ ಬಯಕೆಯನ್ನು ಸಿದ್ದರಾಮಯ್ಯ ಅವರ ಮುಂದಿಟ್ಟಿದ್ದಾರೆ. ಅದಕ್ಕೆ ಅವರು ಒಪ್ಪಿಗೆ ಕೊಟ್ಟಿದ್ದೇ ಈಗ ದೊಡ್ಡ ಸಂಕಷ್ಟ ತಂದಿದೆ. ಕಾಂಗ್ರೆಸ್ ಪಕ್ಷದಲ್ಲಿಯೂ ಅದು ಸದ್ದು ಮಾಡುತ್ತಿದೆ. ಇದನ್ನೇ ಆಡಳಿತಾರೂಢ ಬಿಜೆಪಿಯೂ ಅಸ್ತ್ರವನ್ನಾಗಿಸಿಕೊಂಡಿದೆ. ಇದು ಹೀಗೆಯೇ ಆಗುತ್ತದೆ ಎಂದು ಊಹಿಸದೇ ಇರುವಷ್ಟು ದಡ್ಡರಲ್ಲ ಸಿದ್ದರಾಮಯ್ಯ. ಅವರ ರಾಜಕೀಯ ಅನುಭವ ಸಣ್ಣದಲ್ಲ. ಇಂತಹ ಹಲವಾರು ಪರಿಸ್ಥಿತಿಗಳನ್ನು ಅವರು ಎದುರಿಸಿದ್ದಾರೆ. ಸೋಲು ಗೆಲುವು ಅವರಿಗೆ ಹೊಸತಲ್ಲ. ಎಲ್ಲಾ ಗೊತ್ತಿದ್ದೂ ಯಾಕೆ ಅವರು ಜನ್ಮದಿನೋತ್ಸವಕ್ಕೆ ಒಪ್ಪಿಗೆ ಕೊಟ್ಟರು? ಅವರ ಅಭಿಮಾನಿಗಳನ್ನು ಕೇಳಿದರೆ ಇದರಿಂದ ಕಾಂಗ್ರೆಸ್ ಪಕ್ಷಕ್ಕೆ ಅನುಕೂಲವಾಗುತ್ತದೆ ಎಂದೇ ಹೇಳುತ್ತಾರೆ. ಆದರೆ ಆ ಪಕ್ಷದ ಮುಖಂಡರ ನಡವಳಿಕೆ ಮತ್ತು ಹೇಳಿಕೆಗಳು ಇದಕ್ಕೆ ಪುಷ್ಟಿ ನೀಡುವಂತೆ ಇಲ್ಲ. ಜನರಲ್ಲಿಯೂ ಇದು ಕಾಂಗ್ರೆಸ್ ಪಕ್ಷಕ್ಕೆ ಒಳಿತು ಮಾಡುವ ಉತ್ಸವ ಅಲ್ಲ ಎಂಬ ಭಾವನೆಯೇ ಇದೆ.

ರಾಜ್ಯದಲ್ಲಿ ಈಗ ಇರುವ ರಾಜಕಾರಣಿಗಳಲ್ಲಿ ಸಿದ್ದರಾಮಯ್ಯ ಅವರೂ ಒಬ್ಬ ಜನನಾಯಕ. ಮಾಸ್ ಲೀಡರ್. ಅದರಲ್ಲಿ ಅನುಮಾನವಿಲ್ಲ. ಉತ್ತಮ ಆಡಳಿತಗಾರ ಎಂದು ಹೆಸರು ಮಾಡಿದವರು. ಹಲವಾರು ಬಾರಿ ಬಜೆಟ್ ಮಂಡಿಸಿ ತಾವೊಬ್ಬ ಅರ್ಥನೀತಿ ತಜ್ಞ ಎಂದು ಸಾಬೀತುಪಡಿಸಿದವರು. ಪ್ರಗತಿಪರ ವಿಚಾರಧಾರೆಗಳಿಂದ ಹೆಸರಾದವರು. ಉತ್ತಮ ಭಾಷಣಕಾರ. ಮಾತಿನ ಶಕ್ತಿಯಿಂದ ಜನರನ್ನು ಆಕರ್ಷಿಸುವ ತಾಕತ್ತು ಹೊಂದಿದವರು. ಎಲ್ಲಾ ಹೌದು. ಆದರೆ ಸೂಕ್ತ ಸಂದರ್ಭದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲು ಅವರು ವಿಫಲರಾಗುತ್ತಾರೆಯೇ ಅಥವಾ ಉದ್ದೇಶಪೂರ್ವಕವಾಗಿಯೇ ತಪ್ಪು ಹೆಜ್ಜೆ ಇಡುತ್ತಾರೆಯೇ?

ಮುಖ್ಯಮಂತ್ರಿಯಾಗಿ ಪೂರ್ಣ ಐದು ವರ್ಷಗಳ ಅಧಿಕಾರವನ್ನು ಪೂರೈಸಿದವರು ಅವರು. ಅವರ ನೇತೃತ್ವದ ಸರ್ಕಾರ ಜಾರಿಗೊಳಿಸಿದ ಹಲವಾರು ಯೋಜನೆಗಳಿಂದ ಕಾಂಗ್ರೆಸ್ ಪಕ್ಷದ ಜನಪ್ರಿಯತೆ ಅಷ್ಟೊಂದು ಕುಸಿದಿರಲಿಲ್ಲ. ಆದರೂ 2018ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಅವರು ಕೆಲವು ತಪ್ಪು ನಿರ್ಧಾರಗಳನ್ನು ಕೈಗೊಂಡರು. ಅದರಲ್ಲಿ ಮುಖ್ಯವಾಗಿ ಪ್ರತ್ಯೇಕ ಲಿಂಗಾಯತ ಧರ್ಮ ಬೇಡಿಕೆಗೆ ಬೆಂಬಲವಾಗಿ ನಿಂತಿದ್ದು ಮತ್ತು ಈ ಸಂಬಂಧ ಕೇಂದ್ರಕ್ಕೆ ಶಿಫಾರಸು ಮಾಡಿದ್ದು. ಈ ವಿಚಾರವಾಗಿ ಅವರು ಕೆಲವರ ಮಾತಿಗೆ ಕಟ್ಟುಬಿದ್ದರು. ಅದು ಚುನಾವಣೆಯಲ್ಲಿ ಹಿನ್ನಡೆಗೆ ಕಾರಣವಾಯಿತು. ಇದಲ್ಲದೆ ತಮ್ಮ ಕ್ಷೇತ್ರವನ್ನು ಮಗನಿಗೆ ಬಿಟ್ಟುಕೊಟ್ಟು ತಾವು ಎರಡು ಕ್ಷೇತ್ರಗಳಲ್ಲಿ ಕಣಕ್ಕೆ ಇಳಿದದ್ದು ಕೂಡ ಅವರಿಗೆ ಮುಳುವಾಯಿತು. ಇವೆಲ್ಲವೂ ಅತಂತ್ರ ವಿಧಾನಸಭೆ ನಿರ್ಮಾಣವಾಗಲು ಕಾರಣವಾಯಿತು. ಕೊನೆಯ ಕಾಲದಲ್ಲಿ ಎಡವಟ್ಟು ಮಾಡಿಕೊಳ್ಳದೇ ಹೋಗಿದ್ದರೆ ಕಾಂಗ್ರೆಸ್‌ಗೆ ಬಹುಮತ ಬರುತ್ತಿತ್ತೋ ಏನೋ? ಬಹುಮತ ಬಂದಿದ್ದರೆ ಸಹಜವಾಗಿಯೇ ಎರಡನೇ ಬಾರಿಗೂ ಅವರೇ ಮುಖ್ಯಮಂತ್ರಿಯಾಗುತ್ತಿದ್ದರು. ಈಗ ಮತ್ತೆ ಆ ಸ್ಥಾನಕ್ಕೆ ಕಸರತ್ತು ನಡೆಸುವ ಅಗತ್ಯ ಇರಲಿಲ್ಲ.

2023ರ ವಿಧಾನಸಭೆ ಚುನಾವಣೆ ಹೊಸ್ತಿಲಿನಲ್ಲಿಯೂ ಅವರು ಇಂತಹದ್ದೇ ತಪ್ಪು ಮಾಡುತ್ತಿದ್ದಾರೇನೋ ಅನ್ನಿಸುತ್ತಿದೆ. ಸಮರ್ಥ ವಿರೋಧಪಕ್ಷವಾಗಿ ಕಾಂಗ್ರೆಸ್ ಹೇಳಿಕೊಳ್ಳುವಂತಹ ಕೆಲಸ ಮಾಡದೇ ಇದ್ದರೂ ಬಿಜೆಪಿಯ ಅಟಾಟೋಪಕ್ಕೆ ಬೇಸರಗೊಂಡು ರಾಜ್ಯದ ಜನರು ಕಾಂಗ್ರೆಸ್‌ನತ್ತ ವಾಲುವ ವಾತಾವರಣ ಇತ್ತು. ಜೊತೆಗೆ ಮೇಕೆದಾಟು ಪಾದಯಾತ್ರೆಯ ನಂತರ ರಾಜ್ಯದಲ್ಲಿ ಕಾಂಗ್ರೆಸ್ ಪರ ಅಲೆಯೊಂದು ಸೃಷ್ಟಿಯಾಗುವ ಸೂಚನೆ ಕಂಡುಬಂದಿತ್ತು. ನಂತರ ಹಿಜಾಬ್, ಹಲಾಲ್, ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ಮುಂತಾದ ವಿವಾದಗಳಿಂದ ಕಾಂಗ್ರೆಸ್‌ಗೆ ಕೊಂಚ ಹಿನ್ನಡೆಯಾದಂತೆ ಭಾಸವಾದರೂ ಬೆಲೆ ಏರಿಕೆಯ ತಾಪ ಜನರಿಗೆ ತಾಗತೊಡಗಿದ ನಂತರ ಮತ್ತೆ ಆ ಪಕ್ಷಕ್ಕೆ ಭವಿಷ್ಯದ ಭರವಸೆ ಕಾಣಿಸತೊಡಗಿದೆ. ಆದರೆ ಈಗ ಸಿದ್ದರಾಮಯ್ಯ ಅಮೃತ ಮಹೋತ್ಸವ ಎನ್ನುವುದು ಅದರ ಜನಪ್ರಿಯತೆ ಏರಿಕೆಗೆ ತಡೆಯೊಡ್ಡಿದೆ.



ಸಿದ್ದರಾಮಯ್ಯ ಅವರು ಪಕ್ಷಾತೀತವಾಗಿ ಜನ್ಮದಿನ ಆಚರಿಸಿಕೊಂಡಿದ್ದರೆ ಅಥವಾ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವತಿಯಿಂದಲೇ ಈ ಸಮಾರಂಭ ಆಯೋಜನೆಗೊಂಡಿದ್ದರೆ ವಿವಾದವೂ ಆಗುತ್ತಿರಲಿಲ್ಲ, ಪಕ್ಷದೊಳಗೆ ತಳಮಳವನ್ನೂ ಸೃಷ್ಟಿಸುತ್ತಿರಲಿಲ್ಲ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ‘ಎಸ್.ಎಂ.ಕೃಷ್ಣ ಅವರ ನಂತರ ರಾಜ್ಯದಲ್ಲಿ ಒಕ್ಕಲಿಗರಿಗೆ ಅತ್ಯುನ್ನತ ಹುದ್ದೆ ದೊರೆಯುವ ಸಾಧ್ಯತೆ ಇದೆ. ಅದಕ್ಕೆ ಒಕ್ಕಲಿಗರು ಸಂಪೂರ್ಣ ಬೆಂಬಲ ನೀಡಬೇಕು’ ಎಂದು ಕೇಳಿಕೊಳ್ಳುತ್ತಲೂ ಇರಲಿಲ್ಲ. ಮುಖ್ಯಮಂತ್ರಿ ಗಾದಿಯ ಬಗ್ಗೆ ಎಂ.ಬಿ. ಪಾಟೀಲ, ಮಲ್ಲಿಕಾರ್ಜುನ ಖರ್ಗೆ, ಜಿ.ಪರಮೇಶ್ವರ, ಜಮೀರ್ ಅಹ್ಮದ್ ಮುಂತಾದವರು ಮಾತನಾಡುವ ಪ್ರಮೇಯ ಕೂಡ ಬರುತ್ತಿರಲಿಲ್ಲ. ಬಿಜೆಪಿ ಮುಖಂಡರೂ ಕಾಂಗ್ರೆಸ್ ಪಕ್ಷದ ಒಗ್ಗಟ್ಟಿನ ಬಗ್ಗೆ ಮಾತನಾಡಲೂ ಸಾಧ್ಯವಾಗುತ್ತಿರಲಿಲ್ಲ. ಈಗಿನ ಕಾಂಗ್ರೆಸ್ ವಿದ್ಯಮಾನ ನಗೆಯಾಡುವವರ ಮುಂದೆ ಎಡವಿಬಿದ್ದ ಹಾಗಿದೆ.

ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬರುತ್ತದೆ ಎನ್ನಲು ಯಾವುದೇ ಆಧಾರವಿಲ್ಲ. ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸಿ ಎಂದು ಕೈ ಹೈಮಾಂಡ್ ಈಗಾಗಲೇ ಸೂಚನೆ ನೀಡಿದೆ. ಆದರೂ ಸಿದ್ದರಾಮಯ್ಯ ಅಮೃತ ಮಹೋತ್ಸವ ಎನ್ನುವುದಕ್ಕೆ ಕಾಂಗ್ರೆಸ್ ಪಕ್ಷದಲ್ಲಿ ಒಗ್ಗಟ್ಟು ಇಲ್ಲ. ಮುಖ್ಯಮಂತ್ರಿ ಗಾದಿಗೆ ಪರಸ್ಪರ ಕಚ್ಚಾಟ ನಡೆಯುತ್ತಿದೆ. ಆ ಕುರ್ಚಿಯ ಮೇಲೆ ಈಗಲೇ ಟವೆಲ್ ಹಾಕಲು ಪೈಪೋಟಿ ನಡೆಯುತ್ತಿದೆ ಎಂಬ ಭಾವನೆ ಜನರಲ್ಲಿ ಮೂಡಿದ್ದರೆ ಅಚ್ಚರಿಯಿಲ್ಲ. ಇದರಿಂದ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ಬಾರದೇ ಹೋದರೆ ಅದರ ಹೊಣೆ ಯಾರದ್ದು?

2013ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಜಿ.ಪರಮೇಶ್ವರ ಕೆಪಿಸಿಸಿ ಅಧ್ಯಕ್ಷರಾಗಿದ್ದರು. ಕೊರಟಗೆರೆಯಲ್ಲಿ ಅವರು ಸ್ಪರ್ಧೆ ಮಾಡಿದ್ದರು. ಮುಖ್ಯಮಂತ್ರಿ ಗಾದಿಗೆ ಸ್ಪರ್ಧೆಯೊಡ್ಡಬಾರದು ಎಂಬ ಕಾರಣಕ್ಕೆ ಪರಮೇಶ್ವರ ಅವರ ಪ್ರತಿಸ್ಪರ್ಧಿಗೆ ಸಿದ್ದರಾಮಯ್ಯ ಪರೋಕ್ಷವಾಗಿ ನೆರವು ನೀಡಿದ್ದರಿಂದಲೇ ಅಲ್ಲಿ ಜೆಡಿಎಸ್ ಅಭ್ಯರ್ಥಿ ಸುಧಾಕರ ಲಾಲ್ ಗೆಲುವು ಸಾಧ್ಯವಾಯಿತು ಎಂಬ ಗುಸುಗುಸು ಕಾಂಗ್ರೆಸ್ ಪಾಳೆಯದಲ್ಲಿ ಆಗ ಕೇಳಿಬಂದಿತ್ತು. ಈಗ ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರು. ಅವರನ್ನು ಕನಕಪುರದಲ್ಲಿ ಸೋಲಿಸುವುದು ಕಷ್ಟ. ಅದಕ್ಕಾಗಿಯೇ ಸಿದ್ದರಾಮಯ್ಯ ಹೊಸ ತಂತ್ರ ಹೂಡಿದ್ದಾರೆ. ತಮ್ಮ ಜನ್ಮದಿನೋತ್ಸವವನ್ನು ಅದ್ದೂರಿಯಾಗಿ ನಡೆಸಿ ಶಕ್ತಿ ಪ್ರದರ್ಶನ ಮಾಡುವುದರ ಜೊತೆಗೆ ಪಕ್ಷ ಬಹುಮತ ಗಳಿಸಿದರೆ ತಾವೇ ಮುಖ್ಯಮಂತ್ರಿ ಎಂಬುದನ್ನು ಹೈಕಮಾಂಡ್‌ಗೂ ಮತ್ತು ಜನರಿಗೂ ಸ್ಪಷ್ಟ ಮಾಡುವುದು ಅವರ ಉದ್ದೇಶ ಎಂದೂ ಪಕ್ಷದೊಳಗಿನ ಒಂದು ಗುಂಪು ಮಾತನಾಡಿಕೊಳ್ಳುತ್ತಿದೆ. ಸಿದ್ದರಾಮಯ್ಯ ಮತ್ತು ಅವರ ಬೆಂಬಲಿಗರ ಹೇಳಿಕೆಯನ್ನು ನೋಡಿದರೆ ಇವೆಲ್ಲ ನಿಜವಲ್ಲ ಎಂದು ಹೇಳಲಾಗದು. ಮುತ್ಸದ್ದಿ ರಾಜಕಾರಣಿ ಎಡವಿದರೇ?

ಮುಖ್ಯಮಂತ್ರಿ ಗಾದಿ ಎನ್ನುವುದು ಕಾಣದ ಕಡಲು. ಕೈಗೆ ಸಿಗಬಹುದು, ಸಿಗದೆಯೂ ಇರಬಹುದು. ಆ ಪದವಿಗೆ ಹಂಬಲಿಸುವ ಮನ ಹೀಗೆಲ್ಲಾ ಮಾಡಿಸುತ್ತಾ? ಗೊತ್ತಿಲ್ಲ. ಆದರೆ ರಾಜ್ಯದ ಜನರ ದೃಷ್ಟಿಯಿಂದ ಈಗ ಬೇಕಿರುವುದು ಸಿದ್ದರಾಮೋತ್ಸವ ಅಲ್ಲ, ಪ್ರಜೆಗಳಿಗೆ ಬದ್ಧರಾಮೋತ್ಸವ ಬೇಕು.

### ಚುರುಮುರಿ



## ಗುಂಡಿ ಗಣಿತ

● ಮಣ್ಣೆರಾಜು

**‘ಬೆಂಗಳೂರಿನ** ರಸ್ತೆ ಗುಂಡಿಗಳನ್ನು ಮುಚ್ಚುವುದು ಸಾರ್ವಕಾಲಿಕ ಕಾರ್ಯಕ್ರಮ ಆಗಿಬಿಟ್ಟಿದೆ...’ ಸುಮಿ ಗೊಣಗಿಕೊಂಡಳು.

‘ಜನರ ಬಾಯಿ ಮುಚ್ಚಿಸುವಷ್ಟು ಸುಲಭವಾಗಿ ರಸ್ತೆ ಗುಂಡಿ ಮುಚ್ಚಲಾಗುವುದಿಲ್ಲ’ ಅಂದ ಶಂಕ್ರಿ.

‘ರಸ್ತೆ ಗುಂಡಿಗಳು ಎಷ್ಟಿರಬಹುದು?’

‘ಉತ್ತರ ಕಷ್ಟ. ದಿನಕ್ಕೆ ಎಷ್ಟು ಗುಂಡಿಗಳು ಬಾಯ್ದೆರೆಯಬಹುದು, ತಿಂಗಳಿಗೆ ಎಷ್ಟು? ವರ್ಷಕ್ಕೆ ಸರಾಸರಿ ಎಷ್ಟು ಗುಂಡಿಗಳು ಹುಟ್ಟಿಕೊಳ್ಳಬಹುದು? ಪ್ರತೀ ಗುಂಡಿಯ ಆಳ, ಅಗಲ ಎಷ್ಟು? ಎಂದೆಲ್ಲಾ ಗುರುತಿಸಿ ಗುಣಿಸಿ, ಭಾಗಿಸಿ, ಕೂಡಿ, ಕಳೆದರೂ ನಿಖರ ಲೆಕ್ಕ ಸಿಗುತ್ತಿಲ್ಲವಂತೆ’.

‘ಗುಂಡಿ ಮುಚ್ಚಲು ಜಲ್ಲಿಯಂತೆ ದುಡ್ಡನ್ನೂ ಸುರಿಯಬೇಕಂತೆ’.

‘ಹೌದು. ಮಳೆಗಾಲದಲ್ಲಿ ಕೆರೆಯ ಹೂಳು ತೆಗೆಯುವುದು, ರಸ್ತೆ ಗುಂಡಿ ಮುಚ್ಚುವುದು ಜಾಣತನ ಅನ್ನೋ ಮಾತಿದೆ’.

‘ಗುಂಡಿರಹಿತ ರಸ್ತೆ ನಿರ್ಮಾಣವಂತೂ ಆಗುತ್ತಿಲ್ಲ, ಗುಂಡಿ ಪರಿಹಾರ ನಿಧಿ ಸ್ಥಾಪಿಸಿ ಗುಂಡಿಗಳಲ್ಲಿ ಬಿದ್ದು ಗಾಯಗೊಂಡವರ ಚಿಕಿತ್ಸೆ ವೆಚ್ಚ, ಬಿದ್ದು ಜಖಂಗೊಂಡ ವಾಹನಗಳ ರಿಪೇರಿ ಖರ್ಚು ಕೊಡಬೇಕು’.

‘ದಿನಾ ಸಾಯುವವರಿಗೆ ಅಳಲಾಗುವುದಿಲ್ಲ, ಗುಂಡಿಯಲ್ಲಿ ಬೀಳದಂತೆ ಜನ ಎಚ್ಚರಿಕೆಯಿಂದ ಓಡಾಡಬೇಕು’.

‘ಗುಂಡಿರಹಿತ ರಸ್ತೆ ನಿರ್ಮಾಣ ಸಾಧ್ಯವಿಲ್ಲವೇನ್ರೀ?’

‘ಮೂಗು ಇರೋವರೆಗೂ ನೆಗಡಿ, ರಸ್ತೆ ಇರೋವರೆಗೆ ಗುಂಡಿ ಕಾಟ ತಪ್ಪುವುದಿಲ್ಲ’.

‘ಹಾಗಲ್ಲಾರೀ, ಬೆಂಗಳೂರಿನಲ್ಲಿ ಕಟ್ಟಿರುವ ಕಟ್ಟಡಗಳ ಸೈಜುಗಲ್ಲುಗಳಿಗಾಗಿ ಅದೆಷ್ಟೋ ಬೆಟ್ಟಗಳು ಕರಗಿಹೋಗಿವೆ. ನಿರಂತರವಾಗಿ ಬಾಯಿಬಿಡುತ್ತಿರುವ ರಸ್ತೆ ಗುಂಡಿಗಳನ್ನು ಮುಚ್ಚುವ ಜಲ್ಲಿಗಾಗಿ ಇನ್ನೆಷ್ಟು ಬೆಟ್ಟಗಳನ್ನು ಪುಡಿ ಮಾಡಬೇಕಾಗುವುದೋ, ಗಿಡ ಹಾಕಿ ಮರ ಬೆಳೆಸಿದಂತೆ ಕಲ್ಲು ನೆಟ್ಟು ಬೆಟ್ಟ ಬೆಳೆಸಲು ಸಾಧ್ಯವಿಲ್ಲವಲ್ಲ...’

‘ಆಧುನಿಕತೆ, ಅಭಿವೃದ್ಧಿಗಾಗಿ ಬೆಟ್ಟಗುಡ್ಡಗಳನ್ನು ಪುಡಿ ಮಾಡುವುದು ಅನಿವಾರ್ಯ’.

‘ಇರುವ ಬೆಟ್ಟಗಳೆಲ್ಲಾ ಖಾಲಿಯಾದ ಮೇಲೆ ಏನು ಮಾಡೋದು?’

‘ಆತಂಕ ಪಡಬೇಡ, ಹಿಮಾಲಯದಂಥ ಪರ್ವತಗಳಿವೆ, ಅವು ನಮ್ಮನ್ನು ಕಾಪಾಡುತ್ತವೆ...’ ಶಂಕ್ರಿ ಸಮಾಧಾನ ಹೇಳಿದ.

### ಸಂಗತ

# ಪ್ರಕೃತಿ ಹಬ್ಬದಲ್ಲಿ ಭಾಗಿಯಾಗೋಣ

**ಪ್ರಕೃತಿಯ ಸಂಪನ್ಮೂಲಗಳನ್ನು ಎಗ್ಗಿಲ್ಲದೆ ಬಳಸಿದರೆ ಎಡವಟ್ಟು ಕಟ್ಟಿಟ್ಟ ಬುತ್ತಿ**

● ಬಿ.ಎಸ್. ಭಗವಾನ್

**ನಮ್ಮ** ಹೊಲ, ಗದ್ದೆಗಳು ನಮ್ಮವೇ ಸರಿ. ಆದರೆ ಅಲ್ಲಿನ ಮರ, ಕೊಳ, ಬಂಡೆ, ನಿಧಿ- ನಿಕ್ಷೇಪ, ಸೂಕ್ಷ್ಮಜೀವಿಗಳು, ಶಿಲೀಂಧ್ರ, ಪ್ರಾಣಿ- ಪಕ್ಷಿಗಳಿಗೆ ನಾವು ವಾರಸುದಾರರಲ್ಲ! ಪ್ರಕೃತಿಯು ಬಗೆದು ಬಾಚಿಕೊಳ್ಳುವ ಸ್ಥಿರ ಸ್ವತ್ತಲ್ಲ. ಪ್ರಕೃತಿಯ ಮಾಲೀಕ ಪ್ರಕೃತಿಯೇ.

ಭೂಮಿ ನಮ್ಮದಲ್ಲ. 1972ರಲ್ಲಿ ಅಮೆರಿಕದ ಸುಪ್ರೀಂ ಕೋರ್ಟ್, ವ್ಯಾಜ್ಯವೊಂದನ್ನು ಇತ್ಯರ್ಥಪಡಿಸುವಾಗ ‘ಪ್ರಕೃತಿಯ ಹಕ್ಕುಗಳನ್ನು ಯಾವುದೇ ಕಾರಣಕ್ಕೂ ಕಸಿಯುವಂತಿಲ್ಲ, ಅದಕ್ಕೇ ಹಿಂತಿರುಗಿಸಿಬಿಡಬೇಕು’ ಎಂದು ಅಭಿಪ್ರಾಯಪಟ್ಟ ಬೆನ್ನಲ್ಲೇ. ‘ಪ್ರಕೃತಿಯ ಹಕ್ಕುಗಳು’ ವಿಶ್ವಮಾನ್ಯ ಕಾನೂನಾತ್ಮಕ ಪರಿಕಲ್ಪನೆಯಾಗಿ ಮೈದಳೆದವು. ಪ್ರಕೃತಿಯ ಹಕ್ಕುಗಳಿರದೆ ಮಾನವ ಹಕ್ಕುಗಳಿಲ್ಲ. ಈ ದಿಸೆಯ ಹಕ್ಕುಗಳ ರೂಪುರೇಷೆಗಳನ್ನು ರಚಿಸುವಲ್ಲಿ ಆಯಾ ನದಿ, ಸರೋವರ, ಕಣಿವೆ, ಬೆಟ್ಟ, ಗುಡ್ಡ, ಕಾಡುಗಳ ಆಸುಪಾಸಿನ ಸ್ಥಳೀಕರ ನಿಲುವುಗಳಂತೂ ಅಕ್ಷರಶಃ ನಿರ್ಣಾಯಕ, ಮೌಲಿಕ. ಆ ಜನರಲ್ಲಿ ಪಾರಂಪರಿಕ ಪರಿಸರ ಜ್ಞಾನ ಭಂಡಾರವೇ ಇದ್ದೀತು.

ಭೂಮಿಯನ್ನು ಪ್ರೀತಿಸಬೇಕು. ಆದರೆ ಅದರ ಸಂಪನ್ಮೂಲಗಳನ್ನು ಎಗ್ಗಿಲ್ಲದೆ ಬಳಸಿದರೆ ಎಡವಟ್ಟು ಕಟ್ಟಿಟ್ಟ ಬುತ್ತಿ. ಅವುಗಳ ಯದ್ವಾತದ್ವ ವ್ಯಯದ ದುಷ್ಪರಿಣಾಮಗಳು ಒಂದೆರಡಲ್ಲ. ವಾತಾವರಣದ ವ್ಯತ್ಯಯದಿಂದ ಈಗಾಗಲೇ ಪ್ರಾಣಿ ಪ್ರಭೇದಗಳಲ್ಲಿ ಕೆಲವು ಅವನತಿಯಾಗಿವೆ. ಜಗತ್ತಿನ ಅತಿ ಉದ್ದದ ನದಿಗಳ ಪೈಕಿ ಮೂರನೇ ಎರಡರಷ್ಟು ನದಿಗಳು ಹರಿಯಲು ನಿತ್ರಾಣಗೊಂಡಿವೆ. ಸಣ್ಣಪುಟ್ಟ ದ್ವೀಪಗಳು ಮುಳುಗುತ್ತಿವೆ. ಸಮುದ್ರಗಳಲ್ಲಿ ಅರ್ಧದಷ್ಟು ಮೀನುಗಳು ನಾಪತ್ತೆ. ವನ್ಯಜೀವಿಗಳ ಪೈಕಿ ಶೇ 68ರಷ್ಟು ನಾಶ. ಇನ್ನು 70 ವರ್ಷಗಳಲ್ಲಿ ಸಮುದ್ರದ ಮಟ್ಟ ಎರಡು ಮೀಟರ್ ಹೆಚ್ಚುವಷ್ಟು ಜಾಗತಿಕ ತಾಪಮಾನದ ಏರಿಕೆ. ಪ್ರತಿವರ್ಷ 36,000 ಚದರ ಕಿ.ಮೀ. ಅರಣ್ಯ ನಾಶವಾಗುತ್ತಿದೆ. ಸೊರಗುತ್ತಿರುವುದು ಪ್ರಕೃತಿಯಲ್ಲ, ಅದರೊಂದಿಗಿನ ಮನುಷ್ಯ ಸಂಬಂಧ. ಮರ, ಗಿಡಗಳ ನಡುವೆ ಶಿಲೀಂಧ್ರಗಳದ್ದು ಮಹತ್ತರ ಪಾತ್ರ. ಅವು ಯಾವ್ಯಾವ ಮರ, ಗಿಡಕ್ಕೆ ಎಷ್ಟು ಇಂಗಾಲ, ನೀರು, ಪೋಷಕಾಂಶಗಳ ಕೊರತೆಯಿದೆ ಎಂದು ನಿರ್ಧರಿಸಿ ಬೇರುಗಳ ಮೂಲಕ ಒದಗಿಸಿ ಸರಿದೂಗಿಸುತ್ತವೆ.

ಒಂದು ಮರ ನಾಶವಾದರೆ ಒಂದು ಗಾಳಿಯ ಶೋಧಕ, ಒಂದು ಪುಟ್ಟ ನೀರಿನ ಕುಂಟೆ, ಔಷಧಿಗಳ ಕಪಾಟು ಇರುವ ಸಂಕೀರ್ಣವೊಂದು ಧ್ವಂಸವಾದಂತೆ. ಮರ ಆಮ್ಲಜನಕದ ಆಕರವಾದ್ದರಿಂದ ಗಿಡ ಬೆಳೆಸುವುದರಿಂದ ನಮ್ಮ ಬದುಕಿನ ಗುಣಮಟ್ಟ ಹೆಚ್ಚುವುದು. ಪ್ರಕೃತಿ ಆರೋಗ್ಯವಾಗಿದ್ದರೆ ಮನುಷ್ಯ ರನ್ನೊಳಗೊಂಡಂತೆ ಸಕಲ ಜೀವವೈವಿಧ್ಯಗಳೂ ಆರೋಗ್ಯವಾಗಿರುತ್ತವೆ. ಸಂಸ್ಕೃತಿಗೂ ಜೀವ ವೈವಿಧ್ಯಕ್ಕೂ ಅವಿನಾಭಾವ ನಂಟು. ಮನುಷ್ಯ ನಿರ್ವಿಘ್ನವಾಗಿ ಪರಿಸರದ ವಿದ್ಯಮಾನಗಳನ್ನು ಸಾಗಗೊಡುವುದರ ಮೂಲಕ ಅವುಗಳನ್ನು ಪುನರ್ ರೂಪಿಸಬೇಕಿದೆ. ಇದರಿಂದ ಪ್ರಕೃತಿಯ ಅಂತರ್ಜಾತ ಹಕ್ಕುಗಳು ಮರುಸ್ಥಾಪಿತವಾಗುವುವು. ನದಿಗಳು ಹರಿದು ಸಾಗರಗಳನ್ನು ಸೇರಲೇಬೇಕು. ಪರ್ವತಗಳ ಶಿಖರಗಳು ಹಿಮದಿಂದ ಆವರಿಸಲೇಬೇಕು. ಮೀನು, ತಿಮಿಂಗಿಲಗಳಾದಿಯಾಗಿ ಸಕಲ ಜಲಚರಗಳು ಸ್ವಚ್ಛ ಸಾಗರಗಳಲ್ಲಿ ಈಜಬೇಕು. ಪ್ರಕೃತಿಯನ್ನೇ ಒಂದು ಘನ ವ್ಯಕ್ತಿತ್ವವಾಗಿ ಪರಿಭಾವಿಸಿ ಅದಕ್ಕೆ ನ್ಯಾಯ ಒದಗಿಸುವುದು ಧ್ಯೇಯವಾಗಬೇಕಿದೆ.

ಮನುಷ್ಯ ಎಲ್ಲ ಪ್ರಾಣಿಗಳಿಗಿಂತಲೂ ಶ್ರೇಷ್ಠ, ಬುದ್ಧಿಶಾಲಿ ಎಂಬ ವಿಶೇಷಣಗಳಿಗೆ ಭಾಜನನಾಗಿದ್ದಾನೆ. ಅವುಗಳ ಸಾರ್ಥಕ್ಯವು ಆತ ಪ್ರಕೃತಿಯ ಅಭಿಜಾತ ‘ಕೃತಿಸ್ವಾಮ್ಯ’ವನ್ನು ಗೌರವಿಸಿದಾಗ ಮಾತ್ರವೇ. ಪಂಚಭೂತಗಳಾದ ಭೂಮಿ, ಅಗ್ನಿ, ಆಗಸ, ನೀರು, ಗಾಳಿ ನಿಸರ್ಗದ ಬಳುವಳಿಗಳೆಂದು ಭಾರತೀಯ ಪರಂಪರೆಯಲ್ಲಿ ಹೇಳಲಾಗಿದೆ. ಈ ಪೈಕಿ ಹೆಚ್ಚಿನವು ಮನುಷ್ಯಕೃತ ಚಟುವಟಿಕೆಗಳಿಂದ ಮಾಲಿನ್ಯಕ್ಕೆ ಗುರಿಯಾಗಿವೆ. ಈ ತನಕ ಇಕ್ವೆಡಾರ್, ಬೊಲಿವಿಯಾ, ಅರ್ಜೆಂಟೀನಾ- ಈ ಮೂರೇ ದೇಶಗಳು ಮಾತ್ರ ಪ್ರಕೃತಿಯ ಹಕ್ಕುಗಳನ್ನು ಗಂಭೀರವಾಗಿ ಕಾರ್ಯರೂಪಕ್ಕೆ ತಂದಿವೆ. ಸಾಂಕೇತಿಕವಾಗಿ ಭಾರತದ ಗಂಗಾ ನದಿ ಹಾಗೂ ನ್ಯೂಜಿಲೆಂಡ್‌ನ ದಕ್ಷಿಣ ದ್ವೀಪದ ವಾನ್ಗಾನ್ಯು ನದಿಗೆ ಹಕ್ಕುಗಳನ್ನು ಮಾನ್ಯ ಮಾಡಲಾಗಿದೆ. ಪ್ರಕೃತಿಯ ಅಗತ್ಯಗಳನ್ನು ಮನುಷ್ಯನ ಮುಂದಿಡಬೇಕು. ಮನುಷ್ಯನ ಅಗತ್ಯಗಳನ್ನು ಪ್ರಕೃತಿಯ ಇತಿಮಿತಿಗಳಲ್ಲಿ ಆಗಿಂದಾಗ್ಗೆ ಪರಿಷ್ಕರಿಸಬೇಕು. ಪ್ರಕೃತಿಯಿಂದ ನಮಗೆ ಬೇಕಾಗುವಷ್ಟನ್ನು ಮಾತ್ರ ತೆಗೆದುಕೊಂಡು ಪೋಲಾಗಿಸದೆ ಉಪಯೋಗಿಸಬೇಕು.



‘ಪ್ರಕೃತಿ ಎದುರು ಮನುಷ್ಯ ಅಲ್ಲ, ಪ್ರಕೃತಿಯೊಂದಿಗೆ ಮನುಷ್ಯ’. ಅಷ್ಟಕ್ಕೂ ಮನುಷ್ಯ ಅಖಂಡ ಪ್ರಕೃತಿಯ ಒಂದು ಭಾಗವಷ್ಟೆ. ಪ್ರತಿವರ್ಷ ಜುಲೈ 28ರಂದು ಅಮೆರಿಕ ಉತ್ತೇಜಿತ ಅಂತರರಾಷ್ಟ್ರೀಯ ಪ್ರಕೃತಿ ಸಂರಕ್ಷಣಾ ಒಕ್ಕೂಟವು ‘ವಿಶ್ವ ಪ್ರಕೃತಿ ಸಂರಕ್ಷಣಾ ದಿನ’ವನ್ನು ವಿಶ್ವದಾದ್ಯಂತ ಆಚರಿಸುತ್ತದೆ. ‘ಭೂಗ್ರಹದಂಥ ಒಳ್ಳೆಯ ನೆಲೆ ವಿರಳಾತಿ ವಿರಳ. ಅದನ್ನು ಉತ್ತಮವಾಗಿ ಸೋಣ’ ಎಂಬ ಅಭಿಯಾನದೊಂದಿಗೆ ಈ ಬಾರಿ ಪ್ರಕೃತಿಯ ಸಡಗರ. ಆಹಾರ, ನೀರು, ಮಣ್ಣು ಅಥವಾ ಖನಿಜ, ಇಂಧನ... ಹೀಗೆ ಭೂಮಿಯಲ್ಲಿ ಯಾವ ಸಂಪನ್ಮೂಲವೂ ಅಕ್ಷಯವಲ್ಲ. ಸಂಪನ್ಮೂಲಗಳನ್ನು ಮಿತವಾಗಿ ಬಳಸಿ ಭಾವಿ ಪೀಳಿಗೆಗಳಿಗೂ ಅವು ಲಭಿಸುವಂತೆ ನಾವು ನಿಗಾ ವಹಿಸಬೇಕಿದೆ. ಪ್ರಕೃತಿ ದಿನದ ಆಚರಣೆಯ ಉದ್ದೇಶ ಆ ಕುರಿತ ಜಾಗೃತಿ. ಗಾಸಿಗೊಂಡ ನೆಲಹರವನ್ನು ರವಷ್ಟು ಸ್ವಚ್ಛಗೊಳಿಸಿದರೂ ಆಯಿತು. ಪ್ರಕೃತಿ ಹಬ್ಬದಲ್ಲಿ ಭಾಗಿಯಾದಂತೆ.

### ವಾಚಕರ ವಾಣಿ

## ರಂಗಮಂದಿರ ಕಾಯ್ದಿರಿಸಲು ತೊಡಕು ನಿವಾರಿಸಿ

ಕೋವಿಡ್ ನಿಯಂತ್ರಣಕ್ಕೆ ಬಂದ ನಂತರದಲ್ಲಿ ಬೆಂಗಳೂರಿನಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಗರಿಗೆದರಿರುವುದು ಖಂಡಿತಾ ಸಂತಸದ ವಿಷಯ. ಆದರೆ ರಂಗ ತಂಡ ಮತ್ತು ಸಾಂಸ್ಕೃತಿಕ ತಂಡಗಳನ್ನು ಕಂಗೆಡಿಸಿರುವುದು ರಂಗಮಂದಿರಗಳ ಬಾಡಿಗೆ ಹೆಚ್ಚಳ ಆಗಿರುವುದು. ಕೊರೊನಾ ಹೊಡೆತದಿಂದ ಸಾವರಿಸಿಕೊಂಡು ಕಾರ್ಯಕ್ರಮ ನೀಡಲು ಮುಂದಾದ ತಂಡಗಳಿಗೆ, ಹೆಚ್ಚಳವಾಗಿರುವ ಬಾಡಿಗೆ ಮತ್ತು ಠೇವಣಿ ಬಿಸಿತುಪ್ಪವಾಗಿದೆ. ಈಗ ರಂಗಮಂದಿರಗಳನ್ನು ಕಾಯ್ದಿರಿಸಲು ಹೊಸ ವೆಬ್‌ಸೈಟ್ ಅಳವಡಿಸಲಾಗಿದೆ. ಅದರಲ್ಲಿ ಕೆಲವು ತೊಡಕುಗಳನ್ನು ಕಲಾತಂಡಗಳು ಎದುರಿಸುತ್ತಿವೆ. ಒಂದೇ ದಿನಾಂಕದ ಒಂದೇ ಅವಧಿಯು ಎರಡೆರಡು ತಂಡಗಳಿಗೆ ನಿಗದಿಯಾಗುತ್ತಿದೆ. ಕಲಾಗ್ರಾಮ, ಕಲಾಕ್ಷೇತ್ರದ ಕಾಯ್ದಿರಿಸುವಿಕೆಯಲ್ಲಿ ಈ ತೊಂದರೆ ಆಗಿದೆ. ಇದನ್ನು ಇಲಾಖೆಯ ಗಮನಕ್ಕೂ ತರಲಾಗಿದೆ. ತಾಂತ್ರಿಕ ತಪ್ಪಿನಿಂದ ಹೀಗಾಗಿರಬಹುದು ಎನ್ನುತ್ತಾರೆ ಸಂಬಂಧಿಸಿದ ಅಧಿಕಾರಿಗಳು.

ಹಾಗೆಯೇ ನಾಟಕೋತ್ಸವ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮೂರು ದಿನ ಸತತವಾಗಿ ಕಾಯ್ದಿರಿಸಲು ತಾಂತ್ರಿಕ ತೊಂದರೆ ಇದೆ. ಆನ್‌ಲೈನ್ ಮೂಲಕ ಕಾಯ್ದಿರಿಸುವ ವ್ಯವಸ್ಥೆ ಸರಿಯಾದ ನಿರ್ಧಾರವಿರಬಹುದು, ಪಾರದರ್ಶಕತೆಗೂ ಅನುವಾಗಿಸಬಹುದು. ಆದರೆ, ಈಗ ರಂಗಮಂದಿರಗಳನ್ನು ಕಾಯ್ದಿರಿಸಿರುವ ಕಾರ್ಯಕ್ರಮಗಳನ್ನು ಗಮನಿಸಿದರೆ, ಮುಖ್ಯವಾಗಿ ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕ, ನೃತ್ಯ, ಗಾಯನಗಳಿಗಿಂತ ಇತರೇ ಕಾರ್ಯಕ್ರಮಗಳು ಹೆಚ್ಚಾಗಿವೆ. ಇನ್ನೊಂದು ಸಂಗತಿ, ಸದ್ಯದಲ್ಲೇ ಕಲಾಗ್ರಾಮ ಸಮುಚ್ಚಯವನ್ನು ಖಾಸಗಿ ಸಂಸ್ಥೆಯೊಂದಕ್ಕೆ ಗುತ್ತಿಗೆ ನೀಡಲಾಗುವುದೆಂಬ ಸುದ್ದಿ ಕಲಾ ವಲಯದಲ್ಲಿ ಹರಡಿದೆ. ಇದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಸ್ಪಷ್ಟನೆ ನೀಡಬೇಕು.

**ಶಶಿಧರ ಭಾರಿಘಾಟ್,** ಬೆಂಗಳೂರು

## ಸ್ವಂತಿಕೆಯನ್ನು ಒತ್ತೆ ಇಟ್ಟಾಗ...

‘ಸಂಪುಟ ವಿಸ್ತರಣೆ: ಅಲೆದಾಡಿಸುವುದೇಕೆ?’ ಎಂಬ ಪ್ರಶ್ನೆಯನ್ನು ರಮಾನಂದ ಶರ್ಮಾ ತಮ್ಮ ಪತ್ರದಲ್ಲಿ ಕೇಳಿದ್ದಾರೆ (ವಾ.ವಾ., ಜುಲೈ 27). ಮುಖ್ಯಮಂತ್ರಿ ಆಯ್ಕೆ– ನೇಮಕ, ಸಂಪುಟ ರಚನೆ– ವಿಸ್ತರಣೆಯಲ್ಲಿ ಪಕ್ಷದ ವರಿಷ್ಠ ಮಂಡಳಿ ಅಥವಾ ಹೈಕಮಾಂಡ್ ಎನ್ನುವ ವ್ಯವಸ್ಥೆಗೆ ಯಾವ ಪಾತ್ರವೂ ಇಲ್ಲ. ಆದರೆ, ವಾಸ್ತವವೇ ಬೇರೆ! ವರಿಷ್ಠ ಮಂಡಳಿ ಎಂಬ ವ್ಯವಸ್ಥೆಗೆ ಎಲ್ಲರೂ ತಮ್ಮ ಸ್ವಂತಿಕೆಯನ್ನು ಒತ್ತೆಯಿಟ್ಟಿರುವುದರಿಂದ ರಾಜ್ಯದ ಮುಖ್ಯಮಂತ್ರಿ ತನ್ನ ಸಚಿವ ಸಂಪುಟ ರಚಿಸುವಲ್ಲಿ ಅಥವಾ ಪುನರ್‌ರಚನೆ ಮಾಡುವಲ್ಲಿ ವರಿಷ್ಠರ ಮುಂದೆ ಬಾಗಿ, ‘ಜಿಯಾ, ಹಸಾದ’ ಎನ್ನುವ ಸ್ಥಿತಿ, ವರಿಷ್ಠರ ಮರ್ಜಿಗೆ ಕಾಯುವ ಅನಿವಾರ್ಯ. ಆದರೆ, ಆ ಮಂಡಳಿಯ ಲೆಕ್ಕಾಚಾರವೇ ಬೇರೆ.

ಮುಖ್ಯಮಂತ್ರಿಯು ಮಂಡಳಿಯ ಆಜ್ಞಾಧಾರಕ, ಆತನಿಗೆ ತನ್ನ ಆಯ್ಕೆಯೇ ಇಲ್ಲ. ಕರ್ನಾಟಕದ ಮುಖ್ಯಮಂತ್ರಿಯು ಸಂಪುಟ ವಿಸ್ತರಣೆಗಾಗಿ ಎಷ್ಟು ಬಾರಿ ದೆಹಲಿ ಯಾತ್ರೆ ಮಾಡಿದ್ದಾರೆನ್ನುವುದು ಬಹುಶಃ ಅವರಿಗೇ ಗೊತ್ತಿಲ್ಲ! ಸಂಪುಟದಲ್ಲಿ ಯಾರು ಇರಬೇಕೆಂದು ನಿರ್ಧರಿಸುವ ಅಧಿಕಾರವು ದೂರದ ದೆಹಲಿಯಲ್ಲಿ ಕುಳಿತ, ಸಂಬಂಧಿಸಿದ ರಾಜ್ಯದವರಲ್ಲದ ಒಂದಷ್ಟು ಮಂದಿಯದು. ಜನರಿಂದ ಆಯ್ಕೆಯಾದವರು ವರಿಷ್ಠರ ಮಾತಿಗೆ ಗೋಣು ಹಾಕುವ ಮೂಲಕ ಸ್ವಂತಿಕೆಯನ್ನು ಒತ್ತೆಯಿಡಬೇಕಾದ ಸ್ಥಿತಿ ಇರುವುದು ಅದೆಂಥ ಪ್ರಜಾಸತ್ತೆಯೋ?

**ಸಾಮಗ ದತ್ತಾತ್ರಿ,** ಬೆಂಗಳೂರು

## ಮತದಾರರಿಗೆ ಸ್ಪಷ್ಟತೆ ಅಗತ್ಯ

ರಾಜ್ಯ ವಿಧಾನಸಭೆ ಚುನಾವಣೆಗೆ ಏಳೆಂಟು ತಿಂಗಳಷ್ಟೇ ಉಳಿದಿದೆ. ಮುಂದಿನ ಚುನಾವಣೆಯಲ್ಲಿ ಬಹುಮತ ದೊರೆತರೆ ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬ ವಿಷಯಕ್ಕೆ ಸಂಬಂಧಿಸಿದ ಲೆಕ್ಕಾಚಾರಗಳು ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಬೂದಿ ಮುಚ್ಚಿದ ಕೆಂಡದಂತೆ ಕಂಡಂತೆ, ಕಾಣದಂತೆ ಇದ್ದೇ ಇವೆ. ಆದರೆ ನಿಜಕ್ಕೂ ಸ್ಪಷ್ಟತೆ ಇರಬೇಕಾದುದು ಮತದಾರರಲ್ಲಿ. ಅತಂತ್ರ ವಿಧಾನಸಭೆ ಸೃಷ್ಟಿಯಾಗದಂತೆ ನೋಡಿಕೊಳ್ಳಬೇಕಾದ ಗುರುತರ ಜವಾಬ್ದಾರಿ ಮತದಾರರ ಮೇಲಿದೆ. ರಾಷ್ಟ್ರದ ಏಕತೆ, ರಾಜ್ಯದ ಬಗೆಗೆ ಕಳಕಳಿ, ಸ್ಪಷ್ಟ ಸಾಂಸ್ಕೃತಿಕ ನೀತಿಯ ಹಿತವರಿತ ಪಕ್ಷಕ್ಕೆ ಪೂರ್ಣ ಬಹುಮತ ನೀಡಬೇಕು. ಈ ಲೆಕ್ಕಾಚಾರದಲ್ಲಿ ರಾಜ್ಯದ ಜನರ ಚಿತ್ತ ದೃಢವಾಗಬೇಕಾಗಿದೆ.

**ಆರ್.ವೆಂಕಟರಾಜು,** ಬೆಂಗಳೂರು

## ನ್ಯಾಯ ಕೇಳಿದರೆ ಲಾಠಿ ಚಾರ್ಜ್ ಎಷ್ಟು ಸರಿ?

ರಾಜ್ಯ ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ಲೋಕಸೇವಾ ಆಯೋಗವು ಪರೀಕ್ಷೆಗಳನ್ನು ನಡೆಸಿ ಹಲವು ತಿಂಗಳುಗಳೇ ಕಳೆದರೂ ಫಲಿತಾಂಶ ಪ್ರಕಟಿಸುವಲ್ಲಿ ಆಗುತ್ತಿರುವ ವಿಳಂಬವನ್ನು ಪ್ರಶ್ನಿಸಿ ಕೆಪಿಎಸ್‌ಸಿ ಕಚೇರಿ ಮುಂದೆ ಜಮಾಯಿಸಿದ ಉದ್ಯೋಗ ಆಕಾಂಕ್ಷಿಗಳ ಮೇಲೆ ಲಾಠಿ ಚಾರ್ಜ್ ಮಾಡಿದ ಪೊಲೀಸರ ವರ್ತನೆ ಖಂಡನೀಯ. ಉದ್ಯೋಗ ಆಕಾಂಕ್ಷಿಗಳ ಬೇಡಿಕೆ ಸರಿಯಾದುದು. ರಾಜಕಾರಣಿಗಳಿಗೆ ಯಾವುದೇ ವಯೋಮಿತಿ ಇಲ್ಲ. ಆದರೆ, ಉದ್ಯೋಗ ಬಯಸುವ ಆಕಾಂಕ್ಷಿಗಳಿಗೆ ವಯೋಮಿತಿ ಇದೆ. ಪರೀಕ್ಷೆ ಬರೆದು ವರ್ಷಗಟ್ಟಲೆ ಕಾಯುವುದು ಯಾವುದೇ ಆಕಾಂಕ್ಷಿಗೆ ಅತ್ಯಂತ ವೇದನೆಯ ಕೆಲಸ. ಜತೆಗೆ ಅತಂತ್ರ ಸ್ಥಿತಿ. ಕೆಪಿಎಸ್‌ಸಿ ಒಂದು ಸ್ವಾಯತ್ತ ಸಂಸ್ಥೆ. ನೇಮಕಾತಿ ಪ್ರಕ್ರಿಯೆಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸುವುದು ಅದರ ಆದ್ಯ ಕರ್ತವ್ಯ. ವಿನಾಕಾರಣ ವಿಳಂಬವಾದರೆ ಅದನ್ನು ಪ್ರಶ್ನಿಸುವ ಹಕ್ಕು ನಾಗರಿಕರಿಗೆ ಇದೆ.

**ವಿ.ಜಿ.ಇನಾಮದಾರ,** ಸಾರವಾಡ, ವಿಜಯಪುರ

## ಕನ್ನಡಿಗರ ಬದುಕು ಹಸನಾಗಲಿ

‘ಗೋವಾದಲ್ಲಿ ಕನ್ನಡ ಭವನ ನಿರ್ಮಾಣಕ್ಕಾಗಿ ನಾನು ಜೋಳಿಗೆ ಹಿಡಿಯಲು ಸಿದ್ಧ’ ಎಂದು ಹುಕ್ಕೇರಿ ಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ (ಪ್ರ.ವಾ., ಜುಲೈ 26). ಅವರ ದೃಢನಿರ್ಧಾರ ಸ್ವಾಗತಾರ್ಹ. ಆದರೆ, ಕರ್ನಾಟಕದಿಂದ ಗೋವಾಕ್ಕೆ ಹೊಟ್ಟೆ ಹೊರೆಯಲೆಂದು ಗುಳೆ ಹೋಗಿರುವ ಕಾರ್ಮಿಕರ ಸ್ಥಿತಿ ಶೋಚನೀಯವಾಗಿದೆ. ಅವರನ್ನು ಒಕ್ಕಲೆಬ್ಬಿಸುವ ಕೆಲಸ ಪದೇ ಪದೇ ನಡೆದಿರುವ ಬಗ್ಗೆ ವರದಿಯಾಗುತ್ತಲೇ ಇರುತ್ತದೆ. ಸ್ವಾಮೀಜಿ ಇಂಥ ಜ್ವಲಂತ ಸಮಸ್ಯೆಯನ್ನು ಕೈಗೆತ್ತಿಕೊಂಡು ಅದರ ಪರಿಹಾರಕ್ಕೆ ಶ್ರಮಿಸಿದರೆ ಕನ್ನಡಿಗರಿಗೆ ನಿಜಕ್ಕೂ ದೊಡ್ಡ ಉಪಕಾರವಾಗುತ್ತದೆ.

**ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ,** ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.


ಬಸವರಾಜ ಬೊಮ್ಮಾಯಿ ಸರ್ಕಾರಕ್ಕೆ ಒಂದು ವರ್ಷ

# ಪ್ರಗತಿಗೆ ತಾಳ ವಿವಾದಗಳದ್ದೇ ಸಪ್ಪಳ



ಹಿಜಾಬ್ ವಿವಾದ ತೀವ್ರವಾಗಿದ್ದ ವೇಳೆ ಉಡುಪಿಯಲ್ಲಿ ಭಿನ್ನ ಸಮುದಾಯದ ವಿದ್ಯಾರ್ಥಿನಿಯರು ಜತೆಯಲ್ಲಿ ಶಾಲೆಗೆ ಹೋಗುವ ಮೂಲಕ ಸೌಹಾರ್ದ ಸಾರಿದ್ದರು

● ವೈ.ಗ. ಜಗದೀಶ್



**‘ಅದೃಷ್ಟ’ದ** ಮುಖ್ಯಮಂತ್ರಿ ಸ್ಥಾನವನ್ನು ಬಸವರಾಜ ಬೊಮ್ಮಾಯಿ ಅವರು ಅಲಂಕರಿಸಿ, ಜುಲೈ 28ಕ್ಕೆ ಒಂದು ವರ್ಷ ಪೂರ್ಣಗೊಳ್ಳಲಿದೆ. ಆಡಂಬರಕ್ಕೆ ಒಗ್ಗದ, ಅಬ್ಬರಕ್ಕೆ ಬಗ್ಗದ ಸಮಚಿತ್ತದ ಬೊಮ್ಮಾಯಿ, ನಡೆ–ನುಡಿಯಲ್ಲಿ ಸರಳತೆಯನ್ನೇ ಮೈಗೂಡಿಸಿಕೊಂಡವರು. ಸಮಚಿತ್ತ–ಸಮಾಧಾನದ ವ್ಯಕ್ತಿತ್ವವೇ ಅವರ ಆಡಳಿತಕ್ಕೆ ಮಗ್ಗುಲು ಮುಳ್ಳಾಗತೊಡಗಿ, ಸರ್ಕಾರದ ಹೊರಗಿರುವ ‘ಪರ’ರು ಪ್ರಾಬಲ್ಯ ಸಾಧಿಸಿದ್ದು ಒಂದು ವರ್ಷದಲ್ಲಿ ಈ ನಾಡಿನ ಮತದಾರರ ಕಣ್ಣಿಗೆ ರಾಚಿದ್ದಿದೆ. ಸಿಕ್ಕಿದ ‘ಜನಾಧಿಕಾರ’ವನ್ನು ನಿಷ್ಠುರ, ನಿರ್ದುಷ್ಟವಾಗಿ ಬಳಸಿದ್ದರೆ ಹಿಂದಣ ಮುಖ್ಯಮಂತ್ರಿಗಳು ಸ್ಥಾಪಿಸಿದ್ದ ಮೈಲಿಗಲ್ಲುಗಳನ್ನು ದಾಟಿ, ಇತಿಹಾಸ ಸೃಷ್ಟಿಸುವ ಅವಕಾಶಗಳು ತನ್ನಿಂತಾನೇ ತೆರೆದುಕೊಳ್ಳುತ್ತಿದ್ದವು.

ಮುಖ್ಯಮಂತ್ರಿ ಪಟ್ಟ ಏರಿದ ಮೊದಲ ದಿನವೇ ‘ರೈತ ವಿದ್ಯಾನಿಧಿ’ಯಂತಹ ದೂರದೃಷ್ಟಿಯ ಯೋಜನೆ ಘೋಷಿಸಿದ ಬೊಮ್ಮಾಯಿ, ‘ಸಿಎಂ’ ಎಂದರೆ ಕಾಮನ್ ಮ್ಯಾನ್ (ಸಾಮಾನ್ಯ ಮನುಷ್ಯ) ಎಂದು ಹೇಳಿ ಹೊಸ ಅರ್ಥವನ್ನು ಕೊಟ್ಟರು. ಸಮಾರಂಭಗಳಲ್ಲಿ ಹಾರ–ತುರಾಯಿ ಬದಲು ಕನ್ನಡ ಪುಸ್ತಕ ಕೊಡಿ, ಅತಿಗಣ್ಯ ವ್ಯಕ್ತಿಗಳಿಗೆ ನೀಡುವ ‘ಝೀರೋ ಟ್ರಾಫಿಕ್’ ಬೇಡ ಎಂದು ಅಧಿಕಾರಿಗಳಿಗೆ ಸೂಚಿಸಿದ ಅವರು, ಆಡಳಿತಕ್ಕೆ ಹೊಸತನ ನೀಡುವ ಸುಳಿವು ಕೊಟ್ಟಿದ್ದರು. ಜನ ಕಲ್ಯಾಣದ ಮೂಲಕ ಸಮೃದ್ಧ ನಾಡನ್ನು ಕಟ್ಟುವ ‘ನವ ಕರ್ನಾಟಕ’ದ ಕನಸನ್ನೂ ಬಿತ್ತಿದ್ದರು. ಪ್ರಗತಿಗೆ ಪೂರಕವಾದ ‘ತಾಳ’ವೂ, ಅದಕ್ಕೆ ಬೇಕಾದ ಮೇಳವೂ ಜತೆಗಿತ್ತು. ಆದರೆ, ಒಂದಾದ ಮೇಲೊಂದರಂತೆ ನಾಡಿನ ಮೇಲೆ ಛೂಬಿಟ್ಟ ವಿವಾದಗಳು ಸರ್ಕಾರದ ಅಭಿವೃದ್ಧಿಯ ಹಾದಿಗೆ ತೊಡರುಗಾಲು ಆದವು. ‘ಪ್ರಗತಿ–ಕೋಮು ವಿಕೃತಿ’ಯ ಸಂಘರ್ಷ ಬಿರುಸುಗೊಂಡಿತು. ಈ ವ್ಯಾಜ್ಯದಲ್ಲಿ ಸರ್ಕಾರ ಅಥವಾ ಮುಖ್ಯಮಂತ್ರಿ ಯಾರ ಪರ ಎಂಬ ಸ್ಪಷ್ಟತೆಯೇ ಜನರಿಗೆ ಸಿಗದೇ ಹೋಯಿತು. ತಾಕಲಾಟದ ಮೇಲಾಟ ನಡೆದಾಗ ಸರ್ಕಾರದ ನಿರ್ಲಿಪ್ತ ಧೋರಣೆ, ಕೆಲವೊಮ್ಮೆ ವಿಕೃತಿಯ ಪರ ವಕಾಲತ್ತಿನ ನಡೆಯೂ ಅನುಮಾನಗಳಿಗೆ ಕಾರಣವಾಗುತ್ತಾ ಹೋಯಿತು.

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯ ವಿಚಾರ ಮುನ್ನೆಲೆಗೆ ಬಂದಾಗ ಅನೇಕ ಹೆಸರುಗಳು ಓಡಾಡಿದರೂ ಕೊನೆಗೆ ಅಚ್ಚರಿಯ ಆಯ್ಕೆಗೆ ಕಾರಣರಾದವರು ಪ್ರಧಾನಿ ನರೇಂದ್ರಮೋದಿ. ಮೋದಿಯವರ ನಿಕಟ ಬೆಂಬಲದೊಂದಿಗೆ ಆಡಳಿತ ಚುಕ್ಕಾಣಿ ಹಿಡಿದ ಬೊಮ್ಮಾಯಿಯವರ ಮೇಲೆ ನಿರೀಕ್ಷೆ ಅಪಾರವಾಗಿತ್ತು. ಅದಕ್ಕೆ ಪೂರಕವೆಂಬಂತೆ ಅನೇಕ ಕಾರ್ಯಕ್ರಮಗಳನ್ನೂ ಅವರು ಘೋಷಿಸಿದರು. ಬಜೆಟ್ ಬೆನ್ನಲ್ಲೇ ಆದೇಶಗಳೂ ಹೊರಬಂದವು. ಇದ್ದ ಸಂಪನ್ಮೂಲದಲ್ಲೇ ಸರ್ವರ ಕಲ್ಯಾಣದ ಅನೇಕ ಯೋಜನೆಗಳಿಗೆ ಚಾಲನೆಯನ್ನೂ ಕೊಟ್ಟರು. ಯೋಜನೆಗಳ ರೂಪುರೇಷೆ, ಚೌಕಟ್ಟು ನೋಡಿದರೆ ಅನ್ವೇಷಣಾತ್ಮಕ ಗುಣ ಎದ್ದು ಕಾಣುತ್ತಿತ್ತು. ನಾಲ್ಕೈದು ಮುಖ್ಯಮಂತ್ರಿಗಳ ಜತೆಗೆ ಹತ್ತಿರದ ನಂಟಿದ್ದ ಬೊಮ್ಮಾಯಿ ಅವರಿಗೆ ನಾಡನ್ನು ಅಭಿವೃದ್ಧಿಯ ಕಡೆಗೆ ಕೊಂಡೊಯ್ಯುವ ಮುಂಗಾಣ್ಕೆ ಸಹಜವಾಗಿಯೇ ಬಂದಿತ್ತು. ಅನುಭವವನ್ನು ಕಾರ್ಯರೂಪಕ್ಕೆ ತರುವತ್ತ ಅವರು ಲಕ್ಷ್ಯ ವಹಿಸಿದ್ದು ಆರಂಭಿಕ ದಿನಗಳಲ್ಲಿ ಕಾಣಿಸುತ್ತಿತ್ತು.

ಆದರೆ, ಹಿಂದಿನ ಎರಡು ವರ್ಷದ ಸರ್ಕಾರದ ಅವಧಿಯ ‘ಬೆನ್ನಭಾರ’ ಅವರನ್ನು ತುಸು ಬಗ್ಗಿಸಿತು. ಸರ್ಕಾರಿ ಕಾಮಗಾರಿಗಳ ಗುತ್ತಿಗೆಯಲ್ಲಿ ಶೇ 40ರಷ್ಟು ಲಂಚ ಪ್ರಕರಣದ ಬಗ್ಗೆ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗಲೇ ಪ್ರಧಾನಿ ಕಚೇರಿಗೆ ದೂರು ಸಲ್ಲಿಕೆಯಾಗಿತ್ತು. ಆ ಸರ್ಕಾರದ ಭಾಗಿದಾರರಾಗಿದ್ದ ಬೊಮ್ಮಾಯಿ ಅವರಿಗೆ ಈ ಪತ್ರದ ‘ಕಿಮ್ಮತ್ತು’ ಗೊತ್ತಿತ್ತು. ಮುಖ್ಯಮಂತ್ರಿಯಾದ ಕೂಡಲೇ, ಗುತ್ತಿಗೆದಾರರ ಆರೋಪದ ಬಗ್ಗೆ ನ್ಯಾಯಯುತ ತನಿಖೆ ನಡೆಸಿ, ಸರ್ಕಾರದಲ್ಲಿ ಪಾರದರ್ಶಕತೆ ತರುವ ಯತ್ನ ಮಾಡಲಿಲ್ಲ.

ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಪಾರದರ್ಶಕವಾಗಿ ನಡೆಯುತ್ತಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳುತ್ತಿದ್ದರು. ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಗುಸುಗುಸು ಶುರುವಾದಾಗಲೇ ತನಿಖೆ ನಡೆಸಬೇಕಿತ್ತು. ಯಾವುದೇ ಅಕ್ರಮ ನಡೆದಿಲ್ಲ ಎಂದು ಗೃಹ ಸಚಿವರು ಸಮರ್ಥಿಸಿಕೊಂಡರು. ಕೊನೆಗೆ ನೇಮಕಾತಿ ವಿಭಾಗದ ಎಡಿಜಿಪಿಯೇ ಇದರಲ್ಲಿ ಭಾಗಿಯಾಗಿದ್ದಾರೆಂಬ ಆರೋಪದ ಮೇಲೆ ಬಂಧನಕ್ಕೆ ಒಳಗಾದಾಗ ಸರ್ಕಾರ ಗುಂಡಿಗೆ ಬಿದ್ದಾಗಿತ್ತು. ಇಷ್ಟೆಲ್ಲ ಆದರೂ, ಕರ್ನಾಟಕ ಸರ್ಕಾರದ ಅಧೀನದಲ್ಲಿರುವ ಸಿಐಡಿಯೇ ಈ ಹಗರಣವನ್ನು ಬಯಲಿಗೆಳೆದಿದೆ ಎಂಬುದನ್ನು ಉಲ್ಲೇಖಿಸದೇ ಇರಲಾಗದು. ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲೂ ಅಕ್ರಮ ನಡೆದಿದೆ ಎಂಬ ದೂರಿದ್ದು, ಕೆಲವರ ಬಂಧನವೂ ಆಗಿದೆ. ಆದರೆ, ಅದರ ಆಳ–ಅಗಲ ಇನ್ನಷ್ಟೇ ಹೊರಬೇಕಿದೆ.

**ವಿವಾದಗಳ ಮುಮ್ಮೇಳ:** ಪ್ರಗತಿಯ ತಾಳವನ್ನು ಬೊಮ್ಮಾಯಿ ಹಾಕುತ್ತಲೇ ಬಂದರೂ ವಿವಾದಗಳೇ ಮುಮ್ಮೇಳವಾಗಿ ಅದರ ಸಪ್ಪಳವೇ ಜೋರಾಯಿತು. ಹಿಜಾಬ್, ಆಜಾನ್‌ಗೆ ನಿಷೇಧ, ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ಇವೆಲ್ಲ ನಡೆಯುತ್ತಲೇ ಹೋದವು. ಹಿಜಾಬ್ ವಿವಾದವನ್ನು ಆರಂಭದಲ್ಲೇ ಶಾಂತಿಯುತವಾಗಿ ಇತ್ಯರ್ಥ ಮಾಡಿದ್ದರೆ, ಸರ್ಕಾರ ಹಟಕ್ಕೆ ಕೂರದೇ ಇದ್ದರೆ ಅದು ಜಗತ್ತಿಗೆ ಗೊತ್ತಾಗುತ್ತಿರಲಿಲ್ಲ. ಗಾಯವನ್ನು ಕೆರೆದು ಹುಣ್ಣು ದೊಡ್ಡದು ಮಾಡುವಲ್ಲಿ ಸಚಿವರೇ ಮುಂದೆ ನಿಂತರು. ಆಗ ಕೈಕಟ್ಟಿ ಕೂರಬೇಕಾದ ಸ್ಥಿತಿ ಮುಖ್ಯಮಂತ್ರಿಯದಾಗಿಬಿಟ್ಟಿತು. ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ಹೇರಿದ ಬಗ್ಗೆ ಉದ್ಯಮಿ ಕಿರಣ ಮಜುಂದಾರ್ ಷಾ ಟ್ವೀಟ್ ಮಾಡಿದ ಬಳಿಕ, ಪ್ರಕರಣ ದೇಶದ ಗಮನ ಸೆಳೆಯಿತು. ಆಗಲೂ, ಬೊಮ್ಮಾಯಿ ಮೌನ ಮುರಿಯಲಿಲ್ಲ.

ಪಠ್ಯಪುಸ್ತಕವನ್ನು ಅತಾರ್ಕಿಕವಾಗಿ ಪರಿಷ್ಕರಣೆ ಮಾಡಿಸಿದ್ದು ‘ದೆಹಲಿ’ಯ ಸೂತ್ರಧಾರಿ. ಉತ್ತರದಾಯಿ ಆಗಿದ್ದು ಬೊಮ್ಮಾಯಿ. ಆರಂಭದ ದಿನಗಳಲ್ಲಿ ‘ನಾರಾಯಣಗುರು, ಭಗತ್ ಸಿಂಗ್ ಪಠ್ಯ ಕೈಬಿಟ್ಟಿಲ್ಲ. ಕನಕದಾಸರಿಗೆ ಅವಮಾನ ಮಾಡಿಲ್ಲ’ ಎಂದು ಶಿಕ್ಷಣ ಸಚಿವ ನಾಗೇಶ್ ಹೇಳುತ್ತಲೇ ಬಂದರು. ಅವರು ಹೇಳುತ್ತಾ ಬಂದ ಸುಳ್ಳನ್ನು ನಂಬಿಕೂತ ಬೊಮ್ಮಾಯಿ, ವಿವಾದದ ಗುಡ್ಡವನ್ನೇ ತಮ್ಮ ಮೇಲೆ ಎಳೆದುಕೊಂಡರು. ಪರಿಷ್ಕರಣೆಯಂತಹ ಚಾರಿತ್ರಿಕ ಕೆಲಸವನ್ನು ಚರಿತ್ರೆ ಗೊತ್ತಿರುವವರಿಗೆ ಕೊಡುವ ಬದಲು ಅನರ್ಹರಿಗೆ ಕೊಟ್ಟ ಪಾಪದ ಫಲವನ್ನೂ ಉಂಡರು. ಇದು ಸರಿಯಲ್ಲವೆಂದು ಗೊತ್ತಾಗುವಷ್ಟರಲ್ಲಿ ಕಾಲ ಮಿಂಚಿ ಹೋಗಿತ್ತು. ಜನರು ಕೊಟ್ಟ ಅಧಿಕಾರವನ್ನು ಜನಹಿತಕ್ಕೆ ಬಳಸುವ ವಿವೇಚನಾಧಿಕಾರ ಮುಖ್ಯಮಂತ್ರಿಗೆ ಇರುತ್ತದೆ. ಅದನ್ನು ಬಳಸಬೇಕು ಕೂಡ. ರಾಜರ ಕಾಲದಲ್ಲಿ ‘ದೊರೆ’ಗಳು ಧರೆಗೆ ಕಿವಿಗೊಟ್ಟು ಜನರ ನಡಿಗೆಯ ಸದ್ದನ್ನು ಆಲಿಸುತ್ತಿದ್ದರು, ಮಾರುವೇಷ ಧರಿಸಿ ಜನರ ಮಧ್ಯೆ ಓಡಾಡಿ ಅವರ ಭಾವನೆ ತಿಳಿದುಕೊಳ್ಳುತ್ತಿದ್ದರು. ದೊರೆಗಳೇ ಹೀಗೆ ಮಾಡುತ್ತಿದ್ದಾಗ ಪ್ರಜಾಪ್ರಭುತ್ವ ರಾಷ್ಟ್ರದ ‘ಪ್ರಭು’ಗಳು ಪ್ರಜೆಗಳ ದನಿಗೆ ಕಿವಿಕೊಡುವ ಕೆಲಸ ಮಾಡಿದರಷ್ಟೇ ಆಡಳಿತ ಜನಾನುರಾಗಿ ಆದೀತು.

## ಬೊಮ್ಮಾಯಿ ಸರ್ಕಾರದ ಮೈಲಿಗಲ್ಲುಗಳು...

- ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವ ‘ಮುಖ್ಯಮಂತ್ರಿ ರೈತ ವಿದ್ಯಾನಿಧಿ’ ಯೋಜನೆ ಜಾರಿ. ಕೋರ್ಸಿಗೆ ಅನುಗುಣವಾಗಿ ₹2,000 ಗಳಿಂದ ₹11,000 ವರೆಗೆ ವಿದ್ಯಾರ್ಥಿ ವೇತನ ವಿತರಣೆ
- ಕೃಷಿಯಲ್ಲಿ ಯಂತ್ರೋಪಕರಣ ಬಳಕೆ ಪ್ರೋತ್ಸಾಹಿಸಲು ಹಾಗೂ ಇಂಧನ ವೆಚ್ಚ ಭಾರವನ್ನು ತಗ್ಗಿಸಲು ರೈತರಿಗೆ ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಪ್ರತಿ ಎಕರೆಗೆ ₹250 ರಂತೆ ಗರಿಷ್ಠ 5 ಎಕರೆಗೆ ಡಿಬಿಟಿ ಮೂಲಕ ಡೀಸೆಲ್‌ಗೆ ಸಹಾಯ ಧನ ನೀಡುವ ರೈತ ಶಕ್ತಿ ಯೋಜನೆ
- ರೈತರ ಆದಾಯ ಹೆಚ್ಚಿಸುವ ಧ್ಯೇಯದೊಂದಿಗೆ ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ‘ಸೆಕೆಂಡರಿ ಕೃಷಿ ನಿರ್ದೇಶನಾಲಯ’ ಸ್ಥಾಪನೆ
- ಕೃಷಿಯಲ್ಲಿ ರೈತ ಮಹಿಳೆಯರನ್ನು ಪ್ರೋತ್ಸಾಹಿಸುವ ಸಲುವಾಗಿ ಮತ್ತು ಇತರ ಮಹಿಳೆಯರನ್ನು ಕೃಷಿಯತ್ತ ಆಕರ್ಷಿಸಲು ಪ್ರತ್ಯೇಕ ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿ ಸ್ಥಾಪನೆ
- ಹಾಲು ಉತ್ಪಾದಕರಿಗೆ ಸಾಲ ಸೌಲಭ್ಯ ನೀಡಲು ದೇಶದಲ್ಲೇ ಮೊದಲ ಬಾರಿಗೆ ‘ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್’ ಸ್ಥಾಪನೆ
- ತಾಂತ್ರಿಕ ಬೋಧನೆ–ಕಲಿಕೆಗಳಿಗೆ ಹಾಗೂ ಸಂಶೋಧನೆಯನ್ನು ಉತ್ತೇಜಿಸಲು ರಾಜ್ಯದ ಏಳು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗಳನ್ನಾಗಿ ಉನ್ನತೀಕರಣ
- ರಾಜ್ಯದ ಪ್ರಮುಖ ನಗರಗಳಲ್ಲಿ 438 ದೆಹಲಿ ಮಾದರಿಯಲ್ಲಿ ನಮ್ಮ ಕ್ಲಿನಿಕ್‌ಗಳ ಸ್ಥಾಪನೆಗೆ ಚಾಲನೆ
- ದಕ್ಷಿಣಕನ್ನಡ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಪ್ರಾಯೋಗಿಕವಾಗಿ ಮೆನ್‌ಸ್ಟ್ರುಯಲ್ ಆಸಾನ್ ಕಪ್‌ಗಳ ವಿತರಣೆ
- ಪೌಷ್ಟಿಕ ಕರ್ನಾಟಕ ಎಂಬ ಹೊಸ ಯೋಜನೆಯಡಿ ಅಪೌಷ್ಟಿಕತೆ ನಿವಾರಿಸಲು 14 ಜಿಲ್ಲೆಗಳಲ್ಲಿ ಸಾರವರ್ಧಿತ ಅಕ್ಕಿ ವಿತರಣೆ
- ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಅವರ ಸೇವಾ ಅವಧಿಯ ಆಧಾರದ ಮೇಲೆ ₹1000 ದಿಂದ ₹1500 ರವರೆಗೆ ಹೆಚ್ಚಳ
- ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ₹3,000 ಕೋಟಿ
- ಇದೇ ಮೊದಲ ಬಾರಿಗೆ ಪೌರ ಕಾರ್ಮಿಕರಿಗೆ ತಿಂಗಳಿಗೆ ₹2,000 ಸಂಕಷ್ಟ ಭತ್ಯೆ
- ಬೆಂಗಳೂರು ನಗರದಲ್ಲಿ ಮೂಲಸೌಕರ್ಯಗಳನ್ನು ಒದಗಿಸಲು ₹6,000 ಕೋಟಿ ವೆಚ್ಚದಲ್ಲಿ ಅಮೃತ್ ನಗರೋತ್ಥಾನ ಯೋಜನೆ 3 ವರ್ಷಗಳಲ್ಲಿ ಅನುಷ್ಠಾನ

## ಸರ್ಕಾರದ ಸುತ್ತ ವಿವಾದಗಳ ಹುತ್ತ...

- ಬಿಟ್ ಕಾಯಿನ್ ಹ್ಯಾಕಿಂಗ್ ಆರೋಪಕ್ಕೆ ಸಂಬಂಧಿಸಿದಂತೆ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ವಿರುದ್ಧ ದಾಖಲಾದ ಪ್ರಕರಣಗಳ ತನಿಖೆ ಮತ್ತು ಆರೋಪಿಯನ್ನೇ ಬಳಸಿಕೊಂಡು ಪ್ರಭಾವಿಗಳು ದೊಡ್ಡ ಮೊತ್ತದ ಹ್ಯಾಕಿಂಗ್ ನಡೆಸಿದ್ದಾರೆ ಎಂಬ ಆರೋಪ ಅಂತರರಾಷ್ಟ್ರೀಯ ಮಟ್ಟದಲ್ಲಿ ಸದ್ದು ಮಾಡಿತ್ತು. ಸರ್ಕಾರದ ಪ್ರಭಾವಿಗಳ ಹೆಸರೂ ಈ ಪ್ರಕರಣದಲ್ಲಿ ತಳುಕು ಹಾಕಿಕೊಂಡಿದೆ ಎಂಬ ಆರೋಪವೂ ಇತ್ತು
- ಶಾಲೆ, ಕಾಲೇಜುಗಳಿಗೆ ಹಿಜಾಬ್ ಧರಿಸಿ ಬರದಂತೆ ಉಡುಪಿಯ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ನಿಷೇಧ ಹೇರಲಾಗಿತ್ತು. ಹಿಜಾಬ್‌ಗೆ ಅವಕಾಶ ನೀಡಿದರೆ ಕೇಸರಿ ಶಾಲು ಧರಿಸಲೂ ಅವಕಾಶ ನೀಡಬೇಕೆಂಬ ಬೇಡಿಕೆ ಹಿಂದುತ್ವ ಸಂಘಟನೆಗಳ ಕಾರ್ಯಕರ್ತರಿಂದ ಬಂದಿತ್ತು. ಕೆಲವೇ ದಿನಗಳಲ್ಲಿ ರಾಜ್ಯದ ಉದ್ದಗಲಕ್ಕೆ ಈ ವಿವಾದ ವ್ಯಾಪಿಸಿತು
- ಹಿಂದೂ ಧಾರ್ಮಿಕ ಸ್ಥಳಗಳ ಆವರಣದಲ್ಲಿ ಮುಸ್ಲಿಮರಿಗೆ ವ್ಯಾಪಾರ ವಹಿವಾಟು ನಡೆಸಲು ನಿಷೇಧ ಹೇರುವ ಪ್ರಯತ್ನವೂ ಉಡುಪಿ ಜಿಲ್ಲೆಯಿಂದಲೇ ಆರಂಭವಾಗಿತ್ತು. ಕೆಲವೇ ದಿನಗಳಲ್ಲಿ ಅದು ರಾಜ್ಯ ವ್ಯಾಪಿಯಾಗಿ ಹಬ್ಬಿತ್ತು. ಮುಸ್ಲಿಮರ ಅಂಗಡಿಗಳಲ್ಲಿ ಖರೀದಿ ಮಾಡಬಾರದು, ಅವರ ಆಟೊ ರಿಕ್ಷಾಗಳಲ್ಲಿ ಪ್ರಯಾಣಿಸಬಾರದು ಎಂಬ ಪ್ರಚಾರವನ್ನೂ ಹಿಂದುತ್ವ ಪರ ಸಂಘಟನೆಗಳು ಆರಂಭಿಸಿದ್ದವು
- ಪಠ್ಯಪುಸ್ತಕ ಪರಿಶೀಲನೆ ಹೆಸರಿನಲ್ಲಿ ನಡೆದ ಪಠ್ಯ ಪರಿಷ್ಕರಣೆಯಲ್ಲಿ ಸಮಾಜ ಸುಧಾರಕರು, ಮಹಾನ್ ಸಾಧಕರಿಗೆ ಅವಮಾನಿಸಿರುವುದು ಮತ್ತು ಕೆಲವು ಸಮುದಾಯಗಳಿಗೆ ವಿರುದ್ಧವಾದ ಪಠ್ಯಗಳನ್ನು ಅಳವಡಿಸಿರುವುದು ತೀವ್ರ ವಿವಾದ ಸೃಷ್ಟಿಸಿತ್ತು. ಆರಂಭದ ದಿನಗಳಲ್ಲಿ ಯಾವುದೇ ತಪ್ಪು ನಡೆದಿಲ್ಲ ಎಂಬಂತೆ ಸರ್ಕಾರ ಸಮರ್ಥಿಸಿಕೊಂಡಿತ್ತು. ವಿವಾದ ಜೋರಾಗಿ ಜನರು ಬೀದಿಗಿಳಿಯುತ್ತಿದ್ದಂತೆ ಕೆಲವು ತಪ್ಪುಗಳನ್ನು ಒಪ್ಪಿಕೊಂಡು, ತಿದ್ದುಪಡಿಗೆ ಸುತ್ತೋಲೆ ಹೊರಡಿಸಿತ್ತು
- ಶಿವಮೊಗ್ಗದಲ್ಲಿ ಬಜರಂಗದಳದ ಕಾರ್ಯಕರ್ತ ಹರ್ಷ ಕೊಲೆ ನಡೆದಾಗ ಸಚಿವರು, ಸಂಸದರೇ ಮುಂಚೂಣಿಯಲ್ಲಿ ನಿಂತು ಶವ ಮೆರವಣಿಗೆ ನಡೆಸಿದರು. ಕಲ್ಲು ತೂರಾಟ, ಗಲಭೆ ನಡೆಯಿತು
- ಪಂಚಾಯತ್ ರಾಜ್ ಇಲಾಖೆಯ ಲಂಚದ ಬಗ್ಗೆ ದೂರಿತ್ತಿದ್ದ ಬೆಳಗಾವಿಯ ಗುತ್ತಿಗೆದಾರ ಸಂತೋಷ್ ಪಾಟೀಲ, ಉಡುಪಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಬಳಿಕ ಇಕ್ಕಟ್ಟಿಗೆ ಸಿಲುಕಿದ ಸರ್ಕಾರ, ಈಶ್ವರಪ್ಪ ಅವರ ರಾಜೀನಾಮೆ ಪಡೆದಿತ್ತು


### ‘ಆರೆಸ್ಸೆಸ್ ಕಪಿಮುಷ್ಟಿಯಲ್ಲಿ ಬೊಮ್ಮಾಯಿ’

ಬೊಮ್ಮಾಯಿ ಮುಖ್ಯಮಂತ್ರಿ ಆದಾಗ ನಮಗೆ ಸ್ವಲ್ಪ ಭರವಸೆ ಇತ್ತು. ಜನತಾ ಪರಿವಾರದ ಹಿನ್ನೆಲೆಯಿಂದ ಬಂದವರು, ಹೀಗಾಗಿ ಒಂದಷ್ಟು ವಿಭಿನ್ನವಾಗಿ ಕೆಲಸ ಮಾಡಬಹುದು ಎಂಬ ನಂಬಿಕೆ ಇತ್ತು. ಅವರ ಒಂದು ವರ್ಷದ ಆಡಳಿತ ನೋಡಿ ಭ್ರಮನಿರಸನವಾಗಿದೆ. ಹಿಂದೆಂದೂ ನಡೆಯದಷ್ಟು ಭ್ರಷ್ಟಾಚಾರ ನಡೆದಿದೆ. ರಾಜ್ಯದ ಇತಿಹಾಸದಲ್ಲಿ ಶೇ 40 ಕಮಿಷನ್ ಕೊಡಬೇಕಾದ ಪರಿಸ್ಥಿತಿ ಇಲ್ಲಿನ ಗುತ್ತಿಗೆದಾರರಿಗೆ ಬಂದಿರುವುದು ಇದೇ ಮೊದಲು. ಇಂಥ ಭ್ರಷ್ಟ ಸರ್ಕಾರ ಎಂದೂ ಬಂದಿರಲಿಲ್ಲ. ಅದರ ಸಂಭ್ರಮಾಚರಣೆ ಮಾಡಲು ಹೊರಟಿದ್ದಾರೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಹಿಜಾಬ್, ಹಲಾಲ್, ಜಾತ್ರೆಗಳಲ್ಲಿ ಅಲ್ಪಸಂಖ್ಯಾತ ವ್ಯಾಪಾರಿಗಳಿಗೆ ನಿಷೇಧ ಮುಂತಾದವುಗಳನ್ನು ಸರ್ಕಾರವೇ ಹುಟ್ಟುಹಾಕಿತು. ದ್ವೇಷ ಹುಟ್ಟುಹಾಕಿದ್ದೇ ಈ ಸರ್ಕಾರದ ಸಾಧನೆ. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಆರೆಸ್ಸೆಸ್‌ನ ಕಪಿಮುಷ್ಟಿಯಿಂದ ತಪ್ಪಿಸಿಕೊಂಡು ಕೆಲಸ ಮಾಡುವ ಪ್ರಯತ್ನ ಮಾಡುತ್ತಿದ್ದರು. ಆದರೆ, ಬೊಮ್ಮಾಯಿ ಅವರು ಸಂಪೂರ್ಣವಾಗಿ ಆರೆಸ್ಸೆಸ್ ಕಪಿಮುಷ್ಟಿಯಲ್ಲಿ ಸಿಕ್ಕಾಕಿಕೊಂಡಿದ್ದಾರೆ



**ಸಿದ್ದರಾಮಯ್ಯ,** ವಿಧಾನಸಭೆ ವಿರೋಧ ಪಕ್ಷದ ನಾಯಕ

ಅಧಿಕಾರಿಗಳು ಕೋಟಿಗಟ್ಟಲೆ ಹಣ ನೀಡಿ ಹುದ್ದೆ ಪಡೆಯುವ ಪರಿಸ್ಥಿತಿ ಇದೆ. ಕೋಟಿಗಟ್ಟಲೆ ಕೊಟ್ಟವರು ಅದನ್ನು ಜನರ ಬಳಿ ಸುಲಿಗೆ ಮಾಡುತ್ತಾರೆ. ಹೀಗಾಗಿ ಜೀವಗಳಿಗೆ ಬೆಲೆಯೇ ಇಲ್ಲದಂತಹ ಪರಿಸ್ಥಿತಿ ರಾಜ್ಯದಲ್ಲಿದೆ. ಹಣ ಪಡೆದು ಅಧಿಕಾರಿಗಳನ್ನು ವರ್ಗಾವಣೆ ಮಾಡುವುದನ್ನು ನಿಲ್ಲಿಸಬೇಕು. ಆಗ ಮಾತ್ರವೇ ನಿಜವಾದ ಅರ್ಥದಲ್ಲಿ ಜನರ ಉತ್ಸವ ಮಾಡಲು ಸಾಧ್ಯ. ಭಾವನಾತ್ಮಕ ವಿಚಾರಗಳನ್ನೇ ಮುಂದಿಟ್ಟುಕೊಂಡು ರಾಜಕಾರಣ ಮಾಡುವುದನ್ನು ನಿಲ್ಲಿಸಬೇಕು




**ಎಚ್.ಡಿ. ಕುಮಾರಸ್ವಾಮಿ**
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ





ಬರ್ಮಿಂಗ್ ಹ್ಯಾಮ್ ಕಾಮನ್ವೆಲ್ತ್ ಗೇಮ್ಸ್ 2022ರ ಪದಕ ಪಟ್ಟಿಯಲ್ಲಿ ಭಾರತವು ಅಗ್ರ-ಮೂರು ಸ್ಥಾನಗಳಲ್ಲಿ ಸ್ಥಾನ ಪಡೆಯುತ್ತದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 184

## ದಕ್ಷನ ಶಿರ ಮುರಿದ ವೀರಭದ್ರ

ವೀರಭದ್ರ ವಿಷ್ಣುಚಕ್ರವನ್ನಲ್ಲದೆ, ವಿಷ್ಣುವನ್ನೂ ಸ್ತಂಭನಗೊಳಿಸಿದ. ವಿಷ್ಣು ಅಚಲವಾದ ಪರ್ವತದಂತೆ ಅಲುಗಾಡದೆ ನಿಂತ. ಆಗ ಭೃಗುಮುನಿಯು ಸ್ತಂಭನವನ್ನು ಹೋಗಲಾಡಿಸುವ ಮಂತ್ರವನ್ನು ಜಪಿಸಿ ಹರಿಯನ್ನು ಸ್ತಂಭನದಿಂದ ಬಿಡಿಸಿದ. ಸ್ತಂಭನದಿಂದ ಹೊರಬಂದ ವಿಷ್ಣು ಕೋಪದಿಂದ ವೀರಭದ್ರನ ಮೇಲೆ ಬಾಣ ಪ್ರಯೋಗಿಸಲು ತನ್ನ ಶಾರ್ಙ್ಗವೆಂಬ ಮಹಾಧನುಸ್ಸನ್ನು ತೆಗೆದುಕೊಂಡ. ತಕ್ಷಣವೇ ವೀರಭದ್ರ ಮೂರು ಬಾಣಗಳನ್ನು ಪ್ರಯೋಗಿಸಿ ವಿಷ್ಣುವಿನ ಧನುಸ್ಸನ್ನು ಮೂರು ಚೂರಾಗಿ ಕತ್ತರಿಸಿದ. ಈ ಘಟನೆ ನೋಡಿದ ಬ್ರಹ್ಮ, ‘ವೀರಭದ್ರನನ್ನು ಜಯಿಸುವುದು ಸಾಧ್ಯವಿಲ್ಲ’ ಎಂದು ಹರಿಗೆ ಹೇಳಿದ. ವಿಷ್ಣು ಯುದ್ಧದಿಂದ ನಿರ್ಗಮಿಸಲು ನಿರ್ಧರಿಸಿದ. ‘ಈಗ ನಡೆಯುತ್ತಿರುವ ಅನರ್ಥವೆಲ್ಲವೂ ಸತೀದೇವಿಯ ಅಪಮಾನ ಮಾಡಿದ ದುಷ್ಟಬುದ್ಧಿಯ ದಕ್ಷಬ್ರಹ್ಮನಿಂದ ಆದುದು. ದಕ್ಷ ಮತ್ತವನ ಯಜ್ಞನಾಶವನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ’ ಎಂದು ವಿಷ್ಣು ವೈಕುಂಠಕ್ಕೆ ತೆರಳಿದರೆ, ಬ್ರಹ್ಮ ಸತ್ಯಲೋಕಕ್ಕೆ, ದೇವತೆಗಳು ತಮ್ಮ ಪರಿವಾರದೊಡನೆ ಸ್ವರ್ಗಲೋಕಕ್ಕೆ ತೆರಳಿದರು. ಅಲ್ಲಿದ್ದ ದೇವತೆಗಳು, ಮುನಿಗಳನ್ನು ವೀರಭದ್ರ ನಿರಾಯಾಸವಾಗಿ ಜಯಿಸಿದ.


ಯಜ್ಞ ನಾಶವಾದುದನ್ನು ನೋಡಿ ಹೆದರಿದ ಯಜ್ಞಪುರುಷ ಮೃಗರೂಪವನ್ನು ಧರಿಸಿ ಯಜ್ಞಶಾಲೆಯಿಂದ ಓಡಿ ಹೋದ. ಮೃಗರೂಪದಿಂದ ಆಕಾಶದ ಕಡೆಗೆ ಓಡುತ್ತಲಿದ್ದ ಯಜ್ಞಪುರುಷನ ಕತ್ತನ್ನು ವೀರಭದ್ರ ಹಿಡಿದು ಕತ್ತರಿಸಿದ. ನಂತರ ಮರೀಚಿಬ್ರಹ್ಮ, ಯಮಧರ್ಮ, ಕಶ್ಯಪಮುನಿ, ಅರಿಷ್ಟನೇಮಿ, ಅಂಗಿರಸ್ಸುಮುನಿ, ಕೃಶಾಶ್ವಮುನಿ, ದತ್ತಮುನಿಗಳ ಶಿರಸ್ಸಿನ ಮೇಲೆ ಕಾಲಿನಿಂದ ಬಲವಾಗಿ ಒದ್ದ. ದಕ್ಷಬ್ರಹ್ಮನ ತಾಯಿಯಾದ ಸರಸ್ವತಿ ಮತ್ತು ದೇವಮಾತೆಯಾದ ಅದಿತಿದೇವಿಯರ ಮೂಗಿನ ತುದಿಯನ್ನು ಉಗುರಿನಿಂದ ಚಿವುಟಿ ಕತ್ತರಿಸಿದ. ಕೆಲವು ದೇವತೆಗಳನ್ನು ಕ್ರೋಧದಿಂದ ಸೀಳಿ ಭೂಮಿಯಲ್ಲಿ ಕೆಡಹಿದ. ಇಷ್ಟಾದರೂ ವೀರಭದ್ರನು ಶಾಂತನಾಗಲಿಲ್ಲ. ಸಿಟ್ಟಿಗೆಬ್ಬಿಸಿದ ಸರ್ಪರಾಜನಂತೆ ಎಲ್ಲ ಶಿವದ್ವೇಷಿಗಳನ್ನೂ ನಾಶಮಾಡಿ, ಇನ್ನಾರು ಉಳಿದಿರುವರು ಎಂದು ಅತ್ತಿತ್ತ ನೋಡಿದ.

ಯಜ್ಞದ ಅಧ್ವರ್ಯುವಾದ ಭೃಗುಮುನಿಯನ್ನು ಕೆಡವಿದ ಮಣಿಭದ್ರನು, ಅವನ ಗಡ್ಡವನ್ನೆಲ್ಲಾ ಕತ್ತರಿಸಿ ವಿಕಾರಮಾಡಿದರೆ, ದಕ್ಷನು ಶಿವನನ್ನು ಶಪಿಸುವಾಗ ಹಲ್ಲುಗಳನ್ನೆಲ್ಲಾ ಬಿಟ್ಟು ನಕ್ಕಿದ್ದ ಸೂರ್ಯನ ಹಲ್ಲುಗಳನ್ನು ಚಂಡನೆಂಬ ಶಿವಗಣ ಮುರಿದುಹಾಕಿದ. ಕಣ್ಸನ್ನೆ ಮಾಡಿ ಶಿವನನ್ನು ನಿಂದಿಸುವಂತೆ ದಕ್ಷನಿಗೆ ಸೂಚಿಸು ತ್ತಿದ್ದ ಭಗನೆಂಬ ಸೂರ್ಯನನ್ನು ಕೆಳಗೆ ಕೆಡಹಿದ ನಂದಿ, ಅವನ ಕಣ್ಣುಗಳನ್ನು ಕಿತ್ತು ಬಿಸಾಡಿದ. ಯಜ್ಞದ ಸ್ವಧಾದೇವಿ, ಸ್ವಾಹಾದೇವಿ, ಮಂತ್ರಗಳು, ತಂತ್ರಗಳನ್ನೆಲ್ಲಾ ಶಿವಗಣಗಳು ನಾನಾವಿಧವಾಗಿ ಹಿಂಸಿಸಿದವು. ಯಜ್ಞಾಗ್ನಿಯಲ್ಲಿ ಅಮೇಧ್ಯಗಳನ್ನು ಹಾಕಿ ಕೆಡಿಸಿದರು.

ಆಗ ದಕ್ಷನು ಭಯದಿಂದ ಅಂತರ್ವೇದಿಯ ಮಧ್ಯಭಾಗದಲ್ಲಿ ಅಡಗಿ ಕುಳಿತ. ವೀರಭದ್ರನು ಅವನನ್ನು ಮೇಲಕ್ಕೆಳೆದು ಶಿರಸ್ಸಿನ ಮೇಲೆ ಕತ್ತಿಯಿಂದ ಹೊಡೆದ. ಆದರೆ ಯೋಗಪ್ರಭಾವದಿಂದ ದಕ್ಷನ ಶಿರಸ್ಸು ಕತ್ತರಿಸಲೇ ಇಲ್ಲ. ದಕ್ಷನ ಶಿರಸ್ಸು ಶಸ್ತ್ರಾಸ್ತ್ರಗಳಿಗೆ ಮಣಿಯುವುದಿಲ್ಲ ಎಂಬುದನ್ನು ತಿಳಿದ ವೀರಭದ್ರ, ತನ್ನ ಕಾಲಿನಿಂದ ದಕ್ಷನ ಎದೆಯನ್ನು ಅದುಮಿ, ಕೈನಿಂದ ಅವನ ಶಿರಸ್ಸನ್ನು ಮುರಿದುಹಾಕಿದ. ದಕ್ಷನ ಶಿರಸ್ಸನ್ನು ಉರಿಯುತ್ತಿರುವ ಅಗ್ನಿಕುಂಡದಲ್ಲಿ ಹಾಕಿದ ವೀರಭದ್ರ, ಶತ್ರುಗಳನ್ನು ನಿಗ್ರಹಿಸಿದ ಸಂತೋಷದಲ್ಲಿ ತ್ರಿಶೂಲವನ್ನು ತಿರುಗಿಸುತ್ತಾ ಕುಣಿದ. ಶಿವಗಣಗಳು ಸಂಭ್ರಮಿಸಿದವು. ಶಿವಶತ್ರುಗಳ ಕಳೇಬರಗಳನ್ನೆಲ್ಲಾ ಅಗ್ನಿಯಲ್ಲಿ ಹಾಕಿ ಭಸ್ಮಮಾಡಿದರು.

ಜಯಶಾಲಿಯಾದ ವೀರಭದ್ರನ ಮೇಲೆ ನಂದನವನದಿಂದ ದಿವ್ಯವಾದ ಪುಷ್ಪವೃಷ್ಟಿಯಾಯಿತು. ದೇವದುಂದುಭಿಗಳು ಮೊಳಗಿದುವು. ಸೂರ್ಯನು ಅಂಧಕಾರವನ್ನು ನಾಶ ಮಾಡುವಂತೆ, ವೀರಭದ್ರನು ಶಿವದ್ವೇಷಿಗಳನ್ನು ನಾಶಮಾಡಿ ಕೈಲಾಸಕ್ಕೆ ಹಿಂತಿರುಗಿದ. ವೀರಭದ್ರನನ್ನು ನೋಡಿ ಸಂತುಷ್ಟನಾದ ರುದ್ರದೇವ ಅವನನ್ನ ಗಣನಾಯಕನನ್ನಾಗಿ ಮಾಡಿದ ಎಂಬಲ್ಲಿಗೆ ಮೂವತ್ತೇಳನೆ ಅಧ್ಯಾಯ ಮುಗಿಯುತ್ತದೆ.

### ಗುಂಡಣ್ಣ







ಬೆರಗಿನ ಬೆಳಕು
ಗುರುರಾಜ ಕರಜಗಿ

## ನಾಳಿನ ಚಿಂತೆ ಬೇಡ

ಮುಂದೇನೊ, ಮತ್ತೇನೊ, ಇಂದಿಗಾ ಮಾತೇಕೆ ? |
ಸಂದರ್ಭ ಬರಲಿ, ಬಂದಾಗಳಾ ಚಿಂತೆ ||
ಹೊಂದಿಸುವನಾರೊ, ನಿನ್ನಾಳಲ್ಲ, ಬೇರಿಹನು |
ಇಂದಿಗಿಂದಿನ ಬದುಕು – ಮಂಕುತಿಮ್ಮ || 681 ||

**ಪದ-ಅರ್ಥ:** ಮುಂದೇನೊ = ಮುಂದೆ + ಏನೊ, ಹೊಂದಿಸುವನಾರೊ = ಹೊಂದಿಸುವನು + ಆರೊ, ನಿನ್ನಾಳಲ್ಲ = ನಿನ್ನ + ಆಳಲ್ಲ, ಬೇರಿಹನು = ಬೇರೆ ಇದ್ದಾನೆ, ಇಂದಿಗಿಂದಿನ = ಇಂದಿಗೆ + ಇಂದಿನ

**ವಾಚ್ಯಾರ್ಥ:** ಮುಂದೆ ಏನೋ, ಮತ್ತೆ ಏನಾಗುತ್ತದೆಯೋ ಎನ್ನುವುದರ ಮಾತು ಇಂದಿಗೇಕೆ? ಸಂದರ್ಭ ಬಂದಾಗ ಅದರ ಚಿಂತೆ. ಪರಿಸ್ಥಿತಿಗಳನ್ನು ಹೊಂದಿಸುವವನು ಬೇರೆ ಇದ್ದಾನೆ. ಅವನು ನಿನ್ನ ಆಳಲ್ಲ. ಆದ್ದರಿಂದ ಇಂದಿಗೆ ಇಂದಿನ ಬದುಕನ್ನು ಗಮನಿಸಿ ಬದುಕು.

**ವಿವರಣೆ:** ನಗರದ ಪ್ರಮುಖ ಬೀದಿಯ ಬದಿಯಲ್ಲಿ ಜನಜಂಗುಳಿ. ರಾಮಣ್ಣ ಒಳಗೆ ನುಗ್ಗಿ ನೋಡಿದ. ಹೃದಯವಿದ್ರಾವಕ ದೃಶ್ಯ. ಒಬ್ಬ ತಾಯಿ ಎರಡು ಅವಳಿ ಮಕ್ಕಳಿಗೆ ಜನ್ಮ ನೀಡಿ ಅಸುನೀಗಿದ್ದಾಳೆ. ಒಂದು ಮಗು ಎದೆಯ ಮೇಲೆ ಮಲಗಿದೆ. ಮತ್ತೊಂದು ಪಕ್ಕದಲ್ಲಿ ಮಲಗಿ ಭೋರೆಂದು ಅಳುತ್ತಿದೆ. ರಾಮಣ್ಣನ ಕರುಳು ಕಿತ್ತು ಬಂದಿತು. ಪಾಪ! ಹುಟ್ಟಿದ ತಕ್ಷಣ ತಾಯಿಯನ್ನು ಕಳೆದುಕೊಂಡು ಮಕ್ಕಳು ಎಂಥ ನಿರ್ಭಾಗ್ಯರು. ಅವೆರಡೂ ಹೆಣ್ಣುಮಕ್ಕಳು. ಇಬ್ಬರ ಎಡಗೆನ್ನೆಯ ಮೇಲೂ ಒಂದು ಪುಟ್ಟ ಕಪ್ಪು ಮಚ್ಚೆ ಇದೆ. ಸ್ವಲ್ಪ ಹೊತ್ತಿಗೆ ಪೋಲೀಸರು ಬಂದು ಮಹಿಳೆಯ ದೇಹವನ್ನೆತ್ತಿಕೊಂಡು, ಮಕ್ಕಳನ್ನು ಕರೆದುಕೊಂಡು ಹೋದರು. ರಾಮಣ್ಣನಿಗೆ ನಿದ್ರೆ ಬರಲಿಲ್ಲ. ಮಕ್ಕಳ ಬಗ್ಗೆಯೇ ಚಿಂತೆ. ಅನಾಥಮಕ್ಕಳು ಹೇಗೆ ಬದುಕಿಯಾವು? ಅವೂ ಆರೈಕೆ ಕಾಣದೆ ಸತ್ತು ಹೋಗಬಹುದೇ? ಕೆಲ ತಿಂಗಳುಗಳ ನಂತರ ಚಿಂತೆಯ ತೀಕ್ಷ್ಣತೆ ಕಡಿಮೆಯಾದರೂ, ಆಗಾಗ ದೃಶ್ಯ ಕಣ್ಣಮುಂದೆ ಕಟ್ಟಿ, ಮಕ್ಕಳ ಭವಿಷ್ಯದ ಚಿಂತೆ ತೂರಿ ಬರುತ್ತಿತ್ತು.

ಐದಾರು ವರ್ಷಗಳು ಉರುಳಿದವು. ಒಂದು ದಿನ ರಾಮಣ್ಣ ಅಂಗಡಿಯ ಬೀದಿಯಲ್ಲಿ ನಡೆದು ಹೋಗುತ್ತಿದ್ದಾಗ ಒಂದು ದೊಡ್ಡ ಐಷಾರಾಮೀ ಕಾರು ಬಂದು ನಿಂತಿತು. ಅದರಿಂದ ಒಬ್ಬ ಶ್ರೀಮಂತ ಮಧ್ಯ ವಯಸ್ಸಿನ ಮಹಿಳೆ ಕೆಳಗಿಳಿದಳು. ಆಕೆಯ ವರ್ಚಸ್ಸು, ಧರಿಸಿದ್ದ ಆಭರಣಗಳು ಆಕೆಯ ಶ್ರೀಮಂತಿಕೆಯನ್ನು ಸಾರುತ್ತಿದ್ದವು. ಅವಳ ಹಿಂದೆಯೇ ಇಬ್ಬರು ಹೆಣ್ಣುಮಕ್ಕಳು ಇಳಿದರು. ಅವೆರಡೂ ಸುಮಾರು ಆರು ವರ್ಷದ ಹುಡುಗಿಯರು, ತುಂಬ ಸುಂದರವಾಗಿದ್ದರು. ಇಬ್ಬರ ಎಡಗೆನ್ನೆಯ ಮೇಲೆ ಪುಟ್ಟ ಕಪ್ಪು ಮಚ್ಚೆ. ರಾಮಣ್ಣನಿಗೆ ಆರು ವರ್ಷದ ಹಿಂದಿನ ಘಟನೆ ನೆನಪಾಯಿತು. ತಡೆಯಲಾಗದೆ ಹೋಗಿ ಆ ಮಹಿಳೆಯನ್ನು ಕೇಳಿದ, “ತಾಯೀ, ಅವೆರಡೂ ತಮ್ಮ ಮಕ್ಕಳೇ?”. ಆ ಮಹಿಳೆ, “ಹಾಗೆ ಇದ್ದರೆ ಚೆನ್ನಾಗಿತ್ತು” ಎಂದು ನಿಟ್ಟುಸಿರು ಬಿಟ್ಟು ತಾನು ಅವೆರಡೂ ಮಕ್ಕಳನ್ನು ಪೋಲೀಸರಿಂದ ಪಡೆದು ದತ್ತು ತೆಗೆದುಕೊಂಡದ್ದನ್ನು ಹೇಳಿದಳು. ಈಗ ಆ ಮಕ್ಕಳು ಕೋಟ್ಯಾಂತರ ಆಸ್ತಿಗೆ ವಾರಸುದಾರರು.

ರಾಮಣ್ಣ ಸುಮ್ಮನೆ ಚಿಂತೆ ಮಾಡಿದ್ದ. ತಾನೇ ಮಕ್ಕಳ ಭವಿಷ್ಯವನ್ನು ತಿದ್ದುವವನಂತೆ ಕೊರಗಿದ್ದ. ಮಕ್ಕಳ ಭವಿಷ್ಯವನ್ನು ಹೊಂದಿಸುವವನು ಬೇರೆ ಇದ್ದ. ಕಗ್ಗ ಆ ಮಾತನ್ನು ಹೇಳುತ್ತದೆ. ನಾಳೆಗಳ ಚಿಂತೆಯಲ್ಲಿ ಇಂದಿನದನ್ನು ಕಳೆದುಕೊಳ್ಳುತ್ತೇವೆ. ಚಿಂತೆ ಬೇಡ. ಸಂದರ್ಭ ಬಂದಾಗ ಎದುರಿಸಿದರಾಯಿತು. ನಾಳೆಗಳನ್ನು ಜೋಡಿಸುವವನು ನಮ್ಮ ಆಳಲ್ಲ. ಆದ್ದರಿಂದ ನಮ್ಮ ಇಂದಿನ ಬದುಕನ್ನು ಚೆನ್ನಾಗಿ ಅನುಭವಿಸುತ್ತ, ನಾಳಿನ ಚಿಂತೆಗಳನ್ನು ದೂರವಿಡುವುದು ಒಳ್ಳೆಯದು.

### ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜುಲೈ 28, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ:** ಆಷಾಢ ಕೃಷ್ಣ ಅಮಾವಾಸ್ಯೆ ಗಂ. 23-25 ನಕ್ಷತ್ರ: ಪುನರ್ವಸು ಗಂ. 07-05 ಯೋಗ: ವಜ್ರ ಗಂ. 17-56, ಕರ್ಕಾಟಕ ಮಾಸದ 11 ನೇ ದಿನ.
ರಾಹುಕಾಲ : ಮಧ್ಯಾಹ್ನ 01:30 – 03:00
ಸೂರ್ಯೋದಯ : 06-18 ಸೂರ್ಯಾಸ್ತ : 06-56
ಮುಸ್ಲಿಂ ದಿನಾಂಕ : 28 ಜುಲ್‌ಹಿಜಾನ್, ದಿನ ವಿಶೇಷ : ಚಿತ್ತಲಗಿ ಅಮಾವಾಸ್ಯೆ, ಆಡಿ ಅಮಾವಾಸ್ಯೆ (ತ. ನಾಡು), ಕರ್ಕಾಟಕ ವಾವು (ಕೇರಳ) , ಅದೃಷ್ಟ ಸಂಖ್ಯೆ : 1, 3

**ಮೇಷ:** ಬಂಧು ಮಿತ್ರರೊಡನೆ ಸಂತೋಷದ ಕ್ಷಣಗಳನ್ನು ಹಂಚಿಕೊಳ್ಳುವ ಅವಕಾಶ ಸಿಗಲಿದೆ. ತಾಮ್ರ, ಹಿತ್ತಾಳೆಯ ದೇವರ ಪೂಜಾ ಪಾತ್ರದ ಮಾರಾಟಗಾರರಿಗೆ ಅಧಿಕ ಲಾಭವಿರುವುದು.

**ವೃಷಭ:** ಯತ್ನಿಸಿದ ಕಾರ್ಯಗಳೆಲ್ಲ ಸಿದ್ಧಿಸುವುದರಿಂದ ಸಂತೋಷ ಇರಲಿದೆ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ. ಬರವಣಿಗೆಯ ಕೌಶಲವನ್ನು ಮುಂದುವರೆಸುವುದರಿಂದ ಸಮಾಜದಲ್ಲಿ ಹೆಸರು ಮಾಡುವಂತಾಗಲಿದೆ.

**ಮಿಥುನ:** ಲೇವಾದೇವಿ ವ್ಯವಹಾರ ಮಾಡುವವರು ಇಂದು ಸಾಲ ಕೊಡುವ ಬಗ್ಗೆ ಎರಡು ಬಾರಿ ಯೋಚಿಸಿ ಮುಂದುವರಿಯುವುದು ಉತ್ತಮ. ಪ್ರವೃತ್ತಿಯಾಗಿ ಕೃಷಿ ಮಾಡುವ ಬಗ್ಗೆ ಒಲವು ಹೆಚ್ಚಲಿದೆ. ರೇಷ್ಮೆ ಬೆಳಗಾರರಿಗೆ ಲಾಭ ಆಗುತ್ತದೆ.

**ಕರ್ಕಾಟಕ:** ಯಶಸ್ಸು ಖಚಿತವೆನಿಸಿದ್ದರೂ ಜಾಗ್ರತೆ ವಹಿಸುವುದು ಮೇಲು. ಉದ್ಯೋಗದಲ್ಲಿ ನಿಮ್ಮ ಕ್ರಿಯಾಶೀಲತೆಯಿಂದ ಹೆಚ್ಚು ಮೆರೆಯುವಿರಿ. ಪರಿಚಿತರಿಂದ ಸರಿಯಾದ ಸಮಯಕ್ಕೆ ನೆರವು ದೊರೆಯುವುದು

**ಸಿಂಹ:** ರಾಜಕಾರಣದಲ್ಲಿ ಮೇಲುಗೈ ಸಾಧಿಸಲು ಅಕ್ಕ ಪಕ್ಕದ ವಾತಾವರಣ ಪೂರಕವಾಗುತ್ತದೆ. ವಿದ್ಯಾರ್ಥಿಗಳು ಓದಿನ ವಿಷಯಗಳ ಬಗ್ಗೆ ಸ್ನೇಹಿತರೊಡನೆ ಚರ್ಚೆ ನಡೆಸುವುದರಿಂದ ವಿಚಾರ ಸಂಪೂರ್ಣವಾಗಿ ಅರ್ಥವಾಗಲಿದೆ.

**ಕನ್ಯಾ:** ಮೇಲುಸ್ತುವಾರಿ ನೋಡುವ ಹುದ್ದೆಯವರಿಗೆ ಕೆಲಸಗಾರರ ಹೊಂದಾಣಿಕೆಯು ತಲೆ ನೋವು ತರುವಂತಾಗಬಹುದು. ಯಂತ್ರೋಪಕರಣಗಳ ಬಳಕೆಯಲ್ಲಿ ಅವಘಡ ಸಂಭವಿಸಬಹುದು, ಎಚ್ಚರದಿಂದಿರಿ.

**ತುಲಾ:** ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚಲಿದೆ. ಕಿರುತೆರೆ ಕಲಾವಿದರಿಗೆ ಹಿರಿಯರಿಂದ ಪಡೆದ ಮಾರ್ಗದರ್ಶನ ಉಪಯೋಗಕ್ಕೆ ಬರುವುದು. ಬೇಳೆ ಕಾಳುಗಳ ಮಾರಾಟದಿಂದ ಲಾಭವಿದೆ.

**ವೃಶ್ಚಿಕ:** ವ್ಯವಹಾರಗಳನ್ನು ನೇರ ನಡೆ ನುಡಿ ಹೊಂದಿದವರೊಂದಿಗೆ ಮಾತ್ರ ಮುಂದುವರಿಸಿಕೊಂಡು ಹೋಗುವ ತೀರ್ಮಾನ ಒಳ್ಳೆಯದು. ಸ್ವತ್ತಿನ ವಿವಾದ ಬಗೆಹರಿಯಲಿದೆ. ಪೊಲೀಸ್ ಅಧಿಕಾರಿಗಳಿಗೆ ಒತ್ತಡ ಕಡಿಮೆಯಾಗಲಿದೆ.

**ಧನು:** ಲೋಹ ಮತ್ತು ಮರದ ವ್ಯಾಪಾರಿಗಳಿಗೆ ಉತ್ತಮ ಲಾಭ ಸಿಗುತ್ತದೆ. ನಿವೇಶನದ ಅಥವಾ ಜಮೀನಿನ ಖರೀದಿ ವಿಷಯದಲ್ಲಿ ದಾಖಲೆ ಪತ್ರಗಳನ್ನು ಕೂಲಂಕಷವಾಗಿ ಪರಿಶೀಲಿಸುವುದು ಲೇಸು.

**ಮಕರ:** ಒದಗಿ ಬರಲಿರುವ ಅವಕಾಶವೊಂದನ್ನು ಕೈತಪ್ಪಿ ಹೋಗದಂತೆ ನೋಡಿಕೊಳ್ಳುವುದು ನಿಮ್ಮ ಬುದ್ಧಿಮಟ್ಟಕ್ಕೆ ಬಿಟ್ಟಂತಹ ವಿಚಾರ. ಅಧ್ಯಾಪಕ ವೃತ್ತಿಯವರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ಅವಕಾಶ ಪ್ರಾಪ್ತಿಯಾಗಲಿದೆ.


**ಕುಂಭ:** ನಿಮ್ಮ ಸ್ವಾರ್ಥಕ್ಕಾಗಿ ಕಾನೂನಿಗೆ ವಿರುದ್ಧವಾದ ಕೆಲಸ ಮಾಡಬೇಡಿ. ಆರ್ಥಿಕವಾಗಿ ಸ್ವಲ್ಪ ಮಟ್ಟಿನ ಚೇತರಿಕೆಯನ್ನು ಕಾಣಬಹುದು. ಬೆಳವಣಿಗೆಗೆ ಬೇಕಾದ ಪೌಷ್ಟಿಕಾಂಶ ಆಹಾರದ ಕೊರತೆ ಕಾಣುತ್ತದೆ.

**ಮೀನ:** ಗೃಹ ಮಾರಾಟದ ತೀರ್ಮಾನಗಳಿಗೆ ಒಡಹುಟ್ಟಿದವರಿಂದ ಆಕ್ಷೇಪ ವ್ಯಕ್ತವಾಗಬಹುದು. ವಿದ್ಯುತ್ ವಲಯದ ಕಾರ್ಮಿಕರು ಹೆಚ್ಚಿನ ಜಾಗ್ರತೆಯನ್ನು ವಹಿಸಿರಿ. ವಿರೋಧಗಳನ್ನು ಜಾಣ್ಮೆಯಿಂದ ಎದುರಿಸಿ.

### ಪದಬಂಧ 5032 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಗಾಳಿಯಿಂದ ಕೂಡಿದ ಪ್ರದೇಶವಿದು(5)
3.ಈತ ತಿನ್ನುವವನು(3)
5.ರಾಜ್ಯದ ಚುನಾಯಿತ ಶಾಸಕರ ಮಂಡಳಿ(5)
7.ಸಲೀಸಾಗಿ ಒಳನುಗ್ಗುತಿರುವ ಗಂಡಾನೆ(3)
8.ನವಜೀವನವಿದು(5)
11.ಮುಸುಕು ಹೊದ್ದು ಮಲಗಿರುವಾಗ ಬಿದ್ದಿರುವ ಸ್ವಪ್ನ(3)
12.ಕಾಡಿನ ರಕ್ಷಕನಿವನು(5)
14.ತಲೆಯೊಳಗಿನ ಬುದ್ಧಿಶಕ್ತಿಗೆ ಆಧಾರವಾದ ಅವಯವ(3)
15.ಜನಕನಿಗೆ ಪೂರೈಕೆಯಾಗುತ್ತಿರುವ ಪ್ರಾಣವಾಯು(5)

**ಮೇಲಿಂದ ಕೆಳಕ್ಕೆ**
1.ಕಲ್ಪನೆಯಲ್ಲ ನಿಜವಾಗಿ ಇರುವಂಥದ್ದು(4)
2.ವನದಲ್ಲಿ ಕಾಣುತ್ತಿರುವ ಮುಖ(3)
4.ನಗರದಲ್ಲಿ ನಡೆದಿರುವ ಉತ್ಸವ(3)
6.ಮಾಸದ ಕೊನೆಯಲ್ಲಿ ಒಂದಾಗಿ ಸೇರಿಸಿದುದು(3)
7.ಸರದ ಜೊತೆಯಲ್ಲಿ ತಂದಿರುವ ಸಾಮಾನು(3)
8.ಹೊಲದ ಆಸುಪಾಸು ಕೊಳಕು ಕಾಣಿಸಿದೆಯಲ್ಲಾ?(3)
9.ಸ್ವೀಕರಿಸಲು ಹಿತವಲ್ಲದ ದಾನ(3)
10.ಕಳಂಕ ಇಲ್ಲದಿರುವುದು(4)
11.ಹೆಚ್ಚು ಪದದ ಉಲ್ಟಾ ಪದ (3)
13.ಪಾದರಸವನ್ನು ಹೀಗೂ ಹೇಳುವರು(3)



### 5031ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 2.ಹಲುಬೆ 4.ದಟ್ಟಣೆ 5.ಹರಕತ್ತು 6.ಬಲಿಪೀಠ 8.ಹರ 10.ದಿನ 13.ದಾರ್ಶನಿಕ 14.ಹರಿದಾರಿ 15.ರಮಣಿ 16.ಹೂರಣ

**ಮೇಲಿಂದ ಕೆಳಕ್ಕೆ:** 1.ಉದರಂಭರಣ 2.ಹಣೆಬರಹ 3.ಮಂಕರಿ 5.ಹಠಗಾರ 7.ಅನುಕ್ರಮಣಿಕೆ 9.ರಹದಾರಿ 11.ನವೀಕರಣ 12.ಸರಿಗೆ

### ಸುಡೊಕು 5418

| | | | | | | | | |
|---|---|---|---|---|---|---|---|---|
| | | | | 6 | | | | 2 |
| 6 | | 2 | 4 | | 9 | | | |
| | 8 | | | | | 6 | | 9 |
| 3 | 5 | 7 | 2 | | | 4 | | |
| | | 8 | | 4 | | | 3 | 7 |
| 4 | | | | | 3 | 2 | | 8 |
| | | 9 | 8 | | | | | 4 |
| 8 | | | | | 4 | | 2 | |
| | | 3 | | 2 | | 7 | | 6 |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5417 ಸುಡೊಕು

| | | | | | | | | |
|---|---|---|---|---|---|---|---|---|
| 4 | 5 | 7 | 2 | 6 | 8 | 1 | 9 | 3 |
| 9 | 2 | 6 | 1 | 3 | 5 | 4 | 7 | 8 |
| 1 | 8 | 3 | 7 | 4 | 9 | 2 | 5 | 6 |
| 6 | 3 | 1 | 4 | 5 | 2 | 7 | 8 | 9 |
| 5 | 7 | 2 | 8 | 9 | 6 | 3 | 4 | 1 |
| 8 | 9 | 4 | 3 | 7 | 1 | 5 | 6 | 2 |
| 3 | 6 | 9 | 5 | 1 | 4 | 8 | 2 | 7 |
| 2 | 1 | 5 | 6 | 8 | 7 | 9 | 3 | 4 |
| 7 | 4 | 8 | 9 | 2 | 3 | 6 | 1 | 5 |

ಕಾಂಗ್ರೆಸ್ ಆರೋಪ • ಸಂಸತ್ ಭವನದಿಂದ ವಿಜಯ್ ಚೌಕ್‌ವರೆಗೆ ಮೆರವಣಿಗೆ • ಪ್ರತಿಭಟನನಿರತರು ಪೊಲೀಸರ ವಶಕ್ಕೆ

# ‘ಬಿಜೆಪಿಯಿಂದ ಪ್ರಜಾಪ್ರಭುತ್ವದ ಕಗ್ಗೊಲೆ’

ನವದೆಹಲಿ (ಪಿಟಿಐ): ತನಿಖಾ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿರುವ ಕೇಂದ್ರ ಸರ್ಕಾರವು ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ಸಂಸದರು ಬುಧವಾರ ಪ್ರತಿಭಟನೆ ನಡೆಸಿದರು.

ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರನ್ನು ಒಳಗೊಂಡಂತೆ ಕಾಂಗ್ರೆಸ್ ಸಂಸದರು ಉಭಯ ಸದನಗಳಿಂದ ಪ್ರತಿಪಕ್ಷಗಳ ಸಂಸದರ ಅಮಾನತು ಖಂಡಿಸಿ ಘೋಷಣೆ ಕೂಗಿದರು.

ಸಂಸದರು ಸಂಸತ್ ಭವನದ ಆವರಣದಿಂದ ವಿಜಯ್ ಚೌಕ್‌ವರೆಗೆ ಮೆರವಣಿಗೆ ನಡೆಸಿ, ಅಲ್ಲಿ ಧರಣಿ ಕುಳಿತರು. ಬೆಲೆ ಏರಿಕೆ ಹಾಗೂ ದಿನಬಳಕೆಯ ಅಗತ್ಯ ವಸ್ತುಗಳಿಗೆ ಜಿಎಸ್‌ಟಿ ವಿಧಿಸಿದ್ದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದರು.

‘ಜಾರಿ ನಿರ್ದೇಶನಾಲಯ ಸೇರಿದಂತೆ ತನಿಖಾ ಸಂಸ್ಥೆಗಳ ದುರ್ಬಳಕೆ ಹಾಗೂ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ ಮುಂದುವರಿಸುತ್ತೇವೆ. ಸಂಸದರನ್ನು ಸದನದಿಂದ ಅಮಾನತು ಮಾಡಿದ್ದು ಸರಿಯಲ್ಲ. ತಕ್ಷಣ ಆದೇಶ ಹಿಂಪಡೆಯಬೇಕು’ ಎಂದು ಖರ್ಗೆ ಅವರು ಒತ್ತಾಯಿಸಿದರು. ತನಿಖಾ ಸಂಸ್ಥೆಗಳನ್ನು ಸರ್ಕಾರ ಬಳಸಿಕೊಳ್ಳುತ್ತಿರುವ ರೀತಿಗೆ ಆಕ್ಷೇಪ ವ್ಯಕ್ತಪಡಿಸಿದ ಚೌಧರಿ ಅವರು, ‘ಪ್ರತಿಪಕ್ಷಮುಕ್ತ ಭಾರತ ನಿರ್ಮಿಸುವುದು ಸರ್ಕಾರದ ಉದ್ದೇಶ ಎಂಬಂತೆ ತೋರುತ್ತಿದೆ’ ಎಂದು ಆರೋಪಿಸಿದರು.

ಪ್ರತಿಭಟನಕಾರರನ್ನು ಪೊಲೀಸ್ ವಾಹನದಲ್ಲಿ ಕರೆದೊಯ್ಯಲಾಯಿತು. ‘ಇಂದು ನಮ್ಮ ಎಲ್ಲ ಸಂಸದರನ್ನು ವಶಕ್ಕೆ ಪಡೆಯಲಾಗಿದೆ. ನಾವು ಸಂಸತ್ತಿನಲ್ಲಿ ಚರ್ಚೆ ಮಾಡಲು ಒತ್ತಾಯಿಸಿದರೆ, ಸರ್ಕಾರ ಅದಕ್ಕೆ ಅವಕಾಶ ನೀಡುತ್ತಿಲ್ಲ. ಇದು ರಾಜಕೀಯ ದುರುದ್ದೇಶದ ಕ್ರಮ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆರೋಪಿಸಿದರು.



ದೆಹಲಿಯಲ್ಲಿ ಬುಧವಾರ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಸಂಸದರಾದ ಜ್ಯೋತಿಮಣಿ, ರಣವೀರ್ ಸಿಂಗ್ ಬಿಟ್ಟು, ದೀಪೇಂದ್ರ ಸಿಂಗ್ ಹೂಡಾ ಹಾಗೂ ಇತರರನ್ನು ಪೊಲೀಸರು ವಶಕ್ಕೆ ಪಡೆದರು —ಪಿಟಿಐ ಚಿತ್ರ

> **ಪ್ರಧಾನಿಯವರೇ, ಪ್ರಜಾಪ್ರಭುತ್ವದಲ್ಲಿ ವಿಷಯಾಧಾರಿತ ಪ್ರಶ್ನೆಗಳನ್ನು ನೀವು ಆಲಿಸಬೇಕು. ಇದಕ್ಕೆ ಭಯವೇಕೆ**
>
> **ಪ್ರಿಯಾಂಕಾ ಗಾಂಧಿ,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

**ಹರಿದ ಬಟ್ಟೆ–ಸಂಸದೆ ಆರೋಪ:** ದೆಹಲಿಯ ಕಾಂಗ್ರೆಸ್ ಕಚೇರಿ ಹೊರಗಡೆ ಪ್ರತಿಭಟನೆ ನಡೆಸಿದ ಮಹಿಳಾ ಹಾಗೂ ಯುವ ಕಾಂಗ್ರೆಸ್ ಘಟಕಗಳ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು. ಪೊಲೀಸರು ವಶಕ್ಕೆ ಪಡೆಯುವಾಗ ತಮ್ಮ ಬಟ್ಟೆ ಹರಿಯಿತು ಎಂದು ಕಾಂಗ್ರೆಸ್ ಸಂಸದೆ ಜ್ಯೋತಿಮಣಿ ಆರೋಪಿಸಿದ್ದಾರೆ. ಪೊಲೀಸರು ತಮ್ಮನ್ನು ವಾಹನದೊಳಕ್ಕೆ ಕಳುಹಿಸುತ್ತಿರುವ ವಿಡಿಯೊವನ್ನು ಬಿಡುಗಡೆ ಮಾಡಿರುವ ಅವರು, ಈ ವೇಳೆ ತಮ್ಮ ಬಟ್ಟೆ ಹರಿಯಿತು ಎಂದು ಹೇಳಿದ್ದಾರೆ.

‘ಪ್ರತಿಭಟನೆ ನಡೆಸಿದ್ದೇವೆಯೇ ಹೊರತು, ಸದನದ ಘನತೆಗೆ ಕುಂದು ತರುವ ರೀತಿಯಲ್ಲಿ ನಡೆದುಕೊಂಡಿಲ್ಲ. ಆದರೂ ನಮ್ಮನ್ನು ಅಮಾನತು ಮಾಡಲಾಗಿದೆ. ಮಹಿಳಾ ಸಂಸದರನ್ನು ಪದೇ ಪದೇ ಈ ರೀತಿ ನಡೆಸಿಕೊಳ್ಳಬೇಕಾ? ನಮಗೂ ಘನತೆಯಿಲ್ಲವೇ?’ ಎಂದು ಜ್ಯೋತಿಮಣಿ ಟ್ವೀಟ್ ಮಾಡಿದ್ದಾರೆ.

‘ಜನಪ್ರತಿನಿಧಿಗಳನ್ನು ಸರ್ಕಾರವು ‘ಕ್ರಿಮಿನಲ್’ಗಳ ರೀತಿ ನಡೆಸಿಕೊಳ್ಳುತ್ತಿದೆ. ಇದು ನಿಜಕ್ಕೂ ಅಸಂಸದೀಯ ನಡವಳಿಕೆ’ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಫೇಸ್‌ಬುಕ್‌ನಲ್ಲಿ ಬರೆದಿದ್ದಾರೆ.

## ಮತ್ತೆ ಮೂರು ತಾಸು ಸೋನಿಯಾ ವಿಚಾರಣೆ

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಮೂರನೇ ದಿನವಾದ ಬುಧವಾರವೂ ವಿಚಾರಣೆಗೆ ಒಳಪಡಿಸಿದ ಜಾರಿ ನಿರ್ದೇಶನಾಲಯ (ಇ.ಡಿ), ಅವರ ಹೇಳಿಕೆಯನ್ನು ದಾಖಲಿಸಿಕೊಂಡಿತು.

ಮೂರು ತಾಸು ವಿಚಾರಣೆ ನಡೆಸಿದ ಇ.ಡಿ. ಮತ್ತೆ ವಿಚಾರಣೆಗೆ ಹಾಜರಾಗುವಂತೆ ಸೋನಿಯಾ ಅವರಿಗೆ ಸೂಚಿಸಿಲ್ಲ. ಮೂರು ದಿನಗಳಲ್ಲಿ ಸೋನಿಯಾ ಅವರನ್ನು ಒಟ್ಟಾರೆ 11 ಗಂಟೆ ವಿಚಾರಣೆ ನಡೆಸಿ, ಸರಿಸುಮಾರು 100 ಪ್ರಶ್ನೆಗಳನ್ನು ಕೇಳಲಾಗಿದೆ.

ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಜೊತೆ ಬೆಳಿಗ್ಗೆ 11 ಗಂಟೆಗೆ ಇ.ಡಿ. ಕಚೇರಿಯಲ್ಲಿ ವಿಚಾರಣೆ ಹಾಜರಾದ ಸೋನಿಯಾ ಅವರು ಮಧ್ಯಾಹ್ನ 2 ಗಂಟೆಗೆ ಹೊರಬಂದರು. ಪ್ರಕರಣ ಕುರಿತಂತೆ ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರನ್ನು ಇ.ಡಿ. ಈಗಾಗಲೇ ವಿಚಾರಣೆಗೆ ಒಳಪಡಿಸಿದೆ.



ವಿಚಾರಣೆಗೆ ಹಾಜರಾಗಲು ಇ.ಡಿ. ಕಚೇರಿಗೆ ತೆರಳುತ್ತಿರುವ ಸೋನಿಯಾ ಗಾಂಧಿ —ಪಿಟಿಐ ಚಿತ್ರ

## ಸುದ್ದಿ 2 ನಿಮಿಷ

### ಸ್ಪೈಸ್ ಜೆಟ್‌ನ ಶೇ 50ರಷ್ಟು ವಿಮಾನಗಳ ಹಾರಾಟಕ್ಕೆ ಅನುಮತಿ

ನವದೆಹಲಿ (ಪಿಟಿಐ): ಸ್ಪೈಸ್ ಜೆಟ್‌ನ ಗರಿಷ್ಠ ಶೇ 50ರಷ್ಟು ವಿಮಾನಗಳಿಗೆ ಮಾತ್ರ ಬೇಸಿಗೆ ವೇಳಾಪಟ್ಟಿಯಲ್ಲಿ ಎಂಟು ವಾರ ಸಂಚಾರ ಸೇವೆ ಒದಗಿಸಲು ಅನುಮತಿಸಿ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಬುಧವಾರ ಆದೇಶ ಹೊರಡಿಸಿದೆ.

ಈ ವಿಮಾನಗಳ ಸೇವೆಯಲ್ಲಿ ಇತ್ತೀಚೆಗೆ ಕೆಲವು ಲೋಪದೋಷಗಳು ಕಾಣಿಸಿದ ಕಾರಣ, ಬೇಸಿಗೆ ವೇಳಾಪಟ್ಟಿಯಲ್ಲಿ ಆ ಸಂಸ್ಥೆಗೆ ನೀಡಿದ್ದ ಅನುಮತಿಗೆ ಮಾರ್ಪಾಡು ಮಾಡಿ, ವಿಮಾನಗಳ ಸಂಚಾರ ಸೇವೆಯಲ್ಲಿ ಕಡಿತಗೊಳಿಸಲಾಗಿದೆ.

ಜೂನ್ 19ರಿಂದ ಸ್ಪೈಸ್ ಜೆಟ್ ವಿಮಾನಗಳಲ್ಲಿ ಕನಿಷ್ಠ ಎಂಟು ಬಾರಿ ತಾಂತ್ರಿಕ ದೋಷಗಳು ಕಾಣಿಸಿಕೊಂಡು, ತುರ್ತು ಭೂಸ್ಪರ್ಶದ ಘಟನೆಗಳು ನಡೆದಿದ್ದವು. ಇದರಿಂದಾಗಿ ಜುಲೈ 6ರಂದು ಡಿಜಿಸಿಎ ಕಾರಣ ಕೇಳಿ ವಿಮಾನಯಾನ ಸಂಸ್ಥೆಗೆ ನೋಟಿಸ್ ನೀಡಿತ್ತು.

‘ನೋಟಿಸ್‌ಗೆ ಸ್ಪೈಸ್ ಜೆಟ್ ನೀಡಿರುವ ಉತ್ತರ, ಸ್ಥಳ ಪರಿಶೀಲನೆ, ವಿಮಾನ ಹಾರಾಟ ಪರಿವೀಕ್ಷಣೆ ಪರಿಶೀಲಿಸಿದ ನಂತರ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಸಂಚಾರ ಸೇವೆ ಮುಂದುವರಿಕೆಗೆ ಸ್ಪೈಸ್ ಜೆಟ್ ವಿಮಾನಗಳ ನಿರ್ಗಮನಗಳ ಸಂಖ್ಯೆಯನ್ನು ಬೇಸಿಗೆಯ ವೇಳಾಪಟ್ಟಿಗೆ ಶೇಕಡಾ 50ರಷ್ಟಕ್ಕೆ ಸೀಮಿತಗೊಳಿಸಲಾಗಿದೆ’ ಎಂದು ಡಿಜಿಸಿಎ ಹೇಳಿದೆ.



### ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ: ನಾಲ್ವರು ಬಾಲಾರೋಪಿಗಳಿಗೆ ಜಾಮೀನು

ಹೈದರಾಬಾದ್ (ಪಿಟಿಐ): ಇಲ್ಲಿನ 17ರ ಹರೆಯದ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಆರೋಪದ ಪ್ರಕರಣ ಸಂಬಂಧ ನಾಲ್ವರು ಬಾಲಾರೋಪಿಗಳಿಗೆ ಬಾಲ ನ್ಯಾಯ ಮಂಡಳಿ (ಜೆಜೆಬಿ) ಜಾಮೀನು ಮಂಜೂರು ಮಾಡಿದೆ.

ಬಾಲ ನ್ಯಾಯಮಂಡಳಿಯು ಕೆಲವು ಷರತ್ತುಗಳನ್ನು ವಿಧಿಸಿ, ₹5,000 ಮೊತ್ತದ ತಲಾ ಎರಡು ಶ್ಯೂರಿಟಿಗಳನ್ನು ಪಡೆದು ಬಾಲಾರೋಪಿಗಳಿಗೆ (ಕಾನೂನು ಸಂಘರ್ಷದಲ್ಲಿರುವ ಮಕ್ಕಳು) ಮಂಗಳವಾರ ಜಾಮೀನು ನೀಡಿದೆ. ಹೈದರಾಬಾದ್‌ನ ಜ್ಯುಬಿಲಿ ಹಿಲ್ಸ್ ಪ್ರದೇಶದಲ್ಲಿ ಮೇ 28ರಂದು ಹಗಲು ವೇಳೆ ಪಬ್‌ಗೆ ಭೇಟಿ ನೀಡಿದ್ದ ಬಾಲಕಿಗೆ ಡ್ರಾಪ್ ಕೊಡುವ ನೆಪದಲ್ಲಿ ಕಾರಿಗೆ ಹತ್ತಿಸಿಕೊಂಡು, ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಪ್ರಕರಣದಲ್ಲಿ ಈ ನಾಲ್ವರು ಬಾಲಕರ ಜತೆಗೆ 18 ವರ್ಷದ ಯುವಕನೂ ಸೇರಿದ್ದ. ವಯಸ್ಕ ಆರೋಪಿ ಸದ್ಯ ಜೈಲಿನಲ್ಲಿದ್ದಾನೆ.

## ಚಿತ್ರೀಕರಣದ ವೇಳೆ ನಟಿ ಸಂಯುಕ್ತ ಹೆಗ್ಡೆಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ರೀಮ್’ ಚಿತ್ರದ ಹೊಡೆದಾಟದ ದೃಶ್ಯವೊಂದರ ಚಿತ್ರೀಕರಣದ ವೇಳೆ ನಾಯಕಿ ಸಂಯುಕ್ತ ಹೆಗ್ಡೆಗೆ ಗಾಯವಾಗಿದ್ದು, ಕಣ್ವ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಕಂಠೀರವ ಸ್ಟುಡಿಯೋದಲ್ಲಿ ಚಿತ್ರೀಕರಣ ನಡೆಯುತ್ತಿದ್ದ ವೇಳೆ ಈ ಅವಘಡ ನಡೆದಿದೆ. ಚಿತ್ರೀಕರಣ ಮುಂದೂಡಲಾಗಿದೆ.

ಅಭಿಷೇಕ್ ಬಸಂತ್ ನಿರ್ದೇಶನದಲ್ಲಿ ಫೈಟ್ ಮಾಸ್ಟರ್ ಪ್ರಭು ಅವರ ಸಮ್ಮುಖದಲ್ಲಿ ಈ ದೃಶ್ಯದ ಚಿತ್ರೀಕರಣ ನಡೆಯುತ್ತಿತ್ತು. ಛಾಯಾಗ್ರಾಹಕ ಸುನೋಜ್ ವೇಲಾಯುಧನ್ ಅವರು ಡ್ಯೂಪ್ ಬಳಸುವಂತೆ ಸಲಹೆ ನೀಡಿದ್ದರು. ಅದಕ್ಕೆ ಕೆಲವರು ಒಪ್ಪಿರಲಿಲ್ಲ ಎನ್ನಲಾಗಿದೆ. ಸಂಯುಕ್ತ ಅವರ ಕಾಲು ಹಾಗೂ ತಲೆಗೆ ಬಲವಾದ ಪೆಟ್ಟು ಬಿದ್ದಿದೆ. ಕ್ರೀಮ್ ಚಿತ್ರಕ್ಕೆ ಡಿ.ಕೆ. ದೇವೇಂದ್ರ ನಿರ್ಮಾಪಕರಾಗಿದ್ದಾರೆ.



ಗಾಯಗೊಂಡಿರುವ ನಟಿ ಸಂಯುಕ್ತ ಹೆಗ್ಡೆ

## ವಿದೇಶಿ ಉಪಗ್ರಹ ಉಡಾವಣೆ: ಇಸ್ರೋ ₹2,229 ಕೋಟಿ ಗಳಿಕೆ

ನವದೆಹಲಿ (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಜಾಗತಿಕ ಗ್ರಾಹಕರ ಉಪಗ್ರಹಗಳನ್ನು ಉಡಾವಣೆ ಮಾಡುವ ಮೂಲಕ ₹2,229 ಕೋಟಿ (279 ಮಿಲಿಯನ್ ಡಾಲರ್) ಗಳಿಸಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಲೋಕಸಭೆಯಲ್ಲಿ ಬುಧವಾರ ತಿಳಿಸಿದ್ದಾರೆ.

ಈ ಕುರಿತ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ ಅವರು, ‘ಇಸ್ರೋ ತನ್ನ ವಾಣಿಜ್ಯ ಉದ್ದೇಶದ ಅಂಗ ಸಂಸ್ಥೆಯ ಸಹಭಾಗಿತ್ವದಲ್ಲಿ ಪಿಎಸ್‌ಎಲ್‌ವಿ ನೌಕೆಯ ಮೂಲದ 34 ದೇಶಗಳ 345 ವಿದೇಶಿ ಉಪಗ್ರಹಗಳನ್ನು ಉಡಾವಣೆ ಮಾಡಿದೆ. ಈ ಮೂಲಕ ಒಟ್ಟಾರೆಯಾಗಿ 279 ಮಿಲಿಯನ್ ಡಾಲರ್ ಹಣವನ್ನು ಗಳಿಸಿದೆ ಎಂದು ತಿಳಿಸಿದ್ದಾರೆ.

ಇಸ್ರೋ, ಇತ್ತೀಚೆಗೆ ಅಂದರೆ ಜೂನ್ 30ರಂದು ಪಿಎಸ್‌ಎಲ್‌ವಿ–ಸಿ53 ಬಾಹ್ಯಾಕಾಶ ನೌಕೆಯ ಮೂಲಕ ಸಿಂಗಪುರದ ಮೂರು ಉಪಗ್ರಹಗಳನ್ನು ಕಕ್ಷೆಗೆ ಕಳುಹಿಸಿದೆ.

## ಇ.ಡಿ ಅಧಿಕಾರ ಅಬಾಧಿತ

ಒಂದನೇ ಪುಟದಿಂದ...

**ತೀರ್ಪಿನ ಮುಖ್ಯಾಂಶಗಳು:**

‘ಯಾವುದೇ ವ್ಯಕ್ತಿ ಅಕ್ರಮ ಹಣ ವರ್ಗಾವಣೆ ನಡೆಸಿದ್ದಾನೆ ಎಂಬ ಊಹೆಯ ಮೇಲೆ ಆತನ ವಿರುದ್ಧ ಪ್ರಕರಣ ದಾಖಲಿಸಿ, ವಿಚಾರಣೆ ನಡೆಸಲು ಸಾಧ್ಯವಿಲ್ಲ. ನಡೆದಿದೆ ಎನ್ನಲಾದ ಅಪರಾಧದ ಸಂಬಂಧ, ಆ ಪ್ರದೇಶದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರಬೇಕು ಮತ್ತು ಸಂಬಂಧಿತ ತನಿಖಾ ಸಂಸ್ಥೆಯಲ್ಲಿ ಪ್ರಕರಣದ ವಿಚಾರಣೆ ಪ್ರಗತಿಯಲ್ಲಿರಬೇಕು. ಆಗ ಮಾತ್ರ ಜಾರಿ ನಿರ್ದೇಶನಾಲಯವು ಪಿಎಂಎಲ್‌ಎ ಅಡಿ ಪ್ರಕರಣ ದಾಖಲಿಸಿಕೊಳ್ಳಬಹುದು’ ಎಂದು ಸುಪ್ರೀಂ ಕೋರ್ಟ್ ಪೀಠವು ಹೇಳಿದೆ.

ಹಣ ಅಕ್ರಮ ವರ್ಗಾವಣೆಯ ಮೂಲಕ ಆಸ್ತಿ ಸಂಪಾದಿಸಿದ್ದರೆ ಮಾತ್ರ ಪಿಎಂಎಲ್‌ಎ ಕಾಯ್ದೆ ಅಡಿ ಪ್ರಕರಣ ದಾಖಲಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಪಿಎಂಎಲ್‌ಎಯ 3ನೇ ಸೆಕ್ಷನ್‌ನಲ್ಲಿರುವ ವಿವರಣೆಗಳು ಅಸಾಂವಿಧಾನಿಕ ಎಂಬುದು ಅರ್ಜಿದಾರರ ವಾದವಾಗಿತ್ತು. ‘ಅಕ್ರಮ ಹಣ ವರ್ಗಾವಣೆ ನಡೆದ ನಂತರವಷ್ಟೇ ಪ್ರಕರಣ ದಾಖಲಿಸಲು ಅವಕಾಶವಿದೆ ಎಂದಲ್ಲ. ಬದಲಿಗೆ ಅಂತಹ ಅಕ್ರಮ ವರ್ಗಾವಣೆಯ ವಿವಿಧ ಹಂತಗಳಲ್ಲೂ ಜಾರಿ ನಿರ್ದೇಶನಾಲಯವು ಕಾರ್ಯಪ್ರವೃತ್ತವಾಗಲು ಮತ್ತು ಕ್ರಮ ತೆಗೆದುಕೊಳ್ಳಲು 3ನೇ ಸೆಕ್ಷನ್ ಅವಕಾಶ ನೀಡುತ್ತದೆ’ ಎಂದು ಪೀಠವು ಹೇಳಿದೆ.

ಪಿಎಂಎಲ್‌ಎಯ 5ನೇ ಸೆಕ್ಷನ್ ಅಡಿ, ಆರೋಪಿಗಳಿಗೆ ಸಂಬಂಧಿಸಿದ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅಸಾಂವಿಧಾನಿಕ ಎಂದು ಅರ್ಜಿದಾರರು ಪ್ರತಿಪಾದಿಸಿದ್ದರು. ಪೀಠವು ಈ ಪ್ರತಿಪಾದನೆಯನ್ನು ತಿರಸ್ಕರಿಸಿದೆ. ‘ತನಿಖೆ ನಡೆಸಲು ಅಗತ್ಯವಿರುವಂತೆ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಈ ಸೆಕ್ಷನ್ ಅವಕಾಶ ಮಾಡಿಕೊಡುತ್ತದೆ ಮತ್ತು ಆರೋಪಿಗಳ ಹಕ್ಕುಗಳು, ಹಿತಾಸಕ್ತಿ ರಕ್ಷಣೆಗೂ ಈ ಸೆಕ್ಷನ್‌ನಲ್ಲಿ ಅವಕಾಶವಿದೆ. ಹೀಗಾಗಿ ಇದು ಸಂವಿಧಾನಕ್ಕೆ ಬದ್ಧವಾಗಿದೆ’ ಎಂದು ಪೀಠವು ಹೇಳಿದೆ.

ಪಿಎಂಎಲ್‌ಎಯ 24ನೇ ಸೆಕ್ಷನ್ ಅಸಾಂವಿಧಾನಿಕ ಎಂದು ಅರ್ಜಿದಾರರು ಪ್ರತಿಪಾದಿಸಿದ್ದರು. ‘ಮುಟ್ಟುಗೋಲು ಹಾಕಿಕೊಳ್ಳಲಾದ ಸ್ವತ್ತುಗಳನ್ನು ಕಾನೂನುಬದ್ಧವಾಗಿಯೇ ಸಂಪಾದಿಸಲಾಗಿದೆ ಎಂಬುದನ್ನು ಸಾಬೀತುಮಾಡುವ ಹೊಣೆಗಾರಿಕೆ ಆರೋಪಿಗಳದ್ದೇ. ಇದು ಕಾಯ್ದೆಯ ಉದ್ದೇಶಗಳಿಗೆ ಬದ್ಧವಾಗಿರುವ ಸೆಕ್ಷನ್’ ಎಂದು ಹೇಳಿದೆ.

ತನಿಖೆಯ ವೇಳೆ ಆರೋಪಿಗಳು ನೀಡಿದ ಮಾಹಿತಿಯನ್ನು, ಅವರ ವಿರುದ್ಧ ಸಾಕ್ಷ್ಯವಾಗಿ ಬಳಸಲು ಪಿಎಂಎಲ್‌ಎಯ 50ನೇ ಸೆಕ್ಷನ್ ಅವಕಾಶ ಮಾಡಿಕೊಡುತ್ತದೆ. ಇದು ಸಂವಿಧಾನದ 20(3)ನೇ ವಿಧಿಗೆ ವಿರುದ್ಧವಾದುದು ಎಂಬುದು ಅರ್ಜಿದಾರರ ವಾದವಾಗಿತ್ತು. ‘ಸೆಕ್ಷನ್ 50ರ ಅಡಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ವಿಚಾರಣೆ ನಡೆಸುತ್ತಾರೆಯೇ ಹೊರತು, ಅದು ತನಿಖೆ ಅಲ್ಲ. ತನಿಖೆ ನಡೆಸಲು ಅವರು ಪೊಲೀಸ್ ಅಧಿಕಾರಿಗಳಲ್ಲ. ಹೀಗಾಗಿ ‘ಆರೋಪಿಗಳ ಹೇಳಿಕೆಯನ್ನು ಅವರ ವಿರುದ್ಧವೇ ಸಾಕ್ಷಿಯಾಗಿ ಬಳಸುವಂತಿಲ್ಲ’ ಎಂಬ 20(3)ನೇ ವಿಧಿಯು, ಇಲ್ಲಿ ಅನ್ವಯವಾಗುವುದಿಲ್ಲ’ ಎಂದು ಪೀಠವು ವಿವರಿಸಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮಿಸಳ್ ಹಾಪ್ಚಾ
ತಾರಾವನ-ಇದು ಗುಡಿಗಿಂತಲೂ ಮಿಗಿಲು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

## ಅಫಜಲಪುರ: 46 ವಿದ್ಯಾರ್ಥಿಗಳು ಅಸ್ವಸ್ಥ

ಅಫಜಲಪುರ (ಕಲಬುರಗಿ): ಬಿಸಿಯೂಟದ ಪಾತ್ರೆಯಲ್ಲಿ ಹಲ್ಲಿ ಬಿದ್ದಿರುವ ಆಹಾರವನ್ನು ಸೇವಿಸಿ 46 ವಿದ್ಯಾರ್ಥಿಗಳು ಅಸ್ವಸ್ಥಗೊಂಡ ಘಟನೆ ತಾಲ್ಲೂಕಿನ ಹಾವನಾರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಬುಧವಾರ ನಡೆದಿದೆ. ಅವರಲ್ಲಿ ತೀವ್ರವಾಗಿ ಅಸ್ವಸ್ಥಗೊಂಡ 8 ವಿದ್ಯಾರ್ಥಿಗಳನ್ನು ಕಲಬುರಗಿಯ ಜಿಮ್ಸ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು.

ಬಿಸಿಯೂಟ ಸವಿಯುತ್ತಿದ್ದ 9 ಮತ್ತು 10ನೇ ತರಗತಿಯ 46 ಮಕ್ಕಳು ಅಸ್ವಸ್ಥಗೊಂಡರು. ಬಿಸಿಯೂಟದ ಪಾತ್ರೆಯಲ್ಲಿ ಹಲ್ಲಿ ಬಿದ್ದಿರುವುದು ಗೊತ್ತಾದ ಕೂಡಲೇ ಉಳಿದ ಮಕ್ಕಳು ಆಹಾರ ಸೇವಿಸಲಿಲ್ಲ. ವಿಷಯ ತಿಳಿದ ತಕ್ಷಣ ಶಾಲೆಯ ಶಿಕ್ಷಕರು ಮತ್ತು ಸಿಬ್ಬಂದಿ, 46 ಮಕ್ಕಳನ್ನು ಗೊಬ್ಬುರ (ಬಿ) ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋಗಿ ಚಿಕಿತ್ಸೆ ನೀಡಲಾಯಿತು.

## ಪ್ರಯಾಣ ದರ: ಹಿರಿಯ ನಾಗರಿಕರಿಗೆ ರಿಯಾಯಿತಿ ಪುನರಾರಂಭಕ್ಕೆ ರೈಲ್ವೆ ಚಿಂತನೆ

ನವದೆಹಲಿ: ವ್ಯಾಪಕ ವಿರೋಧ ವ್ಯಕ್ತವಾದ ಬೆನ್ನಲ್ಲೆ, ರೈಲ್ವೆಯು ಪ್ರಯಾಣ ದರದಲ್ಲಿ ಹಿರಿಯ ನಾಗರಿಕರಿಗೆ ನೀಡಲಾಗುತ್ತಿದ್ದ ರಿಯಾಯಿತಿಗಳನ್ನು ಪುನಃ ಆರಂಭಿಸಲು ಚಿಂತನೆ ನಡೆಸಿದೆ. ಕೆಲ ನಿಬಂಧನೆಗಳಿಗೆ ಒಳಪಟ್ಟು ಈ ಸೌಲಭ್ಯಗಳನ್ನು ಆರಂಭಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಈ ರಿಯಾಯಿತಿಗಳು ಜನರಲ್ ಹಾಗೂ ಸ್ಲೀಪರ್ ಕೋಚ್‌ಗಳಲ್ಲಿನ ಪ್ರಯಾಣಕ್ಕೆ ಮಾತ್ರ ಅನ್ವಯವಾಗಲಿದೆ ಎಂದು ಹೇಳಿವೆ.

ಈ ಮೊದಲು 58 ವರ್ಷ ಮೇಲ್ಪಟ್ಟ ಮಹಿಳೆಯರು ಹಾಗೂ 60 ವರ್ಷ ದಾಟಿದ ಪುರುಷರಿಗೆ ರಿಯಾಯಿತಿ ದರಗಳು ಅನ್ವಯವಾಗುತ್ತಿದ್ದವು. ಈಗ ಈ ರಿಯಾಯಿತಿ ಸೌಲಭ್ಯವನ್ನು 70 ವರ್ಷ ಮೇಲ್ಪಟ್ಟವರಿಗೆ ಮಾತ್ರ ನೀಡುವ ಪ್ರಸ್ತಾವ ಇದೆ ಎಂದು ಇವೇ ಮೂಲಗಳು ಹೇಳಿವೆ.

‘ಹಿರಿಯ ನಾಗರಿಕರಿಗೆ ಪ್ರಯಾಣ ದರದಲ್ಲಿನ ರಿಯಾಯಿತಿಯನ್ನು ಮುಂದುವರಿಸುವುದು ಸೇರಿದಂತೆ ವಿವಿಧ ಸೌಲಭ್ಯಗಳನ್ನು ಮತ್ತೆ ಆರಂಭಿಸುವುದಕ್ಕೆ ಸಂಬಂಧಿಸಿ ನಮ್ಮ ಮುಂದಿರುವ ಆಯ್ಕೆಗಳಿವು. ಆದರೆ, ಈ ನಿಟ್ಟಿನಲ್ಲಿ ಯಾವುದೇ ಅಂತಿಮ ನಿರ್ಧಾರವಾಗಿಲ್ಲ’ ಎಂದು ಸ್ಪಷ್ಟಪಡಿಸಿವೆ.

ವಿಪಕ್ಷಗಳು ಸದನದಲ್ಲಿ ಪ್ರತಿಭಟಿಸದಿರುವ ಖಾತ್ರಿ ನೀಡುವಂತೆ ಕೇಂದ್ರ ಸರ್ಕಾರ ಬಿಗಿ ಪಟ್ಟು

# ಸಂಸದರ ಅಮಾನತು ರದ್ದುಪಡಿಸಲು ಆಗ್ರಹ

ನವದೆಹಲಿ (ಪಿಟಿಐ): ರಾಜ್ಯಸಭೆಯ 20 ಸದಸ್ಯರು ಮತ್ತು ಲೋಕಸಭೆಯ ನಾಲ್ವರು ಸದಸ್ಯರು ಸೇರಿ ಪ್ರತಿಪಕ್ಷಗಳ ಒಟ್ಟು 24 ಸಂಸದರನ್ನು ಕಲಾಪದಿಂದ ವಾರದ ಅವಧಿಗೆ ಅಮಾನತುಗೊಳಿಸಿರುವುದನ್ನು ಹಿಂಪಡೆಯಬೇಕು ಎಂದು ಪ್ರತಿಪಕ್ಷಗಳು ಬುಧವಾರ ಒತ್ತಾಯಿಸಿವೆ. ಆದರೆ, ವಿರೋಧ ಪಕ್ಷಗಳ ಸದಸ್ಯರು ಎರಡೂ ಸದನಗಳಲ್ಲಿ ಸ್ಪೀಕರ್, ಸಭಾಪತಿ ಪೀಠಗಳ ಹತ್ತಿರ ಹೋಗಿ ಘೋಷಣಾ ಫಲಕ ಪ್ರದರ್ಶಿಸುವುದಿಲ್ಲ ಮತ್ತು ಸದನಗಳಲ್ಲಿ ಪ್ರತಿಭಟನೆ ನಡೆಸುವುದಿಲ್ಲವೆಂದು ಖಾತ್ರಿಪಡಿಸಿದರೆ ಮಾತ್ರ ಅಮಾನತು ಶಿಕ್ಷೆ ಹಿಂಪಡೆಯಬಹುದು ಎಂದು ಸರ್ಕಾರ ಪಟ್ಟುಹಿಡಿದಿದೆ.

ಕಲಾಪಕ್ಕೆ ಅಡ್ಡಿಪಡಿಸಿದರೆಂದು ಕಾಂಗ್ರೆಸ್‌ನ ನಾಲ್ವರು ಸಂಸದರನ್ನು ಅಮಾನತುಗೊಳಿಸಿರುವ ನಿರ್ಧಾರ ಹಿಂಪಡೆಯುವಂತೆ ಎನ್‌ಸಿಪಿ, ಟಿಎಂಸಿ, ಡಿಎಂಕೆ ಸದಸ್ಯರು ಲೋಕಸಭೆಯಲ್ಲಿ ಒತ್ತಾಯಿಸಿದರು. ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿ ವಿಜಯ್ ಚೌಕ್‌ದಲ್ಲಿ ಪ್ರತಿಭಟಿಸಿದ ನಂತರ ಕಾಂಗ್ರೆಸ್‌ನ ಹಲವು ಸಂಸದರನ್ನು ಬಂಧಿಸಲಾಗಿದೆ. ಇದರಿಂದಾಗಿ ಕಾಂಗ್ರೆಸ್ ಸದಸ್ಯರು ಗೈರಾಗಿದ್ದರು.

ರಾಜ್ಯಸಭೆಯಲ್ಲೂ ಪ್ರತಿಪಕ್ಷಗಳ 20 ಸದಸ್ಯರನ್ನು ಅಮಾನತುಗೊಳಿಸಿರುವುದನ್ನು ಹಿಂಪಡೆಯುವಂತೆ ವಿರೋಧ ಪಕ್ಷಗಳ ಸದಸ್ಯರು ಆಗ್ರಹಿಸಿದರು.

ಬೆಳಿಗ್ಗೆ ಎರಡು ಬಾರಿ ಮುಂದೂಡಿದ್ದ ಕಲಾಪ ಮಧ್ಯಾಹ್ನ 2 ಗಂಟೆಗೆ ಆರಂಭವಾಗುತ್ತಿದ್ದಂತೆ ಎನ್‌ಸಿಪಿ ನಾಯಕಿ ಸುಪ್ರಿಯಾ ಸುಳೆ ಅವರು ‘ಸದನದ ಕಲಾಪ ಸುಗಮವಾಗಿ ನಡೆಯಲು ಸರ್ಕಾರಕ್ಕೆ ಸಹಕರಿಸಲು ಸಿದ್ಧ’ ಎಂದು ಪ್ರತಿಪಕ್ಷಗಳ ಪರವಾಗಿ ಹೇಳಿದರು. ಸುಳೆ ಅವರಿಗೆ ಟಿಎಂಸಿ ಸಂಸದ ಸುದೀಪ್ ಬಂಡ್ಯೋಪಾಧ್ಯಾಯ ಧ್ವನಿಗೂಡಿಸಿದರು.

ಡಿಎಂಕೆ ಸಂಸದ ಎ.ರಾಜಾ ಅವರು, ‘ನಾವು ಚರ್ಚೆಯಲ್ಲಿ ಭಾಗವಹಿಸಲು ಸಿದ್ಧರಿದ್ದೇವೆ. ಅಮಾನತು ಶಿಕ್ಷೆ ವಾಪಸ್ ಪಡೆಯಿರಿ’ ಎಂದು ಮನವಿ ಮಾಡಿದರು.

‘ನಮ್ಮ ನಾಲ್ಕು ಮಂದಿ ಸದಸ್ಯರನ್ನು ಕ್ಷಮಿಸಿ, ಸಂಸತ್‌ಗೆ ಮರಳಲು ಅವಕಾಶ ಕಲ್ಪಿಸಿ. ಸರ್ಕಾರದೊಂದಿಗೆ ಕೈಜೋಡಿಸುತ್ತೇವೆ. ನಮ್ಮ ಸದಸ್ಯರು ವಾಪಸ್ ಬರಲಿ. ನಾವು ಸ್ಪೀಕರ್ ಪೀಠದ ಬಳಿಗೆ ಹೋಗುವುದಿಲ್ಲ’ ಎಂದು ಸುಳೆ ಅವರು ಮನವಿ ಮಾಡಿದರು. ಸ್ಪೀಕರ್ ಪೀಠದಲ್ಲಿದ್ದ ರಮಾ ದೇವಿ ಅವರು, ಸಂಸತ್‌ನಲ್ಲಿ ಉಂಟಾಗಿರುವ ಬಿಕ್ಕಟ್ಟಿನ ಬಗ್ಗೆ ಮಾತನಾಡಲು ಸುಳೆ ಅವರಿಗೆ ಅವಕಾಶ ಕಲ್ಪಿಸಿದರು.

ವಿಪಕ್ಷಗಳ ಬೇಡಿಕೆಗೆ ಪ್ರತಿಕ್ರಿಯಿಸಿದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, ‘ಸ್ಪೀಕರ್ ಅವರ ಅನುಮತಿಯೊಂದಿಗೆ, ಅಮಾನತು ನಿರ್ಧಾರ ಹಿಂಪಡೆಯಲು ಸಿದ್ಧ. ವಿರೋಧ ಪಕ್ಷಗಳ ಸದಸ್ಯರು ಸ್ಪೀಕರ್ ಮತ್ತು ಸಭಾಪತಿಯವರ ಕ್ಷಮೆ ಕೇಳಿ, ಸದನಗಳಲ್ಲಿ ಘೋಷಣಾ ಫಲಕಗಳನ್ನು ಪ್ರದರ್ಶಿಸುವುದಿಲ್ಲ, ಪೀಠಗಳ ಎದುರು ಧಾವಿಸಿ ಪ್ರತಿಭಟಿಸುವುದಿಲ್ಲವೆಂದು ಖಾತ್ರಿಪಡಿಸಲು ಸಿದ್ಧವೇ’ ಎಂದು ಪ್ರಶ್ನಿಸಿದರು.

‘ವಿರೋಧ ಪಕ್ಷದ ಸದಸ್ಯರು ಪ್ರಧಾನಿ ಎದುರು ಮಾತ್ರವೇ ಅಲ್ಲ, ಸ್ಪೀಕರ್ ಎದುರೂ ಘೋಷಣಾ ಫಲಕ ಪ್ರದರ್ಶಿಸಲು ಪ್ರಯತ್ನಿಸುತ್ತಿದ್ದಾರೆ’ ಎಂದು ಜೋಶಿ ಅಸಮಾಧಾನ ವ್ಯಕ್ತಪಡಿಸಿದರು.

### ಎಎಪಿ ಸಂಸದ ಅಮಾನತು: ರಾಜ್ಯಸಭೆ ಕಲಾಪ ಮುಂದೂಡಿಕೆ

ನವದೆಹಲಿ(ಪಿಟಿಐ): ರಾಜ್ಯಸಭೆಯ ಕಲಾಪಕ್ಕೆ ಅಡ್ಡಿಪಡಿಸಿ, ದುರ್ವರ್ತನೆ ತೋರಿದ ಸಂಬಂಧ ಆಮ್ ಆದ್ಮಿ ಪಕ್ಷದ ಸಂಸದ ಸಂಜಯ್ ಸಿಂಗ್ ಅವರನ್ನು ಈ ವಾರದ ಉಳಿದ ಕಲಾಪಕ್ಕೆ ಹಾಜರಾಗದಂತೆ ಉಪ ಸಭಾಪತಿ ಹರಿವಂಶ್ ಸಿಂಗ್ ಬುಧವಾರ ಅಮಾನತುಗೊಳಿಸಿದ್ದಾರೆ.

ರಾಜ್ಯಸಭೆಯ 20 ಸದಸ್ಯರ ಅಮಾನತು ಮತ್ತು ಇನ್ನಿತರ ಸಮಸ್ಯೆಗಳ ಬಗ್ಗೆ ಪ್ರತಿಪಕ್ಷಗಳ ಸದಸ್ಯರು ಧ್ವನಿ ಎತ್ತಿ, ಗದ್ದಲ ಎಬ್ಬಿಸಿದ್ದರಿಂದ ಉಪಸಭಾಪತಿ ಕಲಾಪವನ್ನು ಗುರುವಾರಕ್ಕೆ ಮುಂದೂಡಿದರು.

ಇದಕ್ಕೂ ಮೊದಲು ಸಂಸದೀಯ ವ್ಯವಹಾರಗಳ ರಾಜ್ಯ ಸಚಿವ ವಿ.ಮುರಳೀಧರನ್ ಅವರು ಸಂಜಯ್ ಸಿಂಗ್ ಅಮಾನತುಗೊಳಿಸುವ ನಿಲುವಳಿ ಸೂಚನೆ ಮಂಡಿಸಿದರು. ಇದನ್ನು ಧ್ವನಿಮತದಿಂದ ಅಂಗೀಕರಿಸಲಾಯಿತು.

ಸಂಜಯ್ ಸಿಂಗ್ ಅವರು ಸಭಾಪತಿ ಪೀಠದ ಮೇಜಿಗೆ ಕಾಗದ ಎಸೆದು, ಘೋಷಣೆ ಕೂಗಿ ಕಲಾಪಕ್ಕೆ ಅಡ್ಡಿಪಡಿಸಿದ್ದಕ್ಕೆ ಉಪಸಭಾಪತಿ ಶಿಸ್ತು ಕ್ರಮ ಜರುಗಿಸಿದ್ದಾರೆ. ಇದನ್ನು ಖಂಡಿಸಿ ಪ್ರತಿಪಕ್ಷಗಳ ಸದಸ್ಯರು ಘೋಷಣೆ ಕೂಗಿದ್ದರಿಂದ ಉಪಸಭಾಪತಿ ಸದನವನ್ನು 15 ನಿಮಿಷ ಮುಂದೂಡಿದ್ದರು. ಮಧ್ಯಾಹ್ನ 2 ಗಂಟೆಗೆ ಮತ್ತೆ ಸದನ ಸೇರಿದಾಗ ಪ್ರತಿಪಕ್ಷಗಳ ಸದಸ್ಯರ ಗದ್ದಲ ಮುಂದುವರಿದಿದ್ದರಿಂದ ಕಲಾಪ ಮುಂದೂಡಲಾಯಿತು.

**50 ತಾಸು ಪ್ರತಿಭಟನೆ ಆರಂಭ:** ರಾಜ್ಯಸಭೆಯ ಕಲಾಪಗಳಿಗೆ ಅಡ್ಡಿಪಡಿಸಿದ ಆರೋಪದ ಮೇಲೆ ವಿರೋಧ ಪಕ್ಷಗಳ 20 ಸದಸ್ಯರನ್ನು ಅಮಾನತುಗೊಳಿಸಿರುವುದನ್ನು ವಿರೋಧಿಸಿ ಸಂಸತ್ ಆವರಣದಲ್ಲಿ ಬುಧವಾರ ವಿರೋಧ ಪಕ್ಷಗಳ ಸದಸ್ಯರು 50 ಗಂಟೆಗಳ ಸರಣಿ ಪ್ರತಿಭಟನೆಯನ್ನು ಆರಂಭಿಸಿದರು.

‘ಗಾಂಧಿ ಪ್ರತಿಮೆ ಬಳಿ ಈ ಪ್ರತಿಭಟನೆ ನಡೆಯುತ್ತಿದೆ. ರಾತ್ರಿ ಇಲ್ಲಿಯೇ ವಾಸ್ತವ್ಯ ಹೂಡಲಿದ್ದೇವೆ’ ಎಂದು ಟಿಎಂಸಿ ಸಂಸದ ದೋಲ ಸೇನ್ ಹೇಳಿದ್ದಾರೆ.

## ಉಪರಾಷ್ಟ್ರಪತಿ ಸ್ಥಾನಕ್ಕೆ ಮಾರ್ಗರೇಟ್ ಆಳ್ವಾ ಬೆಂಬಲಿಸಿ– ಮೋಟಮ್ಮ

ಬೆಂಗಳೂರು: ‘ದೇಶದ ರಾಷ್ಟ್ರಪತಿಯಾಗಿ ದೌಪದಿ ಮುರ್ಮು ಆಯ್ಕೆಯಾಗಿದ್ದು, ಉಪರಾಷ್ಟ್ರಪತಿ ಸ್ಥಾನಕ್ಕೂ ಮಹಿಳೆಯನ್ನೇ ಆಯ್ಕೆ ಮಾಡಿ ಇತಿಹಾಸ ನಿರ್ಮಿಸಬೇಕು. ಈ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಅವರ ಪಕ್ಷ ಕೂಡ ವಿರೋಧ ಪಕ್ಷಗಳ ಉಪ ರಾಷ್ಟ್ರಪತಿ ಅಭ್ಯರ್ಥಿ ಮಾರ್ಗರೇಟ್ ಆಳ್ವಾ ಅವರನ್ನು ಬೆಂಬಲಿಸಬೇಕು’ ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯೆ ಮೋಟಮ್ಮ ಆಶಯ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿ ಕೂಡಾ ಮಾರ್ಗರೇಟ್ ಅವರನ್ನು ಬೆಂಬಲಿಸಿ ಒಮ್ಮತದಿಂದ ಆಯ್ಕೆ ಮಾಡಬಹುದಿತ್ತು. ಇನ್ನೂ ಕಾಲ ಮಿಂಚಿಲ್ಲ. ಆ ಪಕ್ಷ ಇನ್ನಾದರೂ ಸರಿಯಾದ ತೀರ್ಮಾನ ತೆಗೆದುಕೊಂಡು ಬೆಂಬಲಿಸಬೇಕು’ ಎಂದರು.

‘ನಮ್ಮ ರಾಜ್ಯದವರೇ ಆಗಿರುವ ಮಾರ್ಗರೇಟ್ ಅವರು ನುರಿತ, ಮುತ್ಸದ್ದಿ ನಾಯಕಿ. ಅವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ದ್ವಿತೀಯ ಪ್ರಾಶಸ್ತ್ಯದ ಮತಗಳನ್ನು ನೀಡಿ ಗೆಲ್ಲಿಸುವಂತೆ ಎಲ್ಲ ಸಂಸದರಿಗೆ ಮನವಿ ಮಾಡುತ್ತೇವೆ’ ಎಂದರು.

ಎಲ್ಲರೂ ಬೆಂಬಲಿಸಬೇಕು: ‘ರಾಜ್ಯದ ಹೆಣ್ಣು ಮಗಳು ಉಪರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸಿರುವುದೇ ಹೆಮ್ಮೆ. ಸುದೀರ್ಘ ಸೇವೆ ನಂತರ ಅವರಿಗೆ ಈ ಅವಕಾಶ ಸಿಕ್ಕಿದೆ. ಎಲ್ಲ ಸಂಸದರು ಅವರನ್ನು ಬೆಂಬಲಿಸಬೇಕು’ ಎಂದು ಲೇಖಕಿ ಬಿ.ಟಿ. ಲಲಿತಾ ನಾಯಕ್ ಕೂಡಾ ಆಗ್ರಹಿಸಿದರು.

‘ದೇಶ ಸದ್ಯ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇಂಥ ಸಂದರ್ಭದಲ್ಲಿ ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿ ಸ್ಥಾನದಲ್ಲಿ ಮಹಿಳೆಯರಿದ್ದು ಸರಿಯಾದ ಮಾರ್ಗದಲ್ಲಿ ದೇಶವನ್ನು ಮುನ್ನಡೆಸಬೇಕು. ಹೀಗಾಗಿ ಮಾರ್ಗರೇಟ್ ಅವರನ್ನು ಬೆಂಬಲಿಸಬೇಕು’ ಎಂದೂ ಹೇಳಿದರು.



## ‘ವ್ಯವಸ್ಥೆ ವಿರೋಧಿ ಅಧಿಕಾರಿಗಳನ್ನು ಜೈಲಿಗೆ ಹಾಕಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗುತ್ತಿಗೆ ಆಧಾರದಲ್ಲಿ ಪೌರಕಾರ್ಮಿಕರ ನೇಮಕಾತಿ ಪದ್ಧತಿ ಸಂವಿಧಾನ ವಿರೋಧಿ. ಕಾನೂನನ್ನು ಉಲ್ಲಂಘಿಸಿ, ವ್ಯವಸ್ಥೆಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ಅಧಿಕಾರಿಗಳನ್ನು ಮೊದಲು ಜೈಲಿಗೆ ಹಾಕಬೇಕು’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ತಳಸಮುದಾಯಗಳ ಅಧ್ಯಯನ ಸಂಸ್ಥೆ ಹಾಗೂ ಸಫಾಯಿ ಕರ್ಮಚಾರಿಗಳ ಕಾವಲು ಸಮಿತಿ–ಕರ್ನಾಟಕ ಜಂಟಿಯಾಗಿ ನಗರದಲ್ಲಿ ಬುಧವಾರ ಹಮ್ಮಿಕೊಂಡ ‘ಪೌರಕಾರ್ಮಿಕರ ವಿಶೇಷ ನೇಮಕಾತಿ ನಿಯಮಾವಳಿ’ ರಾಜ್ಯ ಮಟ್ಟದ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿ, ಮಾತನಾಡಿದರು.

‘ಸಂವಿಧಾನದ ಭಾಗ–4ರಲ್ಲಿ ಶ್ರಮಜೀವಿಗಳ ಬಗ್ಗೆ ಪ್ರಸ್ತಾಪವಿದೆ. ಕನಿಷ್ಠ ಜೀವನಕ್ಕೆ ಎಲ್ಲ ಸವಲತ್ತು, ಉತ್ತಮ ವಾತಾವರಣ ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನ ಎಂದು ಹೇಳಲಾಗಿದೆ. ಪೌರಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವುದು ಸರ್ಕಾರದ ಸಾಂವಿಧಾನಿಕ ಜವಾಬ್ದಾರಿ. ಆದರೆ, ಹಾಲಿ ಇರುವ ಸೌಲಭ್ಯಗಳಿಗೂ ಅಧಿಕಾರಿಗಳು ಅಡ್ಡಿಪಡಿಸುತ್ತಿದ್ದಾರೆ. ಪೌರಕಾರ್ಮಿಕರನ್ನು ಕಾಯಂಗೊಳಿಸಲು ಸರ್ಕಾರ ಸಮ್ಮತಿ ನೀಡಿದರೆ, ಅಧಿಕಾರಿಗಳು ನೇಮಕಾತಿ ಪ್ರಕ್ರಿಯೆ ಕೈಗೊಳ್ಳುತ್ತಾರೆ. ಇದು ವ್ಯವಸ್ಥೆಯ ವಿಪರ್ಯಾಸ’ ಎಂದರು.

‘ಐ.ಪಿ.ಡಿ. ಸಾಲಪ್ಪ ವರದಿಯಂತೆ 500 ಮಂದಿಗೆ ಒಂದು ಪೌರಕಾರ್ಮಿಕ ಹುದ್ದೆ ಸೃಷ್ಟಿಸಿ, ಕಾನೂನಿನ ಚೌಕಟ್ಟಿನ ಒಳಗಡೆ ಸೌಲಭ್ಯಗಳನ್ನು ಒದಗಿಸಬೇಕು. ಪೌರಕಾರ್ಮಿಕರನ್ನು ಕಾಯಂಗೊಳಿಸಲು ತುರ್ತಾಗಿ ಯೋಜನೆ ರೂಪಿಸಿ, ಅನುಷ್ಠಾನ ಮಾಡಬೇಕು. ಅವರ ಭವಿಷ್ಯದ ದೃಷ್ಟಿಯಿಂದ ಕಾಯ್ದೆ ರೂಪಿಸಬೇಕು. ಗುತ್ತಿಗೆ ಆಧಾರದಲ್ಲಿ ಪೌರಕಾರ್ಮಿಕರ ನೇಮಕಾತಿ ಪದ್ಧತಿಯನ್ನು ಕೂಡಲೇ ವಿಸರ್ಜಿಸಬೇಕು. ಪೌರಕಾರ್ಮಿಕರ ಮಕ್ಕಳಿಗಾಗಿ ವಸತಿ ಶಾಲೆಗಳನ್ನು ಪ್ರಾರಂಭಿಸಬೇಕು’ ಎಂದು ಆಗ್ರಹಿಸಿದರು.

ರಾಷ್ಟ್ರೀಯ ಕಾನೂನು ಶಾಲೆ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಎಸ್. ಜಾಫೆಟ್, ‘ಹೋರಾಟಗಳಿಂದಾಗಿ ಪೌರಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ದೊರೆಯುವ ಆಶಾವಾದ ಮೂಡಿದೆ. ಅಧಿಕಾರ ಶಾಹಿಯನ್ನು ಎಚ್ಚರಿಕೆಯಿಂದ ನೋಡಬೇಕು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಬದಲಾದ ಬಳಿಕ ತಳಸಮುದಾಯಗಳ ಅಧ್ಯಯನ ಕೇಂದ್ರಕ್ಕೆ ಅನುದಾನ ಇಲ್ಲವಾಗಿದೆ’ ಎಂದರು.

ಸಫಾಯಿ ಕರ್ಮಚಾರಿಗಳ ಕಾವಲು ಸಮಿತಿ–ಕರ್ನಾಟಕದ ರಾಜ್ಯ ಸಂಚಾಲಕ ಕೆ.ಬಿ. ಓಬಳೇಶ್, ‘ಪೌರಕಾರ್ಮಿಕರ ನೇಮಕಾತಿಗೆ ಸಂಬಂಧಿಸಿದಂತೆ 2017ರಲ್ಲಿ ಅಧಿಕಾರಿಗಳು ನಿಯಮಾವಳಿ ರೂಪಿಸಿದ್ದರು. ಈ ಅವೈಜ್ಞಾನಿಕ ನಿಯಮಾವಳಿಯಲ್ಲಿ ಕಸಗುಡಿಸುವವರು ಮಾತ್ರ ಪೌರಕಾರ್ಮಿಕರು ಎಂದು ಪರಿಗಣಿಸಲಾಗಿತ್ತು. ನಿವೃತ್ತಿ ಹೊಂದಿದವರಿಗೆ, ಅನಾರೋಗ್ಯಕ್ಕೆ ಒಳಗಾದವರಿಗೆ ಯಾವುದೇ ಸೌಲಭ್ಯವಿರಲಿಲ್ಲ. ಕಾಯಂಗೊಳಿಸುವ ಸಂಬಂಧ ಇದೇ ತಿಂಗಳು ನಡೆಸಿದ ಮುಷ್ಕರಕ್ಕೆ ಮಣಿದ ಸರ್ಕಾರ, ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದೆ. ನೇಮಕಾತಿ ಬದಲು ಕಾಯಂಗೊಳಿಸಿ ಎನ್ನುವುದು ನಮ್ಮ ಆಗ್ರಹ’ ಎಂದರು.



ನ್ಯಾ.ಎಚ್.ಎನ್. ನಾಗಮೋಹನ ದಾಸ್ ಹಾಗೂ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ ಚರ್ಚಿಸಿದರು. ಪ್ರೊ.ಎಸ್. ಜಾಫೆಟ್ ಇದ್ದಾರೆ – ಪ್ರಜಾವಾಣಿ ಚಿತ್ರ

### ‘ಕಾಯಂಗೊಳಿಸಿ, ಸೌಲಭ್ಯ ಒದಗಿಸಿ’

‘ಪೌರಕಾರ್ಮಿಕರನ್ನು ಕಾಯಂಗೊಳಿಸಲು ಸರ್ಕಾರ ಒಪ್ಪಿಕೊಂಡಿರುವುದು ಕಾರ್ಮಿಕರ ಗೆಲುವು. ಐಪಿಡಿ ಸಾಲಪ್ಪ ಸಮಿತಿ ವರದಿ, ಚಂದ್ರಶೇಖರ ಸಮಿತಿ ವರದಿ ಹಾಗೂ ಕಾನೂನು ಶಾಲೆ ವರದಿ ಪೌರಕಾರ್ಮಿಕರನ್ನು ಕಾಯಂಗೊಳಿಸಬೇಕು ಎಂದು ಹೇಳಿದೆ. ಪೌರಕಾರ್ಮಿಕರ ಸಮಗ್ರ ಬೆಳವಣಿಗೆಗೆ ಸರ್ಕಾರ ಪ್ರತ್ಯೇಕ ಕಾಯ್ದೆ ಜಾರಿಮಾಡಬೇಕು. ಅವರು ಕಾಯಂ ಆಗುವವರೆಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು’ ಎಂದು ಎಐಸಿಟಿಯು ಕರ್ನಾಟಕದ ರಾಜ್ಯ ಕಾರ್ಯದರ್ಶಿ ಕ್ಲಿಫ್ಟನ್ ರಜಾರಿಯೊ ತಿಳಿಸಿದರು.

‘ಪೌರಕಾರ್ಮಿಕರಿಗೆ ವಸತಿ ಸೌಲಭ್ಯ, ಅವರ ಮಕ್ಕಳಿಗೆ ಶಿಕ್ಷಣ ಒದಗಿಸಲೂ ಸರ್ಕಾರ ಕ್ರಮಕೈಗೊಳ್ಳಬೇಕು. ಪೌರಕಾರ್ಮಿಕ ಮಹಿಳೆಯರಿಗೆ ಹೆರಿಗೆ ರಜೆ ಸೇರಿ ವಿವಿಧ ಸೌಲಭ್ಯಗಳನ್ನು ಒದಗಿಸಬೇಕು. ವಿಶ್ರಾಂತಿ ಕೊಠಡಿ, ಶೌಚಾಲಯಗಳನ್ನು ನಿರ್ಮಿಸಿಕೊಡಬೇಕು. ಈ ಬಗ್ಗೆ ಪ್ರಸ್ತಾವನೆ ಸಿದ್ಧಪಡಿಸಲಾಗಿದೆ’ ಎಂದರು.

## ರಾಜ್ಯ ಸರ್ಕಾರದ ‘ಜನೋತ್ಸವ’ ರದ್ದು

ಒಂದನೇ ಪುಟದಿಂದ...

‘ಜನೋತ್ಸವ ಮಾಡಲು ನನ್ನ ಮನಃಸಾಕ್ಷಿ ಒಪ್ಪಲಿಲ್ಲ. ಪತ್ರಿಕಾಗೋಷ್ಠಿಗೆ ಬರುವ ಮುನ್ನ ನಮ್ಮ ಪಕ್ಷದ ಅಧ್ಯಕ್ಷರಾದ ಜೆ.ಪಿ. ನಡ್ಡಾ ಸೇರಿದಂತೆ ಪ್ರಮುಖರಿಗೆ ಈ ಮಾಹಿತಿಯನ್ನು ನೀಡಲಾಗಿದೆ’ ಎಂದರು.

‘ಯುವಕರು, ದಲಿತರು, ಹಿಂದುಳಿದವರು ಹಾಗೂ ಮಹಿಳೆಯರ ಪರವಾದ ಕಾರ್ಯಕ್ರಮಗಳನ್ನು ಮುಂದುವರಿಸುತ್ತೇವೆ. ದೊಡ್ಡಬಳ್ಳಾಪುರ ಹಾಗೂ ವಿಧಾನಸೌಧದಲ್ಲಿ ಗುರುವಾರ ನಡೆಯಬೇಕಿದ್ದ ಎಲ್ಲ ಕಾರ್ಯಕ್ರಮಗಳು ರದ್ದಾಗಿವೆ. ಆದರೆ, ಜನಪರ ಕಾರ್ಯಕ್ರಮ,–ಯೋಜನೆಗಳನ್ನು ಮಾಧ್ಯಮದವರ ಮೂಲಕ ಪ್ರಕಟಿಸುತ್ತೇವೆ’ಎಂದೂ ಅವರು ಹೇಳಿದರು.

‘ಇಂಥ ಕೃತ್ಯದಲ್ಲಿ ಭಾಗಿಯಾದ ಸಂಘಟನೆಗಳನ್ನು ನಾಶ ಮಾಡಲು, ಈಗ ಇರುವ ವ್ಯವಸ್ಥೆಯ ಹೊರತಾಗಿ ವಿಶೇಷವಾದ ಭಯೋತ್ಪಾದನಾ ನಿಗ್ರಹ ಕಮಾಂಡೋವನ್ನು ರಚಿಸಲು ನಾವು ಉದ್ದೇಶಿಸಿದ್ದೇವೆ’ ಎಂದರು.

‘ಜನೋತ್ಸವ ರದ್ದಾಗಿರುವುದಕ್ಕೆ ಸಚಿವರಾದ ಕೆ. ಸುಧಾಕರ್, ಮುನಿರತ್ನ, ಎಂ.ಟಿ.ಬಿ. ನಾಗರಾಜ್ ಹಾಗೂ ಎಲ್ಲ ಕಾರ್ಯಕರ್ತರ ಕ್ಷಮೆ ಕೇಳುತ್ತೇನೆ’ ಎಂದೂ ಅವರು ಹೇಳಿದರು.

## ಸಮಸ್ಯೆ ಆಲಿಸಿದ ಸಚಿವ


ಬೆಂಗಳೂರು: ಹೆಮ್ಮಿಗೆಪುರದ ವ್ಯಾಪ್ತಿಯ ನಿವಾಸಿಗಳ ಸಮಸ್ಯೆಗಳನ್ನು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಆಲಿಸಿದರು.

ಉತ್ತರಹಳ್ಳಿ ರಸ್ತೆಯ ಜೆಎಸ್‌ಎಸ್ ಆವರಣದಲ್ಲಿ ಆಯೋಜಿಸಿದ್ದ ಸಾರ್ವಜನಿಕರ ಕುಂದುಕೊರತೆ ಸಭೆಯಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ಬಡಾವಣೆಗಳಿಗೆ ರಸ್ತೆ, ಕುಡಿಯುವ ನೀರು ಸೇರಿ ಮೂಲಸೌಕರ್ಯ ಕಲ್ಪಿಸುವುದರ ಜೊತೆಗೆ ಕಸ ವಿಲೇವಾರಿ ಘಟಕದ ಸಮಸ್ಯೆ ಕೂಡ ಬಗೆಹರಿಸುವುದಾಗಿ ಭರವಸೆ ನೀಡಿದರು.

ತಲಘಟ್ಟಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದ ಹೆಮ್ಮಿಗೆಪುರವನ್ನು ಬಿಬಿಎಂಪಿ ವ್ಯಾಪ್ತಿಗೆ ಸೇರಿಸಿಕೊಳ್ಳಲಾಯಿತು. ಕಳೆದ 20 ವರ್ಷಗಳಿಂದ ಬಡಾವಣೆಗಳ ನಿವಾಸಿಗಳು ರಸ್ತೆ, ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದರು. ಮೂಲಸೌಕರ್ಯ ಕಲ್ಪಿಸಲು ಮುಖ್ಯಮಂತ್ರಿ ₹ 400 ಕೋಟಿ ಘೋಷಿಸಿದ್ದಾರೆ. ಬಿಡಿಎ ಬಡಾವಣೆಗಳಲ್ಲಿ ಒಳಚರಂಡಿ ಅಳವಡಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ ಬಿಡಬ್ಲ್ಯುಎಸ್‌ಎಸ್‌ಬಿಗೆ ₹54 ಕೋಟಿ ಹಣ ಕೂಡ ಬಿಡುಗಡೆ ಆಗಿದ್ದು ಕಾಮಗಾರಿ ಆರಂಭವಾಗಲಿದೆ ಎಂದರು.

**ಷೇರುಪೇಟೆ ವಹಿವಾಟು** ▲ 548




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 16,484 |
| ಇಂದಿನ ಅಂತ್ಯ | 16,642 |
| ▲ | 158 |
| ದಿನದ ಗರಿಷ್ಠ | 16,653 |

**ವಿನಿಮಯ ದರ**

| | |
|---|---|
| $ ಡಾಲರ್ | 79.91 |
| £ ಪೌಂಡ್ | 96.25 |
| € ಯುರೊ | 81.03 |
| ¥ ಯೆನ್ (100ಕ್ಕೆ) | 58 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**



| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹425 |
| 12 ಮೊಟ್ಟೆಗೆ | ₹60 |
| ಮೈಸೂರು | |
| 100 ಮೊಟ್ಟೆಗೆ | ₹425 |

**ಖಾದ್ಯ ತೈಲ ಮುಂಬೈ**



(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1620 (1630) |
| ಸೋಯಾ (ರಿಫೈನ್ಡ್) | ₹1225 (1230) |
| ಸೂರ್ಯಕಾಂತಿ (ರಿಫೈನ್ಡ್) | ₹1570 (1570) |
| ಪಾಮೋಲಿನ್ | ₹1214 (1205) |

**ರಾಮನಗರ ರೇಷ್ಮೆಗೂಡು ಧಾರಣೆ**



| | |
|---|---|
| ಮಿಶ್ರತಳಿ (ಸಿ.ಬಿ) | ₹200-677 |
| ದ್ವಿತಳಿ (ಬಿ.ವಿ) | ₹344-688 |

**ಎನ್.ಆರ್.ಪುರ ರಬ್ಬರ್**



(ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹168.50 |
| ಆರ್‌ಎಸ್‌ಎಸ್-5 | ₹159.50 |
| ಗುಡ್ ಲಾಟ್ | ₹153.50 |

**ತೆಂಗು ಧಾರಣೆ (ಸಾವಿರಕ್ಕೆ)**



ಮಂಗಳೂರು

| | |
|---|---|
| 1ನೇ ದರ್ಜೆ | ₹16000-20000 |
| 2ನೇ ದರ್ಜೆ | ₹12000-15000 |

# 5ಜಿ: 2 ದಿನದಲ್ಲಿ ₹ 1.49 ಲಕ್ಷ ಬಿಡ್

ನವದೆಹಲಿ (ಪಿಟಿಐ): 5ಜಿ ತರಂಗಾಂತರ ಹರಾಜು ಪ್ರಕ್ರಿಯೆಯ ಮೊದಲ ಎರಡು ದಿನಗಳಲ್ಲಿ (ಮಂಗಳವಾರ, ಬುಧವಾರ) ಒಟ್ಟು ₹ 1.49 ಲಕ್ಷ ಕೋಟಿ ಮೌಲ್ಯದ ತರಂಗಾಂತರಗಳಿಗೆ ಬಿಡ್ ಸಲ್ಲಿಕೆಯಾಗಿವೆ. ಗುರುವಾರವೂ ಹರಾಜು ಮುಂದುವರಿಯಲಿದೆ.

'ಹರಾಜು ವೇಳೆ ಒಳ್ಳೆಯ ಸ್ಪರ್ಧೆ ಕಂಡುಬಂದಿದೆ. ಎಲ್ಲ ಬ್ಯಾಂಡ್‌ಗಳಿಗೂ ಸ್ಪರ್ಧೆ ಇದೆ' ಎಂದು ಕೇಂದ್ರ ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಜಿಯೊ ಅತ್ಯಂತ ತುರುಸಿನಿಂದ ಬಿಡ್ ಮಾಡಿರಬಹುದು ಎಂದು ವಿಶ್ಲೇಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಜಿಯೊ ಕಂಪನಿಯು ಅಂದಾಜು ₹ 80,100 ಕೋಟಿ ಮೌಲ್ಯದ ತರಂಗಾಂತರಗಳಿಗೆ ಬಿಡ್ ಮಾಡಿರಬಹುದು ಎಂದು ಐಸಿಐಸಿಐ ಸೆಕ್ಯುರಿಟೀಸ್‌ನ ವಿಶ್ಲೇಷಕರು ಹೇಳಿದ್ದಾರೆ. ಭಾರ್ತಿ ಏರ್‌ಟೆಲ್ ಕಂಪನಿಯು ₹ 45 ಸಾವಿರ ಕೋಟಿ ಮೌಲ್ಯದ ತರಂಗಾಂತರಗಳಿಗೆ ಬಿಡ್ ಸಲ್ಲಿಸಿರುವ ಸಾಧ್ಯತೆ ಇದೆ.

ವೊಡಾಫೋನ್ ಐಡಿಯಾ ಕಂಪನಿಯು ₹ 18,400 ಕೋಟಿ ಮೌಲ್ಯದ ತರಂಗಾಂತರಗಳಿಗೆ ಬಿಡ್ ಸಲ್ಲಿಸಿರುವ ಸಾಧ್ಯತೆ ಇದೆ ಎಂದು ಐಸಿಐಸಿಐ ಸೆಕ್ಯುರಿಟೀಸ್ ಹೇಳಿದೆ.

## ಕಂಪನಿಯ ಪುನಶ್ಚೇತನಕ್ಕೆ ಪ್ಯಾಕೇಜ್: ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಹೇಳಿಕೆ

# ಬಿಎಸ್‌ಎನ್‌ಎಲ್‌ಗೆ ₹ 1.64 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತ್ ಸಂಚಾರ್ ನಿಗಮ್ ಲಿಮಿಟೆಡ್‌ನ (ಬಿಎಸ್‌ಎನ್‌ಎಲ್) ಪುನಶ್ಚೇತನಕ್ಕಾಗಿ ₹ 1.64 ಲಕ್ಷ ಕೋಟಿ ಮೊತ್ತದ ಪ್ಯಾಕೇಜ್‌ಗೆ ಕೇಂದ್ರ ಸಚಿವ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ ಎಂದು ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಕೇಂದ್ರವು ಸಮ್ಮತಿ ನೀಡಿರುವ ಕ್ರಮಗಳು ಕಂಪನಿಯ ಸೇವೆಗಳನ್ನು ಉತ್ತಮಪಡಿಸಲು, ಹೆಚ್ಚಿನ ತರಂಗಾಂತರ ಹಂಚಿಕೆ ಮಾಡಲು, ಕಂಪನಿಯ

> **24,680 ಹಳ್ಳಿಗಳಿಗೆ ಹೊಸದಾಗಿ 4ಜಿ ಸಂಪರ್ಕ ಕಲ್ಪಿಸಲು ಕೇಂದ್ರವು ₹ 26,316 ಕೋಟಿ ವೆಚ್ಚ ಮಾಡಲಿದೆ**
> **ಅಶ್ವಿನಿ ವೈಷ್ಣವ್,** ಕೇಂದ್ರ ಸಚಿವ

ಹಣಕಾಸಿನ ಹೊರೆಯನ್ನು ತಗ್ಗಿಸಲು ಹಾಗೂ ಕಂಪನಿಯ ಫೈಬರ್ ಜಾಲದ ಬಲವರ್ಧನೆಗೆ ಗಮನ ನೀಡುತ್ತದೆ.

ಬಿಎಸ್‌ಎನ್‌ಎಲ್‌ಗೆ ನಗದು ರೂಪದಲ್ಲಿ ₹ 43,964 ಕೋಟಿ ನೀಡಲಾಗುತ್ತದೆ. ನಾಲ್ಕು ವರ್ಷಗಳ ಅವಧಿಯಲ್ಲಿ ₹ 1.20 ಲಕ್ಷ ಕೋಟಿಯನ್ನು ಇತರ ನೆರವುಗಳ ರೂಪದಲ್ಲಿ ನೀಡಲಾಗುತ್ತದೆ ಎಂದು ವೈಷ್ಣವ್ ಹೇಳಿದ್ದಾರೆ.

4ಜಿ ಸೇವೆಗಳನ್ನು ಒದಗಿಸಲು ಬಿಎಸ್‌ಎನ್‌ಎಲ್‌ಗೆ ಬೇಕಿರುವ ತರಂಗಾಂತರಗಳನ್ನು ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ಮೂಲಕ ಹಂಚಿಕೆ ಮಾಡಲಿದೆ.

ಮುಂದಿನ ನಾಲ್ಕು ವರ್ಷಗಳ ಬಂಡವಾಳ ವೆಚ್ಚಗಳಿಗಾಗಿ ಸರ್ಕಾರವು ₹ 22 ಸಾವಿರ ಕೋಟಿ ಒದಗಿಸಲಿದೆ. ಕಂಪನಿಯ ಹಣಕಾಸಿನ ಹೊರೆಯನ್ನು ತಗ್ಗಿಸಲು ಸರ್ಕಾರವು ₹ 33,404 ಕೋಟಿ ಬಾಕಿಯನ್ನು ಷೇರುಗಳನ್ನಾಗಿ ಪರಿವರ್ತಿಸಲಿದೆ.

ಹಾಲಿ ಇರುವ ಸಾಲಗಳ ಮರುಪಾವತಿಗೆ ಹಣ ಹೊಂದಿಸಲು ಸರ್ಕಾರವೇ ಖಾತರಿದಾರ ಆಗಲಿದೆ ಎಂದು ವೈಷ್ಣವ್ ಹೇಳಿದ್ದಾರೆ. ಬಿಬಿಎನ್‌ಎಲ್ ಕಂಪನಿಯನ್ನು ಬಿಎಸ್‌ಎನ್‌ಎಲ್ ಜೊತೆ ವಿಲೀನ ಮಾಡಲಾಗುತ್ತದೆ. ಆ ಮೂಲಕ ಭಾರತ್‌ನೆಟ್ ಗ್ರಾಮೀಣ ಬ್ರಾಡ್‌ಬ್ಯಾಂಡ್ ಯೋಜನೆಯ ಮೂಲಸೌಕರ್ಯವನ್ನು ಹೆಚ್ಚು ವ್ಯಾಪಕವಾಗಿ ಬಳಕೆ ಮಾಡಿಕೊಳ್ಳಲಾಗುವುದು ಎಂದು ಕೂಡ ಅವರು ಹೇಳಿದ್ದಾರೆ.

**ಮುಂಬೈ ಧಾರಣೆ**

**ಶೇಂಗಾ**

27-7-2022

| | |
|---|---|
| ಜಾವಾ 70/80(ಹೊಸ) | 11250-11300 |
| ಜಾವಾ 80/90(ಹೊಸ) | 10650-10700 |
| ದಪ್ಪ ಮಧ್ಯಪ್ರದೇಶ(ಹೊಸ) | 9900-9950 |
| ದಪ್ಪ ಗುಜರಾತ್(ಹೊಸ) | 10650-10700 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1630 (1640) |
| ಒಂದು ವಾರದ ಡೆಲಿವರಿ | 1625 (1635) |
| ಸೋಯಾ ಕಚ್ಚಾ | 1170 (1175) |
| ಪಾಮ್ ವಾರದ ಡೆಲಿವರಿ | 1212 (1203) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1480 (1480) |


**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
50,550 (50,550)
ಬೆಳ್ಳಿ ಕೆ.ಜಿ 54,750 (54,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ



ಶ್ರೀ|| ಎಲ್.ಟಿ.ಕಾರ್ಲೆ
(ಮಾಜಿ-ಎಂ.ಎಲ್.ಸಿ)

ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ.

ಸದಾ ಸ್ಮರಿಸುವ
ಕುಟುಂಬ ವರ್ಗದವರು

## ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕ

# ಮಾರುತಿ ಲಾಭ ಎರಡು ಪಟ್ಟು ಏರಿಕೆ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಎರಡುಪಟ್ಟು ಹೆಚ್ಚಾಗಿದ್ದು, ₹1,036 ಕೋಟಿಗೆ ಏರಿಕೆ ಆಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹475 ಕೋಟಿ ನಿವ್ವಳ ಲಾಭ ಗಳಿಸಿತ್ತು. ನಿವ್ವಳ ಮಾರಾಟ ಮೌಲ್ಯ ₹17,776 ಕೋಟಿಯಿಂದ ₹ 26,512 ಕೋಟಿಗೆ ಏರಿಕೆ ಆಗಿದೆ.

ಕಳೆದ ವರ್ಷದ ಮೊದಲ ತ್ರೈಮಾಸಿಕದ ಫಲಿತಾಂಶವು ಕೋವಿಡ್ ಸಂಬಂಧಿತ ಲಾಕ್‌ಡೌನ್ ಪರಿಣಾಮಕ್ಕೆ ಒಳಗಾಗಿತ್ತು. ಹೀಗಾಗಿ, ಈ ವರ್ಷದ ಮೊದಲ ತ್ರೈಮಾಸಿಕದ ಜೊತೆ ಹೋಲಿಕೆ ಮಾಡುವುದು ಅಷ್ಟು ಸರಿ ಹೋಗುವುದಿಲ್ಲ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ತ್ರೈಮಾಸಿಕದಲ್ಲಿ 4.67 ಲಕ್ಷ ವಾಹನಗಳನ್ನು ಮಾರಾಟ ಮಾಡಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 3.53 ಲಕ್ಷ ವಾಹನಗಳನ್ನು ಮಾರಾಟ ಮಾಡಿತ್ತು.

ಸರಕುಗಳ ದರವು ಹೆಚ್ಚಾಗುತ್ತಿರುವುದರಿಂದ ಜೂನ್ ತ್ರೈಮಾಸಿಕದಲ್ಲಿ ಕಂಪನಿಯ ಕಾರ್ಯಾಚರಣೆ ಲಾಭದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದೆ. ತಯಾರಿಕಾ ವೆಚ್ಚ ಸರಿದೂಗಿಸಿಕೊಳ್ಳಲು ವಾಹನಗಳ ದರವನ್ನು ಭಾಗಶಃ ಹೆಚ್ಚಿಸುವಂತಾಗಿದೆ ಎಂದು ಕಂಪನಿಯು ತಿಳಿಸಿದೆ.

> ### ಟಾಟಾ ಮೋಟರ್ಸ್ ನಷ್ಟ ಹೆಚ್ಚಳ
> ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯ ನಷ್ಟವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹4,951 ಕೋಟಿಗೆ ಏರಿಕೆ ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿ ₹4,450 ಕೋಟಿ ನಷ್ಟ ಅನುಭವಿಸಿತ್ತು. ಕಾರ್ಯಾಚರಣಾ ವರಮಾನ ₹66,406 ಕೋಟಿಯಿಂದ ₹ 71,935 ಕೋಟಿಗೆ ಏರಿಕೆ ಆಗಿದೆ.

# ರೋಶನಿ ದೇಶದ ಶ್ರೀಮಂತ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುರೂನ್ ಇಂಡಿಯಾ ಸಂಸ್ಥೆಯು ದೇಶದ ಅತ್ಯಂತ ಶ್ರೀಮಂತ ಮಹಿಳೆಯರ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಎಚ್‌ಸಿಎಲ್ ಟೆಕ್ನಾಲಜೀಸ್ ಕಂಪನಿಯ ಅಧ್ಯಕ್ಷೆ ರೋಶನಿ ನಾಡಾರ್ ಮಲ್ಹೋತ್ರಾ ಮೊದಲ ಸ್ಥಾನದಲ್ಲಿದ್ದಾರೆ.

ಎರಡು ಮತ್ತು ಮೂರನೆಯ ಸ್ಥಾನಗಳಲ್ಲಿ ಕ್ರಮವಾಗಿ ಫಲ್ಗುಣಿ ನಾಯರ್ ಮತ್ತು ಕುಟುಂಬ (ಫಲ್ಗುಣಿ ಅವರು ನೈಕಾ ಕಂಪನಿಯ ಸಿಇಒ) ಹಾಗೂ ಕಿರಣ್ ಮಜುಂದಾರ್ ಶಾ (ಬಯೋಕಾನ್ ಅಧ್ಯಕ್ಷೆ) ಇದ್ದಾರೆ.

'ಕೋಟಕ್ ಪ್ರೈವೇಟ್ ಬ್ಯಾಂಕಿಂಗ್ ಹುರೂನ್ ಲೀಡಿಂಗ್ ವೆಲ್ತಿ ವಿಮೆನ್ 2021' ಹೆಸರಿನ ವರದಿಯನ್ನು ಬುಧವಾರ ಬಿಡುಗಡೆ ಮಾಡಲಾಗಿದೆ. 2021ರ ಡಿಸೆಂಬರ್ 31ರವರೆಗಿನ ಮಾಹಿತಿ ಆಧರಿಸಿ ಈ ವರದಿ ಸಿದ್ಧಪಡಿಸಲಾಗಿದೆ.

ಔಷಧ ಉದ್ಯಮ, ಆರೋಗ್ಯಸೇವೆ, ಗ್ರಾಹಕ ಬಳಕೆ ಸರಕುಗಳ ಉದ್ಯಮ ವಲಯದ ಮಹಿಳೆಯರು ಶ್ರೀಮಂತರ ಪಟ್ಟಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸ್ಥಾನ ಪಡೆದಿದ್ದಾರೆ.



1 ರೋಶನಿ ನಾಡಾರ್ ಮಲ್ಹೋತ್ರ
ಮೌಲ್ಯ: ₹84,330
ಕಂಪನಿ: ಎಚ್‌ಸಿಎಲ್ ಟೆಕ್ನಾಲಜೀಸ್

2 ಫಲ್ಗುಣಿ ನಾಯರ್ ಮತ್ತು ಕುಟುಂಬ
ಮೌಲ್ಯ: ₹57,520
ಕಂಪನಿ: ನೈಕಾ

3 ಕಿರಣ್ ಮಜುಂದಾರ್ ಶಾ
ಮೌಲ್ಯ: ₹29,030
ಕಂಪನಿ: ಬಯೋಕಾನ್
(ಮೌಲ್ಯ ಕೋಟಿಗಳಲ್ಲಿ)

| ಸ್ಥಾನ | ಹೆಸರು | ಸಂಪತ್ತಿನ ಮೌಲ್ಯ | ಕಂಪನಿ |
|---|---|---|---|
| 4 | ನೀಲಿಮಾ ಮೋಟಪರ್ತಿ | ₹28,180 | ಡಿವಿಸ್ ಲ್ಯಾಬೊರೇಟರೀಸ್ |
| 5 | ರಾಧಾ ವೆಂಬು | ₹26,260 | ಜೋಹೊ |
| 6 | ಲೀನಾ ಗಾಂಧಿ ತಿವಾರಿ | ₹24,280 | ಯುಎಸ್‌ವಿ |
| 7 | ಅನು ಆಗಾ, ಮೆಹರ್ ಪುದುಮ್‌ಜಿ | ₹14,530 | ಥರ್ಮ್ಯಾಕ್ಸ್ |
| 8 | ನೇಹಾ ನರಖೆಡೆ | ₹13,380 | ಕೊಫ್ಲ್ಯುಯೆಂಟ್ |
| 9 | ವಂದನಾ ಲಾಲ್ | ₹6,810 | ಡಾ ಲಾಲ್ ಪಾತ್‌ಲ್ಯಾಬ್ಸ್ |
| 10 | ರೇಣು ಮುಂಜಾಲ್ | ₹6,620 | ಹೀರೊ ಫಿನ್‌ಕಾರ್ಪ್ |

## ಐ.ಟಿ. ಮತ್ತು ಬ್ಯಾಂಕಿಂಗ್ ಷೇರು ಮೌಲ್ಯ ಹೆಚ್ಚಳ

# ಸೆನ್ಸೆಕ್ಸ್ 548 ಅಂಶ ಜಿಗಿತ

ಮುಂಬೈ (ಪಿಟಿಐ): ದೇಶದ ಷೇರು ಪೇಟೆಗಳು ಎರಡು ದಿನಗಳ ಕುಸಿತದಿಂದ ಗುರುವಾರ ಹೊರಬಂದವು. ಯುರೋಪಿನ ಮಾರುಕಟ್ಟೆಗಳಲ್ಲಿನ ಸಕಾರಾತ್ಮಕ ವಹಿವಾಟಿನಿಂದ ಪ್ರೇರಿತರಾಗಿ ಹೂಡಿಕೆದಾರರು ಐ.ಟಿ. ಮತ್ತು ಬ್ಯಾಂಕಿಂಗ್ ವಲಯದ ಷೇರುಗಳನ್ನು ಹೆಚ್ಚು ಖರೀದಿಸಿದರು. ಇದರಿಂದಾಗಿ ಸೂಚ್ಯಂಕಗಳು ಏರಿಕೆ ಕಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 548 ಅಂಶ ಏರಿಕೆ ಕಂಡು 55,816 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 158 ಅಂಶ ಹೆಚ್ಚಾಗಿ 16,642 ಅಂಶಗಳಿಗೆ ಏರಿಕೆ ಆಯಿತು.

ಏಷ್ಯನ್ ಪೇಂಟ್ಸ್, ಎಲ್‌ಆ್ಯಂಡ್‌ಟಿ, ಮಾರುತಿ ಮತ್ತು ಟಾಟಾ ಸ್ಟೀಲ್ ಕಂಪನಿಗಳ ಜೂನ್ ತ್ರೈಮಾಸಿಕದ ಫಲಿತಾಂಶವು ಉತ್ತಮವಾಗಿರುವುದು ಹೂಡಿಕೆದಾರರ ವಿಶ್ವಾಸ ಹೆಚ್ಚಿಸಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್‌ನ ರಿಟೇಲ್ ರಿಸರ್ಚ್‌ನ ಮುಖ್ಯಸ್ಥ ಸಿದ್ದಾರ್ಥ್ ಖೇಮ್ಕಾ ಹೇಳಿದ್ದಾರೆ.

'ಅಮೆರಿಕದ ಫೆಡರಲ್ ರಿಸರ್ವ್ ಹಣದುಬ್ಬರ ನಿಯಂತ್ರಿಸಲು ಬಡ್ಡಿದರವನ್ನು ಶೇ 0.75ರಷ್ಟು ಏರಿಕೆ ಮಾಡುವ ಸಾಧ್ಯತೆ ಇದೆ. ಹೀಗಾಗಿ ಎಲ್ಲರೂ ಅತ್ತ ಗಮನ ಹರಿಸಿದ್ದಾರೆ. ಬಡ್ಡಿದರದ ಕುರಿತು ಮುಂಬರುವ ದಿನಗಳಲ್ಲಿ ಫೆಡರಲ್ ರಿಸರ್ವ್ ಯಾವ ನಿರ್ಧಾರ ತೆಗೆದುಕೊಳ್ಳಲಿದೆ ಎನ್ನುವುದರ ಮೇಲೆ ಮಾರುಕಟ್ಟೆಯ ದಿಕ್ಕು ನಿರ್ಧಾರವಾಗಲಿದೆ' ಎಂದು ಅವರು ತಿಳಿಸಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 0.53ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 105 ಡಾಲರ್‌ಗೆ ತಲುಪಿದೆ.



**ದಿನದ ಗಳಿಕೆ (%)**

| | |
|---|---|
| ಸನ್ ಫಾರ್ಮಾ | 3.39 |
| ಎಲ್‌ಆ್ಯಂಡ್‌ಟಿ | 2.76 |
| ಎಸ್‌ಬಿಐ | 2.67 |
| ಟಿಸಿಎಸ್ | 2.33 |
| ಏಷ್ಯನ್ ಪೇಂಟ್ಸ್ | 2.31 |

# ಕೀಟ ನಿಯಂತ್ರಣ ಉತ್ಪನ್ನಕ್ಕೆ ಗೋ ಮೂತ್ರ ಖರೀದಿ

ರಾಯಪುರ (ಪಿಟಿಐ): ಕೀಟ ನಿಯಂತ್ರಣ ಉತ್ಪನ್ನ ತಯಾರಿಸಲು ಛತ್ತೀಸಗಡ ಸರ್ಕಾರ ಗೋ ಪಾಲಕರಿಂದ ಗೋ ಮೂತ್ರವನ್ನು ಗುರುವಾರದಿಂದ ಖರೀದಿಸಲಿದೆ ಎಂದು ಅಧಿಕಾರಿಗಳು ತಿಳಿಸಿದರು.

ಕರ್ಸಾ ಗ್ರಾಮದಲ್ಲಿ ಆಯೋಜಿಸಿರುವ ಸ್ಥಳೀಯ ಹಬ್ಬ 'ಹರೇಲಿ'ಯಲ್ಲಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಯೋಜನೆಗೆ ಚಾಲನೆ ನೀಡುವರು.

ಇದರ ಅಡಿ ಸರ್ಕಾರ ಪ್ರತಿ ಲೀಟರ್‌ಗೆ ಕನಿಷ್ಠ ₹ 4 ದರದಲ್ಲಿ ಗೋ ಮೂತ್ರ ಸಂಗ್ರಹಿಸುತ್ತದೆ. ಖರೀದಿಸಿದ ಮೂತ್ರವನ್ನು ಕೀಟ ನಿಯಂತ್ರಣ ಉತ್ಪನ್ನ ಮತ್ತು 'ಜೀವಾಮೃತ' (ದ್ರವ ಸಾವಯವ ಗೊಬ್ಬರ) ತಯಾರಿಸಲು ಬಳಸಲಾಗುತ್ತದೆ. ದುಬಾರಿ ರಾಸಾಯನಿಕ ಕೀಟನಾಶಕಗಳ ಬಳಕೆ ಕಡಿಮೆ ಮಾಡಲು ಮತ್ತು ರೈತರಿಗೆ ಅತ್ಯಲ್ಪ ಬೆಲೆಯಲ್ಲಿ ಸಾವಯವ ಕೀಟನಾಶಕ ಲಭ್ಯವಾಗುವುದನ್ನು ಖಚಿತಪಡಿಸಿಕೊಳ್ಳುವ ಮೂಲಕ ರಾಜ್ಯದಲ್ಲಿ ಸಾವಯವ ಕೃಷಿ ಉತ್ತೇಜಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದರು.

# ಬಿಜೆಪಿ ಸಂಪರ್ಕದಲ್ಲಿ ಟಿಎಂಸಿಯ 38 ಶಾಸಕರು: ಮಿಥುನ್

ಕೋಲ್ಕತ್ತ (ಪಿಟಿಐ): ತೃಣಮೂಲ ಕಾಂಗ್ರೆಸ್ (ಟಿಎಂಸಿ) 38 ಶಾಸಕರು ಕೇಸರಿ ಪಕ್ಷದೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದು ಬಿಜೆಪಿ ನಾಯಕ, ನಟ ಮಿಥುನ್ ಚಕ್ರವರ್ತಿ ಅವರು ಹೇಳಿದ್ದಾರೆ.

38 ಶಾಸಕರ ಪೈಕಿ 21 ಮಂದಿ ನೇರ ಸಂಪರ್ಕದಲ್ಲಿದ್ದಾರೆ. 18 ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ಇತರೆ ರಾಜ್ಯಗಳಲ್ಲಿ ಶೀಘ್ರ ಪಕ್ಷದ ಬಾವುಟ ಹಾರಾಡಲಿದೆ. ಈಗಲೂ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆದರೆ ಬಿಜೆಪಿ ಸರ್ಕಾರ ರಚಿಸಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 08047106868

ಭವಿಷ್ಯ

Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

★||ಶ್ರೀಕೇದಾರನಾಥ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ_ಪರಿಹಾರ. 9148773459

ಪ್ರವಾಸ

Travel

ಶ್ರೇಯಸ್ ಟೂರ್ಸ್: 13.08.2022 5ದಿನಗಳು ಸಂಪೂರ್ಣಅಹೋಬಲಂ ನವನಾರಸಿಂಹ ಯಾಗಂಟಿ ಬೇಲಂಗುಹೆ ಮಹಾನಂದಿ ಶ್ರೀಶೈಲಂ ಮಂತ್ರಾಲಯ 18.8.22 6ದಿನಗಳು ಕೇರಳದ ಕೊಚ್ಚಿನ್ ಗುರುವಾಯೂರು ಅಲೆಪ್ಪಿ ಮುನ್ನಾರ್ ತೇಕಡಿ ತಿರುವನಂತಪುರಂ ಅತ್ರಪಳ್ಳಿ ಪಾಲ್ಸ್.14.09.2022 6ದಿನಗಳು ಕಾಶಿ ಗಯಾ ಪ್ರಯಾಗ್‌ರಾಜ್ ನೈಮಿಷ್ಯಾರಣ್ಯ ಅಯೋಧ್ಯೆ ವಿಂಧ್ಯಾವಾಸಿನಿ ಸೀತಾಮಡು.06.08.2022 13.08.2022 6ದಿನಗಳು ನವಗ್ರಹರಾಮೇಶ್ವರಂ ಚಿದಂಬರಂ ಮದುರೈ ಕನ್ಯಾಕುಮಾರಿ ಇತರೆ.14.09.22 10ದಿನಗಳು ಅಖಂಡ ನೇಪಾಳ ರಾಷ್ಟ್ರ(ಮುಕ್ತಿನಾಥಸಹಿತ) 6ವಿಮಾನಗಳಲ್ಲಿ.02.09.2022 12ದಿನಗಳು ಚಾರ್‌ದಾಮ್ ಯಾತ್ರೆ ಗಂಗೋತ್ರಿಯಮುನೋತ್ರಿ ಕೇದಾರ್‌ನಾಥ ಬದರಿನಾಥ. 8073824856/ 9206979202/ 6366322639

DH DECCAN HERALD
ಪ್ರಜಾವಾಣಿ



Classifieds
EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

## ಕಾವೇರಿ: 'ಸುಪ್ರೀಂ'ಗೆ ತಮಿಳುನಾಡು ಸರ್ಕಾರ ಪ್ರಮಾಣಪತ್ರ

# ಕರ್ನಾಟಕಕ್ಕೆ ಹೆಚ್ಚುವರಿ ನೀರಿನ ಹಕ್ಕಿಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಸಂಗ್ರಹವಾಗುವ ಹೆಚ್ಚುವರಿ ನೀರನ್ನು ಅಲ್ಲಿನ ಜಲಾಶಯಗಳಲ್ಲಿ ಸಂಗ್ರಹಿಸಬೇಕು ಹಾಗೂ ಅದನ್ನು ಮುಂದಿನ ವರ್ಷಕ್ಕೆ ಬಳಸಲು ಮೀಸಲಿಡಬೇಕು' ಎಂದು ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಹೇಳಿದೆ.

'ಮೇಕೆದಾಟು ಜಲಾಶಯ ನಿರ್ಮಾಣಕ್ಕೆ ಅವಕಾಶ ನೀಡಬಾರದು ಹಾಗೂ ಈ ಯೋಜನೆಯ ಸಮಗ್ರ ಯೋಜನಾ ವರದಿಯ ಬಗ್ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಲ್ಲಿ ಚರ್ಚಿಸಬಾರದು. ಈ ಬಗ್ಗೆ ನಿರ್ದೇಶನ ನೀಡಬೇಕು' ಎಂದು ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. 'ಬೆಂಗಳೂರಿನ ಜನರಿಗೆ ಕುಡಿಯುವ ನೀರು ಒದಗಿಸಲು ಮೇಕೆದಾಟು ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ತಮಿಳುನಾಡಿಗೆ ವಿದ್ಯುತ್ ಒದಗಿಸಲಾಗುತ್ತದೆ' ಎಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ.

ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿರುವ ತಮಿಳುನಾಡು ಸರ್ಕಾರ, ಕಾವೇರಿ ನದಿಯ ಹೆಚ್ಚುವರಿ ನೀರನ್ನು ಬಳಸಿಕೊಳ್ಳಲು ಕರ್ನಾಟಕ ಸರ್ಕಾರವು ಮೇಕೆದಾಟು ಸೇರಿದಂತೆ ಯಾವುದೇ ಅಣೆಕಟ್ಟು ನಿರ್ಮಿಸಬಾರದು. ಕರ್ನಾಟಕ ಸರ್ಕಾರಕ್ಕೆ ಆ ಅಧಿಕಾರ ಇಲ್ಲ ಎಂದು ವಾದಿಸಿದೆ.

> **ಮುಖ್ಯಾಂಶಗಳು**
> - ತಮಿಳುನಾಡಿಗೆ ವಿದ್ಯುತ್ ಒದಗಿಸುವುದಾಗಿ ಪ್ರಮಾಣ ಪತ್ರ ಸಲ್ಲಿಸಿರುವ ರಾಜ್ಯ
> - ಅಣೆಕಟ್ಟು ನಿರ್ಮಿಸುವ ಅಧಿಕಾರ ಕರ್ನಾಟಕಕ್ಕೆ ಇಲ್ಲ: ತಮಿಳುನಾಡು ವಾದ
> - ಆಗಸ್ಟ್ 10ರಂದು ಮುಂದಿನ ವಿಚಾರಣೆ

'ಕಾವೇರಿ ಜಲಾನಯನ ಪ್ರದೇಶದಲ್ಲಿ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ಸರ್ಕಾರ ಈ ಹಿಂದೆ ಉದ್ದೇಶಿಸಿತ್ತು. ಕರ್ನಾಟಕದ ಪ್ರಸ್ತಾವನೆಯನ್ನು ಕಾವೇರಿ ಜಲ ವಿವಾದ ನ್ಯಾಯಾಧೀಕರಣ ತಿರಸ್ಕರಿಸಿತ್ತು. ನ್ಯಾಯಾಧೀಕರಣದ ಅಂತಿಮ ತೀರ್ಪಿನ ಪ್ರಕಾರ, ಕರ್ನಾಟಕಕ್ಕೆ ಹೆಚ್ಚುವರಿ ನೀರನ್ನು ಬಳಸಿಕೊಳ್ಳುವ ಅಧಿಕಾರ ಇಲ್ಲ. ಹೆಚ್ಚುವರಿ ನೀರನ್ನು ಸಂರಕ್ಷಿಸಬೇಕು ಹಾಗೂ ಮುಂದಿನ ವರ್ಷಕ್ಕೆ ಉಳಿಸಬೇಕು' ಎಂದು ತಮಿಳುನಾಡು ಸರ್ಕಾರ ಹೇಳಿದೆ.

ಹೆಚ್ಚುವರಿ ನೀರಿನ ಬಳಕೆಗಾಗಿ ಕರ್ನಾಟಕ ಸರ್ಕಾರವು ಯಾವುದೇ ಯೋಜನೆಯನ್ನು ಕೈಗೆತ್ತಿಕೊಂಡರೆ ಅದು ನ್ಯಾಯಾಧೀಕರಣದ ಅಂತಿಮ ತೀರ್ಪಿನ ಉಲ್ಲಂಘನೆ ಆಗುತ್ತದೆ ಎಂದೂ ಪ್ರಮಾಣಪತ್ರದಲ್ಲಿ ತಿಳಿಸಿದೆ.

ಕುಡಿಯುವ ನೀರು ಪೂರೈಕೆಗಾಗಿ ಮೇಕೆದಾಟು ಅಣೆಕಟ್ಟು ನಿರ್ಮಾಣ ಮಾಡಲಾಗುತ್ತಿದೆ ಎಂದು ಕರ್ನಾಟಕ ಸರ್ಕಾರ ಹೇಳಿಕೊಂಡಿದೆ. ಆದರೆ, ಕರ್ನಾಟಕವು ನೀರಾವರಿ ಪ್ರದೇಶಗಳನ್ನು ಹೆಚ್ಚಿಸಿಕೊಳ್ಳುವ ಮೂಲಕ ನ್ಯಾಯಾಧೀಕ ರಣದ ಆದೇಶವನ್ನು ಉಲ್ಲಂಘಿಸಿದೆ. ಈ ವಿಚಾರವನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಗಮನಕ್ಕೆ ತರಲಾಗಿದೆ ಎಂದು ಹೇಳಿದೆ.

'ಹೇಮಾವತಿ- ನೇತ್ರಾವತಿ ನದಿಯನ್ನು ಜೋಡಣೆ ಮಾಡುವ ಪ್ರಸ್ತಾವ ಇದೆ. ಬೆಂಗಳೂರಿನ ಕುಡಿಯುವ ನೀರನ್ನು ಪೂರೈಸಲು ಅಲ್ಲಿನ ನೀರನ್ನು ಬಳಸಿಕೊಳ್ಳಬಹುದು. ಬೆಂಗಳೂರಿನಲ್ಲಿ ನೀರಿನ ಸಮಸ್ಯೆ ಸೃಷ್ಟಿಯಾದಾಗ ಪ್ರತಿ ಸಲವೂ ಕಾವೇರಿ ನದಿಯತ್ತ ದೃಷ್ಟಿ ಹರಿಸಲಾಗುತ್ತದೆ. ಇದು ಸರಿಯಲ್ಲ. ತಮಿಳುನಾಡಿನ ಜನರಿಗೆ ಅನ್ಯಾಯ ಮಾಡಿ ಕರ್ನಾಟಕ ಸರ್ಕಾರವು ಯೋಜನೆಗಳನ್ನು ರೂಪಿಸುವುದು ಸರಿಯಲ್ಲ' ಎಂದೂ ಪ್ರಮಾಣಪತ್ರದಲ್ಲಿ ತಿಳಿಸಿದೆ.

ಮೇಕೆದಾಟು ವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಆಗಸ್ಟ್ 10ರಂದು ಮುಂದಿನ ವಿಚಾರಣೆ ನಡೆಯಲಿದೆ.

# ದೆಹಲಿ: ಸಚಿವ ಜೈನ್ ವಿರುದ್ಧ ದೋಷಾರೋಪ ಪಟ್ಟಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ದೆಹಲಿ ಸಚಿವ ಸತ್ಯೇಂದ್ರ ಜೈನ್ ವಿರುದ್ಧ ಇಲ್ಲಿನ ನ್ಯಾಯಾಲಯಕ್ಕೆ ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ದೋಷಾರೋಪ ಪಟ್ಟಿ ಸಲ್ಲಿಸಿತು.

ಸದ್ಯ, ಸಚಿವ ಜೈನ್ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿ ಜೈನ್ ವಿರುದ್ಧ ಸಿಬಿಐ 2017ರ ಆಗಸ್ಟ್ 24ರಂದು ಎಫ್‌ಐಆರ್ ದಾಖಲಿಸಿತ್ತು. ಈ ಎಫ್‌ಐಆರ್‌ನ ಆಧಾರದ ಮೇಲೆ ಅವರ ವಿರುದ್ಧ ಇ.ಡಿ ತನಿಖೆ ಆರಂಭಿಸಿದೆ.

ಅರ್ಜಿ ವಜಾ: ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಇ.ಡಿ. ಯಿಂದ ಬಂಧನಕ್ಕೆ ಒಳಗಾಗಿರುವ ಸತ್ಯೇಂದ್ರ ಜೈನ್ ಅವರನ್ನು ಸಚಿವ ಸಂಪುಟದಿಂದ ಅಮಾನತಗೊಳಿಸಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಬುಧವಾರ ವಜಾಗೊಳಿಸಿತು.

ಮು ಖ್ಯ ನ್ಯಾ ಯ ಮೂ ತಿ ೯ ಸತೀಶಚಂದ್ರ ಶರ್ಮಾ ಹಾಗೂ ನ್ಯಾಯಮೂರ್ತಿ ಸುಬ್ರಮಣಿಯಮ್ ಪ್ರಸಾದ್ ಅವರಿದ್ದ ನ್ಯಾಯಪೀಠ, ಬಿಜೆಪಿ ಶಾಸಕ ನಂದಕಿಶೋರ್ ಗರ್ಗ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿತು.

# 'ನ್ಯಾಯಾಂಗ ಅಧಿಕಾರಿಗಳಿಗೆ ವೇತನ ಆಯೋಗದ ಶಿಫಾರಸು ಜಾರಿಗೊಳಿಸಿ'

ನವದೆಹಲಿ (ಪಿಟಿಐ): ದೇಶದಾದ್ಯಂತ ನ್ಯಾಯಾಂಗ ಅಧಿಕಾರಿಗಳಿಗೆ ವೇತನ ಹೆಚ್ಚಿಸಲು ಎರಡನೇ ರಾಷ್ಟ್ರೀಯ ನ್ಯಾಯಾಂಗ ವೇತನ ಆಯೋಗ ಮಾಡಿರುವ ಶಿಫಾರಸು ಜಾರಿಗೊಳಿಸುವಂತೆ ಸುಪ್ರೀಂಕೋರ್ಟ್ ಬುಧವಾರ ಆದೇಶ ನೀಡಿದೆ.

'ಇನ್ನು ವಿನಾಕಾರಣ ಕಾಯುತ್ತಾ ಕೂರಲಾಗದು. 2016ರ ಜನವರಿ 1ರಿಂದಲೇ ಪೂರ್ವಾನ್ವಯವಾಗುವಂತೆ ವೇತನ ಹೆಚ್ಚಳ ಜಾರಿಗೊಳಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಒಳಪಡದ ನ್ಯಾಯಾಂಗ ಅಧಿಕಾರಿಗಳಿಗೆ ತಕ್ಷಣವೇ ನ್ಯಾಯಾಂಗ ವೇತನ ಆಯೋಗದ ಶಿಫಾರಸು ಜಾರಿಗೊಳಿಸಬೇಕು. ಬಾಕಿ ವೇತನವನ್ನು ಮೂರು ಕಂತುಗಳಲ್ಲಿ ಪಾವತಿಸಬೇಕು' ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರ ನೇತೃತ್ವದ ತ್ರಿಸದಸ್ಯ ಪೀಠ ಆದೇಶ ಹೊರಡಿಸಿದೆ.

## ಮಾಧ್ಯಮದವರ ಮೇಲೆ ಹರಿಹಾಯ್ದ ಸಚಿವ ಪಾರ್ಥ ಚಟರ್ಜಿ

# ನಾನೇಕೆ ರಾಜೀನಾಮೆ ನೀಡಲಿ?

ಕೋಲ್ಕತ್ತ (ಪಿಟಿಐ): 'ಸಚಿವ ಸ್ಥಾನಕ್ಕೆ ನಾನೇಕೆ ರಾಜೀನಾಮೆ ನೀಡಬೇಕು' ಎಂದು ಪಶ್ಚಿಮ ಬಂಗಾಳದ ಕೈಗಾರಿಕೆ ಹಾಗೂ ವಾಣಿಜ್ಯ ಸಚಿವ ಪಾರ್ಥ ಚಟರ್ಜಿ, ಮಾಧ್ಯಮದವರನ್ನು ಬುಧವಾರ ಖಾರವಾಗಿ ಪ್ರಶ್ನಿಸಿದ್ದಾರೆ.

ಶಾಲಾ ಶಿಕ್ಷಕರ ನೇಮಕಾತಿ ಹಗರಣ ಸಂಬಂಧ ಪಾರ್ಥ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಹೋದ ಶನಿವಾರ ಬಂಧಿಸಿತ್ತು. ಇ.ಡಿ ಕಸ್ಟಡಿಯಲ್ಲಿರುವ ಅವರನ್ನು ವೈದ್ಯಕೀಯ ತಪಾಸಣೆಗಾಗಿ ಬುಧವಾರ ಬೆಳಿಗ್ಗೆ ಜೋಕಾದಲ್ಲಿರುವ ಇಎಸ್‌ಐ ಆಸ್ಪತ್ರೆಗೆ ಕರೆದುಕೊಂಡು ಬರಲಾಗಿತ್ತು.

ಈ ವೇಳೆ ಮಾಧ್ಯಮದವರು 'ನಿಮ್ಮ ಮೇಲೆ ಹಗರಣದ ಆರೋಪ ಇದೆ. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡು ತ್ತೀರಾ ಎಂದು ಪದೇ ಪದೇ ಪ್ರಶ್ನಿಸಿದರು. ಇದರಿಂದ ಕೆರಳಿದ ಅವರು 'ಏತಕ್ಕಾಗಿ ರಾಜೀನಾಮೆ ನೀಡಲಿ' ಎಂದರು.

> ### ಅರ್ಪಿತಾಗೆ ಸೇರಿದ ಮತ್ತೊಂದು ಫ್ಲ್ಯಾಟ್‌ನಲ್ಲೂ ದೊಡ್ಡ ಮೊತ್ತದ ನಗದು ಪತ್ತೆ
> 'ಹಣ ಅಕ್ರಮ ವರ್ಗಾವಣೆ ಆರೋಪದಡಿ ಬಂಧನಕ್ಕೊಳಗಾಗಿರುವ ಅರ್ಪಿತಾ ಮುಖರ್ಜಿ ಅವರ ಮತ್ತೊಂದು ಫ್ಲ್ಯಾಟ್‌ನಲ್ಲಿ ಬುಧವಾರ ಕೋಟ್ಯಂತರ ನಗದು ಪತ್ತೆಯಾಗಿದೆ' ಎಂದು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ತಿಳಿಸಿದ್ದಾರೆ.
> ಪಶ್ಚಿಮ ಬಂಗಾಳದ ಸಚಿವ ಪಾರ್ಥ ಚಟರ್ಜಿ ಅವರ ಆಪ್ತೆಯಾಗಿರುವ ಅರ್ಪಿತಾ, ದಕ್ಷಿಣ ಕೋಲ್ಕತ್ತದಲ್ಲಿ ಫ್ಲ್ಯಾಟ್ ಹೊಂದಿದ್ದರು. ಜುಲೈ 23ರಂದು ಅದರ ಮೇಲೆ ದಾಳಿ ನಡೆಸಿದ್ದ ಇ.ಡಿ ಅಧಿಕಾರಿಗಳು ₹21 ಕೋಟಿ ನಗದು ಜಪ್ತಿ ಮಾಡಿದ್ದರು.
> ಕೋಲ್ಕತ್ತದ ಉತ್ತರ ಭಾಗದಲ್ಲಿರುವ ಬೆಲ್‌ಘರಿಯಾ ವಸತಿ ಸಮುಚ್ಚಯದಲ್ಲೂ ಅರ್ಪಿತಾ ಫ್ಲ್ಯಾಟ್ ಹೊಂದಿದ್ದಾರೆ. ಅದರ ಬೀಗದ ಕೈ ಸಿಗದಿದ್ದರಿಂದ ಅಧಿಕಾರಿಗಳು ಮುಂಬಾಗಿಲು ಒಡೆದು ಒಳಗೆ ನುಗ್ಗಿದ್ದರು. ಅಲ್ಲಿ ಶೋಧ ನಡೆಸಿದಾಗ ನಗದು ಪತ್ತೆಯಾಗಿದೆ. ನೋಟುಗಳ ಎಣಿಕೆಗಾಗಿ ಮೂರು ಯಂತ್ರಗಳನ್ನು ತರಿಸಲಾಗಿದೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 400-420 |
| ನಡುಗೋಲು | 450-480 |
| ರಾಶಿ | 500-600 |
| ರಾಶಿ ಉತ್ತಮ | 550-600 |
| ಜರಡಿ | 600-650 |
| ಹೆರಕಿದ್ದು | 1000-1100 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-1000 |
| ಹಸಿರು ಅತಿ ಉತ್ತಮ | 1150-1250 |
| ಕಾಳು ಮೆಣಸು | 475 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-55500 |
| **ಕುಮಟ** | |
| ಚಿಪ್ಪು | 28089-32119 |
| ಕೋಕ | 20509-31089 |
| ಫ್ಯಾಕ್ಟರಿ | 11019-20999 |
| ಹಳೆಚಾಲಿ | 43089-46499 |
| ಹೊಸಚಾಲಿ | 37089-41299 |
| **ಪುತ್ತೂರು** | |
| ಕೋಕ | 11000-26000 |
| ಹೊಸತು | 31500-44500 |
| **ಶಿವಮೊಗ್ಗ** | |
| ಗೊರಬಲು | 17209-38199 |
| ರಾಶಿ | 45585-50299 |
| **ಸಿದ್ದಾಪುರ** | |
| ಬಿಳಿಗೋಟು | 28299-33899 |
| ಚಾಲಿ | 37089-40599 |
| ಕೋಕ | 27699-32800 |
| ಕೆಂಪುಗೋಟು | 33099-35119 |
| ರಾಶಿ | 48899-48899 |
| ತಟ್ಟಿಬೆಟ್ಟೆ | 38699-47099 |
| **ಶಿರಸಿ** | |
| ಬೆಟ್ಟೆ | 38199-46399 |
| ಬಿಳಿಗೋಟು | 23099-33899 |
| ಚಾಲಿ | 35900-41181 |
| ರಾಶಿ | 46699-49409 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 15800 | 15300 | 15750 | 210.05 ಸೆಂಟ್ಸ್ |
| ಎಸಿ | 8680 | 8300 | 8550 | |
| ಆರ್‌ಪಿ | 9500 | 9500 | 9650 | ಲಂಡನ್ |
| ಆರ್‌ಸಿ | 4750 | 4500 | 4475 | 1973 ಡಾಲರ್ಸ್ |

# ಬರ್ಮಿಂಗ್‌ಹ್ಯಾಮ್ ಬೇಸಿಗೆಗೆ ಕ್ರೀಡಾಕೂಟದ ಬೆಸುಗೆ

**ಪದಕಗಳ ಬೇಟೆಗೆ ಭಾರತದ ಪಡೆ ಸನ್ನದ್ಧ; ಶೂಟಿಂಗ್ ಗೈರು, ಕ್ರಿಕೆಟ್ ಹಾಜರು; ನೀರಜ್ ಚೋಪ್ರಾ ಅನುಪಸ್ಥಿತಿಯ ಕೊರಗು**

### ಆಯೋಜನೆ ಆಗಲಿರುವ ಕ್ರೀಡೆಗಳು

ಈಜು, ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್, ಬೀಚ್ ವಾಲಿಬಾಲ್, ಲಾನ್ ಬಾಲ್, ಬಾಕ್ಸಿಂಗ್, ಕ್ರಿಕೆಟ್ (ಮಹಿಳಾ), ಸೈಕ್ಲಿಂಗ್, ಜಿಮ್ನಾಸ್ಟಿಕ್ಸ್, ಜೂಡೊ, ಹಾಕಿ, ನೆಟ್‌ಬಾಲ್, ರಗ್ಬಿ ಸೆವೆನ್ಸ್, ಸ್ಕ್ವಾಷ್, ಟೇಬಲ್ ಟೆನಿಸ್, ಟ್ರಯಥ್ಲಾನ್, ವೇಟ್‌ಲಿಫ್ಟಿಂಗ್, ಪವರ್‌ಲಿಫ್ಟಿಂಗ್ ಮತ್ತು ಕುಸ್ತಿ.


ರವಿ ದಹಿಯಾ

### ಸಿಂಧು ಧ್ವಜಧಾರಿ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಎರಡು ಒಲಿಂಪಿಕ್ಸ್ ಪದಕ ವಿಜೇತ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಗುರುವಾರ ಕಾಮನ್‌ವೆಲ್ತ್ ಕ್ರೀಡಾಕೂಟದ ಪಥಸಂಚಲನದಲ್ಲಿ ತ್ರಿವರ್ಣ ಧ್ವಜ ಹಿಡಿದು ಭಾರತ ತಂಡವನ್ನು ಮುನ್ನಡೆಸುವರು.

ಟೋಕಿಯೊ ಒಲಿಂಪಿಕ್ ಚಿನ್ನದ ವಿಜೇತ ಅಥ್ಲೀಟ್ ನೀರಜ್ ಚೋಪ್ರಾ ಅವರು ಈ ಮೊದಲು ಧ್ವಜಧಾರಿಯಾಗಿ ಆಯ್ಕೆಯಾಗಿದ್ದರು. ಆದರೆ, ಅವರು ಈಚೆಗೆ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಗಾಯಗೊಂಡಿದ್ದು, ಕಾಮನ್‌ವೆಲ್ತ್ ಕೂಟದಿಂದ ಹಿಂದೆ ಸರಿದಿದ್ದಾರೆ. ಆದ್ದರಿಂದ ಸಿಂಧು ಅವರನ್ನು ಭಾರತ ಒಲಿಂಪಿಕ್ ಸಂಸ್ಥೆಯು ಆಯ್ಕೆ ಮಾಡಿದೆ.

**ಭಾರತ ಗೆದ್ದ ಒಟ್ಟು ಪದಕ 503**

| ಚಿನ್ನ | ಬೆಳ್ಳಿ | ಕಂಚು |
|---|---|---|
| 181 | 173 | 149 |

* 1930 (ಹ್ಯಾಮಿಲ್ಟನ್), 1950 (ಆಕ್ಲೆಂಡ್), 1962 (ಪರ್ತ್), 1986ರ (ಎಡಿನ್‌ಬರ್ಗ್) ಕೂಟಗಳಲ್ಲಿ ಭಾರತ ಭಾಗವಹಿಸಿರಲಿಲ್ಲ. 1938 (ಸಿಡ್ನಿ) ಮತ್ತು 1954ರ (ವ್ಯಾಂಕೊವರ್) ಕೂಟಗಳಲ್ಲಿ ಭಾಗವಹಿಸಿದ್ದರೂ ಯಾವುದೇ ಪದಕ ಜಯಿಸಿರಲಿಲ್ಲ.


ಭಾರತ ಹಾಕಿ ತಂಡದ ಮನಪ್ರೀತ್ ಸಿಂಗ್, ಹರ್ಮನ್‌ಪ್ರೀತ್ ಸಿಂಗ್ ಮತ್ತು ಪಿ.ಆರ್. ಶ್ರೀಜೇಶ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಇಂಗ್ಲೆಂಡ್‌ನಲ್ಲಿ ಬೇಸಿಗೆಯ ಬಿಸಿಯನ್ನು ಮತ್ತಷ್ಟು ಏರಿಸಲು ಗುರುವಾರ ಆರಂಭವಾಗಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟ ಸಿದ್ಧವಾಗಿದೆ.

ಈ ಕೂಟದಲ್ಲಿ ಪದಕಗಳ ಬೇಟೆಯಾಡಲು ಭಾರತದ 'ಜಂಬೋ' ಗಾತ್ರದ ಪಡೆಯೂ ಸನ್ನದ್ಧವಾಗಿದೆ. ಆದರೆ ಈ ಬಾರಿ ಶೂಟಿಂಗ್ ಕ್ರೀಡೆಯನ್ನು ರದ್ದುಗೊಳಿಸಿರುವುದರಿಂದ ಭಾರತದ ಪದಕಗಳಿಕೆಗೆ ಹಿನ್ನಡೆಯಾಗುವ ಸಾಧ್ಯತೆ ಇದೆ.

ನಾಲ್ಕು ವರ್ಷಗಳ ಹಿಂದೆ ಗೋಲ್ಡ್‌ಕೋಸ್ಟ್‌ನಲ್ಲಿ ನಡೆದಿದ್ದ ಕೂಟದಲ್ಲಿ ಭಾರತವು ಜಯಿಸಿದ್ದ ಒಟ್ಟು 66 ಪದಕಗಳಲ್ಲಿ ಶೂಟಿಂಗ್‌ನ ಏಳು ಚಿನ್ನಗಳು ಇದ್ದವು. ಇನ್ನೂ ಕೆಲವು ವಿಭಾಗಗಲ್ಲಿ ಪದಕಗಳ ಮಿಂಚು ಹರಿಯುವ ಭರವಸೆಯೂ ಇದೆ. ಬ್ಯಾಡ್ಮಿಂಟನ್, ವೇಟ್‌ಲಿಫ್ಟಿಂಗ್, ಬಾಕ್ಸಿಂಗ್, ಕುಸ್ತಿ, ಟೇಬಲ್ ಟೆನಿಸ್ ಅದರಲ್ಲಿ ಪ್ರಮುಖವಾಗಿವೆ. ಅಥ್ಲೆಟಿಕ್ಸ್‌ನಲ್ಲಿ ಇದುವರೆಗೆ ಭಾರತವು ಒಟ್ಟು 28 ಪದಕಗಳನ್ನು ಜಯಿಸಿದೆ. ಈ ಬಾರಿಯೂ ಕೆಲವು ವಿಭಾಗಗಳಲ್ಲಿ ಪದಕಗಳಿಕೆಯ ನಿರೀಕ್ಷೆ ಇದೆ.

ಆದರೆ, ಒಲಿಂಪಿಕ್ ಚಾಂಪಿಯನ್ ಜಾವೆಲಿನ್ ಥ್ರೋ ಪಟು ನೀರಜ್ ಚೋಪ್ರಾ ಗಾಯಗೊಂಡಿದ್ದಾರೆ. ಆದ್ದರಿಂದಾಗಿ ಇಲ್ಲಿ ಒಂದು ಪದಕ ಜಯದ ಅವಕಾಶ ತಪ್ಪಿದೆ. ಮಹಿಳೆಯರ 100 ಮೀಟರ್ಸ್ ಮತ್ತು 4X100 ಮೀ ರಿಲೆ ಸ್ಪರ್ಧಿ ಎಸ್. ಧನಲಕ್ಷ್ಮೀ, ಲಾಂಗ್ ಜಂಪ್ ಅಥ್ಲೀಟ್ ಐಶ್ವರ್ಯಾ ಬಾಬು ಅವರು ಇತ್ತೀಚೆಗೆ ಉದ್ದೀಪನ ಮದ್ದು ಸೇವನೆ ಮಾಡಿ ಸಿಕ್ಕಿಬಿದ್ದ ಕಾರಣ ಅಮಾನತಾಗಿದ್ದಾರೆ. ಇದರಿಂದಾಗಿ ಅಥ್ಲಟಿಕ್ಸ್‌ನಲ್ಲಿ ಹಿಮಾ ದಾಸ್, ದ್ಯುತಿ ಚಾಂದ್, ಶ್ರೀಶಂಕರ್ ಮೇಲೆ ಹೆಚ್ಚು ನಿರೀಕ್ಷೆಯ ಭಾರವಿದೆ.

ಕುಸ್ತಿಯಲ್ಲಿ ಬಜರಂಗ್ ಪೂನಿಯಾ, ರವಿ ದಹಿಯಾ, ವಿನೇಶಾ ಪೋಗಟ್, ವೇಟ್‌ಲಿಫ್ಟಿಂಗ್‌ನಲ್ಲಿ ಮೀರಾಬಾಯಿ ಚಾನು, ಬ್ಯಾಡ್ಮಿಂಟನ್ ನಲ್ಲಿ ಒಲಿಂಪಿಯನ್ ಪಿ.ವಿ. ಸಿಂಧು, ಕೆ. ಶ್ರೀಕಾಂತ್, ಲಕ್ಷ್ಯ ಸೇನ್, ಅಶ್ವಿನಿ ಪೊನ್ನಪ್ಪ ಭರವಸೆಯ ಆಟಗಾರರಾಗಿದ್ದಾರೆ. ಬ್ಯಾಡ್ಮಿಂಟನ್ ತಂಡದ ಪುರುಷ, ಮಹಿಳೆಯರ ಸಿಂಗಲ್ಸ್, ಡಬಲ್ಸ್ ಮತ್ತು ಮಿಶ್ರ ಡಬಲ್ಸ್ ವಿಭಾಗಗಳಲ್ಲಿ ಉತ್ತಮ ಆಟಗಾರರು ಕಣಕ್ಕಿಳಿಯಲಿದ್ದಾರೆ.

ಟೇಬಲ್ ಟೆನಿಸ್‌ನಲ್ಲಿ ಅನುಭವಿ ಶರತ್ ಕಮಲ್ ಈ ಬಾರಿ ಸಿಂಗಲ್ಸ್ ಚಿನ್ನ ಗೆಲ್ಲುವ ವಿಶ್ವಾಸದಲ್ಲಿದ್ದಾರೆ. ಮಣಿಕಾಬಾತ್ರಾ, ಜಿ. ಸತ್ಯನ್, ಹರ್ಮಿತ್ ದೇಸಾಯಿ ಅವರೂ ಉತ್ತಮ ಲಯದಲ್ಲಿದ್ದಾರೆ.

ಬಾಕ್ಸಿಂಗ್ ರಿಂಗ್‌ನಲ್ಲಿಯೂ ಭರವಸೆಯ ಕಿರಣಗಳು ಮೂಡಿವೆ. ಒಲಿಂಪಿಕ್ ಕಂಚು ವಿಜೇತ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್, ವಿಶ್ವ ಚಾಂಪಿಯನ್ ನಿಖತ್ ಜರೀನ್ ಮತ್ತು ಪುರುಷರಲ್ಲಿ ಅಮಿತ್ ಪಂಘಾಲ್ ಗೆದ್ದುಬರುವ ನಿರೀಕ್ಷೆ ಇದೆ.

ಈ ಬಾರಿ ಮರುಸೇರ್ಪಡೆಯಾಗಿರುವ ಮಹಿಳಾ ಟಿ20 ಕ್ರಿಕೆಟ್‌ನಲ್ಲಿ ಹರ್ಮನ್‌ಪ್ರೀತ್ ಕೌರ್ ಬಳಗ ಕೂಡ ವಿಜಯವೇದಿಕೆಯ ಮೇಲೆ ಸಂಭ್ರಮಿಸುವ ಛಲದಲ್ಲಿದೆ. ನಾನ್ ಒಲಿಂಪಿಕ್ ವಿಭಾಗದ ಸ್ಕ್ವಾಷ್‌ನಲ್ಲಿ ದೀಪಿಕಾ ಪಳ್ಳಿಕಲ್ ಅವರ ಬಳಗವೂ ಜಯಭೇರಿ ಬಾರಿಸುವತ್ತ ಚಿತ್ತ ನೆಟ್ಟಿದೆ.

**ಹಾಕಿಯಲ್ಲಿ ಭರವಸೆ:** ಹೋದ ವರ್ಷ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ್ದ ಭಾರತದ ಪುರುಷರ ತಂಡ ಮತ್ತು ನಾಲ್ಕನೇ ಸ್ಥಾನ ಪಡೆದಿದ್ದ ಮಹಿಳೆಯರ ತಂಡಗಳು ಇಲ್ಲಿ ಪದಕ ಭರವಸೆ ಮೂಡಿಸಿವೆ. ಬಲಿಷ್ಠ ಆಸ್ಟ್ರೇಲಿಯಾ ತಂಡದ ಸವಾಲು ಮೀರಿನಿಂತರೆ ಇದು ಅಸಾಧ್ಯವೇನಲ್ಲ.

### ಇದುವರೆಗೆ ಭಾರತದ ಸಾಧನೆ

| ವರ್ಷ | ಸ್ಥಳ | ಚಿನ್ನ | ಬೆಳ್ಳಿ | ಕಂಚು | ಒಟ್ಟು | ಸ್ಥಾನ |
|---|---|---|---|---|---|---|
| 1934 | ಲಂಡನ್ | - | - | 1 | 1 | 12 |
| 1958 | ಕಾರ್ಡಿಫ್, ವೇಲ್ಸ್ | 2 | 1 | - | 3 | 8 |
| 1966 | ಕಿಂಗ್‌ಸ್ಟನ್ | 3 | 4 | 3 | 10 | 8 |
| 1970 | ಎಡಿನ್‌ಬರ್ಗ್ | 5 | 3 | 4 | 12 | 6 |
| 1974 | ಕ್ರೈಸ್ಟ್‌ಚರ್ಚ್ | 4 | 8 | 3 | 15 | 6 |
| 1978 | ಎಡ್ಮೊಂಟನ್ | 5 | 4 | 6 | 15 | 6 |
| 1982 | ಬ್ರಿಸ್ಬೇನ್ | 5 | 8 | 3 | 16 | 6 |
| 1990 | ಆಕ್ಲೆಂಡ್ | 13 | 8 | 11 | 32 | 5 |
| 1994 | ವಿಕ್ಟೋರಿಯಾ | 6 | 11 | 7 | 24 | 6 |
| 1998 | ಕ್ವಾಲಾಲಂಪುರ | 7 | 10 | 8 | 25 | 7 |
| 2002 | ಮ್ಯಾಂಚೆಸ್ಟರ್ | 30 | 22 | 17 | 69 | 4 |
| 2006 | ಮೆಲ್ಬರ್ನ್ | 22 | 17 | 11 | 50 | 4 |
| 2010 | ನವದೆಹಲಿ | 38 | 27 | 36 | 101 | 2 |
| 2014 | ಗ್ಲಾಸ್ಗೊ | 15 | 30 | 19 | 64 | 5 |
| 2018 | ಗೋಲ್ಡ್‌ಕೋಸ್ಟ್ | 26 | 20 | 20 | 66 | 3 |


ಹರ್ಮನ್‌ಪ್ರೀತ್ ಕೌರ್

ಹಿಮಾ ದಾಸ್

ಲವ್ಲಿನಾ ಬೊರ್ಗೊಹೈನ್

### ಬ್ರಿಟಿಷ್ ಸಾಮ್ರಾಜ್ಯದ ಆಟಗಳಿಂದ ಕಾಮನ್‌ವೆಲ್ತ್ ಗೇಮ್ಸ್‌ವರೆಗೆ..

1930ರಲ್ಲಿ ಆರಂಭವಾದ ಕಾಮನ್‌ವೆಲ್ತ್ ಕ್ರೀಡಾಕೂಟವನ್ನು 1950ರವರೆಗೆ ಬ್ರಿಟಿಷ್ ಸಾಮ್ರಾಜ್ಯದ ಗೇಮ್‌ಗಳೆಂದು ಕರೆಯಲಾಗುತ್ತಿತ್ತು. ಪ್ರತಿ ನಾಲ್ಕು ವರ್ಷಗಳವರೆಗೆ ನಡೆಯುವ ಕೂಟವನ್ನು 1954–66ರವರೆಗೆ 'ಬ್ರಿಟಿಷ್ ಎಂಪೈರ್ ಮತ್ತು ಕಾಮನ್‌ವೆಲ್ತ್ ಗೇಮ್ಸ್' ಎನ್ನಲಾಗುತ್ತಿತ್ತು. ತರುವಾಯ ಇದು ಕಾಮನ್‌ವೆಲ್ತ್ ಕೂಟವಾಗಿ ಬದಲಾಯಿತು.

ಚೊಚ್ಚಲ ಕೂಟವನ್ನು ಆಯೋಜಿಸಿದ್ದು ಕೆನಡಾದ ಹ್ಯಾಮಿಲ್ಟನ್ ನಗರ. ಕೆನಡಾದ ಪತ್ರಕರ್ತ ಮೆಲ್ವಿಲ್ಲೆ ಮಾರ್ಕ್ಸ್ ರಾಬಿನ್ಸನ್ ಅವರನ್ನು ಗೇಮ್ಸ್‌ನ ಜನಕ ಎಂದು ಕರೆಯಲಾಗುತ್ತದೆ. ಬ್ರಿಟಿಷರು ಆಳಿದ ದೇಶಗಳಲ್ಲಿ, ಹಬ್ಬಗಳ ವೇಳೆ ಆಯೋಜಿಸುವ ಆಟಗಳಿಂದ ಸ್ಫೂರ್ತಿ ಪಡೆದು ಕಾಮನ್‌ವೆಲ್ತ್ ಗೇಮ್ಸ್ ಶುರುವಾದವು.

1942 ಮತ್ತು 1946ರ ಕೂಟಗಳು ವಿಶ್ವ ಎರಡನೇ ಮಹಾಯುದ್ಧದ ಕಾರಣ ನಡೆಯಲಿಲ್ಲ.

ಸಿಜಿಎಫ್ ಮೇಲ್ವಿಚಾರಣೆ: ಕಾಮನ್‌ವೆಲ್ತ್ ಕೂಟದ ಮೇಲ್ವಿಚಾರಣೆಯ ಹೊಣೆಯನ್ನು ಕಾಮನ್‌ವೆಲ್ತ್ ಗೇಮ್ಸ್ ಫೆಡರೇಷನ್ (ಸಿಜಿಎಫ್) ನೋಡಿಕೊಳ್ಳುತ್ತದೆ. ಕ್ರೀಡಾ ಚಟುವಟಿಕೆಗಳು, ಆತಿಥ್ಯ ದೇಶಗಳ ಆಯ್ಕೆಯು ಸಿಜಿಎಫ್‌ನ ಜವಾಬ್ದಾರಿಯಾಗಿದೆ. ಕಾಮನ್‌ವೆಲ್ತ್ ನೇಷನ್ಸ್‌ನಲ್ಲಿ ಸದ್ಯ 54 ಸದಸ್ಯ ರಾಷ್ಟ್ರಗಳಿದ್ದು 72 ತಂಡಗಳು ಭಾಗವಹಿಸುತ್ತಿವೆ.

ಅತಿ ಹೆಚ್ಚು ಬಾರಿ ಗೇಮ್ಸ್ ಆಯೋಜಿಸಿದ್ದು ಆಸ್ಟ್ರೇಲಿಯಾ (5). ಕಳೆದ ಆವೃತ್ತಿಗೂ (2018) ಆ ದೇಶವೇ ಆತಿಥ್ಯ ವಹಿಸಿತ್ತು. ದೆಹಲಿಯಲ್ಲಿ ನಡೆದ 2010ರ ಆವೃತ್ತಿಯಲ್ಲಿ ಭಾರತ 101 ಪದಕ ಜಯಿಸಿ 2ನೇ ಸ್ಥಾನ ಗಳಿಸಿತ್ತು.

### ಕ್ರೀಡಾಂಗಣ ಮತ್ತು ಟ್ರ್ಯಾಕ್‌ಗಳ ವಿವರ

| ಕ್ರೀಡಾಂಗಣ/ಟ್ರ್ಯಾಕ್ | ನಿರ್ಮಾಣ | ಆಸನ ಸಾಮರ್ಥ್ಯ | ಸ್ಪರ್ಧೆ |
|---|---|---|---|
| ಅಲೆಕ್ಸಾಂಡರ್ ಕ್ರೀಡಾಂಗಣ | 2022 | 32,000 | ಉದ್ಘಾಟನಾ ಸಮಾರಂಭ ಮತ್ತು ಅಥ್ಲೆಟಿಕ್ಸ್ |
| ಅರೆನಾ ಬರ್ಮಿಂಗ್‌ಹ್ಯಾಮ್ | 1991 | 15,800 | ಜಿಮ್ನಾಸ್ಟಿಕ್ಸ್ |
| ಎಜ್‌ಬಾಸ್ಟನ್ | 1886 | 25,000 | ಮಹಿಳಾ ಕ್ರಿಕೆಟ್ |
| ಸ್ಮಿತ್‌ಫೀಲ್ಡ್ | ತಾತ್ಕಾಲಿಕ ಅಂಗಣ | 6500 | ಬೀಚ್ ವಾಲಿಬಾಲ್, ಬ್ಯಾಸ್ಕೆಟ್‌ಬಾಲ್ |
| ಸಟನ್ ಪಾರ್ಕ್ | ತಾತ್ಕಾಲಿಕ ಅಂಗಣ | 2,000 | ಟ್ರಯಾಥ್ಲಾನ್ |
| ಬರ್ಮಿಂಗ್‌ಹ್ಯಾಮ್ ಯೂನಿವರ್ಸಿಟಿ | 2017 | 8,000 | ಫೀಲ್ಡ್ ಹಾಕಿ, ಸ್ಕ್ವಾಷ್ |
| ಕ್ಯಾನಾಕ್ ಚೇಸ್ ಫಾರೆಸ್ಟ್ | 2005 | - | ಮೌಂಟೇನ್ ಬೈಕಿಂಗ್ |
| ಕೊವೆಂಟ್ರಿ ಸ್ಟೇಡಿಯಂ ಮತ್ತು ಅರೆನಾ | 2005 | 40,000 | ರಗ್ಬಿ ಸೆವೆನ್ಸ್, ಜೂಡೊ, ಕುಸ್ತಿ |
| ವಿಕ್ಟೋರಿಯಾ ಪಾರ್ಕ್ | - | 5,000 | ಲಾನ್ ಬಾಲ್ಸ್ |
| ಸ್ಯಾಂಡ್‌ವೆಲ್ | 2022 | 4000 | ಈಜು, ಡೈವಿಂಗ್ |
| ನ್ಯಾಷನಲ್ ಎಕ್ಸಿಬಿಷನ್ ಸೆಂಟರ್ | 1976 | 28,000 | ಪವರ್‌ಲಿಫ್ಟಿಂಗ್, ಟೇಬಲ್ ಟೆನಿಸ್, ಬಾಕ್ಸಿಂಗ್, ಬ್ಯಾಡ್ಮಿಂಟನ್ |
| ಮೈಟನ್ ಫೀಲ್ಡ್ಸ್ | - | - | ರಸ್ತೆ ಸೈಕ್ಲಿಂಗ್ |
| ಲೀ ವ್ಯಾಲಿ ವೆಲೊಪಾರ್ಕ್ | 2011 | 6,750 | ಟ್ರ್ಯಾಕ್ ಸೈಕ್ಲಿಂಗ್ |

### ಜಸ್ಲೀನ್ ಸಿಂಗ್‌ಗೆ ಅವಕಾಶ

ಕೂಟದಲ್ಲಿ ಸ್ಪರ್ಧಿಸಲಿರುವ ಭಾರತ ಜುಡೊ ತಂಡದಲ್ಲಿ ಜಸ್ಲೀನ್ ಸಿಂಗ್ ಅವರ ಆಯ್ಕೆಗೆ ದೆಹಲಿ ಹೈಕೋರ್ಟ್ ಬುಧವಾರ ಹಸಿರುನಿಶಾನೆ ತೋರಿದೆ.

ಅವರ ಮೇಲಿದ್ದ ಅಶಿಸ್ತಿನ ಆರೋಪದಿಂದ ಅವರನ್ನು ಖುಲಾಸೆಗೊಳಿಸಿರುವ ಹೈಕೋರ್ಟ್ ಕಾಮನ್‌ವೆಲ್ತ್ ಕೂಟಕ್ಕೆ ತೆರಳಲು ಅನುಮತಿ ನೀಡಿದೆ ಎಂದು ಐಒಎ ಕಾರ್ಯದರ್ಶಿ ರಾಜೀವ್ ಮೆಹ್ತಾ ತಿಳಿಸಿದ್ದಾರೆ.



ಶ್ರೀಹರಿ ನಟರಾಜ್


### ಕಣದಲ್ಲಿ ಕನ್ನಡಿಗರು

| ಅಥ್ಲೀಟ್ | ಕ್ರೀಡೆ |
|---|---|
| ಡಿ.ಪಿ.ಮನು | ಜಾವೆಲಿನ್ ಥ್ರೊ |
| ವೆಂಕಪ್ಪ ಕೆಂಗಲಗುತ್ತಿ | ಸೈಕ್ಲಿಂಗ್ |
| ಎನ್.ಎಸ್.ಸಿಮಿ | 4X100 ಮೀ. ರಿಲೇ |
| ಅಶ್ವಿನಿ ಪೊನ್ನಪ್ಪ | ಬ್ಯಾಡ್ಮಿಂಟನ್ |
| ರಾಜೇಶ್ವರಿ ಗಾಯಕವಾಡ | ಕ್ರಿಕೆಟ್ |
| ಸಕೀನಾ ಖಾತೂನ್ | ಪ್ಯಾರಾ ಪವರ್‌ಲಿಫ್ಟಿಂಗ್ |
| ಶ್ರೀಹರಿ ನಟರಾಜ್ | ಈಜು |
| ನಿರಂಜನ್ ಮುಕುಂದನ್ | ಪ್ಯಾರಾ ಈಜು |
| ಗುರುರಾಜ ಪೂಜಾರಿ | ವೇಟ್‌ಲಿಫ್ಟಿಂಗ್ |


ನಿಖತ್ ಜರೀನ್ ಮತ್ತು ಭಾಸ್ಕರ್ ಭಟ್

### ಲವ್ಲಿನಾ ಕೋಚ್‌ಗೆ ಕೋಣೆ ಬಿಟ್ಟುಕೊಟ್ಟ ಮುಖ್ಯ ಕೋಚ್

ನವದೆಹಲಿ (ಪಿಟಿಐ): ಭಾರತ ಮಹಿಳಾ ಬಾಕ್ಸಿಂಗ್ ತಂಡದ ಮುಖ್ಯ ಕೋಚ್ ಭಾಸ್ಕರ್ ಭಟ್ ಅವರು ಕಾಮನ್‌ವೆಲ್ತ್ ಕ್ರೀಡಾಗ್ರಾಮದಲ್ಲಿ ತಮಗೆ ಲಭಿಸಿದ್ದ ಕೋಣೆಯನ್ನು ತೆರವುಗೊಳಿಸಿದ್ದಾರೆ. ಒಲಿಂಪಿಯನ್ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಅವರ ವೈಯಕ್ತಿಕ ಕೋಚ್ ಸಂಧ್ಯಾ ಗುರಂಗ್ ಅವರಿಗೆ ಭಾಸ್ಕರ್ ತಮ್ಮ ಕೋಣೆಯನ್ನು ಬಿಟ್ಟುಕೊಟ್ಟಿದ್ದಾರೆ. ಅವರು ಆಯೋಜಕರಿಂದ ಮಾನ್ಯತೆ ಪಡೆದ ಹೋಟೆಲ್ ಕೋಣೆಯಲ್ಲಿ ವಾಸ್ತವ್ಯ ಮಾಡಿದ್ದಾರೆ. 'ಹೋಟೇಲ್‌ನಿಂದ ಕ್ರೀಡಾಗ್ರಾಮಕ್ಕೆ ಹತ್ತು ನಿಮಿಷದ ನಡಿಗೆಯ ಮೂಲಕ ತಲುಪಬಹುದು' ಎಂದು ಭಟ್ ತಿಳಿಸಿದ್ದಾರೆ. 'ಸ್ವಯಂಪ್ರೇರಿತನಾಗಿ ಕೋಣೆಯನ್ನು ಸಂಧ್ಯಾಗೆ ಬಿಟ್ಟುಕೊಟ್ಟಿರುವೆ. ಇದು ನಮ್ಮ ತಂಡದ ಆಂತರಿಕ ವಿಷಯ. ಇಂತಹ ವಿಷಯಗಳನ್ನು ನಮ್ಮೊಳಗೆ ಬಗೆಹರಿಸಿಕೊಳ್ಳಬೇಕು' ಎಂದೂ ಭಟ್ ಹೇಳಿದ್ದಾರೆ.


ಮೀರಾಬಾಯಿ ಚಾನು

### ವಿದ್ಯಾರ್ಥಿಗಳಿಂದ ಪದಕ ವಿನ್ಯಾಸ

ಈ ಬಾರಿಯ ಕ್ರೀಡಾಕೂಟದ ಪದಕಗಳನ್ನು ಅಂಬರ್ ಅಲಿಸ್ ಫ್ರಾನ್ಸೆಸ್ಕಾ ವಿಲ್‌ಕಾಕ್ಸ್ ಮತ್ತು ಕ್ಯಾತರಿನಾ ರಾಡ್ರಿಗಸ್ ಸಿಯೆರೊ ಎಂಬ ವಿದ್ಯಾರ್ಥಿಗಳು ವಿನ್ಯಾಸ ಮಾಡಿದ್ದಾರೆ.

## ವಿಶ್ವ ಇವೆಂಟಿಂಗ್‌ಗೆ ಫವಾದ್

ನವದೆಹಲಿ (ಪಿಟಿಐ): ಬೆಂಗಳೂರಿನ ಫವಾದ್ ಮಿರ್ಜಾ ಸೇರಿದಂತೆ ಭಾರತದ ಮೂವರು ಈಕ್ವೆಸ್ಟ್ರಿಯನ್ ಕ್ರೀಡಾಪಟುಗಳು ಅವರು ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಿಶ್ವ ಡ್ರೆಸಾಜ್ ಮತ್ತು ಇವೆಂಟಿಂಗ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಲಿದ್ದಾರೆ.

ಒಲಿಂಪಿಯನ್ ಮಿರ್ಜಾ ಅವರೊಂದಿಗೆ ಭಾರತದ ಅನುಶ್ ಅಗರವಾಲ್ ಮತ್ತು ಶ್ರುತಿ ವೋರಾ ಅವರೂ ಡ್ರೆಸಾಜ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುವರು. ಈ ಸ್ಪರ್ಧೆಯು ಆಗಸ್ಟ್ 5 ರಿಂದ 11ರವರೆಗೆ ಡೆನ್ಮಾರ್ಕ್‌ನ ಹೆರ್ನಿಂಗ್‌ನಲ್ಲಿ ನಡೆಯಲಿದೆ.

ಇಟಲಿಯಲ್ಲಿ ಸೆಪ್ಟೆಂಬರ್ 10ರಿಂದ 12ರವರೆಗೆ ಇವೆಂಟಿಂಗ್ ವಿಶ್ವ ಚಾಂಪಿಯನ್‌ಷಿಪ್ ನಡೆಯಲಿದೆ. ಫವಾದ್ ಇದರಲ್ಲಿ ಕಣಕ್ಕಿಳಿಯಲಿದ್ದಾರೆ. ಸದ್ಯ ಅವರು ಜರ್ಮನಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ.

2018ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಇವೆಂಟಿಂಗ್ ತಂಡವು ಬೆಳ್ಳಿ ಪದಕ ಜಯಿಸಿತ್ತು. 1982ರಲ್ಲಿ ಭಾರತದ ಕುದುರೆ ಸವಾರರು ಏಷ್ಯನ್ ಗೇಮ್ಸ್‌ನಲ್ಲಿ ಭಾರತಕ್ಕೆ ಮೊದಲ ಚಿನ್ನದ ಪದಕ ಗೆದ್ದುಕೊಟ್ಟಿದ್ದರು. ಆ ತಂಡವು ಒಟ್ಟು ಮೂರು ಚಿನ್ನ, ಒಂದು ಬೆಳ್ಳಿ ಹಾಗೂ ಒಂದು ಕಂಚು ಗೆದ್ದಿತ್ತು.

'ಈ ಕ್ರೀಡೆಯು ದುಬಾರಿಯಾಗಿದೆ. ಆದರೂ ನಿಧಾನವಾಗಿ ಬೆಳವಣಿಗೆಯಾಗುತ್ತಿದೆ. ಇಎಫ್‌ಐ ಪ್ರಯತ್ನಗಳಿಂದಾಗಿ ಎದುರಾದ ಎಲ್ಲ ಸವಾಲುಗಳನ್ನೂ ಎದುರಿಸಿ ಕ್ರೀಡೆಯು ಬೆಳೆಯುತ್ತಿರುವುದು ಆಶಾದಾಯಕ. ಭಾರತೀಯ ಸೇನೆ ಮತ್ತು ಕ್ರೀಡಾಪಟುಗಳ ಸಂಪೂರ್ಣ ಬೆಂಬಲವೂ ಇದೆ' ಎಂದು ಭಾರತ ಈಕ್ವೆಸ್ಟ್ರಿಯನ್ ಫೆಡರೇಷನ್ (ಎಎಫ್‌ಐ) ಪ್ರಧಾನ ಕಾರ್ಯದರ್ಶಿ ಕರ್ನಲ್ ಜೈವೀರ್ ಸಿಂಗ್ ಹೇಳಿದರು.


ಫವಾದ್ ಮಿರ್ಜಾ

## ಕ್ರಿಕೆಟ್ ಪ್ರತಿಭೆಗೆ ನೆರವಾಗಲು ರಾಹುಲ್ ಮನವಿ

ಜೈಪುರ (ಪಿಟಿಐ): ಹಳ್ಳಿಗಾಡಿನ ಯುವ ಕ್ರಿಕೆಟ್ ಪ್ರತಿಭೆಗೆ ನೆರವಾಗುವಂತೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ರಾಜಸ್ತಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋತ್‌ಗೆ ಮನವಿ ಮಾಡಿದ್ದಾರೆ.

ರಾಜಸ್ತಾನದ ರಾಜ್‌ಸಮಂದ್ ಜಿಲ್ಲೆಯ 16 ವರ್ಷದ ಬಾಲಕ ಭರತ್ ಸಿಂಗ್ ಅವರು ನೆಟ್ಸ್‌ನಲ್ಲಿ ಬೌಲಿಂಗ್ ಮಾಡುತ್ತಿರುವ ವಿಡಿಯೊವನ್ನು ಟ್ವಿಟರ್‌ನಲ್ಲಿ ಟ್ಯಾಗ್ ಮಾಡಿ, ರಾಹುಲ್ ಈ ಮನವಿ ಮಾಡಿದ್ದಾರೆ. ಮೀನು ಹಿಡಿಯಲು ಬಳಸುವ ಬಲೆಯನ್ನೇ ಭರತ್ ಅವರು ನೆಟ್ಸ್‌ಗೆ ಬಳಸಿದ್ದರು.

'ಇಂತಹ ಅದ್ಭುತ ಪ್ರತಿಭೆಗಳು ದೇಶದ ಎಲ್ಲ ಮೂಲೆಗಳಲ್ಲೂ ಕಾಣಸಿಗುತ್ತಾರೆ. ಅವರನ್ನು ಗುರುತಿಸಿ, ಪ್ರೋತ್ಸಾಹಿಸುವುದು ಕರ್ತವ್ಯ. ಗೆಹ್ಲೋತ್‌ಜಿ, ಈ ಹುಡುಗನ ಕನಸು ಈಡೇರಿಸಲು ನೆರವಾಗಿ' ಎಂದು ಕೋರಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಗೆಹ್ಲೋತ್, 'ಖಂಡಿತವಾಗಿಯೂ ಈ ಬಗ್ಗೆ ಗಮನಹರಿಸಿ ಅಗತ್ಯ ನೆರವು ನೀಡಲಾಗುವುದು' ಎಂದಿದ್ದಾರೆ.

## ಮಂಕಿಪಾಕ್ಸ್: ಕೇಂದ್ರದಿಂದ ಮಾರ್ಗಸೂಚಿ ಬಿಡುಗಡೆ

ನವದೆಹಲಿ (ಪಿಟಿಐ): ಮಂಕಿಪಾಕ್ಸ್ ರೋಗಿಗಳಿಗೆ ಕೇಂದ್ರ ಸರ್ಕಾರವು ಮಾರ್ಗಸೂಚಿಗಳನ್ನು ಬುಧವಾರ ಬಿಡುಗಡೆ ಮಾಡಿದೆ.

21 ದಿನಗಳ ಪ್ರತ್ಯೇಕವಾಸ, ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಕೈ ಸ್ವಚ್ಛತೆ, ಗಾಯಗಳನ್ನು ಗಾಳಿಗೆ ಆಡದಂತೆ ಸಂಪೂರ್ಣವಾಗಿ ಮುಚ್ಚಿಕೊಳ್ಳುವುದು ಮತ್ತು ಗಾಯಗಳು ಸಂಪೂರ್ಣ ಗುಣವಾಗುವವರೆಗೂ ಕಾಯುವುದು. ಇವು ಕೇಂದ್ರದ ಮಾರ್ಗಸೂಚಿಗಳಾಗಿವೆ.

ಶಂಕಿತ ಮಂಕಿಪಾಕ್ಸ್ ಸೋಂಕು ಲಕ್ಷಣಗಳಿರುವ ಗಾಜಿಯಾಬಾದ್‌ನ ವ್ಯಕ್ತಿಯೊಬ್ಬರು ಇಲ್ಲಿನ ಎಲ್‌ಎನ್‌ಜೆಪಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ವ್ಯಕ್ತಿ ಒಂದು ತಿಂಗಳ ಹಿಂದೆ ವಿದೇಶ ಪ್ರವಾಸ ಮಾಡಿದ್ದರು. ಕಳೆದ ಒಂದು ವಾರದಿಂದ ಜ್ವರ ಮತ್ತು ಗುಳ್ಳೆಗಳು ಕಾಣಿಸಿ, ಮಂಗಳವಾರ ಮಧ್ಯಾಹ್ನ ಆಸ್ಪತ್ರೆಗೆ ದಾಖಲಾಗಿದ್ದಾರೆ. ಪ್ರತ್ಯೇಕ ವಾರ್ಡ್‌ನಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ವ್ಯಕ್ತಿಯಿಂದ ಮಾದರಿ ಸಂಗ್ರಹಿಸಿ ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಗೆ ಪರೀಕ್ಷೆಗೆ ಕಳುಹಿಸಲಾಗಿದ್ದು, ವರದಿ ಇನ್ನಷ್ಟೇ ಬರಬೇಕಿದೆ ಎಂದು ಮೂಲಗಳು ಹೇಳಿವೆ.

ಕೇರಳದಲ್ಲಿ ಮೂರು ಮತ್ತು ಪಶ್ಚಿಮ ದೆಹಲಿಯಲ್ಲಿ ಒಂದು ಪ್ರಕರಣ ಸೇರಿ ದೇಶದಲ್ಲಿ ಈವರೆಗೆ ನಾಲ್ಕು ಪ್ರಕರಣಗಳು ದೃಢಪಟ್ಟಿವೆ. ಮೊದಲ ಪ್ರಕರಣದ ರೋಗಿ ಎಲ್‌ಎನ್‌ಜೆಪಿ ಆಸ್ಪತ್ರೆಯ ಪ್ರತ್ಯೇಕ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ.

## ಯಾಸಿನ್ ಮಲಿಕ್ ಆಸ್ಪತ್ರೆಗೆ ದಾಖಲು

ನವದೆಹಲಿ (ಪಿಟಿಐ): ತಿಹಾರ್ ಜೈಲಿನಲ್ಲಿ ನಿರಶನ ನಡೆಸುತ್ತಿರುವ ಕಾಶ್ಮೀರದ ಪ್ರತ್ಯೇಕತಾವಾದಿ ಯಾಸಿನ್ ಮಲಿಕ್ ಅನ್ನು ಬುಧವಾರ ಆರ್‌ಎಂಎಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ರಕ್ತದ ಒತ್ತಡದಲ್ಲಿ ಏರುಪೇರಾದ ಕಾರಣ ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ತನಗೆ ಚಿಕಿತ್ಸೆ ನೀಡುವ ಅಗತ್ಯವಿಲ್ಲ ಎಂದು ವೈದ್ಯರಿಗೆ ಮಲಿಕ್ ಪತ್ರ ಬರೆದಿದ್ದಾನೆ ಎನ್ನಲಾಗಿದೆ.

ಆರು ದಿನಗಳಿಂದ ನಿರಶನ ಸತ್ಯಾಗ್ರಹ ನಡೆಸುತ್ತಿದ್ದು, ಐವಿ ಮೂಲಕ ದ್ರವಾಹಾರವನ್ನು ನೀಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದರು.

ರುಬಿಯಾ ಸಯೀದ್ ಅಪಹರಣ ಪ್ರಕರಣದಲ್ಲಿ ಆರೋಪಿಯಾಗಿರುವ ಮಲಿಕ್, ಜಮ್ಮುವಿನ ನ್ಯಾಯಾಲಯಕ್ಕೆ ಸ್ವತಃ ಹಾಜರಾಗಲು ಅನುಮತಿ ನೀಡಬೇಕು ಎಂದು ಶುಕ್ರವಾರ ಬೆಳಿಗ್ಗಿನಿಂದ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾನೆ.

## ಮಹಿಂದಾ ಸೇರಿ ಮೂವರಿಗೆ ದೇಶ ಬಿಡದಿರಲು ನಿರ್ಬಂಧ

ಕೊಲಂಬೊ (ಪಿಟಿಐ): ಶ್ರೀಲಂಕಾದ ಮಾಜಿ ಪ್ರಧಾನಿ ಮಹಿಂದಾ ರಾಜಪಕ್ಸ, ಮಾಜಿ ಹಣಕಾಸು ಸಚಿವ ಬಾಸಿಲ್ ರಾಜಪಕ್ಸ ಹಾಗೂ ಕೇಂದ್ರೀಯ ಬ್ಯಾಂಕ್‌ನ ಮಾಜಿ ಗವರ್ನರ್ ಅಜಿತ್ ನಿವೆರ್ಡ್ ಕಬ್ರಾಲ್ ಅವರಿಗೆ ಆಗಸ್ಟ್ 2ರವರೆಗೆ ದೇಶ ತೊರೆಯದಂತೆ ಶ್ರೀಲಂಕಾ ಸುಪ್ರೀಂಕೋರ್ಟ್ ಬುಧವಾರ ನಿರ್ಬಂಧ ಹೇರಿದೆ.

ಪಾರದರ್ಶಕ ಅಂತರ-ರಾಷ್ಟ್ರೀಯ ಶ್ರೀಲಂಕಾ ಮತ್ತು ಸಿಲೋನ್ ಚೇಂಬರ್ ಆಫ್ ಕಾಮರ್ಸ್ ಮಾಜಿ ಅಧ್ಯಕ್ಷ ಚಂದ್ರ ಜಯರತ್ನೆ, ಶ್ರೀಲಂಕಾದ ಮಾಜಿ ಈಜು ಚಾಂಪಿಯನ್ ಜುಲಿಯನ್ ಬೋಲಿಂಗ್, ಜೆಹಾನ್ ಕನಗರತ್ನ ಅವರ ಗುಂಪು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಶ್ರೀಲಂಕಾದ ವಿದೇಶಿ ಸಾಲ, ಪ್ರಸಕ್ತ ಆರ್ಥಿಕ ಬಿಕ್ಕಟ್ಟಿಗೆ ಈ ಮೂವರು ನೇರ ಹೊಣೆಗಾರರು ಎಂದು ಅರ್ಜಿದಾರರು ವಾದಿಸಿದ್ದಾರೆ. ಜುಲೈ 28ರವರೆಗೆ ಈ ಮೂವರಿಗೂ ದೇಶ ತೊರೆಯದಂತೆ ಕೋರ್ಟ್ ಆದೇಶ ನೀಡಿತ್ತು. ಈ ನಿರ್ಬಂಧವನ್ನು ಆಗಸ್ಟ್ 2ರವರೆಗೆ ವಿಸ್ತರಿಸಿದೆ.

### ಸಂಕ್ಷಿಪ್ತ ಸುದ್ದಿ

#### ಪ್ರಜ್ಞೆತಪ್ಪಿ ಬಿದ್ದ ನಿರೂಪಕಿ ನೆರವಿಗೆ ಧಾವಿಸಿದ ಸುನಕ್

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ಅಭ್ಯರ್ಥಿಗಳೊಂದಿಗಿನ ಚುನಾವಣಾ ಚರ್ಚೆಯ ವೇಳೆ ಟಿವಿ ನಿರೂಪಕಿ ಪ್ರಜ್ಞೆತಪ್ಪಿ ಬಿದ್ದ ಪರಿಣಾಮ, ರಿಷಿ ಸುನಕ್ ಅರ್ಧಕ್ಕೆ ಚರ್ಚೆ ನಿಲ್ಲಿಸಿ ನಿರೂಪಕಿಯ ನೆರವಿಗೆ ಧಾವಿಸಿದ ಪ್ರಸಂಗ ನಡೆಯಿತು.

ಕನ್ಸರ್ವೇಟಿವ್ ಪಕ್ಷದ ನಾಯಕಿಯಾಗಿ ಆಯ್ಕೆಯಾದರೆ ಜಾರಿಗೊಳಿಸಲಿರುವ ಆರ್ಥಿಕ ಯೋಜನೆಗಳ ಬಗ್ಗೆ ಟಿಪ್ಪಣಿ ಮಾಡಿಕೊಳ್ಳುತ್ತಿದ್ದ ವಿದೇಶಾಂಗ ಸಚಿವೆ ಲಿಜ್ ಟ್ರಸ್ ಅವರು, ನಿರೂಪಕಿ ಕುಸಿದುಬಿದ್ದ ದೃಶ್ಯ ನೋಡಿ ಗಾಬರಿಬಿದ್ದರು. ಅಭ್ಯರ್ಥಿಗಳಿಬ್ಬರೂ ಮಂಡಿಯೂರಿ ಕುಳಿತು, ನಿರೂಪಕಿಯ ಆರೋಗ್ಯ ಸ್ಥಿತಿ ವಿಚಾರಿಸಿದರು.

'ದಿ ಸನ್' ಮತ್ತು 'ಟಾಕ್ ಟಿ.ವಿ' ಜಂಟಿಯಾಗಿ ಮಂಗಳವಾರ ಸಂಜೆ ಈ ಚರ್ಚೆ ಆಯೋಜಿಸಿದ್ದವು. ಚರ್ಚೆ ನಡೆಸಿಕೊಡುತ್ತಿದ್ದ ನಿರೂಪಕಿ ಕೇಟ್ ಮೆಕೆನ್ ಅನಾರೋಗ್ಯಕ್ಕೊಳಗಾದ ನಂತರ, 30 ನಿಮಿಷ ಕಾಲ ಕಾರ್ಯಕ್ರಮ ಸ್ಥಗಿತವಾಯಿತು. ಚರ್ಚಾ ಕಾರ್ಯಕ್ರಮವನ್ನು ಮತ್ತೊಂದು ಸ್ಟುಡಿಯೊಗೆ ಸ್ಥಳಾಂತರಿಸಬೇಕಾಗಿದ್ದರಿಂದ ತೆರೆಯ ಹಿಂದೆ ನಡೆದ ಈ ಘಟನೆಯ ದೃಶ್ಯಗಳನ್ನು ಚಾನೆಲ್ ಪ್ರಸಾರ ಮಾಡಿದೆ.-

#### ಪಂಜಾಬಿ ಗಾಯಕ ಬಲ್ವಿಂದರ್ ನಿಧನ

ಲಂಡನ್ (ಪಿಟಿಐ): ಭಾರತೀಯ ಮೂಲದ ಬ್ರಿಟನ್‌ನ ಪ್ರಸಿದ್ಧ ಪಂಜಾಬಿ ಗಾಯಕ ಬಲ್ವಿಂದರ್ ಸಫ್ರಿ (63) ನಿಧನರಾಗಿದ್ದಾರೆ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಬರ್ಮಿಂಗ್‌ಹ್ಯಾಮ್‌ನಲ್ಲಿ ನೆಲೆಸಿದ್ದ ಅವರು ಪಂಜಾಬಿನಲ್ಲಿ ಜನಿಸಿದ್ದರು. 1989ರಿಂದ ಯುಕೆ ಭಾಂಗ್ರಾದ ಭಾಗವಾಗಿದ್ದ ಅವರು 1990ರಲ್ಲಿ ಸಫ್ರಿ ಬಾಯ್ಸ್ ಬ್ಯಾಂಡ್ ರಚಿಸಿದ್ದರು.

'ಬ್ರೈನ್ ಡ್ಯಾಮೇಜ್', ಹೃದಯ ಶಸ್ತ್ರಚಿಕಿತ್ಸೆ ಬಳಿಕ ಸಫ್ರಿ ಕೋಮಾಗೆ ಹೋಗಿದ್ದರು. ಬಳಿಕ ಗುಣಮುಖರಾಗಿ ಜುಲೈ 15ರಂದು ಆಸ್ಪತ್ರೆಯಿಂದ ಮನೆಗೆ ತೆರಳಿದ್ದರು. ನಂತರ ಅವರನ್ನು ವಿಶೇಷ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿತ್ತು.

#### ಗೊಟಬಯಗೆ ಸಿಂಗಪುರದಲ್ಲಿ ಮತ್ತೆ 14 ದಿನ ಅವಕಾಶ

ಸಿಂಗಪುರ: ಶ್ರೀಲಂಕಾದ ಮಾಜಿ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರಿಗೆ ಮತ್ತೆ 14 ದಿನಗಳವರೆಗೆ ಸಿಂಗಪುರದಲ್ಲಿ ಉಳಿದುಕೊಳ್ಳಲು ಅವಕಾಶ ಸಿಕ್ಕಿದೆ. ಅವರ ವೀಸಾ ಅವಧಿಯನ್ನು ಆಗಸ್ಟ್ 11ರವರೆಗೆ ಅಲ್ಲಿನ ಸರ್ಕಾರ ವಿಸ್ತರಿಸಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

44ನೇ ಚೆಸ್ ಒಲಿಂಪಿಯಾಡ್‌ಗೆ ಚಾಲನೆ ಇಂದು; ಭಾರತಕ್ಕೆ ಪದಕ ನಿರೀಕ್ಷೆ

# ಯುವ ಆಟಗಾರರಿಗೆ ಸವಾಲು



ಚೆಸ್ ಒಲಿಂಪಿಯಾಡ್‌ನ ಸ್ಪರ್ಧೆಗಳು ನಡೆಯಲಿರುವ ಸ್ಥಳದಲ್ಲಿ ಬುಧವಾರ ಅಂತಿಮ ಸಿದ್ಧತೆ ನಡೆಸಿದ ಸಿಬ್ಬಂದಿ –ಎಎಫ್‌ಪಿ ಚಿತ್ರ

ಮಾಮಲ್ಲಪುರಂ (ಪಿಟಿಐ): ಜಗತ್ತಿನ ಶ್ರೇಷ್ಠ ಚೆಸ್ ಸ್ಪರ್ಧಿಗಳ ಬುದ್ಧಿಮತ್ತೆಯನ್ನು ತೆರೆದಿಡಲಿರುವ ಚೆಸ್ ಒಲಿಂಪಿಯಾಡ್‌ಗೆ ಗುರುವಾರ ಚಾಲನೆ ದೊರೆಯಲಿದ್ದು, ಚದುರಂಗದಾಟದ ಅಭಿಮಾನಿಗಳ ಚಿತ್ತ ಚೆನ್ನೈ ಸಮೀಪದ ಐತಿಹಾಸಿಕ ನಗರ ಮಾಮಲ್ಲಪುರಂನತ್ತ ನೆಟ್ಟಿದೆ.

ವಿವಿಧ ದೇಶಗಳ ಒಂದೂವರೆ ಸಾವಿರಕ್ಕೂ ಅಧಿಕ ಸ್ಪರ್ಧಿಗಳು ಈಗಾಗಲೇ ಒಲಿಂಪಿಯಾಡ್‌ನ ತಾಣದಲ್ಲಿ ವಾಸ್ತವ್ಯ ಹೂಡಿದ್ದು, ಇಡೀ ನಗರದಲ್ಲಿ ಚೆಸ್ ಕಾವು ಗರಿಗೆದರಿದೆ. ಭಾರತದ ಆತಿಥ್ಯದಲ್ಲಿ ಮೊದಲ ಬಾರಿಗೆ ಆಯೋಜನೆಯಾಗಿರುವ ಟೂರ್ನಿಯನ್ನು ಯಶಸ್ವಿಯಾಗಿಸಲು ಸಂಘಟಕರು ಸಕಲ ರೀತಿಯಲ್ಲೂ ಸಜ್ಜಾಗಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಒಲಿಂಪಿಯಾಡ್‌ಗೆ ಗುರುವಾರ ಚಾಲನೆ ನೀಡಲಿದ್ದು, ಶುಕ್ರವಾರದಿಂದ ಸ್ಪರ್ಧೆಗಳು ನಡೆಯಲಿವೆ. ಆ.9 ರಂದು ಟೂರ್ನಿಗೆ ತೆರೆಬೀಳಲಿದೆ. ಮುಕ್ತ ಮತ್ತು ಮಹಿಳೆಯರ ವಿಭಾಗಗಳಲ್ಲಿ ತಲಾ ಮೂರು ತಂಡಗಳನ್ನು ಕಣಕ್ಕಿಳಿಸಿರುವ ಭಾರತ, ಪದಕ ಗೆಲ್ಲುವ ವಿಶ್ವಾಸದಲ್ಲಿದೆ.

ಚೆಸ್‌ನ 'ಶಕ್ತಿಕೇಂದ್ರ' ಎನಿಸಿಕೊಂಡಿರುವ ರಷ್ಯಾ ಮತ್ತು ಚೀನಾ ಈ ಬಾರಿ ಸ್ಪರ್ಧಿಸದೇ ಇರುವುದರಿಂದ ಭಾರತ ಸೇರಿದಂತೆ ಇತರ ದೇಶಗಳಿಗೆ ಪದಕ ಗೆಲ್ಲುವ ಅವಕಾಶಗಳು ಹೆಚ್ಚಿವೆ.

ಐದು ಬಾರಿಯ ವಿಶ್ವಚಾಂಪಿಯನ್ ವಿಶ್ವನಾಥನ್ ಆನಂದ್ ಆಡದಿರಲು ನಿರ್ಧರಿಸಿದ್ದು, ಮಾರ್ಗದರ್ಶಕರಾಗಿ ಭಾರತದ ತಂಡಗಳಿಗೆ ಸಲಹೆ ನೀಡಲಿದ್ದಾರೆ. ಅವರ ಅನುಪಸ್ಥಿತಿಯ ನಡುವೆಯೂ ಆತಿಥೇಯ ತಂಡ ಪದಕ ಗೆಲ್ಲುವ ವಿಶ್ವಾಸ ಹೊಂದಿದೆ.

ಮುಕ್ತ ವಿಭಾಗದಲ್ಲಿ ಭಾರತ 'ಎ' ತಂಡ ಅಮೆರಿಕದ ಬಳಿಕ ಎರಡನೇ ಶ್ರೇಯಾಂಕ ಪಡೆದುಕೊಂಡಿದ್ದು, ಚಿನ್ನದ ಪದಕದತ್ತ ದೃಷ್ಟಿ ನೆಟ್ಟಿದೆ. ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನೊಳಗೊಂಡ ನಾರ್ವೆ ಮತ್ತು ಅಜರ್‌ಬೈಜಾನ್ ತಂಡಗಳೂ ಚಿನ್ನದ ಪದಕದ ಮೇಲೆ ಚಿತ್ತ ಹರಿಸಿವೆ.

ಫ್ಯಾಬಿಯೊ ಕರುವಾನ, ವೆಸ್ಲಿ ಸೊ, ಲೆವೊನ್ ಅರೋನಿಯನ್, ಸ್ಯಾಮ್ ಶೇಂಕ್‌ಲೆಂಡ್ ಮತ್ತು ಲೈನಿಯರ್ ಡೊಮಿಂಗ್ವೆಸ್ ಅವರನ್ನು ಒಳಗೊಂಡ ಅಮೆರಿಕ ತಂಡ ಸರಾಸರಿ 2,771 ಎಲೊ ರೇಟಿಂಗ್ಸ್ ಹೊಂದಿದೆ.

ಅನುಭವಿ ಸ್ಪರ್ಧಿಗಳಾದ ಪಿ.ಹರಿಕೃಷ್ಣ, ಕೆ.ಶಶಿಕಿರಣ್ ಅವರು ಇರುವ ಭಾರತ 'ಎ' ತಂಡದ ಸರಾಸರಿ ಎಲೊ ರೇಟಿಂಗ್ಸ್ 2,696 ಆಗಿದೆ. ಸರಾಸರಿ ರೇಟಿಂಗ್ಸ್ ಪ್ರಕಾರ, ಅಮೆರಿಕವೇ ಚಿನ್ನ ಗೆಲ್ಲುವ ಫೇವರಿಟ್. ಆದರೆ ಆಟಗಾರರ ವೈಯಕ್ತಿಕ ಪ್ರದರ್ಶನಕ್ಕಿಂತಲೂ ತಂಡದ ಒಟ್ಟಾರೆ ಪ್ರದರ್ಶನ ಇಲ್ಲಿ ಮುಖ್ಯ ಎನಿಸುತ್ತದೆ.

ಭಾರತದ 'ಬಿ' ಮತ್ತು 'ಸಿ' ತಂಡಗಳಿಂದಲೂ ಉತ್ತಮ ಸಾಧನೆ ನಿರೀಕ್ಷಿಸಲಾಗಿದೆ. ಎಳೆಯ ಆಟಗಾರರನ್ನು ಒಳಗೊಂಡಿರುವ ಭಾರತ 'ಬಿ' ಮತ್ತು 'ಸಿ' ತಂಡಗಳು ಕ್ರಮವಾಗಿ 11 ಹಾಗೂ 17ನೇ ಶ್ರೇಯಾಂಕ ಪಡೆದುಕೊಂಡಿವೆ.

ಕೋಚ್ ಆರ್.ಬಿ.ರಮೇಶ್ ಮಾರ್ಗದರ್ಶನದಲ್ಲಿ ಕಣಕ್ಕಿಳಿಯಲಿರುವ 'ಬಿ' ತಂಡ 'ಡಾರ್ಕ್ ಹಾರ್ಸ್' ಎಂಬ ಹಣೆಪಟ್ಟಿ ಹಚ್ಚಿಕೊಂಡಿದೆ. ನಿಹಾಲ್ ಸರೀನ್, ಡಿ.ಗುಕೇಶ್ ಮತ್ತು ಆರ್.ಪ್ರಗ್ನಾನಂದ ಅವರು ತಂಡದ ಶಕ್ತಿ ಎನಿಸಿರುವರು.

ಮಹಿಳೆಯರ ವಿಭಾಗದಲ್ಲಿ ಭಾರತ 'ಎ' ತಂಡಕ್ಕೆ ಅಗ್ರಶ್ರೇಯಾಂಕ ನೀಡಲಾಗಿದೆ.

**ಹೆಚ್ಚು ಪದಕ ಗೆದ್ದ ಐದು ದೇಶಗಳು**

| ದೇಶ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|
| ಯುಎಸ್‌ಎಸ್‌ಆರ್ | 18 | 1 | 0 | 19 |
| ರಷ್ಯಾ | 8 | 3 | 3 | 14 |
| ಅಮೆರಿಕ | 6 | 7 | 9 | 22 |
| ಹಂಗರಿ | 3 | 7 | 2 | 12 |
| ಅರ್ಮೇನಿಯ | 3 | 0 | 3 | 6 |

**ಭಾರತದ ತಂಡಗಳು**

**ಓಪನ್ ವಿಭಾಗ**

**ಭಾರತ 'ಎ':** ವಿದಿತ್ ಗುಜರಾತಿ, ಪಿ.ಹರಿಕೃಷ್ಣ, ಅರ್ಜುನ್ ಎರಿಗೈಸಿ, ಎಸ್.ಎಲ್.ನಾರಾಯಣನ್, ಕೃಷ್ಣನ್ ಶಶಿಕಿರಣ್

**ಭಾರತ 'ಬಿ' :** ನಿಹಾಲ್ ಸರೀನ್, ಡಿ.ಗುಕೇಶ್, ಬಿ.ಅಧಿಬನ್, ಆರ್. ಪ್ರಗ್ನಾನಂದ, ರೌನಕ್ ಸಾಧ್ವಾನಿ

**ಭಾರತ 'ಸಿ':** ಸೂರ್ಯಶೇಖರ ಗಂಗೂಲಿ, ಕಾರ್ತಿಕೇಯನ್ ಮುರಳಿ, ಎಸ್.ಪಿ.ಸೇತುರಾಮನ್, ಅಭಿಜಿತ್ ಗುಪ್ತಾ, ಅಭಿಮನ್ಯು ಪುರಾಣಿಕ್

**ಮಹಿಳೆಯರ ವಿಭಾಗ**

**ಭಾರತ 'ಎ':** ಕೊನೇರು ಹಂಪಿ, ಹರಿಕ ದ್ರೋಣವಳ್ಳಿ, ಆರ್.ವೈಶಾಲಿ, ಭಕ್ತಿ ಕುಲಕರ್ಣಿ, ತಾನಿಯಾ ಸಚ್‌ದೇವ್

**ಭಾರತ 'ಬಿ':** ವಂತಿಕಾ ಅಗರವಾಲ್, ಸೌಮ್ಯಾ ಸ್ವಾಮಿನಾಥನ್, ಮೇರಿ ಆ್ಯನ್ ಗೋಮ್ಸ್, ಪದ್ಮಿನಿ ರಾವುತ್, ದಿವ್ಯಾ ದೇಶಮುಖ್

**ಭಾರತ 'ಸಿ':** ಇಶಾ ಕರ್ವಾಡೆ, ಸಾಹಿತಿ ವರ್ಷಿಣಿ, ಬಿ.ಪ್ರತ್ಯೂಷಾ, ಪಿ.ವಿ.ನಂದಿದಾ, ವಿಶ್ವಾ ವಾಸನವಾಲಾ

## ಒಲಿಂಪಿಯಾಡ್ ಮಾಹಿತಿ

**ಟ್ರೋಫಿ ಹೆಸರು**

- ಮುಕ್ತ ವಿಭಾಗ: ಹ್ಯಾಮಿಲ್ಟನ್ ರಸೆಲ್ ಕಪ್
- ಮಹಿಳೆಯರ ವಿಭಾಗ: ವೆರಾ ಮೆನ್‌ಶಿಕ್ ಕಪ್
- ಸಮಗ್ರ ಅಗ್ರಸ್ಥಾನ: ನೋನ ಗಪ್ರಿನ್‌ದಶ್ವಿಲಿ ಟ್ರೋಫಿ



- ಪಾಲ್ಗೊಂಡಿರುವ ದೇಶಗಳು: 186

ತಂಡಗಳು: 350 ಒಟ್ಟು — 188 ಮುಕ್ತ ವಿಭಾಗ; 162 ಮಹಿಳೆಯರ ವಿಭಾಗ

ಸ್ಪರ್ಧಿಗಳು: ಒಟ್ಟು 1,735 — ಮುಕ್ತ ವಿಭಾಗ 936; ಮಹಿಳೆಯರ ವಿಭಾಗ 799

- ಸ್ಪರ್ಧೆಯ ಮಾದರಿ: ಚೆಸ್ ಒಲಿಂಪಿಯಾಡ್‌ನ ಎಲ್ಲ ಪಂದ್ಯಗಳು ಕ್ಲಾಸಿಕಲ್ ಸ್ವಿಸ್ ಲೀಗ್ ಮಾದರಿಯಲ್ಲಿ ನಡೆಯಲಿವೆ
- ತಾಣ: ಫೋರ್ ಪಾಯಿಂಟ್ಸ್ ಬೈ ಶೆರಟಾನ್, ಮಾಮಾಲ್ಲಪುರಂ (ಚೆನ್ನೈನಿಂದ 58 ಕಿ.ಮೀ ದೂರದಲ್ಲಿದೆ)

## ಭಾರತದ 6 ತಂಡ, 30 ಸ್ಪರ್ಧಿಗಳು

ಮುಕ್ತ ವಿಭಾಗದಲ್ಲಿ ಮೂರು ಮತ್ತು ಮಹಿಳೆಯರ ವಿಭಾಗದಲ್ಲಿ ಮೂರು ಸೇರಿದಂತೆ ಭಾರತದ ಒಟ್ಟು ಆರು ತಂಡಗಳು ಈ ಬಾರಿ ಕಣದಲ್ಲಿವೆ.

ಪ್ರತಿ ತಂಡದಲ್ಲಿ ಐವರು ಸ್ಪರ್ಧಿಗಳಿದ್ದು, ಒಟ್ಟು 30 ಮಂದಿಗೆ ಈ ಪ್ರತಿಷ್ಠಿತ ಟೂರ್ನಿಯಲ್ಲಿ ಪಾಲ್ಗೊಳ್ಳುವ ಅವಕಾಶ ಲಭಿಸಿದೆ. ಪ್ರತಿ ದೇಶವು ಮುಕ್ತ ಮತ್ತು ಮಹಿಳಾ ವಿಭಾಗದಲ್ಲಿ ತಲಾ ಒಂದು ತಂಡವನ್ನು ಮಾತ್ರ ಕಣಕ್ಕಿಳಿಸಬಹುದು.

ಆತಿಥ್ಯ ವಹಿಸುವ ದೇಶಕ್ಕೆ ಪ್ರತಿ ವಿಭಾಗದಲ್ಲಿ ಎರಡು ತಂಡಗಳನ್ನು ಕಣಕ್ಕಿಳಿಸುವ ಅವಕಾಶವಿದೆ. ಇದರಿಂದ ಭಾರತದ ನಾಲ್ಕು ತಂಡಗಳನ್ನು ಹೆಸರಿಸಲಾಗಿತ್ತು. ಆದರೆ ಮುಕ್ತ ವಿಭಾಗದಲ್ಲಿ 187 ಮತ್ತು ಮಹಿಳೆಯರ ವಿಭಾಗದಲ್ಲಿ 161 ತಂಡಗಳು ಹೆಸರು ನೋಂದಾಯಿಸಿಕೊಂಡಿವೆ.

ತಂಡಗಳು ಸಮಸಂಖ್ಯೆಯಲ್ಲಿರಬೇಕಾದ ಕಾರಣ ಆತಿಥೇಯ ಭಾರತಕ್ಕೆ ಪೇರಿಂಗ್ ನಿಯಮದ ಪ್ರಕಾರ ಎರಡೂ ವಿಭಾಗಗಳಲ್ಲಿ ಇನ್ನೊಂದು ತಂಡ ಕಣಕ್ಕಿಳಿಸುವ ಅವಕಾಶ ದೊರೆಯಿತು.


**2014 ರಲ್ಲಿ ಭಾರತಕ್ಕೆ ಮೊದಲ ಪದಕ:** ಈ ಪ್ರತಿಷ್ಠಿತ ಕೂಟದಲ್ಲಿ ಭಾರತಕ್ಕೆ ಹೆಚ್ಚಿನ ಯಶಸ್ಸು ದೊರೆತಿಲ್ಲ. 1956 ರಲ್ಲಿ ಮೆಲ್ಬರ್ನ್‌ನಲ್ಲಿ ನಡೆದಿದ್ದ ಒಲಿಂಪಿಯಾಡ್‌ನಲ್ಲಿ ಭಾರತ ಮೊದಲ ಬಾರಿ ಪಾಲ್ಗೊಂಡಿತ್ತು. ಆದರೆ ಮೊದಲ ಪದಕ ಗೆಲ್ಲಲು 2014ರ ವರೆಗೆ ಕಾಯಬೇಕಾಯಿತು. ನಾರ್ವೆಯ ಟ್ರಾಮ್ಸೊದಲ್ಲಿ ನಡೆದಿದ್ದ 41ನೇ ಒಲಿಂಪಿಯಾಡ್‌ನಲ್ಲಿ ಭಾರತ ಕಂಚಿನ ಪದಕ ಗೆದ್ದುಕೊಂಡಿತ್ತು.

2020 ರಲ್ಲಿ ಕೋವಿಡ್ ಕಾರಣ ವರ್ಚುವಲ್ ಆಗಿ ನಡೆದಿದ್ದ ಕೂಟದಲ್ಲಿ ಭಾರತ ಮತ್ತು ರಷ್ಯಾ ಜಂಟಿ ಚಾಂಪಿಯನ್ ಆಗಿದ್ದವು. 2021 ರಲ್ಲಿ (ವರ್ಚುವಲ್) ಭಾರತಕ್ಕೆ ಮೂರನೇ ಸ್ಥಾನ ಲಭಿಸಿತ್ತು.



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು




ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ರಾಜ್ಯದ ಭಕ್ತಗಣದಲ್ಲಿ ಹರ್ಷ ಮೂಡಿಸಿದ ಸಾರ್ಥಕ ವರ್ಷ

1. ದೈವಸಂಕಲ್ಪ ಯೋಜನೆ: 1140 ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಾಜ್ಯದ 25 ಎ ದರ್ಜೆ ದೇವಸ್ಥಾನಗಳ ಸಮಗ್ರ ಅಭಿವೃದ್ಧಿ.
2. **"ಕಾಯಕಲ್ಪ ಯೋಜನೆ"**: ರಾಜ್ಯದ 34219 ಸಿ ದರ್ಜೆ ಮುಜರಾಯಿ ದೇವಸ್ಥಾನಗಳ ಅಭಿವೃದ್ಧಿ
3. **ಐಟಿಎಂಎಸ್ (ITMS)**: ಪ್ರಧಾನಿ ನರೇಂದ್ರ ಮೋದಿ ಅವರ ಡಿಜಿಟಲ್ ಇಂಡಿಯಾ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿ ಇಂಟಿಗ್ರೇಟೆಡ್ ಟೆಂಪಲ್ ಮ್ಯಾನೇಜ್‌ಮೆಂಟ್ ಸಿಸ್ಟಂ ಜಾರಿ
4. **ಕಾಶಿಯಾತ್ರೆ ಸಹಾಯಧನ ಯೋಜನೆ**: ಕಾಶಿ ಯಾತ್ರಾರ್ಥಿಗಳಿಗೆ 5 ಸಾವಿರ ರೂಪಾಯಿಗಳ ಪ್ರೋತ್ಸಾಹ ಧನ
5. **ಕಾಶಿ ಯಾತ್ರೆಗೆ ಭಾರತ ಗೌರವ್ ರೈಲು**: ದೇಶದಲ್ಲೇ ಮೊದಲ ಬಾರಿಗೆ ರಾಜ್ಯದಿಂದ ಕಾಶಿ ಯಾತ್ರೆಗೆ "ಭಾರತ ಗೌರವ್" ರೈಲು
6. **693 ಕೋಟಿ ರೂಪಾಯಿಗಳ ಅನುದಾನ**: ರಾಜ್ಯದಲ್ಲಿನ ವಿವಿಧ ದೇವಸ್ಥಾನಗಳು, ಮಠಗಳು ಹಾಗೂ ಹೊರರಾಜ್ಯಗಳಲ್ಲಿರುವ ಕರ್ನಾಟಕ ಛತ್ರಗಳ ಅಭಿವೃದ್ಧಿಗಾಗಿ ಕಳೆದ 10 ವರ್ಷಗಳಲ್ಲೇ ಅತಿ ಹೆಚ್ಚು ಅನುದಾನ
7. ಪ್ರತಿ ದೀಪಾವಳಿಯಂದು ದೇವಸ್ಥಾನಗಳಲ್ಲಿ **ವಿಶೇಷ ಗೋಪೂಜೆ**


ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರಾದ **ಶ್ರೀಮತಿ ಶಶಿಕಲಾ ಅ ಜೊಲ್ಲೆ**ಯವರು ಕಾಶಿಯಾತ್ರೆ ಸಹಾಯಧನವನ್ನು ವಿತರಿಸುತ್ತಿರುವುದು.

8. ಪ್ರತಿ ಯುಗಾದಿಯನ್ನು **"ಧಾರ್ಮಿಕ ದಿನ"**ವನ್ನಾಗಿ ಆದರಣೆ
9. ರಾಜ್ಯದ ದೇವಸ್ಥಾನಗಳ ಜಮೀನುಗಳ ಸಂರಕ್ಷಣೆಗಾಗಿ ಡ್ರೋನ್ ಸರ್ವೆ ಪ್ರಕ್ರಿಯೆಗೆ ಚಾಲನೆ
10. ಅಂಜನಾದ್ರಿ ಬೆಟ್ಟದ ಸಮಗ್ರ ಅಭಿವೃದ್ಧಿಗೆ 100 ಕೋಟಿ ರೂಪಾಯಿಗಳ ವಿಶೇಷ ಅನುದಾನ
11. ಶ್ರೀಶೈಲ ಸುಕ್ಷೇತ್ರ, ಅಯೋಧ್ಯೆ, ಕಾಶಿ, ಶಬರಿಮಲೆ ಗುಡ್ಡಾಪುರ, ಪಂಡರಾಪುರಗಳಲ್ಲಿ ಕರ್ನಾಟಕ ಛತ್ರಗಳ ಅಭಿವೃದ್ಧಿ

**ಎಸ್. ಉಮಾ ಶಂಕರ್,** ಭಾ. ಆ. ಸೇ.
ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ಇಲಾಖೆ)

**ರೋಹಿಣಿ ಸಿಂಧೂರಿ,** ಭಾ. ಆ. ಸೇ.
ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕೃಷಿ ಇಲಾಖೆ





ಸರ್ವರ ವಿಕಾಸಕ್ಕೆ ಸಮೃದ್ಧ ಕರ್ನಾಟಕ
ಇದು ನಮ್ಮ ಸಂಕಲ್ಪ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿರವರ ನೇತೃತ್ವದ ಸರ್ಕಾರ ಒಂದು ವರ್ಷದ ಇಲಾಖಾವಾರು ಪ್ರಗತಿ
ಕೃಷಿ ಮತ್ತು ಪೂರಕ ಚಟುವಟಿಕೆಗಳು

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

"ಮುಖ್ಯಮಂತ್ರಿ ರೈತ ವಿದ್ಯಾ ನಿಧಿ" ಕಾರ್ಯಕ್ರಮ



- ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವ 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ಯೋಜನೆಯಡಿ 9.48 ಲಕ್ಷ ವಿದ್ಯಾರ್ಥಿಗಳಿಗೆ 397.213 ಕೋಟಿ ರೂ.ಗಳ ವಿದ್ಯಾರ್ಥಿ ವೇತನ ವಿತರಣೆ.
- ರೈತರ ಮಕ್ಕಳು ಓದುತ್ತಿರುವ ಕೋರ್ಸಿಗೆ ಅನುಗುಣವಾಗಿ ರೂ. 2,000/- ಗಳಿಂದ ರೂ. 11,000/- ವರೆಗೆ ವಿದ್ಯಾರ್ಥಿ ವೇತನ ಸೌಲಭ್ಯ.
- ಅರ್ಜಿ ಸಲ್ಲಿಸದೆಯೇ ವಿದ್ಯಾರ್ಥಿ ವೇತನ ಪೋರ್ಟಲ್‌ನಡಿ ಡಿಬಿಟಿ ಮುಖಾಂತರ ವರ್ಗಾವಣೆ.

ರೈತ ಶಕ್ತಿ ಯೋಜನೆ





- ಕೃಷಿ ಯಾಂತ್ರೀಕರಣ ಪ್ರೋತ್ಸಾಹಿಸಲು ಡೀಸೆಲ್ ಸಹಾಯಧನ ನೀಡುವ ರೈತ ಶಕ್ತಿ ಯೋಜನೆ ಜಾರಿ.
- ಪ್ರತಿ ಎಕರೆಗೆ ರೂ. 250/- ಗಳಂತೆ ಗರಿಷ್ಟ ಐದು ಎಕರೆಗೆ ಸಹಾಯಧನ.
- ರೂ. 400 ಕೋಟಿ ಅನುದಾನ.

ಸೆಕೆಂಡರಿ ಅಗ್ರಿಕಲ್ಚರ್ ನಿರ್ದೇಶನಾಲಯ









- ರೈತರ ಆದಾಯ ಹೆಚ್ಚಿಸಲು ದೇಶದಲ್ಲಿಯೇ ಮೊದಲ ಬಾರಿ ಸೆಕೆಂಡರಿ ಅಗ್ರಿಕಲ್ಚರ್ ನಿರ್ದೇಶನಾಲಯ ಸ್ಥಾಪನೆ.
- ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಪ್ರಾಣಿಜನ್ಯ ಉತ್ಪನ್ನಗಳ ಸಂಸ್ಕರಣೆ, ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳ ಮೂಲಕ ರೈತರಿಗೆ ಆದಾಯ ತರಲು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಉದ್ಯೋಗ ಸೃಜನೆಗೆ ಆದ್ಯತೆ.
- 2022-23 ನೇ ಸಾಲಿನ ಆಯವ್ಯಯದಲ್ಲಿ ರೂ. 5.00 ಕೋಟಿ ಅನುದಾನವನ್ನು ಒದಗಿಸಲಾಗಿದ್ದು ಮೊದಲನೆ ಕಂತಿನ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಇಲಾಖೆಯ ಪ್ರಮುಖ ಸಾಧನೆಗಳು



- ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ರಾಜ್ಯ ಸರ್ಕಾರ) ದಡಿ 2021-22ನೇ ಸಾಲಿನಲ್ಲಿ 50.35 ಲಕ್ಷ ರೈತರಿಗೆ ರೂ. 1,007.13 ಕೋಟಿಗಳ ವಿತರಣೆ ಮತ್ತು 2022-23ನೇ ಸಾಲಿನಲ್ಲಿ 47.83 ಲಕ್ಷ ರೈತರಿಗೆ ರೂ. 956.71 ಕೋಟಿ ಡಿಬಿಟಿ ಮೂಲಕ ವರ್ಗಾವಣೆ.





- ಕೃಷಿ ಯಾಂತ್ರೀಕರಣ ಹಾಗೂ ಕೃಷಿ ಉತ್ಪನ್ನ ಸಂಸ್ಕರಣೆ ಘಟಕಗಳಿಗೆ 4.54 ಲಕ್ಷ ರೈತರಿಗೆ ರೂ. 483.56 ಕೋಟಿ ಗಳ ಸಹಾಯಧನ ವಿತರಣೆ.

- ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ 3.17 ಲಕ್ಷ ಹೆಕ್ಟೇರ್ ಪ್ರದೇಶವನ್ನು ಸೂಕ್ಷ್ಮ ನೀರಾವರಿ ಪದ್ಧತಿಯಡಿಯಲ್ಲಿ ತರಲು ರೂ. 614.20 ಕೋಟಿ ಸಹಾಯ ಧನವನ್ನು ಒದಗಿಸಲಾಗಿರುತ್ತದೆ.





- ರೈತರ ತಾಕುಗಳಲ್ಲಿಯೇ ಕೀಟ, ರೋಗ ಮತ್ತು ಕಳೆಗಳ ಬಾಧೆ ಹಾಗೂ ಮಣ್ಣಿನ ಪೋಷಕಾಂಶ ಕೊರತೆ ಹಾಗೂ ಸಮರ್ಪಕ ನಿರ್ವಹಣೆಗಾಗಿ ಕೃಷಿ ಸಂಜೀವಿನಿ ಯೋಜನೆಯಡಿ 160 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ ವಾಹನಗಳ ಲೋಕಾರ್ಪಣೆ.

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ

- ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಜಲಾನಯನ ಅಭಿವೃದ್ಧಿ ಘಟಕ 2.0ರಡಿ 57 ತಾಲ್ಲೂಕುಗಳ 2.75 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಜಲಾನಯನ ಅಭಿವೃದ್ಧಿ ಚಟುವಟಿಕೆಗಳಿಗೆ ರೂ. 642.26 ಕೋಟಿ ಮಂಜೂರು. ಈ ವರೆಗೆ ರೂ. 36.87 ಕೋಟಿ ವೆಚ್ಚ.
- ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ 19.14 ಲಕ್ಷ ಹೆಕ್ಟೇರ್ ಮಳೆಯಾಶ್ರಿತ ಪ್ರದೇಶದ ಉಪಚಾರ. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಜಲಾನಯನ ಅಭಿವೃದ್ಧಿ ಘಟಕ 1.0, ಜಲಾನಯನ ಅಭಿವೃದ್ಧಿ ಘಟಕ 2.0 ಹಾಗೂ ಇತರೆ ಉಪಚಾರ ಯೋಜನೆಗಳಡಿ ಕಳೆದ ಒಂದು ವರ್ಷದಲ್ಲಿ ಒಟ್ಟು ರೂ. 111.26 ಕೋಟಿ ವೆಚ್ಚದಲ್ಲಿ, ಮಳೆಯಾಶ್ರಿತ ಪ್ರದೇಶಗಳ ಉಪಚಾರ, ನೀರು ಸಂಗ್ರಹಣಾ ವಿನ್ಯಾಸಗಳ ರಚನೆ.

ರಿವಾರ್ಡ್



- ವಿಶ್ವ ಬ್ಯಾಂಕ್ ನೆರವಿನಲ್ಲಿ ರೂ. 600 ಕೋಟಿ ಅಂದಾಜು ವೆಚ್ಚದ REWARD (ಕೃಷಿಯ ಸುಸ್ಥಿರತೆಗಾಗಿ ನವೀನ ಅಭಿವೃದ್ಧಿ ಮೂಲಕ ಜಲಾನಯನ ಪ್ರದೇಶಗಳನ್ನು ಪುನಶ್ಚೇತನಗೊಳಸುವುದು) ಯೋಜನೆಗೆ ಚಾಲನೆ.
- ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿ ವೈಜ್ಞಾನಿಕವಾಗಿ ಜಲಾನಯನ ನಿರ್ವಹಣೆ ಕುರಿತ ಉತ್ಕೃಷ್ಟತಾ ಕೇಂದ್ರ ಸ್ಥಾಪನೆಗೆ (Centre of Excellence on Science based Watershed Management) ಕ್ರಮ.
- ರೈತ ಉತ್ಪಾದಕರ ಸಂಸ್ಥೆಗಳು: ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 26 ಜಿಲ್ಲೆಗಳಲ್ಲಿ 121 ರೈತ ಉತ್ಪಾದಕರ ಸಂಸ್ಥೆಗಳಲ್ಲಿ ಉತ್ಪನ್ನಗಳ ವ್ಯವಹಾರ ಆರಂಭ.
- ಕೇಂದ್ರ ಪುರಸ್ಕೃತ ಯೋಜನೆಯಡಿ 10,000 ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉತ್ತೇಜನ ಕಾರ್ಯಕ್ರಮದಡಿ 100 ಹಾಗೂ ಅಮೃತ ರೈತ/ ಮೀನುಗಾರರ/ ನೇಕಾರರ ಉತ್ಪಾದಕರ ಸಂಸ್ಥೆ ಯೋಜನೆಯಡಿ ವಿವಿಧ ಇಲಾಖೆಗಳ ಮೂಲಕ 321 ರೈತ ಉತ್ಪಾದಕರ ಸಂಸ್ಥೆಗಳ ನೋಂದಣಿ.







- ಬಳ್ಳಾರಿ ಜಿಲ್ಲೆಯ ಹಗರಿಯಲ್ಲಿ ಕೃಷಿ ಮಹಾವಿದ್ಯಾಲಯದ ಸ್ಥಾಪನೆಗೆ ಸರ್ಕಾರಿ ಆದೇಶ.

- ಪ್ರಧಾನಮಂತ್ರಿ ಕಿರು-ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ (PMFME) ಯೋಜನೆಯಡಿ ರಾಜ್ಯ ಸರ್ಕಾರದಿಂದ ಶೇ.15 ರಷ್ಟು ಹೆಚ್ಚುವರಿ ಸಹಾಯಧನ. ಕೇಂದ್ರದಿಂದ ರೂ. 17.46 ಕೋಟಿ ಹಾಗೂ ರಾಜ್ಯದಿಂದ ರೂ. 4.21 ಕೋಟಿ ಸಹಾಯಧನ ಬಿಡುಗಡೆ. ರಾಜ್ಯದಲ್ಲಿ ಕಿರು ಆಹಾರ ಸಂಸ್ಕರಣ ಕ್ಷೇತ್ರದಲ್ಲಿ ಒಟ್ಟು ರೂ. 93.25 ಕೋಟಿ ಹೂಡಿಕೆ. ರಾಜ್ಯದಲ್ಲಿ 13 ಇನ್‌ಕ್ಯುಬೇಷನ್ ಸೆಂಟರ್ ಪ್ರಾರಂಭ. ಇದು ದೇಶದಲ್ಲಿಯೇ ಅತಿ ಹೆಚ್ಚು.

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು". - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

**ಸಿ.ಎನ್. ನಂದಿನಿ ಕುಮಾರಿ**
ಕೃಷಿ ನಿರ್ದೇಶಕರು

**ಶರತ್ ಬಿ.** ಭಾ.ಆ.ಸೇ
ಕೃಷಿ ಆಯುಕ್ತರು

**ಶಿವಯೋಗಿ ಕಳಸದ್,** ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ

**ಕರ್ನಾಟಕ ರಾಜ್ಯ ಕೃಷಿ ಇಲಾಖೆ**
ಶೇಷಾದ್ರಿ ರಸ್ತೆ, ಬೆಂಗಳೂರು - 560001

ಕ್ರಿಕೆಟ್: ವೆಸ್ಟ್‌ಇಂಡೀಸ್ ಎದುರಿನ ಮೂರನೇ ಏಕದಿನ ಪಂದ್ಯ

# ಶಿಖರ್, ಶುಭಮನ್ ಅರ್ಧಶತಕ

**ಪೋರ್ಟ್ ಆಫ್ ಸ್ಪೇನ್ (ಪಿಟಿಐ):** ವೆಸ್ಟ್ ಇಂಡೀಸ್ ಎದುರಿನ ಏಕದಿನ ಸರಣಿ ಕೈವಶ ಮಾಡಿಕೊಂಡಿರುವ ಹುಮ್ಮಸ್ಸಿನಲ್ಲಿರುವ ಭಾರತ ತಂಡದ ನಾಯಕ ಶಿಖರ್ ಧವನ್ ಮತ್ತು ಯುವ ಬ್ಯಾಟರ್ ಶುಭಮನ್ ಗಿಲ್ ಶತಕದ ಜೊತೆಯಾಟವಾಡಿ ಉತ್ತಮ ಅಡಿಪಾಯ ಹಾಕಿದರು.

ಬುಧವಾರ ಇಲ್ಲಿ ನಡೆದ ಸರಣಿಯ ಕೊನೆಯ ಪಂದ್ಯದಲ್ಲಿ ಭಾರತ ತಂಡ ಮಳೆಯಿಂದ ಆಟ ಸ್ಥಗಿತಗೊಂಡಾಗ 36 ಓವರ್‌ಗಳಲ್ಲಿ 3 ವಿಕೆಟ್‌ಗೆ 225 ರನ್ ಗಳಿಸಿತ್ತು. 24ನೇ ಓವರ್ ಆಗಿದ್ದಾಗ ಮಳೆ ಸುರಿದ ಕಾರಣ ಪಂದ್ಯ ಮೊಟಕುಗೊಂಡಿತ್ತು. ಎರಡೂವರೆ ಗಂಟೆಯ ಆಟ ನಷ್ಟವಾದ ಕಾರಣ ಓವರ್‌ಗಳ ಸಂಖ್ಯೆಯನ್ನು 40ಕ್ಕೆ ಇಳಿಸಲಾಗಿತ್ತು.

ಟಾಸ್ ಗೆದ್ದ ಭಾರತ ತಂಡ ಉತ್ತಮ ಆರಂಭ ಕಂಡಿತು. ನಾಯಕ ಶಿಖರ್ (58; 74ಎ, 4X7) ಮತ್ತು ಶುಭಮನ್ (ಬ್ಯಾಟಿಂಗ್ 98; 98ಎ, 7X3, 6X2) ಮೊದಲ ವಿಕೆಟ್ ಜೊತೆಯಾಟದಲ್ಲಿ 113 ರನ್ ಸೇರಿಸಿದರು.

ವಿಂಡೀಸ್ ತಂಡದ ಅನುಭವಿ ಆಲ್‌ರೌಂಡರ್ ಜೇಸನ್ ಹೋಲ್ಡರ್, ಜೈಡನ್ ಸೀಲ್ಸ್, ಕೀಮೊ ಪಾಲ್ ಅವರ ಎಸೆತಗಳನ್ನು ಶಿಖರ್ ಮತ್ತು ಗಿಲ್ ಜೋಡಿಯು ಲೀಲಾಜಾಲವಾಗಿ ಆಡಿತು.

ಸ್ವಿಂಗ್ ಮತ್ತು ಕಟರ್‌ಗಳಿಗೆ ಬೌಂಡರಿಗೆರೆ ತೋರಿಸಿದರು. ಎಡಗೈ ಬ್ಯಾಟರ್ ಶಿಖರ್ ಮತ್ತು ಪಂಜಾಬಿ ಹುಡುಗ ಗಿಲ್ ಅವರಿಬ್ಬರೂ ಅರ್ಧ-ಶತಕಗಳನ್ನು ದಾಖಲಿಸಿದರು. 22 ಓವರ್‌ಗಳ ಆಟದಲ್ಲಿ ಅವರಿಬ್ಬರ ಏಕಾಗ್ರತೆಯನ್ನು ಭಂಗ ಮಾಡಲು ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ.

23ನೇ ಓವರ್‌ನಲ್ಲಿ ಯುವಪ್ರತಿಭೆ ಹೇಡನ್ ವಾಲ್ಶ್ ಈ ಜೊತೆಯಾಟವನ್ನು ಮುರಿಯುವಲ್ಲಿ ಯಶಸ್ವಿಯಾದರು. ಅವರ ಎಸೆತವನ್ನು ಆಡುವ ಭರದಲ್ಲಿ ಶಿಖರ್ ಎಡವಿದರು.

ಬಳಿಕ ಬಂದ ಶ್ರೇಯಸ್ ಅಯ್ಯರ್ (44 ರನ್, 34 ಎ.) ಅವರು ಗಿಲ್‌ಗೆ ಉತ್ತಮ ಸಾಥ್ ನೀಡಿದರು. ಗಿಲ್ ಶತಕಕ್ಕೆ ಎರಡು ರನ್‌ಗಳು ಬೇಕಿದ್ದಾಗ ಮಳೆಯಿಂದ ಆಟ ನಿಂತಿತು.

ಸಂಕ್ಷಿಪ್ತ ಸ್ಕೋರು: ಭಾರತ: 36 ಓವರ್‌ಗಳಲ್ಲಿ 3 ವಿಕೆಟ್‌ಗೆ 225 (ಶಿಖರ್ ಧವನ್ 58, ಶುಭಮನ್ ಗಿಲ್ ಔಟಾಗದೆ 98, ಶ್ರೇಯಸ್ ಅಯ್ಯರ್ 44, ಸೂರ್ಯಕುಮಾರ್ ಯಾದವ್ 8, ಸಂಜು ಸ್ಯಾಮ್ಸನ್ ಔಟಾಗದೆ 6, ಹೇಡನ್ ವಾಲ್ಶ್ 57ಕ್ಕೆ 2) ವಿವರ ಅಪೂರ್ಣ



ಶುಭಮನ್ ಗಿಲ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

## ಐಸಿಸಿ ಏಕದಿನ ರ್‍ಯಾಂಕಿಂಗ್: ಧವನ್, ಶ್ರೇಯಸ್ ಅಯ್ಯರ್‌ಗೆ ಬಡ್ತಿ

**ದುಬೈ (ಪಿಟಿಐ):** ಭಾರತ ತಂಡದ ಶಿಖರ್ ಧವನ್ ಮತ್ತು ಶ್ರೇಯಸ್ ಅಯ್ಯರ್ ಅವರು ಐಸಿಸಿ ಏಕದಿನ ಕ್ರಿಕೆಟ್ ಬ್ಯಾಟರ್‌ಗಳ ರ್‍ಯಾಂಕಿಂಗ್‌ನಲ್ಲಿ ಬಡ್ತಿ ಪಡೆದಿದ್ದಾರೆ.

ಪೋರ್ಟ್ ಆಫ್ ಸ್ಪೇನ್‌ನಲ್ಲಿ ಶುಕ್ರವಾರ ನಡೆದ ವೆಸ್ಟ್ ಇಂಡೀಸ್ ಎದುರಿನ ಸರಣಿಯ ಮೊದಲ ಪಂದ್ಯದಲ್ಲಿ ಧವನ್ 97 ರನ್ ಗಳಿಸಿ ಭಾರತ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇದು ಅವರ ರ್‍ಯಾಂಕಿಂಗ್ ಏರಿಕೆಗೆ ಕಾರಣವಾಗಿದೆ. ಸದ್ಯ ಅವರು ಒಂದು ಸ್ಥಾನ ಬಡ್ತಿ ಪಡೆದು ಜಂಟಿ 13ನೇ ಸ್ಥಾನ ತಲುಪಿದ್ದಾರೆ.

ಮೊದಲ ಎರಡು ಪಂದ್ಯಗಳಲ್ಲಿ ಅರ್ಧಶತಕಗಳನ್ನು (ಕ್ರಮವಾಗಿ 54 ಮತ್ತು 63) ಸಿಡಿಸಿರುವ ಶ್ರೇಯಸ್ ಅಯ್ಯರ್ 20 ಸ್ಥಾನ ಏರಿಕೆ ದಾಖಲಿಸಿ ಜಂಟಿ 54ನೇ ಸ್ಥಾನದಲ್ಲಿದ್ದಾರೆ. ಈ ಸರಣಿಗೆ ವಿಶ್ರಾಂತಿ ಪಡೆದಿರುವ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ತಲಾ ಒಂದು ಸ್ಥಾನ ಕುಸಿತ ಕಂಡಿದ್ದು ಕ್ರಮವಾಗಿ ಐದು ಮತ್ತು ಆರನೇ ಸ್ಥಾನದಲ್ಲಿದ್ದಾರೆ.

ವೆಸ್ಟ್ ಇಂಡೀಸ್ ತಂಡದ ಶಾಯ್ ಹೋಪ್ 12ನೇ ಸ್ಥಾನದಲ್ಲಿದ್ದಾರೆ. ಭಾರತ ಎದುರಿನ ಎರಡನೇ ಪಂದ್ಯದಲ್ಲಿ ಅವರು ಶತಕ (115) ಸಿಡಿಸಿದ್ದರು.

ಪಾಕಿಸ್ತಾನದ ಬಾಬರ್ ಆಜಂ ಏಕದಿನ ಮತ್ತು ಟಿ20 ಎರಡೂ ಮಾದರಿಗಳಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

ಬೌಲರ್‌ಗಳ ವಿಭಾಗದಲ್ಲಿ ವೇಗಿ ಭಾರತದ ಮೊಹಮ್ಮದ್ ಸಿರಾಜ್ ಅಗ್ರ 100ರ ಪಟ್ಟಿಯೊಳಗೆ ಸ್ಥಾನ ಪಡೆದಿದ್ದು, ಸದ್ಯ 97ನೇ ಕ್ರಮಾಂಕದಲ್ಲಿದ್ದಾರೆ.



ಶ್ರೇಯಸ್ ಅಯ್ಯರ್– ಎಎಫ್‌ಪಿ ಚಿತ್ರ


## ಎಫ್‌ಸಿ ಗೋವಾ ತಂಡಕ್ಕೆ ಮಾರ್ಕ್

**ಪಣಜಿ(ಪಿಟಿಐ):** ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಫ್ರಾಂಚೈಸ್ ಡಿಫೆಂಡರ್ ಮಾರ್ಕ್ ವೆಲಿಯಂಟ್ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ.

ಸ್ಪೇನ್‌ನ ಮಾರ್ಕ್ ಒಂದು ವರ್ಷದ ಅವಧಿಗೆ ಗೋವಾ ತಂಡದಲ್ಲಿರಲಿದ್ದಾರೆ.

ಲಾಲಿಗ ಟೂರ್ನಿಯಲ್ಲಿ ಮಾರ್ಕ್ ಅವರು ರಿಯಲ್ ವಲ್ಲಾಡೊಲಿಡ್ ಕ್ಲಬ್ ಪರ ಆಡಿದ್ದರು. 16 ವರ್ಷಗಳ ವೃತ್ತಿಜೀವನದಲ್ಲಿ 438ಕ್ಕೂ ಹೆಚ್ಚು ಪಂದ್ಯಗಳಲ್ಲಿ ಅವರು ಕಣಕ್ಕಿಳಿದಿದ್ದಾರೆ.

ಸ್ಪೇನ್‌ನ ಜೂನಿಯರ್ ತಂಡದಲ್ಲೂ ಅವರು ಆಡಿದ್ದಾರೆ.




ಭಾರತ ಚೆನ್ನೈನಲ್ಲಿ 44 ನೇ ಚೆಸ್ ಒಲಿಂಪಿಯಾಡ್ ಆತಿಥ್ಯ ವಹಿಸಲಿದೆ!

## ಕ್ರಿಕೆಟ್: ಉಪಾಧ್ಯಾಯ, ಮೊಯಿನುದ್ದೀನ್ ಮಿಂಚು

**ಬೆಂಗಳೂರು:** ತಲಾ ನಾಲ್ಕು ವಿಕೆಟ್ ಗಳಿಸಿದ ಅಭ್ಯುದಯ್ ಉಪಾಧ್ಯಾಯ ಮತ್ತು ಸೈಯದ್ ಖ್ವಾಜಾ ಮೊಯೀನುದ್ದೀನ್ ಅಡವರ ಬೌಲಿಂಗ್‌ನಿಂದಾಗಿ ಹನುಮಂತನಗರ ಕ್ರಿಕೆಟ್ ಕ್ಲಬ್ ತಂಡವು ಕೆಎಸ್‌ಸಿಎ ಮೂರನೇ ಡಿವಿಷನ್ ಲೀಗ್‌ನ ಮೊದಲ ಗುಂಪಿನ ಪಂದ್ಯದಲ್ಲಿ ಜಯಿಸಿತು. ಹನುಮಂತನಗರ ತಂಡವು 136 ರನ್‌ಗಳಿಂದ ಜಾಲಿ ಕ್ರಿಕೆಟ್ ಕ್ಲಬ್ ವಿರುದ್ಧ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಹನುಮಂತನಗರ ಸಿಸಿ: 50 ಓವರ್‌ಗಳಲ್ಲಿ 8ಕ್ಕೆ214 (ಆದರ್ಶ ವಿ ಹಿರೇಮಠ 43, ಗೌರವ್ 27,ಪಿ.ಎಸ್. ವಿಕ್ರಂ 53, ಪ್ರಜ್ವಲ್ ಪ್ರಕಾಶ್ 32, ಅನಾಸ್ ಶೇಖ್ ಔಟಾಗದೆ 39, ಮೊಹಮ್ಮದ್ ಅಜರುದ್ದೀನ್ 48ಕ್ಕೆ3), ಜಾಲಿ ಕ್ರಿಕೆಟರ್ಸ್: 29 ಓವರ್‌ಗಳಲ್ಲಿ 78 (ಅಭ್ಯುದಯ ಉಪಾಧ್ಯಾಯ 33ಕ್ಕೆ4, ಸೈಯದ್ ಖಾಜಾ ಮೊಯೀನುದ್ದೀನ್ 19ಕ್ಕೆ4) ಫಲಿತಾಂಶ: ಹನುಮಂತನಗರ ಸಿಸಿ: 4 ಪಾಯಿಂಟ್ಸ್

ಸೆಂಚುರಿ ಕ್ರಿಕೆಟಿಗರ್ಸ್: 50 ಓವರ್‌ಗಳಲ್ಲಿ 5ಕ್ಕೆ284 (ಆಶಿಶ್ ಧಾರ್ 67, ಸಿ.ಕೆ. ಅಕ್ಷಯ್ ಔಟಾಗದೆ 97, ಟಿ ಪ್ರದೀಪ್ ಔಟಾಗದೆ 47, ರಯಾನ್ ಅಹಮದ್ 41ಕ್ಕೆ4), ನೆಪ್ಚೂನ್ ಸಿಸಿ: 25.2 ಓವರ್‌ಗಳಲ್ಲಿ 3ಕ್ಕೆ104 (ಡಿ. ಆರ್. ಗಣೇಶ್ 47, ಎನ್. ಭರತ್ 29ಕ್ಕೆ2), ಫಲಿತಾಂಶ: ಪಂದ್ಯಕ್ಕೆ ಮಳೆ ಅಡ್ಡಿ, ರನ್‌ರೇಟ್ ಆಧಾರದಲ್ಲಿ ಸೆಂಚುರಿ ಕ್ರಿಕೆಟರ್ಸ್‌ಗೆ 4 ಪಾಯಿಂಟ್

ಕ್ಯಾವಲರ್ಸ್ ಸಿಸಿ: 49.4 ಓವರ್‌ಗಳಲ್ಲಿ 285 ಹೆಮಂಡ್ಸ್ ಸಿಸಿ; 44 ಓವರ್‌ಗಳಲ್ಲಿ 5ಕ್ಕೆ280 ಪಂದ್ಯಕ್ಕೆ ಮಳೆ ಅಡ್ಡಿ, ರನ್‌ರೇಟ್ ಆಧಾರದಲ್ಲಿ ಹಮಂಡ್ಸ್ ಸಿಸಿಗೆ 4 ಅಂಕ.



ಶತಕ ಗಳಿಸಿದ ಧನಂಜಯ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

## ಪಾಕ್ ಗೆಲುವಿಗೆ ಕಠಿಣ ಗುರಿ

**ಗಾಲ್ (ಪಿಟಿಐ):** ಧನಂಜಯ ಡಿಸಿಲ್ವ ಅವರ ಶತಕದ ನೆರವಿನಿಂದ ಶ್ರೀಲಂಕಾ ತಂಡ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಪಾಕಿಸ್ತಾನದ ಗೆಲುವಿಗೆ 508 ರನ್‌ಗಳ ಗುರಿ ನೀಡಿದೆ.

ಈ ಗುರಿ ಬೆನ್ನಟ್ಟಿರುವ ಪಾಕ್‌ತಂಡ ನಾಲ್ಕನೇ ದಿನದಾಟದ ಅಂತ್ಯಕ್ಕೆ ಒಂದು ವಿಕೆಟ್‌ಗೆ 89 ರನ್ ಗಳಿಸಿದೆ. ಕೊನೆಯ ದಿನವಾದ ಗುರುವಾರದ ಆಟದಲ್ಲಿ ಗೆಲುವಿಗೆ ಇನ್ನೂ 419 ರನ್ ಗಳಿಸುವ ಗುರಿ ಬಾಬರ್ ಅಜಮ್ ಬಳಗದ ಮುಂದಿದೆ.

ಪಾಕ್ ತಂಡ ಅಬ್ದುಲ್ಲಾ ಶಫೀಕ್ ಅವರನ್ನು ಬೇಗನೇ ಕಳೆದುಕೊಂಡಿತು. ಇಮಾಮ್ ಉಲ್ ಹಕ್ ಮತ್ತು ಬಾಬರ್ ಅಜಂ ಅವರು ಹೆಚ್ಚಿನ ವಿಕೆಟ್ ಬೀಳದಂತೆ ನೋಡಿಕೊಂಡರು.

ಇದಕ್ಕೂ ಮುನ್ನ 5 ವಿಕೆಟ್‌ಗೆ 176 ರನ್‌ಗಳಿಂದ ಆಟ ಮುಂದುವರಿಸಿದ ಆತಿಥೇಯರು, 8 ವಿಕೆಟ್‌ಗೆ 360 ರನ್ ಗಳಿಸಿ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡರು. 109 ರನ್ ಗಳಿಸಿದ ಧನಂಜಯ ತಂಡಕ್ಕೆ ಆಸರೆಯಾದರು. 171 ಎಸೆತಗಳನ್ನು ಎದುರಿಸಿದ ಅವರು 16 ಬೌಂಡರಿ ಹೊಡೆದರು.

ನಾಯಕ ದಿಮುತ್ ಕರುಣರತ್ನೆ (61) ಮತ್ತು ರಮೇಶ್ ಮೆಂಡಿಸ್ (ಅಜೇಯ 45) ಅವರೂ ತಂಡದ ಮೊತ್ತ ಹೆಚ್ಚಿಸಲು ನೆರವಾದರು.

**ಸಂಕ್ಷಿಪ್ತ ಸ್ಕೋರ್:** ಮೊದಲ ಇನಿಂಗ್ಸ್ ಶ್ರೀಲಂಕಾ 378 (103 ಓವರ್). ಪಾಕಿಸ್ತಾನ 231 (88.1 ಓವರ್) ಎರಡನೇ ಇನಿಂಗ್ಸ್ ಶ್ರೀಲಂಕಾ 8ಕ್ಕೆ 360 ಡಿಕ್ಲೇರ್ಡ್ (ದಿಮುತ್ ಕರುಣರತ್ನೆ 61, ಧನಂಜಯ ಡಿಸಿಲ್ವ 109, ರಮೇಶ್ ಮೆಂಡಿಸ್ ಅಜೇಯ 45) ಪಾಕಿಸ್ತಾನ 1ಕ್ಕೆ 89 (28 ಓವರ್) ಅಬ್ದುಲ್ಲಾ ಶಫೀಕ್ 16, ಇಮಾಮ್ ಉಲ್ ಹಕ್ ಬ್ಯಾಟಿಂಗ್ 46, ಬಾಬರ್ ಅಜಂ ಬ್ಯಾಟಿಂಗ್ 26)

## ಸೆಮಿಗೆ ದಿಶಾ, ಆರಾಧ್ಯ

ಪ್ರಜಾವಾಣಿ ವಾರ್ತೆ


**ಬೆಂಗಳೂರು:** ಎರಡನೇ ಶ್ರೇಯಾಂಕದ ಲಕ್ಷಿತಾ ಗೋಪಿನಾಥ್ ಅವರಿಗೆ ಆಘಾತ ನೀಡಿದ ಕರ್ನಾಟಕದ ದಿಶಾ ಸಂತೋಷ್ ಖಂಡೋಜಿ ಎಐಟಿಎ ಸೂಪರ್ ಸಿರೀಸ್ 16 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

ಕೆಎಸ್‌ಎಲ್‌ಟಿಎ ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಬಾಲಕಿಯರ ವಿಭಾಗದ ಎಂಟರಘಟ್ಟದ ಪಂದ್ಯದಲ್ಲಿ ಬುಧವಾರ ದಿಶಾ 7-5, 6-1ರಿಂದ ತಮಿಳುನಾಡಿನ ಆಟಗಾರ್ತಿಗೆ ಸೋಲುಣಿಸಿದರು.

ಅರ್ಹತಾ ಸುತ್ತಿನಲ್ಲಿ ಗೆದ್ದುಬಂದಿರುವ 14 ವರ್ಷದ ದಿಶಾ ಸೆಮಿಫೈನಲ್‌ನಲ್ಲಿ ವಿ. ಚಿಂಗಟಗೆರೆ ನವೀನ ಅವರನ್ನು ಎದುರಿಸಲಿದ್ದಾರೆ. ಕ್ವಾರ್ಟರ್‌ಫೈನಲ್‌ನಲ್ಲಿ ನವೀನ 6-1, 6-1ರಿಂದ ಇಂದುಶಾ ನಿಮಕಾಯಲ ಎದುರು ಗೆದ್ದರು.

ಇನ್ನುಳಿದ ಪಂದ್ಯಗಳಲ್ಲಿ ಅಗ್ರ-ಶ್ರೇಯಾಂಕದ ಹರ್ಷಿಣಿ ಎನ್. 6-2, 6-3ರಿಂದ ಅನ್ವಿ ಪುನಗಂಟಿ ಎದುರು, ಸವಿತಾ ಭುವನೇಶ್ವರನ್ 6-0, 6-3ರಿಂದ ಸಾನ್ವಿ ಮಿಶ್ರಾ ವಿರುದ್ಧ ಜಯ ಸಾಧಿಸಿ ನಾಲ್ಕರ ಘಟ್ಟ ತಲುಪಿದರು.

ಬಾಲಕರ ವಿಭಾಗದ ಕ್ವಾರ್ಟ-ರ್‌ಫೈನಲ್ ಪಂದ್ಯಗಳಲ್ಲಿ ಆರಾಧ್ಯ ಕ್ಷಿತಿಜ್ 6-1, 6-3ರಿಂದ ರೂರಿಕ್ ರಜಿನಿ ಎದುರು, ಕ್ರಿಸ್ಟೊ ಬಾಬು 6-2, 6-4ರಿಂದ ಅನಂತ್‌ಕೃಷ್ಣ ವಿರುದ್ಧ, ಯಶ್ ಪಂಚಾಕ್ಷರಿ 2-6, 4-6, 6-1ರಿಂದ ಅನುರಾಗ್ ಶೌರ್ಯ ಕಳ್ಳಂಬೆಳ್ಳ ಎದುರು, ಶ್ರೀನಿಕೇತ್ ಕಣ್ಣನ್ 6-3, 7-6 (7)ರಿಂದ ಪ್ರಕಾಶ್ ಸರಣ್ ಎದುರು ಗೆಲುವು ಸಾಧಿಸಿದರು.



ಕ್ರಿಸ್ಟೊ ಬಾಬು ಆಟದ ವೈಖರಿ – ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

### ಪುಣೆ ರೇಸ್

## ಎಂಡೆವರ್ ಗೆಲ್ಲುವ ನಿರೀಕ್ಷೆ

ಗ್ಯಾಂಬಲ್ ಫಾರ್ ಲವ್ ಗುರುವಾರದಿಂದ ಪ್ರಾರಂಭವಾಗಲಿರುವ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಂಡೆವರ್ ಈ ರೇಸ್‌ನಲ್ಲಿ ಗೆಲ್ಲುವ ಅವಕಾಶ ಹೊಂದಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಹಿಸ್ಟಾರಿಕ್ 7, ರೆಡ್ ಡಸ್ಟ್ 2, ಅನೌಶ್ಕ 9
2ನೇ ರೇಸ್: ಫಾಸ್ಟ್ ರೈನ್ 4, ಸನ್ ಆಫ್ ಎ ಗನ್ 3, ರೆಮಸ್ 6
3ನೇ ರೇಸ್: ಡುಫಿ 1, ಹೌಸ್ ಆಫ್ ಲಾರ್ಡ್ಸ್ 2, ಮೈ ಪ್ರಿನ್ಸೆಸ್ 8
4ನೇ ರೇಸ್: ಎಂಡೆವರ್ 4, ಜೊಯಾಕ್ವಿನ್ 1, ಸನ್‌ರೈಸ್ ರೂಬಿ 9
5ನೇ ರೇಸ್: ಎಕ್ಸ್‌ಕ್ಲೂಸಿವ್ 2, ಸೂಪರ್‌ಲೆಗ್ಗೆರ 4, ದಿ ಅವೇಕನಿಂಗ್ 9
6ನೇ ರೇಸ್: ಮೆಜಿಲೆಟೊ 3, ರೊಡ್ರಿಗೊ 5, ಡ್ರಾಗೊನೆಸ್ 2
7ನೇ ರೇಸ್: ಸಿಫರ್ 9, ಬೀಮೆರ್ 7, ಟ್ರಿಸ್ಟಾರ್ 3

ಉತ್ತಮ ಬೆಟ್: ಎಕ್ಸ್‌ಕ್ಲೂಸಿವ್

| ಜಾಕ್‌ಪಾಟ್ | ಟ್ರಿಬಲ್ |
|---|---|
| 3,4,5,6,7 | 4,5,6 |




MARUTI SUZUKI AUTHORISED DEALERS: BENGALURU: PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. RNS MOTORS: YESHWANTHPUR, BOMMANAHALLI, NELAMANGALA, PH: 9538965804. SURAKSHAA CAR CARE: ELECTRONICS CITY, KORAMANGALA, BANGARPET, ATTIBELLE, SRINIVASAPURA, HAROHALLI PH: 8884442299. VARUN MOTORS: MALLESHWARAM, HEBBAL, INFANTRY ROAD, RAJANAKUNTE PH: 78991 00200. BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS, BUDIGERE, GUDIBANDA, HESARGHATTA PH: 080-30693069. KALYANI: MYSORE ROAD, BANNERGHATTA ROAD, NAGARBHAVI, BANASWADI, LALBAGH, RAMANAGARAM, CHANNAPATNA, KANAKPURA, BANNERGATTA, BIDADI: 95909 90011. MANDOVI: BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. KATARIA: KANAKAPURA ROAD, PH: 78990 40000. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

Terms and conditions apply. #As certified by Test Agency under Rule 115 (G) of CMVR 1989.Terms and conditions are subject to change without any prior notice. For more details, please contact your nearest ARENA dealership. Features and accessories shown may not be part of standard fitment. Black Glass Shade on the vehicle is due to the lighting effect. Images used are for illustration purposes only. Car color may vary due to printing on paper.

